# ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಮಕ್ಕಳು

## ಸುಸ್ಥಿರ ಅಭಿವೃದ್ಧಿ ಗುರಿಗಳು, ಲಕ್ಷ್ಯಗಳು ಮತ್ತು ಸೂಚಕಗಳು



**ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಮಕ್ಕಳು**
**(SDG-Sustainable Development Goals and Children)**


**ಕಲ್ಪನೆ, ಸಂಪಾದನೆ ಮತ್ತು ರಚನೆ** : ವಾಸುದೇವ ಶರ್ಮಾ ಎನ್.ವಿ.; ಸತೀಶ್ ಜಿ.ಸಿ ಮತ್ತು ನಾಗಸಿಂಹ ಜಿ.ರಾವ್

**ಸಲಹೆ ಮತ್ತು ನಿರ್ದೇಶನ** : ಡಾ. ಪದ್ಮಿನಿ ಮತ್ತು ಪ್ರಸೂನ್ ಸೇನ್

**ಸಹಾಯ** : ನಾಗಮಣಿ ಸಿ.ಎನ್; ಕಳಕಪ್ಪ ಬಿ.ಎಸ್.;
ಅಶ್ವತ್ಥ ಜಿ.ಎಂ.; ವೆಂಕಟೇಶ್. ಟಿ., ರಷ್ಮಿ ಜಿ.ಎಂ.
ಮತ್ತು ಉಮಾಬಾಯ್ ಆರ್.

**ಪ್ರಕಟಣೆಗೆ ಸಹಾಯ** : ಯುನಿಸೆಫ್

**ಮುಖಪುಟ, ಚಿತ್ರಗಳು**
**ಮತ್ತು ಪುಟ ವಿನ್ಯಾಸ** : ವಿಶ್ವವಿನ್ಯಾಸ್, ಮೈಸೂರು
wishvaawinyaas@gmail.com

**ಮೊದಲ ಆವೃತ್ತಿ** : ಮೇ 2017

**ಪ್ರತಿಗಳು** : 1000



**ಈ ಕೈಪಿಡಿಯ ಯಾವುದೇ ಭಾಗವನ್ನು ಸಂಶೋಧನೆ, ತರಬೇತಿ, ಚರ್ಚೆ, ಲೇಖನವೇ ಮೊದಲಾದ ಉದ್ದೇಶಗಳಿಗೆ ಮೂಲವನ್ನು ಉಲ್ಲೇಖಿಸಿ ಬಳಸಬಹುದು. ಆದರೆ, ವ್ಯಾಪಾರೀ ಉದ್ದೇಶಕ್ಕೆ ಬಳಸುವ ಮೊದಲು ಪ್ರಕಾಶಕರಿಂದ ಅನುಮತಿ ಪಡೆಯಲೇಬೇಕು.**



**ಪ್ರಕಾಶಕರು** : ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ
www.kcro.in



**ಸಂಚಾಲನಾ ಕಛೇರಿ** : ಚೈಲ್ಡ್ ರೈಟ್ಸ್ ಟ್ರಸ್ಟ್, 4606, 6ನೇ ಮಹಡಿ,
ಹೈಪಾಯಿಂಟ್ 4, ಅರಮನೆ ರಸ್ತೆ,
ಬೆಂಗಳೂರು 560 001

**ದೂರವಾಣಿ** : 080 22201098
**ಇ–ಮೇಲ್** : kcronodalcrt@gmail.com
**ವೆಬ್‌ಸೈಟ್** : crtindia@yahoo.co.in; crt@crtindia.org



**ಉಲ್ಲೇಖಿಸಲು ಬಳಸಬಹುದಾದ ಹೆಸರು**
ಕೆ.ಸಿ.ಆರ್.ಓ: ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ, ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಮಕ್ಕಳು; ಕೈಪಿಡಿ, (2017), ಬೆಂಗಳೂರು, ಭಾರತ

**ಮುದ್ರಕರು** : **ಸುಬ್ರಮಣ್ಯೇಶ್ವರ್ ಬುಕ್ ಡಿಪೋ,** ತರಗುಪೇಟೆ,
ಬೆಂಗಳೂರು



# ವಿಭಾಗಗಳು

1. ಈ ಕೈಪಿಡಿ ಯಾರಿಗಾಗಿ ಮತ್ತು ಬಳಸುವುದು ಹೇಗೆ?

2. ಸುಸ್ಥಿರ ಅಭಿವೃದ್ಧಿ ಗುರಿಗಳು (SDG) – ಪರಿಚಯ.

3. ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ಮಕ್ಕಳು ಭಾರತ ಮತ್ತು ದಕ್ಷಿಣ ಭಾರತದ ರಾಜ್ಯಗಳಲ್ಲಿ ಮಕ್ಕಳ ಪರಿಸ್ಥಿತಿ ತುಲನೆ, ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ವಿವಿಧ ಹಕ್ಕುದಾರರ ಜವಾಬ್ದಾರಿಗಳು, ಜಾರಿ, ಉಸ್ತುವಾರಿ.

4. ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989

5. ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆ, ಕಾರ್ಯಕ್ರಮ, ನೀತಿ ಮತ್ತು ಜಾರಿ ನಿರ್ವಹಣೆ ಇಲಾಖೆಗಳು

6. ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಮಕ್ಕಳ ಹಕ್ಕುಗಳು – ನಾಟಕ



# ಈ ಕೈಪಿಡಿ ಯಾರಿಗಾಗಿ ಮತ್ತು ಬಳಸುವುದು ಹೇಗೆ?

ವಿಶ್ವಸಂಸ್ಥೆ ಮುಂದಿಟ್ಟಿರುವ ಸುಸ್ಥಿರ ಅಭಿವೃದ್ಧಿ ಗುರಿಗಳು (SDG-Sustainable Development Goals) ಈಗ ಜಾಗತಿಕವಾಗಿ 2016ರಿಂದ ಜಾರಿಗೆ ಬಂದಿದೆ. ವಿಶ್ವದ ಬಹುತೇಕ ಎಲ್ಲ ದೇಶಗಳು ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಒಪ್ಪಿಕೊಂಡು, ತಮ್ಮ ತಮ್ಮ ದೇಶಗಳ ಅಭಿವೃದ್ಧಿ ಚಿಂತನೆ, ಯೋಜನೆಗಳಲ್ಲಿ ಅವುಗಳನ್ನು ಅಳವಡಿಸಿಕೊಂಡು ಜಾರಿ ಮಾಡಲು ಮುಂದಾಗಿವೆ. ಈ ಕೈಪಿಡಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಪರಿಚಯಿಸುತ್ತಾ, ಅದರ ಹಿನ್ನೆಲೆಯಲ್ಲಿ ನಮ್ಮ ಸುತ್ತಮುತ್ತಲಿನ ಜನಸಮುದಾಯಗಳಲ್ಲಿ ಮಕ್ಕಳ ಪರಿಸ್ಥಿತಿ ಈಗ ಹೇಗಿದೆ ಎಂದು ಒಂದು ಇಣಕು ನೋಟ ಬೀರಲೆತ್ನಿಸಿದೆ. ಈ ಸುಸ್ಥಿರ ಅಭಿವೃದ್ಧಿ ಗುರಿಗಳು ಮಕ್ಕಳ ಮೇಲೆ ಎಂತಹ ಪ್ರಭಾವ ಬೀರಬೇಕಿದೆ, ಎಂತಹ ಬದಲಾವಣೆಗಳು ಬರಬೇಕಿವೆ, ಇದರಲ್ಲಿ ಸರ್ಕಾರ, ಸ್ವಯಂಸೇವಾ ಸಂಘಟನೆಗಳು, ಸ್ಥಳೀಯ ಸರ್ಕಾರಗಳು, ಜನಪ್ರತಿನಿಧಿಗಳು ಮತ್ತಿತರರ ಜವಾಬ್ದಾರಿ ಕುರಿತು ಪರಿಚಯವನ್ನೂ ಈ ಕೈಪಿಡಿ ಕೊಡುತ್ತದೆ.

ಈ ಮಾಹಿತಿಯನ್ನು ಕೊಡುವಾಗ, ಸದ್ಯ ಮಕ್ಕಳಿಗೆಂದೇ ರೂಪಿಸಲಾದ ನೀತಿ, ಕಾರ್ಯಕ್ರಮ, ಯೋಜನೆಗಳನ್ನೂ ಗಮನಕ್ಕೆ ತೆಗೆದುಕೊಳ್ಳಲಾಗುತ್ತದೆ. ಅಂತಹ ಕೆಲವು ನೀತಿ, ಕಾರ್ಯಕ್ರಮ, ಯೋಜನೆಗಳನ್ನು ಗೊತ್ತು ಮಾಡಿಸುವ ಕಿರು ಯತ್ನವನ್ನೂ ಅಭಿವೃದ್ಧಿ ಗುರಿಗಳನ್ನು ತಿಳಿಸುತ್ತಲೇ ಮಾಡಲಾಗಿದೆ.

ಈ ಕಿರು ಕೈಪಿಡಿಯನ್ನು ಬಳಸಿಕೊಂಡು ನೀವು ನಿಮ್ಮ ಸ್ಥಳೀಯ ಸಮುದಾಯದಲ್ಲಿ – ಪಂಚಾಯಿತಿ, ನಗರ, ಜಿಲ್ಲೆ, ರಾಜ್ಯ ಮಟ್ಟದಲ್ಲಿ ಮಕ್ಕಳ ಪರಿಸ್ಥಿತಿ ಹೇಗಿದೆ, ಅವರಿಗಿರುವ ಸೇವೆಗಳ ಲಭ್ಯತೆ, ಗುಣಮಟ್ಟವೇನು, ಇನ್ನೂ ಏನು ಬದಲಾವಣೆ ಬೇಕಿದೆ ಎಂಬಿವೇ ವಿಚಾರಗಳನ್ನು ಸುಸ್ಥಿರ ಅಭಿವೃದ್ಧಿ ಗುರಿಗಳ ಹಿನ್ನೆಲೆಯಲ್ಲಿ ಪರಿಶೀಲಿಸಬಹುದು. ಹೀಗೆ ಗಮನಿಸಿದ್ದನ್ನು ನೀವು ಸಂಬಂಧಿಸಿದವರ ಗಮನಕ್ಕೆ ತರಲೂ ಈ ಕೈಪಿಡಿಯನ್ನು ಬಳಸಬಹುದು.



# ಕೈಪಿಡಿಯಲ್ಲೇನಿದೆ?

1. **ಸುಸ್ಥಿರ ಅಭಿವೃದ್ಧಿ ಗುರಿಗಳು (SDG):** ಈ ಪರಿಕಲ್ಪನೆಯನ್ನು ಪರಿಚಯಿಸಿ, ಇದು ಹೇಗೆ ಜಾಗತಿಕ ಮಟ್ಟದಿಂದ ಸ್ಥಳೀಯ ಮಟ್ಟಕ್ಕೆ ಸಂಬಂಧಿಸಿದೆ ಎಂದು ಚುಟುಕಾಗಿ ವಿವರಿಸಲಾಗಿದೆ. ಈ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ನಾವು ನಮ್ಮ ಸುತ್ತಮುತ್ತಲಿನ ಸ್ಥಳೀಯ ಸರ್ಕಾರಗಳು, ಆಡಳಿತ ಮತ್ತು ಮಕ್ಕಳಿಗೆ ಸಂಬಂಧಿಸಿದ ವಿವಿಧ ಸೇವಾವಲಯಗಳನ್ನು ಮಕ್ಕಳ ಹಕ್ಕುಗಳ ದೃಷ್ಟಿಕೋನದಲ್ಲಿ ಗಮನಿಸಬೇಕಿರುವ ಆವಶ್ಯಕತೆಯನ್ನೂ ವಿವರಿಸಲಾಗಿದೆ.

   - **ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ಮಕ್ಕಳು:** ಭಾರತದಲ್ಲಿ ಈಗ ಒಟ್ಟು ಜನಸಂಖ್ಯೆಯಲ್ಲಿ ಶೇ.40ರಷ್ಟು 18 ವರ್ಷದೊಳಗಿನ ಮಕ್ಕಳಿದ್ದಾರೆ (2011 ಜನಗಣತಿ). ಈ ಮಕ್ಕಳ ಪರಿಸ್ಥಿತಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೇಗಿದೆ, ವಿವಿಧ ಅಭಿವೃದ್ಧಿ ಗುರಿಗಳನ್ನು ಗಮನದಲ್ಲಿಟ್ಟುಕೊಂಡು ಮಕ್ಕಳ ಆರೋಗ್ಯ, ಮರಣ ಪರಿಸ್ಥಿತಿ, ರಕ್ಷಣೆ, ಶಿಕ್ಷಣ, ಶೋಷಣೆ, ಭಾಗವಹಿಸುವಿಕೆಯೇ ಮೊದಲಾದ ವಿಚಾರಗಳಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ಹೋಲಿಸಿ ನೋಡಿದಾಗ ಭಾರತ ಮತ್ತು ಕರ್ನಾಟಕದಲ್ಲಿ (ದಕ್ಷಿಣ ಭಾರತದ ರಾಜ್ಯಗಳಿಗೆ ಹೋಲಿಸುತ್ತಾ) ಮಕ್ಕಳ ಪರಿಸ್ಥಿತಿ ಹೇಗಿದೆ ಎಂದು ತಿಳಿಸಲಾಗಿದೆ.

   - **ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ವಿವಿಧ ಹಕ್ಕುದಾರರ ಜವಾಬ್ದಾರಿಗಳು:** ವಿಶ್ವಸಂಸ್ಥೆ ಮುಂದಿಟ್ಟಿರುವ ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಮಕ್ಕಳ ಏಳ್ಗೆಗಾಗಿ ಹಲವು ಹಂತಗಳಲ್ಲಿ ಸರ್ಕಾರ ಮತ್ತು ಸರ್ಕಾರೇತರರ ಜವಾಬುದಾರಿಗಳಿವೆ ಎಂಬುದನ್ನು ವಿವರಿಸುತ್ತಾ, ಜನಪ್ರತಿನಿಧಿಗಳು, ಸರ್ಕಾರದ ವಿವಿಧ ಇಲಾಖೆಗಳ ಸಿಬ್ಬಂದಿ, ಸ್ವಯಂಸೇವಾ ಸಂಘಟನೆಗಳು, ಖಾಸಗಿ ವಲಯ ಮತ್ತು ಸಾರ್ವಜನಿಕರು ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಮತ್ತು ಮುಂದೆ ಮಕ್ಕಳು ಅರ್ಥಪೂರ್ಣವಾಗಿ ಬಾಳ್ವೆ ನಡೆಸಲು ನೆರವಾಗಲು ಏನು ಮಾಡಬೇಕಿದೆ ಎಂದೂ ಚರ್ಚಿಸಲಾಗಿದೆ.

   - **ಜಾರಿ ಉಸ್ತುವಾರಿ:** ಭಾರತ ಸರ್ಕಾರ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ಒಪ್ಪಿಕೊಂಡಿದೆ. ದೇಶದ ಮತ್ತು ರಾಜ್ಯಗಳ ಎಲ್ಲ ನೀತಿ, ಯೋಜನೆ, ಕಾರ್ಯಕ್ರಮಗಳಲ್ಲಿ ಇನ್ನು ಕೆಲವೇ ದಿನಗಳಲ್ಲಿ ಈ ಭಾಷೆ, ಈ ಭಾವ, ಈ ಗುರಿಗಳು ಅಂತರ್ಗತವಾಗಲಿದೆ. ಆದರೆ, ಇವನ್ನು ಹೊಸ ದೃಷ್ಟಿಕೋನದಲ್ಲಿ ಅರ್ಥ ಮಾಡಿಕೊಂಡು ಮಕ್ಕಳ ಕೇಂದ್ರಿತ ಯೋಜನೆ, ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು ಆಗುತ್ತಿದೆಯೆ ಎಂದು ಉಸ್ತುವಾರಿ ಮಾಡಬೇಕಿರುವ ಜವಾಬ್ದಾರಿ ಹಲವರ ಹೆಗಲ ಮೇಲಿದೆ. ಇದನ್ನು ನಿರ್ವಹಿಸುವ ದಿಶೆಯಲ್ಲಿ ನಾವೇನು ಮಾಡಬಹುದೆಂದು ಇಲ್ಲಿ ವಿವರಿಸಲಾಗಿದೆ.



# ಸುಸ್ಥಿರ ಅಭಿವೃದ್ಧಿ ಗುರಿಗಳು

## ಹಿನ್ನೆಲೆ

ಮುಂದಿನ 15 ವರ್ಷಗಳಲ್ಲಿ ಜಗತ್ತಿನ ಜನರೆಲ್ಲರ ಒಳಿತಿಗಾಗಿ ಉತ್ತಮ ವಿಶ್ವವನ್ನು ರೂಪಿಸಲು ಸಾಧಿಸಲೇಬೇಕಾದ ಕೆಲವು ಗುರಿಗಳನ್ನು ವಿಶ್ವಸಂಸ್ಥೆಯು ರೂಪಿಸಿ ಅವುಗಳನ್ನು 'ಸುಸ್ಥಿರ ಅಭಿವೃದ್ಧಿ ಗುರಿಗಳು' (SDG-Sustainable Development Goals) ಎಂದು ಹೆಸರಿಸಿದೆ. ಮಕ್ಕಳು ಮತ್ತು ಯುವಜನರೂ ಸೇರಿದಂತೆ ಕೋಟ್ಯಾಂತರ ಜನರ ಮತ್ತು ಸಂಸ್ಥೆಗಳ ಭಾಗವಹಿಸುವಿಕೆಯೊಂದಿಗೆ ವಿಶ್ವದ ಬಹುತೇಕ ಎಲ್ಲಾ ರಾಷ್ಟ್ರಗಳ ಪ್ರತಿನಿಧಿಗಳು ಸೇರಿ ತೀರ್ಮಾನಿಸಲಾದ ಗುರಿಗಳನ್ನು ವಿಶ್ವದ ಎಲ್ಲ ದೇಶಗಳು ಒಪ್ಪಿದ್ದಾರೆ ಎಂದು ವಿಶ್ವಸಂಸ್ಥೆ ಹೇಳಿದೆ. ಇಲ್ಲಿರುವ ಗುರಿಗಳು ಒಂದಲ್ಲ ಒಂದು ರೀತಿಯಲ್ಲಿ ಪ್ರತಿಯೊಬ್ಬರ ಜೀವನದ ಮೇಲೆ ಪರಿಣಾಮ ಬೀರುವಂತಹುಗಳೇ ಆಗಿವೆ.

ಪ್ರಸ್ತುತ ವಿಶ್ವವು ಎದುರಿಸುತ್ತಿರುವ ಹಲವಾರು ಸವಾಲುಗಳನ್ನು ನಿವಾರಿಸಿ ಎಲ್ಲರಿಗೂ ಸದೃಢ ಮತ್ತು ಸುಂದರ ವಿಶ್ವವನ್ನು ರೂಪಿಸುವುದು ಈ ಗುರಿಗಳ ಪ್ರಮುಖ ಉದ್ದೇಶ. ಈ ಗುರಿಗಳ ಸಾಧನೆಗೆ ಕೇವಲ ಸರ್ಕಾರ, ಅಧಿಕಾರಿಗಳು, ನೀತಿ ನಿರೂಪಕರು, ಸ್ವಯಂಸೇವಾ ಸಂಸ್ಥೆಗಳ ಪಾತ್ರವಲ್ಲದೆ ಸಮುದಾಯದ ಪಾತ್ರವೂ ಬಹಳ ಮುಖ್ಯವಾಗಿದೆ. ಈ ಗುರಿಗಳನ್ನು ಸಾಧಿಸಲು ಪ್ರತಿಯೊಬ್ಬರೂ ತಮ್ಮ ಪ್ರದೇಶದಲ್ಲಿ ಏನೆಲ್ಲಾ ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ತಮ್ಮ ಕೊಡುಗೆಯನ್ನು ನೀಡಬಹುದು ಎಂಬುದನ್ನು ಇಲ್ಲಿ ಸೂಚಿಸಲಾಗಿದೆ.

ಈ ಹಿಂದೆ 2000ದಿಂದ 2015ರವರೆಗೆ ಸಾಧಿಸಲೆಂದು ವಿಶ್ವಸಂಸ್ಥೆ ಮುಂದಿಟ್ಟಿದ್ದ ಸಹಸ್ರಮಾನದ ಅಭಿವೃದ್ಧಿ ಗುರಿಗಳನ್ನು (MDG-Millennium Development Goals) ಕುರಿತು ತೀರಾ ಇತ್ತೀಚಿನವರೆಗೂ ಅನೇಕರಿಗೆ ತಿಳಿದೇ ಇರಲಿಲ್ಲ. ಭಾರತವೂ ಸೇರಿದಂತೆ ಹಲವಾರು ರಾಷ್ಟ್ರಗಳಲ್ಲಿ ಸಹಸ್ರಮಾನದ ಅಭಿವೃದ್ಧಿ ಗುರಿಗಳನ್ನು ಆ ನಿಗಧಿತ ಅವಧಿಯಲ್ಲಿ ಸಾಧಿಸಲಾಗಿಲ್ಲ ಎಂದು ಆಯಾ ರಾಷ್ಟ್ರಗಳೂ ತಮ್ಮ ವರದಿಗಳಲ್ಲಿ ಹೇಳಿವೆ ಮತ್ತು ವಿಶ್ವಸಂಸ್ಥೆಯೂ ಅದನ್ನು ಪುನರುಚ್ಚರಿಸಿದೆ. ಜೊತೆಗೆ 2000ದಿಂದ 2015ರ ಅವಧಿಯಲ್ಲಿ ಜಗತ್ತು ಇನ್ನೂ ಹೊಸ ಸವಾಲುಗಳನ್ನು ಜೋಡಿಸಿಕೊಂಡಿದೆ. ಈಗ ಈ ಎಲ್ಲವನ್ನೂ ಎದುರಿಸಲು, ನಿವಾರಿಸಲು ಮತ್ತು ಭವಿಷ್ಯದಲ್ಲಿ ಎಲ್ಲರಿಗೂ ಸಲ್ಲುವಂತಹ ಸುಸ್ಥಿರ ಪ್ರಪಂಚವನ್ನು ಕಟ್ಟಿ ಉಳಿಸಿಕೊಳ್ಳಬೇಕಿದೆ. ಅದಕ್ಕಾಗಿ ಎಲ್ಲರೂ ಕೈಜೋಡಿಸಬೇಕಾದ ಅವಶ್ಯಕತೆ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ.


ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ, ವಿಶ್ವದ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದ ಬಹುತೇಕ ಎಲ್ಲಾ ವಿಚಾರಗಳನ್ನು ಅಂದರೆ, ಬಡತನ, ಹಸಿವು, ಆರೋಗ್ಯ, ಶಿಕ್ಷಣ, ನೀರು ಮತ್ತು ಶೌಚಾಲಯ, ಅರಣ್ಯ ಮತ್ತು ಪರಿಸರ, ನೈಸರ್ಗಿಕ ಸಂಪನ್ಮೂಲಗಳು, ವ್ಯಾಪಾರ ಮತ್ತು ವಹಿವಾಟು, ರಾಷ್ಟ್ರಗಳ ನಡುವಿನ ಸಹಕಾರ ಮತ್ತು ನೆರವು, ಅಸಮಾನತೆಯ ನಿವಾರಣೆ ಇವೇ ಮೊದಲಾದವುಗಳನ್ನು ಒಳಗೊಂಡ ಒಟ್ಟು 17 ಗುರಿಗಳಿವೆ ಮತ್ತು ಅವುಗಳನ್ನು ಸಾಧಿಸಲು ಮಾಡಬೇಕಿರುವ 169 ಲಕ್ಷ್ಯಗಳನ್ನು ಸಹ ನೀಡಲಾಗಿದೆ. ಈ ಲಕ್ಷ್ಯಗಳನ್ನು ಪೂರೈಸುತ್ತಿರುವುದನ್ನು ಗಮನಿಸಲು ಸುಮಾರು 300ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸೂಚಕಗಳನ್ನು ಗುರುತಿಸಲಾಗಿದೆ.

2012ರಲ್ಲಿ ರಿಯೋ+20 ಸಮ್ಮೇಳನದಲ್ಲಿ ಅಂತಾರಾಷ್ಟ್ರೀಯ ಸಮುದಾಯವು ಸುಸ್ಥಿರ ಅಭಿವೃದ್ಧಿಗಳ ಮೇಲಿನ ಆಯೋಗಕ್ಕೆ ಬದಲಾಗಿ ಸುಸ್ಥಿರ ಅಭಿವೃದ್ಧಿಗಳ ಕುರಿತು ಉನ್ನತ ಮಟ್ಟದ ರಾಜಕೀಯ ವೇದಿಕೆಯನ್ನು ಸ್ಥಾಪಿಸಲು ನಿರ್ಧರಿಸಿತು. ಈ ಉನ್ನತ ಮಟ್ಟದ ರಾಜಕೀಯ ವೇದಿಕೆಯು 2013ರ ಸೆಪ್ಟೆಂಬರ್ 24ರಂದು ತನ್ನ ಪ್ರಥಮ ಸಭೆಯನ್ನು ನಡೆಸಿತು. ರಿಯೋ+20 ಸಮ್ಮೇಳನದಲ್ಲಿ ಸಹಸ್ರಮಾನದ ಅಭಿವೃದ್ಧಿ ಗುರಿಗಳ ಮೇಲೆ ರೂಪಿಸಿದ

ಮತ್ತು 2015ರ ನಂತರದ ಅಭಿವೃದ್ಧಿ ಕಾರ್ಯಸೂಚಿಗಳಲ್ಲಿ ಮಿಳಿತವಾದ ಸುಸ್ಥಿರ ಅಭಿವೃದ್ಧಿ ಗುರಿಗಳ ಗುಚ್ಛವನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಗೆ ಚಾಲನೆ ನೀಡಲು ಸದಸ್ಯ ರಾಷ್ಟ್ರಗಳು ನಿರ್ಧರಿಸಿದವು.

2015ರ ನಂತರದ ಅಭಿವೃದ್ಧಿ ಕಾರ್ಯಸೂಚಿಗಳನ್ನು ನಿರ್ಧರಿಸುವ ಪ್ರಕ್ರಿಯೆಯು ಸದಸ್ಯ ರಾಷ್ಟ್ರಗಳು ಮುನ್ನಡಿಸಿದ ಪ್ರಮುಖ ಗುಂಪುಗಳ ಮತ್ತು ಇತರೆ ನಾಗರೀಕ ಸಮುದಾಯದವರ ವಿಸ್ತೃತ ಭಾಗವಹಿಸುವಿಕೆಯನ್ನು ಒಳಗೊಂಡಿತ್ತು. 2015ರ ಸೆಪ್ಟೆಂಬರ್ 25ರಂದು 17 ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಅದಕ್ಕೆ ಸಂಬಂಧಿಸಿದ 169 ಲಕ್ಷ್ಯಗಳ ಜೊತೆಗೆ ಸಾರ್ವತ್ರಿಕ, ಕ್ರೋಢೀಕರಿಸಿದ ಮತ್ತು ನವೀಕರಿಸಬಹುದಾದ 2030ರ ಕಾರ್ಯಸೂಚಿಯನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಔಪಚಾರಿಕವಾಗಿ ಅಳವಡಿಸಿಕೊಂಡಿತು.

"ಸುಸ್ಥಿರ ಅಭಿವೃದ್ಧಿ ಎಂಬುದು ಎಲ್ಲರಿಗೂ ಅನ್ವಯವಾಗುವಂತೆ ಮೂರು ಮುಖ್ಯ ಆಧಾರ ಸ್ತಂಭಗಳ ಸಮತೋಲನವಾದ ಬೆಳವಣಿಗೆಯ ಮೇಲೆ ಅವಲಂಬಿತವಾಗಿದೆ – ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಅಭಿವೃದ್ಧಿ ಮತ್ತು ಪರಿಸರ ರಕ್ಷಣೆ" – **ವಿಶ್ವಸಂಸ್ಥೆ**



**ಸುಸ್ಥಿರ ಅಭಿವೃದ್ಧಿಯೆಂದರೆ...**


ಯಾವುದೇ ಅಭಿವೃದ್ಧಿಯಿಂದಾದ ಫಲವನ್ನು ಸಂಪೂರ್ಣವಾಗಿ ನಾವೇ ಉಪಯೋಗಿಸುವುದು ಸುಸ್ಥಿರ ಅಭಿವೃದ್ಧಿ ಎನಿಸುವುದಿಲ್ಲ.

ಸುಸ್ಥಿರ ಅಭಿವೃದ್ಧಿಯೆಂದರೆ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ಪ್ರಸ್ತುತ ಜನಾಂಗದ ಆವಶ್ಯಕತೆಗಳನ್ನು ಒದಗಿಸಿ, ಜೀವನ ಮಟ್ಟವನ್ನು ಎಲ್ಲಾ ವಿಧದಲ್ಲಿಯೂ ಸುಧಾರಿಸುವುದು ಮತ್ತು ಮುಂಬರುವ ಜನಾಂಗಕ್ಕೆ ಬೇಕಾದ ಆವಶ್ಯಕತೆಗಳಿಗಾಗಿ ಅವುಗಳನ್ನು ಬಳಸಲು ತೊಂದರೆಯಾಗದಂತೆ ಉಳಿಸಿ ಬೆಳೆಸುವುದು.

ಯಾವುದೇ ಸಂಪನ್ಮೂಲಗಳನ್ನು ಹೆಚ್ಚೆಚ್ಚು ಸೃಜಿಸುವುದು; ನಮಗೆ ಎಷ್ಟು ಅವಶ್ಯವೋ ಅಷ್ಟನ್ನು ಮಾತ್ರವೇ ಬಳಸುವುದು ಹಾಗು ಮುಂದಿನ ಜನಾಂಗಕ್ಕೆ ಆ ಸಂಪನ್ಮೂಲಗಳನ್ನು ಉಳಿಸುವುದು.

ಒಟ್ಟಾರೆಯಾಗಿ ಸುಸ್ಥಿರತೆಯೆಂದರೆ ಬೆಳೆಸು–ಬಳಸು–ಉಳಿಸು ಎಂಬುದಾಗಿದೆ.





## ಭಾರತ ಮತ್ತು ಅಭಿವೃದ್ಧಿ ಗುರಿಗಳು

ಭಾರತ ಸರ್ಕಾರ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಒಪ್ಪಿಕೊಂಡು ಅವನ್ನು ದೇಶದಲ್ಲಿ ಜಾರಿ ಮಾಡಲು ಬದ್ಧವಾಗಿದೆ. ಈ ಕುರಿತು ಈಗಾಗಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಮಾತುಕತೆ ಆರಂಭವಾಗಿದ್ದು, ಸದ್ಯದಲ್ಲೇ ಪ್ರತಿ ರಾಜ್ಯವೂ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ತಮ್ಮಲ್ಲಿ ಅಳವಡಿಸಿಕೊಂಡು ಹೇಗೆ ಜಾರಿ ಮಾಡಲಾಗುತ್ತದೆ ಎಂಬುದನ್ನು ಕುರಿತು ಕ್ರಿಯಾ ಯೋಜನೆಗಳನ್ನು ಹೊರಡಿಸಬೇಕಿದೆ.

ಸದ್ಯ ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ವಿನ್ಯಾಸಗೊಳಿಸಲಾಗಿರುವ ಈ ಕೈಪಿಡಿಯಲ್ಲೂ, ಸುಸ್ಥಿರ ಅಭಿವೃದ್ಧಿ ಗುರಿಗಳು, ಅವುಗಳೆದುರು ಇರುವ ಲಕ್ಷ್ಯಗಳು ಮತ್ತು ಅವು ಜಾರಿಯಾಗುತ್ತಿದೆಯೋ ಇಲ್ಲವೋ ಎಂದು ಪರೀಕ್ಷಿಸಲು, ಅನುಸರಿಸಲು ತೆಗೆದುಕೊಳ್ಳಬೇಕಿರುವ ಸೂಚಕಗಳನ್ನು ಎದುರಿಡುತ್ತಲೇ, ಕರ್ನಾಟಕದಲ್ಲಿ ಮಕ್ಕಳ ಸ್ಥಿತಿಗತಿ ಹೇಗಿದೆ ಎಂದು ವಿವರಿಸಲಾಗಿದೆ. ಅದರ ಆಧಾರದ ಮೇಲೆ ರಾಜ್ಯ ಮಟ್ಟದಿಂದ ಹಿಡಿದು ಗ್ರಾಮಪಂಚಾಯಿತಿಗಳ ತನಕ ಅಭಿವೃದ್ಧಿ ಗುರಿಗಳ ಸಾಧನೆ ಹೇಗಾಗುತ್ತಿದೆ ಎಂದು ಅನುಸರಿಸಬಹುದು. ಇದನ್ನೇ ಆಧಾರವಾಗಿಟ್ಟುಕೊಂಡು ಮಕ್ಕಳ ಹಕ್ಕುಗಳನ್ನು ಕಾಪಾಡಲು ಸ್ಥಳೀಯ ಯೋಜನೆಗಳನ್ನೂ ಮಾಡಬಹುದು.

ಚರ್ಚೆಯನ್ನು ವಿಸ್ತರಿಸುವ ದೃಷ್ಟಿಯಿಂದ ಪ್ರತಿಯೊಂದು ಅಭಿವೃದ್ಧಿ ಗುರಿಯ ಪಠ್ಯದ ನಂತರ ಈ ಮುಂದಿನ ಕೆಲವು ಅಂಶಗಳನ್ನು ಕೊಟ್ಟು ಒಂದಷ್ಟು ಪ್ರಶ್ನೆಗಳನ್ನೂ ಎದುರಿಡಲಾಗಿದೆ.

1. ಕರ್ನಾಟಕದಲ್ಲಿ ಮಕ್ಕಳ ಪರಿಸ್ಥಿತಿ ಹಿನ್ನೆಲೆಯಲ್ಲಿ ಈ ನಿರ್ದಿಷ್ಟ ಗುರಿ ಕುರಿತು ವಿವರಣೆ ಅಥವಾ ಪರಿಚಯ.
2. ಭಾರತ ಮತ್ತು ದಕ್ಷಿಣದ ರಾಜ್ಯಗಳಿಗೆ ಹೋಲಿಸಿ ಕರ್ನಾಟಕದಲ್ಲಿ ಮಕ್ಕಳ ಸ್ಥಾನಮಾನ
3. 2030ರೊಳಗೆ ಏನು ಸಾಧಿಸಬೇಕಿದೆ (2020, 2025 ಮತ್ತು 2030 ರ ಮೂರು ಹಂತಗಳಲ್ಲಿ). ಏನು ಕಡಿಮೆಯಾಗಬೇಕು, ಯಾವುದು ಜಾಸ್ತಿ ಆಗಬೇಕು. ಯಾವುದರಲ್ಲಿ ಗುಣಮಟ್ಟ ಪರಿಶೀಲನೆ ಆಗಬೇಕು, ಇತ್ಯಾದಿ.
4. ಇದನ್ನು ಸಾಧಿಸುವಲ್ಲಿ ನಾವು ಏನು ಮಾಡಬಹುದು ಮತ್ತು ಈಗಿರುವ ಮತ್ತು ಮುಂದೆ ಎದುರಿಸಬೇಕಾದ ಸವಾಲುಗಳು.
5. ನಿರ್ದಿಷ್ಟ ಬದಲಾವಣೆ ಆಗುತ್ತಿದೆ, ಅಭಿವೃದ್ಧಿಯತ್ತ ಸಾಗುತ್ತಿದ್ದೇವೆ ಎಂದು ಹೇಳಲು ಏನನ್ನು ಪರಿಶೀಲಿಸಬೇಕು, ಯಾವುದರತ್ತ ವರದಿಗಾಗಿ ಗಮನಿಸಬೇಕು?

### ಕರ್ನಾಟಕ ಮತ್ತು ಸುಸ್ಥಿರ ಅಭಿವೃದ್ಧಿ

ಕರ್ನಾಟಕ ಸರ್ಕಾರ 1990ರ ದಶಕದಲ್ಲೇ ಮಾನವ ಅಭಿವೃದ್ಧಿ ಕುರಿತು ವರದಿಯನ್ನು ಪ್ರಕಟಿಸಿ ರಾಜ್ಯದ ಸ್ಥಿತಿಗತಿಗಳೇನು ಎಂದು ವಿಶ್ಲೇಷಿಸುವ ಪ್ರಯತ್ನವನ್ನು ಮಾಡಿತ್ತು. ಇದಕ್ಕೆ ಆಗ ಇಟ್ಟುಕೊಂಡಿದ್ದ ಮಾಪಕ, ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಶ್ವಸಂಸ್ಥೆ ಹೊರಡಿಸಿದ್ದ ಜಾಗತಿಕ ಮಾನವ ಅಭಿವೃದ್ಧಿ ಸೂಚಕಗಳು. ಬಹಳ ಮುಖ್ಯವಾಗಿ ಜೀವಿತಾವಧಿ, ಜೀವನ ಮಟ್ಟ ಮತ್ತು ಶಿಕ್ಷಣವೇ ಮೊದಲಾದ ಮೂಲ ಅಂಶಗಳು ಅದರಲ್ಲಿ ಇರುವುದು. ರಾಜ್ಯ ಸರ್ಕಾರ 2015ರಲ್ಲಿ ಎಲ್ಲ ಗ್ರಾಮಪಂಚಾಯಿತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ತಳಮಟ್ಟದಲ್ಲಿ ಮಾನವ ಅಭಿವೃದ್ಧಿ ಸೂಚಕಗಳ ಪರಿಸ್ಥಿತಿ ಹೇಗಿದೆ ಎಂದು ವರದಿ ಸಿದ್ಧಪಡಿಸಿ ಬಿಡುಗಡೆ ಮಾಡಿದೆ. ಇದರಲ್ಲೂ ಜೀವಿತಾವಧಿ, ಶಿಕ್ಷಣ ಮತ್ತು ಜೀವನ ಮಟ್ಟವೇ ಮುಖ್ಯವಾಗಿದ್ದರೂ, ಮಕ್ಕಳ ಹುಟ್ಟು, ಸಾವು, ಹೆರಿಗೆ ಸಮಯದಲ್ಲಿ ತಾಯಂದಿರು ನಿಧನ ಹೊಂದುವುದು, ಆರೋಗ್ಯವೇ ಮೊದಲಾದವು ಪ್ರಮುಖ ಸ್ಥಾನವನ್ನು ಪಡೆದಿವೆ.

ಸಹಸ್ರಮಾನದ ಅಭಿವೃದ್ಧಿ ಗುರಿಗಳು (ಎಂ.ಡಿ.ಜಿ) 2001ರಿಂದ 2015ರ ವರೆಗೆ ಎಂದು ಘೋಷಿತವಾಗಿ ಬಿಡುಗಡೆಯಾಗಿದ್ದರೂ, ವಾಸ್ತವವಾಗಿ, ನಮ್ಮ ದೇಶದಲ್ಲಿ ಅಭಿವೃದ್ಧಿ ಮಾತುಕತೆಗಳಲ್ಲಿ ಅದು ಕಾಣಿಸಿಕೊಂಡದ್ದು ಬಹಳ ತಡವಾಗಿ. ಪ್ರಾಯಶಃ 2007ರ ನಂತರವೇ. ಈ ಗುರಿಗಳ ಅವಧಿ ಮುಗಿಯುವ ಹೊತ್ತಿಗೆ ಸರ್ಕಾರ, ಸ್ವಯಂಸೇವಾ ಸಂಘಟನೆಗಳು, ಆಡಳಿತ, ವಿಶ್ವವಿದ್ಯಾಲಯಗಳೇ ಮೊದಲಾದವು ಅಭಿವೃದ್ಧಿ ಗುರಿಗಳನ್ನು ಕುರಿತು ಮಾತುಕತೆಗಳು, ವರದಿಗಳನ್ನು ಪ್ರಕಟಿಸಲಾರಂಭಿಸಿದವು. ಆದಾಗ್ಯೂ, ಈ ಅಂಶಗಳು ತಳಮಟ್ಟದ ಆಡಳಿತವನ್ನು ಮುಟ್ಟಲು ಆಗಲೇ ಇಲ್ಲ.

ಈಗ ನಮ್ಮೆದುರು ಇರುವ ಸುಸ್ಥಿರ ಅಭಿವೃದ್ಧಿ ಗುರಿಗಳು ಆರಂಭದಿಂದಲೇ ರಾಷ್ಟ್ರೀಯ ಮಟ್ಟದಿಂದ ಗ್ರಾಮಮಟ್ಟದವರೆಗೆ ಜೊತೆಜೊತೆಯಾಗಿ ಚರ್ಚೆ, ಜಾರಿಗೆ ಬರಬೇಕೆಂಬುದು ಎಲ್ಲರ ಮಹದಾಶೆ. ಈ ಕೈಪಿಡಿ ಆ ದಿಶೆಯಲ್ಲಿ ಒಂದು ಪುಟ್ಟ ಪ್ರಯತ್ನ.

- ಈ ಮುಂದಿರುವ ಪತ್ಯದಲ್ಲಿ ಮೂರು ಮುಖ್ಯ ಅಂಶಗಳು ಕಂಡುಬರುತ್ತದೆ. ಗುರಿ (Goal); ಲಕ್ಷ್ಯ (Target); ಸೂಚಕಗಳು (Indicators). ಗುರಿ ಜಾಗತಿಕವಾದುದು. ಲಕ್ಷ್ಯ ಮತ್ತು ಸೂಚಕಗಳು ಜಾಗತಿಕ ಹಿನ್ನೆಲೆಯನ್ನು ಹೊಂದಿದ್ದರೂ, ಅವುಗಳನ್ನು ನಮ್ಮ ದೇಶ, ರಾಜ್ಯ ಮತ್ತು ವಿಭಾಗಗಳಿಗೆ ಅನುಗುಣವಾಗಿ ಪರಿಶೀಲಿಸಿ ಅಳವಡಿಸಿಕೊಳ್ಳಲಾಗುತ್ತಿದೆ.
- ಭಾರತ ಸರ್ಕಾರದ ನೀತಿ ಆಯೋಗ ಈಗಾಗಲೇ ಎಲ್ಲ ರಾಜ್ಯಗಳಿಗೆ ಮಾಹಿತಿ ರವಾನಿಸಿ, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ರಾಜ್ಯ ಮಟ್ಟದಲ್ಲಿ ಲಕ್ಷ್ಯ ಮತ್ತು ಸೂಚಕಗಳ ಪರಿಶೀಲನೆಯನ್ನು ಮಾಡಿ ಯೋಜನೆಗಳನ್ನು ಪುನರ್ವಿಂಗಡಿಸಲು ಮತ್ತು ಎಲ್ಲೆಲ್ಲಿ ಆವಶ್ಯಕತೆಯಿದೆಯೋ ಅಂತಹ ಕಡೆಗಳಲ್ಲೆಲ್ಲಾ ಕ್ರಮ ಕೈಗೊಳ್ಳಲು ಸೂಚಿಸಿದೆ. ಜೊತೆಗೆ, ಪ್ರತಿಯೊಂದು ಗುರಿಗೂ ಅನುಗುಣವಾಗಿ ನಿರ್ದಿಷ್ಟ ಇಲಾಖೆಗಳನ್ನು ಉಸ್ತುವಾರಿ ಮಾಡಲು ನೋಡಲ್ ಆಗಿ ನೇಮಿಸಿದೆ.

ಈಗ ನಮ್ಮೆದುರು ಇರುವ ದೊಡ್ಡ ಸವಾಲು, ಈ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಕುರಿತು ದೇಶದ ಪ್ರತಿಯೊಬ್ಬರಿಗೂ ತಲುಪಿಸುವುದು. ಅಂದರೆ, ಜನಪ್ರತಿನಿಧಿಗಳು, ವಿವಿಧ ಹಂತದ ಅಧಿಕಾರಿಗಳು, ಖಾಸಗಿ ರಂಗ, ಶೈಕ್ಷಣಿಕ ರಂಗ, ಸ್ವಯಂಸೇವಾ ಸಂಘಟನೆಗಳು, ಮಾಧ್ಯಮ ಇವೇ ಮೊದಲಾದವರಿಗೆ ತಮ್ಮ ತಮ್ಮ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸುವ ಕುರಿತು ಕಾಳಜಿ ಮೂಡಿಸುವುದು. ಎರಡನೆಯದಾಗಿ, ಈ ಗುರಿಗಳನ್ನು ಸಾಧಿಸುವತ್ತ ನಾವು ಸಾಮೂಹಿಕವಾಗಿ ಹೆಜ್ಜೆ ಹಾಕುತ್ತಿರುವೆವೋ ಇಲ್ಲವೋ, ಸಾಧನೆಗಳು ಆಗುತ್ತಿವೆಯೋ ಇಲ್ಲವೋ ಎಂದು ಪರಿಶೀಲಿಸಿಕೊಳ್ಳಲು ಕಾಲಕಾಲಕ್ಕೆ (ಪ್ರತಿ ಐದು ವರ್ಷಗಳಿಗೊಮ್ಮೆ) ಉಸ್ತುವಾರಿ ಮಾಡಿಕೊಳ್ಳಬೇಕಿದೆ. ಮೂರನೆಯದಾಗಿ, ಮುಂದಿನ ವರ್ಷಗಳಲ್ಲಿ ಹೀಗೆ ಪರಿಶೀಲಿಸಿಕೊಳ್ಳಲು ನಾವು ಈಗ ಯಾವ ಹಂತದಲ್ಲಿದ್ದೇವೆ, ನಮ್ಮ ಪರಿಸ್ಥಿತಿ ಹೇಗಿದೆ ಎಂದು ಅಂಕಿಅಂಶಗಳು ಮತ್ತು ವಾಸ್ತವ ಅಂಶಗಳನ್ನು ಆಧರಿಸಿ ಗುರುತಿಟ್ಟುಕೊಳ್ಳುವ (Stock taking / Bench Marking) ಆವಶ್ಯಕತೆ ಇದೆ. ಈ ಕೈಪಿಡಿಯನ್ನು ಆ ಉದ್ದೇಶಕ್ಕಾಗಿಯೇ ಸಿದ್ಧಮಾಡಿರುವುದು ಎನ್ನಬಹುದು.



## ಈ ಕೈಪಿಡಿಯ ಉದ್ದೇಶ ಈ ಮುಂದಿನವುಗಳನ್ನು ಸಾಧಿಸಲು ಸಂಬಂಧಿತರು ಸುಸ್ಥಿರ ಅಭಿವೃದ್ಧಿ ಗುರಿಗಳ ಮಾಹಿತಿಯನ್ನು ಬಳಸಬೇಕು ಎಂಬುದು.

1. ಮಕ್ಕಳನ್ನು ಉದ್ದೇಶಿಸಿ ನಡೆದಿರುವ ವಿವಿಧ ಅಭಿವೃದ್ಧಿ ಯೋಜನೆಗಳು, ಕಾರ್ಯಕ್ರಮಗಳು ಮೊದಲಾದವುಗಳ ಜಾರಿ ಉಸ್ತುವಾರಿ.
2. ಮಕ್ಕಳನ್ನು ಉದ್ದೇಶಿಸಿ ಯಾವುದಾದರೂ ಸಮಸ್ಯೆಗಳು ಕಂಡು ಬಂದಲ್ಲಿ ಅವುಗಳನ್ನು ನಿವಾರಿಸಲು ಸ್ಥಳೀಯ, ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಜನಬೆಂಬಲ, ಆಡಳಿತ ಬೆಂಬಲ, ಜನಪ್ರತಿನಿಧಿಗಳ ಬೆಂಬಲ, ಮಾಧ್ಯಮಗಳ ಬೆಂಬಲ ಮತ್ತು ಸರ್ಕಾರೇತರರು ಹಾಗೂ ಕಾರ್ಪೊರೇಟ್ ಜನ/ಸಂಸ್ಥೆಗಳ ಬೆಂಬಲವನ್ನು ಹಕ್ಕಿನ ರೂಪದಲ್ಲಿ ಪಡೆಯುವುದು
3. ಎಲ್ಲೆಲ್ಲಿ ಮಕ್ಕಳಿಗೆ ಸಂಬಂಧಿಸಿದ ಸೇವೆಗಳು ಸಮರ್ಪಕವಾಗಿ ನಡೆಯುತ್ತಿಲ್ಲವೋ ಅಥವಾ ಅವು ಸಮರ್ಪಕವಾಗಿ ಸಿಗುತ್ತಿಲ್ಲವೋ ಅಥವಾ ಅಂತಹ ಸೇವೆಗಳನ್ನು ಸ್ಥಳೀಯ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರ ನೀಡಲು ಹಿಂದೆ ಮುಂದೆ ನೋಡುತ್ತಿದೆಯೋ ಅಥವಾ ಸರ್ಕಾರಕ್ಕೆ ಗೊತ್ತೇ ಇಲ್ಲವೋ ಅಂತಹ ವಿಷಯಗಳನ್ನು ಕುರಿತು ವಕೀಲಿ ನಡೆಸುವುದು.
4. ಸ್ಥಳೀಯ ಮಟ್ಟದಲ್ಲಿ (ಅದು ಒಂದು ಪಂಚಾಯಿತಿ, ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟದಲ್ಲಿರಬಹುದು) ನಮ್ಮ ವಕೀಲಿಗಳಿಗೆ ಬೆಲೆ ಸಿಗದಿದ್ದರೆ, ಪ್ರತಿಕ್ರಿಯೆ ಧನಾತ್ಮಕವಾಗಿ ಆಗದಿದ್ದಲ್ಲಿ, ಹಕ್ಕಿನ ನ್ಯಾಯಬದ್ಧ ಆಗ್ರಹಕ್ಕಾಗಿ ಅಂತಾರಾಷ್ಟ್ರೀಯ ಮಟ್ಟಕ್ಕೂ ಸಾಗಲು ಅವಕಾಶಗಳಿವೆ. ಅದಕ್ಕಾಗಿ ಸ್ಥಳೀಯ ಪರಿಸ್ಥಿತಿಗಳನ್ನು ಕುರಿತು ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಸಮಿತಿಗೆ ಅಥವಾ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸಮಿತಿಗೆ ಕಾಲಕಾಲಕ್ಕೆ ನೀಡುವ ವರದಿಗಳ ಪ್ರಕ್ರಿಯೆಯಲ್ಲಿ ತೊಡಗಬಹುದು.

ಈ ವಿಚಾರಗಳನ್ನು ಜನರಿಗೆ ತಲುಪಿಸಲು ಶಿಕ್ಷಣ, ಮಾಹಿತಿ ಹಂಚಿಕೆಗಾಗಿ ವಿವಿಧ ರೀತಿಯ ಮಾಧ್ಯಮಗಳನ್ನು ಬಳಸಿಕೊಂಡು ಸಾರ್ವಜನಿಕ ಅಭಿಪ್ರಾಯಗಳನ್ನು ರೂಪಿಸುವುದು.



1 NO POVERTY

# ಗುರಿ 1

## ಎಲ್ಲೆಡೆಯಲ್ಲಿಯೂ ಎಲ್ಲಾ ವಿಧದ ಬಡತನವನ್ನು ಕೊನೆಗಾಣಿಸಿ

| | ಲಕ್ಷ್ಯಗಳು | | ಸೂಚಕಗಳು |
|---|---|---|---|
| 1.1 | 2030ರೊಳಗೆ, ಎಲ್ಲೆಲ್ಲಿ ಜನ ಪ್ರಸ್ತುತ ದಿನಕ್ಕೆ 1.25 ಡಾಲರು($)ಗಳಿಗಿಂತಲೂ ಕಡಿಮೆ ಹಣದಲ್ಲಿ ಜೀವನ ನಡೆಸುತ್ತಿರುವವರೆಂದು ಪರಿಗಣಿಸಲಾಗಿದೆಯೋ ಅಂತಹ, ಎಲ್ಲ ಜನರ ತೀವ್ರ ಬಡತನವನ್ನು ಕೊನೆಗೊಳಿಸಿ | 1.1.1 | ಅಂತಾರಾಷ್ಟ್ರೀಯ ಬಡತನ ರೇಖೆಯ ಕೆಳಗಿರುವ ಜನಸಂಖ್ಯೆಯ ಪ್ರಮಾಣ: ಲಿಂಗ, ವಯಸ್ಸು, ಉದ್ಯೋಗದ ಸ್ಥಾನಮಾನ ಮತ್ತು ಭೌಗೋಳಿಕ ಸ್ಥಾನ (ನಗರ/ಗ್ರಾಮೀಣ) |
| 1.2 | 2030ರೊಳಗೆ, ಆಯಾ ದೇಶಗಳ ವ್ಯಾಖ್ಯಾನದ ಪ್ರಕಾರ ಎಲ್ಲಾ ಆಯಾಮಗಳಲ್ಲೂ ಬಡತನದಲ್ಲಿ ಜೀವಿಸುತ್ತಿರುವ ಎಲ್ಲಾ ವಯೋಮಾನದ ಪುರುಷರು, ಮಹಿಳೆಯರು ಮತ್ತು ಮಕ್ಕಳ ಪ್ರಮಾಣವನ್ನು ಅರ್ಧಕ್ಕೆ ಇಳಿಸಿ | 1.2.1. | ರಾಷ್ಟ್ರೀಯ ಬಡತನ ರೇಖೆಯ ಕೆಳಗಿನ ಮಟ್ಟದಲ್ಲಿ ಜೀವಿಸುತ್ತಿರುವ ಎಲ್ಲಾ ಲಿಂಗಾವಾರು ಮತ್ತು ಎಲ್ಲಾ ವಯೋಮಾನದ ಜನಸಂಖ್ಯೆಯ ಪ್ರಮಾಣ |
| | | 1.2.2. | ಆಯಾ ದೇಶಗಳ ವ್ಯಾಖ್ಯಾನದ ಪ್ರಕಾರ ಎಲ್ಲಾ ಆಯಾಮಗಳಲ್ಲೂ ಬಡತನದಲ್ಲಿ ಜೀವಿಸುತ್ತಿರುವ ಎಲ್ಲಾ ವಯೋಮಾನದ ಪುರುಷರು, ಮಹಿಳೆಯರು ಮತ್ತು ಮಕ್ಕಳ ಪ್ರಮಾಣ |
| 1.3 | ಆಯಾ ರಾಷ್ಟ್ರಗಳಿಗೆ ಸೂಕ್ತವಾದ ಸಾಮಾಜಿಕ ರಕ್ಷಣಾ ವ್ಯವಸ್ಥೆ ಮತ್ತು ಕ್ರಮಗಳನ್ನು ತಳಮಟ್ಟದವರನ್ನೂ ಒಳಗೊಂಡು ಎಲ್ಲರಿಗಾಗಿ ಜಾರಿಗೊಳಿಸಿ ಮತ್ತು 2030ರೊಳಗೆ ಬಡವರು ಮತ್ತು ಅಸಹಾಯಕರನ್ನು ಗಣನೀಯವಾಗಿ ತಲುಪಿ | 1.3.1. | ಸಾಮಾಜಿಕ ರಕ್ಷಣೆಯ ವ್ಯವಸ್ಥೆಗಳನ್ನು ಪಡೆದುಕೊಂಡಿರುವ ಲಿಂಗಾವಾರು, ಮಕ್ಕಳು, ನಿರುದ್ಯೋಗಿ ವ್ಯಕ್ತಿಗಳು, ಹಿರಿಯ ನಾಗರಿಕರು, ಅಂಗವಿಕಲತೆಯಿರುವವರು, ಗರ್ಭಿಣಿಯರು, ನವಜಾತ ಶಿಶುಗಳು, ದುಡಿಮೆಯಿಂದ ಊನಗೊಂಡವರು ಮತ್ತು ಇತರ ಬಡ ಹಾಗು ಅಸಹಾಯಕರ ಪ್ರಮಾಣ |

| | | | |
|---|---|---|---|
| 1.4 | 2030ರೊಳಗೆ, ಎಲ್ಲಾ ಪುರುಷರು ಮತ್ತು ಮಹಿಳೆಯರು, ಅದರಲ್ಲೂ ವಿಶೇಷವಾಗಿ ಬಡ ಮತ್ತು ಅಸಹಾಯಕರಿಗೆ ಆರ್ಥಿಕ ಸಂಪನ್ಮೂಲದೊಂದಿಗೆ ಮೂಲ ಸೇವೆಗಳು, ಭೂಮಿ ಹಾಗು ಇತರ ರೀತಿಯ ಸ್ವತ್ತುಗಳು, ಪರಂಪರಾನುಗತವಾಗಿ ಬಂದಂತಹವು, ನೈಸರ್ಗಿಕ ಸಂಪನ್ಮೂಲ, ಸೂಕ್ತ ನವೀನ ತಂತ್ರಜ್ಞಾನ ಹಾಗು ಕಿರುಸಾಲವೂ ಸೇರಿದಂತೆ ಆರ್ಥಿಕ ಸೇವೆಗಳ ಮೇಲಿನ ಸಮಾನ ಹಕ್ಕು, ಸ್ವಾಮ್ಯ ಮತ್ತು ನಿಯಂತ್ರಣವನ್ನು ಖಚಿತಗೊಳಿಸಿ | 1.4.1. | ಮೂಲ ಸೌಲಭ್ಯಗಳ ಲಭ್ಯತೆಯಿರುವ ಮನೆಗಳಲ್ಲಿ ಜೀವಿಸುತ್ತಿರುವ ಜನಸಂಖ್ಯೆಯ ಪ್ರಮಾಣ |
| | | 1.4.2. | ಭೂಮಿಯ ಸುರಕ್ಷಿತ ಅಧಿಕಾರಾವಧಿ ಹಕ್ಕುಗಳನ್ನು ಕಾನೂನಿನಿಂದ ಮಾನ್ಯತೆ ಪಡೆದ ದಾಸ್ತಾವೇಜುಗಳೊಂದಿಗೆ ಹೊಂದಿದ ಮತ್ತು ಯಾರು ತಮ್ಮ ಭೂಮಿಯ ಹಕ್ಕು ಸುರಕ್ಷಿತವಾಗಿದೆ ಎಂದು ಭಾವಿಸಿರುವರೋ ಅಂತಹವರ ಲಿಂಗಾವಾರು ಮತ್ತು ಅಧಿಕಾರಾವಧಿಯ ವಿಧದ ಒಟ್ಟು ವಯಸ್ಕ ಜನಸಂಖ್ಯೆಯ ಪ್ರಮಾಣ |
| 1.5 | 2030ರೊಳಗೆ, ಬಡವರು ಮತ್ತು ಅಸಹಾಯಕರು ಸೂಕ್ಷ್ಮ ಪರಿಸ್ಥಿತಿಗಳನ್ನು ಎದುರಿಸಲು ಸಶಕ್ತರನ್ನಾಗಿಸಿ, ಅವರು ವಾತಾವರಣಕ್ಕೆ ಸಂಬಂಧಿಸಿದ ಅತಿರೇಕಗಳು ಮತ್ತು ಇತರೆ ಆರ್ಥಿಕ, ಸಾಮಾಜಿಕ ಮತ್ತು ನೈಸರ್ಗಿಕ ಆಘಾತ ಹಾಗೂ ವಿಕೋಪಗಳಿಗೆ ಸಿಕ್ಕಿಕೊಂಡು ಅಸಹಾಯಕರಾಗುವುದನ್ನು ಕಡಿಮೆಗೊಳಿಸಿ | 1.5.1. | ಪ್ರತಿ 1,00,000 ಜನಸಂಖ್ಯೆಯಲ್ಲಿ ವಿಕೋಪಗಳಿಂದ ತೊಂದರೆಗೀಡಾಗಿ ಮರಣ ಹೊಂದುವ, ಕಾಣೆಯಾಗುವ ವ್ಯಕ್ತಿಗಳ ಸಂಖ್ಯೆ. |
| | | 1.5.2. | ಜಾಗತಿಕ ನಿವ್ವಳ ಆಂತರಿಕ ಉತ್ಪನ್ನಕ್ಕೆ (GDP) ಸಂಬಂಧಿಸಿದಂತೆ ನೇರ ವಿಕೋಪ ಆರ್ಥಿಕ ನಷ್ಟ. |
| | | 1.5.3. | ರಾಷ್ಟ್ರೀಯ ಮತ್ತು ಸ್ಥಳೀಯ ವಿಕೋಪ ಅಪಾಯಗಳನ್ನು ತಗ್ಗಿಸುವ ವಿಧಾನ/ತಂತ್ರಗಳನ್ನು ಹೊಂದಿರುವ ದೇಶಗಳ ಸಂಖ್ಯೆ |
| 1.ಎ | ಬಡತನವನ್ನು ಅದರ ಎಲ್ಲಾ ಆಯಾಮಗಳಲ್ಲಿ ಕೊನೆಗೊಳಿಸಲು ಅಭಿವೃದ್ಧಿಶೀಲ ದೇಶಗಳಿಗೆ, ಅದರಲ್ಲೂ ವಿಶೇಷವಾಗಿ ಕನಿಷ್ಟ ಅಭಿವೃದ್ಧಿಯಾಗಿರುವ ದೇಶಗಳಿಗೆ, ಸಾಕಷ್ಟು ಪ್ರಮಾಣದ ಮತ್ತು ನಿರೀಕ್ಷಿತ ಸಾಧನೆಗೈಯ್ಯಲು ಮೂಲಗಳನ್ನು ಒದಗಿಸಲು ಸುಧಾರಿತ ಅಭಿವೃದ್ಧಿ ಸಹಕಾರಗಳ ಮೂಲಕ ವಿವಿಧ ಮೂಲಗಳಿಂದ ಸಾಕಷ್ಟು ಪ್ರಮಾಣದ ಸಂಪನ್ಮೂಲ ಕ್ರೂಢೀಕರಣವನ್ನು ಖಚಿತಪಡಿಸಿ | 1.ಎ.1 | ಬಡತನ ನಿರ್ಮೂಲನಾ ಕಾರ್ಯಕ್ರಮಗಳಿಗೆ ಸರ್ಕಾರವು ನೇರವಾಗಿ ನಿಗದಿಪಡಿಸಿರುವ ಸಂಪನ್ಮೂಲಗಳ ಪ್ರಮಾಣ |
| | | 1.ಎ.2. | ಸರ್ಕಾರ ಮೀಸಲಿಡುವ ಆಯವ್ಯಯದ ಒಟ್ಟು ಹಣದಲ್ಲಿ ಆವಶ್ಯಕ ಸೇವೆಗಳಿಗೆ (ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ರಕ್ಷಣೆ) ಖರ್ಚು ಮಾಡುವ ಹಣದ ಪ್ರಮಾಣ |
| 1.ಬಿ | ಬಡಜನರ ಪರ ಮತ್ತು ಲಿಂಗ ಸಂವೇದನೆಯುಳ್ಳ ಅಭಿವೃದ್ಧಿ ಯೋಜನೆಗಳ ಆಧಾರದ ಮೇಲೆ ಬಡತನ ನಿರ್ಮೂಲನೆ ಕ್ರಿಯೆಗಳಲ್ಲಿ ಹೆಚ್ಚಿನ ಸಂಪನ್ಮೂಲ ಹೂಡಿಕೆಗಾಗಿ ನೆರವು ನೀಡಲು ರಾಷ್ಟ್ರೀಯ, ಪ್ರಾಂತೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಮರ್ಥ ನೀತಿ ಚೌಕಟ್ಟನ್ನು ರೂಪಿಸಿ | 1.ಬಿ.1. | ಮಹಿಳೆಯರು, ಬಡವರು ಮತ್ತು ಅಸಹಾಯಕ ಗುಂಪುಗಳಿಗೆ ಅಸಮ ಪ್ರಮಾಣದ ಲಾಭದಾಯಕ ವಲಯಗಳಿಗೆ ಸರ್ಕಾರದ ಮರುಕಳಿಸುವ ಮತ್ತು ಬಂಡವಾಳ ವೆಚ್ಚದ ಪ್ರಮಾಣ |

## ವಿವರಣೆ

ಭಾರತ ನೈಸರ್ಗಿಕ ಸಂಪನ್ಮೂಲಗಳನ್ನು ಸಾಕಷ್ಟು ಹೊಂದಿದೆ. ಆದರೆ, ಅತಿ ಹೆಚ್ಚು ಬಡವರನ್ನು ಹೊಂದಿರುವ ದೇಶಗಳಲ್ಲಿ ಭಾರತ ಒಂದಾಗಿದೆ (ಆಯಾ ದೇಶದ ಬಡತನದ ವ್ಯಾಖ್ಯಾನದ ಪ್ರಕಾರ). ಬಡತನದ ರೇಖೆಯ ಕೆಳಗಿರುವ ಜನರಲ್ಲಿ ಅತಿ ಹೆಚ್ಚಿನವರು ಗ್ರಾಮೀಣ, ಹಿಂದುಳಿದ ವರ್ಗ, ಹಿಂದುಳಿದ ಪಂಗಡಗಳಿಗೆ ಸೇರಿದವರಾಗಿದ್ದಾರೆ. ಬಡತನಕ್ಕೆ ಅನೇಕ ಕಾರಣಗಳನ್ನು ಹೆಸರಿಸಲಾಗಿದೆ. 2011ರ ಜನಗಣತಿಯಂತೆ ದೇಶದ ಅತಿ ಹೆಚ್ಚಿನ ಜನರು ವಾಸವಾಗಿರುವುದು ಗ್ರಾಮೀಣ ಪ್ರದೇಶದಲ್ಲಿ (ಶೇ. 69) ಮತ್ತು ಇವರಲ್ಲಿ ಬಹುತೇಕ ಜನರು ಕೃಷಿ ಉತ್ಪನ್ನ ಮತ್ತು ಕೃಷಿ ಸಂಬಂಧಿತ ಉದ್ಯೋಗಗಳನ್ನು ಅವಲಂಬಿಸಿದ್ದಾರೆ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ವಿವಿಧ ಕಾರಣಗಳಿಂದ ಕೃಷಿ ಉತ್ಪನ್ನಗಳಲ್ಲಿ ಕಡಿತ, ಕೂಲಿ ದರಗಳಲ್ಲಿ ತಾರತಮ್ಯ, ಅನಕ್ಷರತೆ, ಮಾಹಿತಿಯ ಕೊರತೆ, ಉದ್ಯೋಗಾವಕಾಶಗಳು ಕಡಿಮೆ ಆಗಿರುವುದು, ಇವೇ ಮೊದಲಾದವುಗಳಾಗಿವೆ. ನಗರ ಪ್ರದೇಶಗಳಲ್ಲಿ ಅಗಾಧ ಜನಸಂಖ್ಯೆಯಿಂದ ಉಂಟಾಗಿರುವ ನಿರುದ್ಯೋಗ ಮತ್ತು ಅನಿಶ್ಚಿತ ಉದ್ಯೋಗವೂ ಬಡತನಕ್ಕೆ ಕಾರಣವಾಗಿದೆ. ಗ್ರಾಮೀಣ ಪ್ರದೇಶಗಳಿಂದ ಜನ ಅನಿವಾರ್ಯವಾಗಿ ಬದುಕು ಹುಡುಕಿಕೊಂಡು ನಗರಗಳಿಗೆ ವಲಸೆ ಬರುತ್ತಿರುವುದನ್ನು ಈ ಮಧ್ಯ ಉಪೇಕ್ಷಿಸಲಾಗದು.

ಇವುಗಳಿಂದಾಗಿ ಬಡ ಕುಟುಂಬಗಳಲ್ಲಿರುವ ಮಕ್ಕಳು ತಮ್ಮ ಬದುಕು, ಆರೋಗ್ಯ, ಶಿಕ್ಷಣ, ಪೌಷ್ಟಿಕತೆ ಇವೇ ಮೊದಲಾದ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಇಂತಹ ಕುಟುಂಬಗಳ ಅನೇಕ ಮಕ್ಕಳು ಬಾಲಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇದರೊಡನೆ ಕಂಡುಬರುವ ಇತರ ಸಮಸ್ಯೆಗಳಾದ ಮಾನವ/ಮಕ್ಕಳ/ಮಹಿಳೆಯರ ಸಾಗಣೆ, ಬಡ ಕುಟುಂಬಗಳ ಜನರ ಮೇಲಾಗುವ ಅತ್ಯಾಚಾರ, ಮೋಸ, ಶೋಷಣೆಗಳು ಅನೇಕ. ನಗರ ಪ್ರದೇಶಗಳ ಕೊಳೆಗೇರಿಗಳಲ್ಲಿ ಮಕ್ಕಳ ಪರಿಸ್ಥಿತಿ ಇನ್ನೂ ಘೋರ. ದೇಶದಲ್ಲಿ ಬಡತನವನ್ನು ನಿವಾರಿಸಲು ಹಲವಾರು ಕಾರ್ಯಕ್ರಮಗಳು, ಯೋಜನೆಗಳು ಅನೇಕ ದಶಕಗಳಿಂದ ಜಾರಿಯಲ್ಲಿದ್ದರೂ, ಇನ್ನೂ ಬಡತನವನ್ನು ನಿರ್ಮೂಲನೆಗೊಳಿಸಲು ಸಾಧ್ಯವಾಗಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಬಡತನ ರೇಖೆಯೆಂದರೇನೆಂದು ನಿರ್ಧರಿಸುವಲ್ಲಿಯೇ ಇನ್ನೂ ಅನೇಕ ಗೊಂದಲಗಳಿವೆ. ಯೋಜನಾ ಆಯೋಗವೂ ಸಹ ಈ ನಿಟ್ಟಿನಲ್ಲಿ ಹೆಚ್ಚೇನು ಸ್ಪಷ್ಟತೆ ನೀಡಿಲ್ಲ ಎಂದೇ ಹೇಳಬಹುದು.

ಫೆಬ್ರವರಿ 2016ರ ಪ್ರಕಾರ ಪ್ರತಿ ಡಾಲರ್‌ಗೆ ($) ಭಾರತದಲ್ಲಿ ಬೆಲೆ ಸುಮಾರು 60 ರೂಗಳಷ್ಟಿದೆ. ಸುಸ್ಥಿರ ಅಭಿವೃದ್ಧಿ ಗುರಿ 1ರ ಪ್ರಕಾರ, ಪ್ರತಿನಿತ್ಯ $1.25 ಅಂದರೆ ರೂ. 75ಕ್ಕಿಂತ ಕಡಿಮೆ ಆದಾಯವಿರುವ ಜನರನ್ನು ತೀವ್ರ ಬಡತನದಲ್ಲಿರುವವರೆಂದು ಗುರುತಿಸಲಾಗಿದೆ. ಆದರೆ, ಹೀಗೆ ತೀರಾ ಬಡತನದಲ್ಲಿರುವ ಜನರನ್ನು ಗುರುತಿಸುವುದು ತುಸು ಕಷ್ಟದ ಕೆಲಸವೇ ಸರಿ.

**ಬಡತನ ರೇಖೆಯ ಕೆಳಗಿರುವ ಕುಟುಂಬಗಳು (ಯೋಜನಾ ಆಯೋಗ 2011–12 ವರದಿ)**

| ರಾಜ್ಯಗಳು/ಶೇ. | ಗ್ರಾಮೀಣ | ನಗರ | ಒಟ್ಟು |
|---|---|---|---|
| ಭಾರತ | 25.7 | 13.7 | 21.9 |
| ಕರ್ನಾಟಕ | 24.53 | 15.25 | 20.91 |
| ಕೇರಳ | 9.14 | 4.97 | 7.05 |
| ಆಂಧ್ರಪ್ರದೇಶ* | 10.96 | 5.81 | 9.20 |
| ತಮಿಳುನಾಡು | 15.83 | 6.54 | 11.30 |
| ಪುದುಚೇರಿ | 17.03 | 6.30 | 9.69 |

* ಅವಿಭಜಿತ ರಾಜ್ಯ

ಯೋಜನಾ ಇಲಾಖೆಯ 2011–12ರ ವರದಿಯ ಪ್ರಕಾರ (ತೆಂಡೂಲ್ಕರ್ ವಿಧಾನ) ದಕ್ಷಿಣ ಭಾರತದ ರಾಜ್ಯಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನಸಂಖ್ಯೆಯ ಶೇಕಡಾವಾರು ಪ್ರಮಾಣವನ್ನು ಇಲ್ಲಿ ನೀಡಲಾಗಿದೆ.

ದಕ್ಷಿಣ ಭಾರತದ ರಾಜ್ಯಗಳ ಬಡತನವನ್ನು ಪರಿಗಣಿಸಿದರೆ ಕರ್ನಾಟಕವು ಅತಿ ಹೆಚ್ಚಿನ ಬಡವರನ್ನು ಹೊಂದಿರುವ ರಾಜ್ಯವಾಗಿದೆ. ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಶೇ. 24.53ರಷ್ಟು ಮತ್ತು ನಗರ ಪ್ರದೇಶದಲ್ಲಿ ಶೇ. 15.25ರಷ್ಟು ಬಡವರಿದ್ದಾರೆ. ಇವರ ಪ್ರಮಾಣವನ್ನು 2030ರೊಳಗೆ ಅರ್ಧದಷ್ಟು ಕಡಿಮೆ ಮಾಡಲು ಎಲ್ಲಾ ರೀತಿಯ ಪ್ರಯತ್ನಗಳೂ ಆಗಲೇಬೇಕು. ಎಲ್ಲಾ ವರ್ಗದ ಜನರಿಗೂ ಅದರಲ್ಲೂ ಮುಖ್ಯವಾಗಿ ಹಿಂದುಳಿದವರು, ಅಸಹಾಯಕರು, ಬಡವರಿಗೆ ಎಲ್ಲಾ ರೀತಿಯ ಸಾಮಾಜಿಕ ರಕ್ಷಣೆಯನ್ನು ಖಾತ್ರಿಪಡಿಸುವುದು ಎಲ್ಲರ ಕರ್ತವ್ಯವಾಗಿದೆ.

## ನೀವು ಮಾಡಬಹುದಾದದ್ದು

- ಎಲ್ಲಾ ವಯಸ್ಕರಿಗೂ ಉದ್ಯೋಗ ದೊರೆಯುವುದನ್ನು ಮತ್ತು ಅಸಂಘಟಿತ ವಲಯಗಳಲ್ಲಿ ದುಡಿಯುತ್ತಿರುವವರಿಗೆ ರಾಜ್ಯ ಸರ್ಕಾರವು ನಿಗದಿಪಡಿಸಿರುವ ಕನಿಷ್ಠ ವೇತನ ದೊರೆಯುತ್ತಿರುವುದನ್ನು ಖಚಿತಪಡಿಸಿಕೊಳ್ಳಿ.
- ಜನರಿಗೆ ಅತ್ಯಾವಶ್ಯಕವಾದ ಸಾಮಗ್ರಿಗಳು ನಿಗದಿತ ಬೆಲೆಗಳಲ್ಲಿ ಸುಲಭವಾಗಿ ಮತ್ತು ಹತ್ತಿರದಲ್ಲಿ ಕೊಳ್ಳಲು ದೊರೆಯುವುದನ್ನು ಸ್ಥಳೀಯ ಸರ್ಕಾರಗಳು ಖಾತರಿ ಪಡಿಸಿಕೊಳ್ಳಬೇಕು.
- ಬಹಳ ಮುಖ್ಯವಾಗಿ ಬಾಲಕಾರ್ಮಿಕ ಪದ್ಧತಿ, ಜೀತಪದ್ಧತಿಯನ್ನು ಕೊನೆಗಾಣಿಸಿ.
- ನಿಮ್ಮ ಪ್ರದೇಶದಲ್ಲಿ ಕಡುಬಡವರನ್ನು ಗುರುತಿಸಿ ಅವರಿಗೆ ಸರ್ಕಾರದಿಂದ ದೊರೆಯಬಹುದಾದ ಸವಲತ್ತುಗಳನ್ನು ಕೊಡಿಸಲು ನೆರವಾಗಿ.

ಈ ಗುರಿಯೊಂದಿಗೆ ನೀಡಿರುವ ಲಕ್ಷ್ಯಗಳಿಗೆ ಅನುಸರಿಸಿ ಇರುವ ಸೂಚಕಗಳನ್ನು ಸ್ಥಳೀಯವಾಗಿ ಗಮನಿಸಿ, ಅವುಗಳಿಗೆ ಸೂಕ್ತವಾದ ಪ್ರಕ್ರಿಯೆ ನಡೆದಿದೆಯೆ ಗುರುತಿಸಿ. ಅವುಗಳಿಗೆ ಸಂಬಂಧಿಸಿದಂತೆ ಇರಬಹುದಾದ ಯೋಜನೆ, ಹಣಕಾಸು ವಿವರಣೆ, ವರದಿಗಳು ಮತ್ತು ಅಂಕಿಸಂಖ್ಯೆಗಳನ್ನು ಗ್ರಾಮಪಂಚಾಯಿತಿ, ತಾಲೂಕು, ಜಿಲ್ಲೆ, ನಗರ ಪ್ರದೇಶಗಳಿಗೆ ಬಿಡಿಬಿಡಿಯಾಗಿ ಗುರುತಿಸಿ ವಿಶ್ಲೇಷಣೆ ಮಾಡಿ

- ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ನಿಮ್ಮ ಗ್ರಾಮ/ಪಂಚಾಯಿತಿ/ತಾಲೂಕು/ಜಿಲ್ಲೆಯಲ್ಲಿ ಹೇಗೆ ಜಾರಿಯಾಗುತ್ತಿದೆ ಎಂಬುದನ್ನು ಕಂಡುಕೊಳ್ಳಿ.
- ನರೇಗಾ ಮತ್ತು ಅಂತಹ ಇತರ ಯೋಜನೆಗಳ ಸಮರ್ಪಕ ಜಾರಿಗೆ ಸಲಹೆಗಳನ್ನು ನೀಡಿ.
- ಬಡತನ ರೇಖೆಯಡಿ ಇರುವ ಕುಟುಂಬಗಳಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳು, ಪಡಿತರ ವಿತರಣೆ ವ್ಯವಸ್ಥೆಯನ್ನು ಗಮನಿಸಿ. ಇದರಲ್ಲಿ ವ್ಯತ್ಯಯಗಳಿದ್ದರೆ ಸಂಬಂಧಿಸಿದವರಿಗೆ ದೂರು ಕೊಡಲು ಮುಂದಾಗಿ.

**ಸವಾಲುಗಳು**

– ಪ್ರತಿನಿತ್ಯ ರೂ. 75ಕ್ಕಿಂತ ಕಡಿಮೆ ಆದಾಯವಿರುವ ಜನರನ್ನು ಗುರುತಿಸುವುದು ತುಸು ಕಷ್ಟ.
– ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬಗಳ ಸಂಖ್ಯೆಯಲ್ಲಿ ಅಗಾಧವಾದ ಹೆಚ್ಚಳವಿರುವುದರಿಂದ ನಿಜವಾಗಿಯೂ ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬಗಳನ್ನು ಗುರುತಿಸುವುದು ಸವಾಲೇ ಸರಿ.
– ಎಲ್ಲಾ ಸಾಮಾಜಿಕ ರಕ್ಷಣೆಯ ವ್ಯವಸ್ಥೆಗಳನ್ನು ಅರ್ಥೈಸಿಕೊಂಡು ಅವು ಎಲ್ಲರಿಗೂ ತಲುಪುತ್ತಿವೆಯೇ ಎಂದು ಅನುಸರಣೆ ಮಾಡುವುದು ಅಗಾಧವಾದ ಕೆಲಸ.

**ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಸುಸ್ಥಿರ ಅಭಿವೃದ್ಧಿ ಗುರಿ 1 ಅರ್ಥ ಮಾಡಿಕೊಳ್ಳಲು ಓದಬೇಕಿರುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989ರ ನಿರ್ದಿಷ್ಟ ಪರಿಚ್ಛೇದಗಳು**

| ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ | ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ |
|---|---|---|---|
| 1 | ಮಕ್ಕಳೆಂದರೆ 18 ವರ್ಷದೊಳಗಿನವರು | 2 | ಮಕ್ಕಳ ನಡುವೆ ತಾರತಮ್ಯವಿರಬಾರದು |
| 4 | ಮಕ್ಕಳ ಹಕ್ಕುಗಳ ಜಾರಿಗೆ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು | 6 | ಎಲ್ಲ ಮಕ್ಕಳಿಗೆ ಜೀವಿಸುವ ಹಕ್ಕು ಇದೆ |
| 19 | ಮಕ್ಕಳನ್ನು ದುರುಪಯೋಗ ಮತ್ತು ನಿರ್ಲಕ್ಷ್ಯದ ವಿರುದ್ಧ ರಕ್ಷಿಸಬೇಕು | 20 | ಮಕ್ಕಳನ್ನು ಕೌಟುಂಬಿಕ ವಾತಾವರಣದಿಂದ ವಂಚಿಸಬಾರದು |
| 22 | ನಿರಾಶ್ರಿತರಾದ ಮಕ್ಕಳಿಗೆ ಆಶ್ರಯ ಒದಗಿಸಬೇಕು | 23 | ಅಂಗವಿಕಲತೆಯಿರುವ ಮಕ್ಕಳಿಗೆ ರಕ್ಷಣೆ ನೀಡಬೇಕು |
| 24 | ಎಲ್ಲ ಮಕ್ಕಳಿಗೆ ಮೂಲ ಸೇವೆಗಳನ್ನು ಒದಗಿಸಲೇಬೇಕು. | 26 | ಎಲ್ಲ ಮಕ್ಕಳಿಗೆ ಸಾಮಾಜಿಕ ಭದ್ರತೆ ದೊರೆಯಲೇಬೇಕು |
| 27 | ಎಲ್ಲ ಮಕ್ಕಳಿಗೆ ಸೂಕ್ತ ಜೀವನ ಮಟ್ಟ ದೊರೆಯಬೇಕು | 28 | ಎಲ್ಲ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕು ಇದೆ |
| 29 | ಎಲ್ಲ ಮಕ್ಕಳಿಗೆ ತಾರತಮ್ಯವಿಲ್ಲದೆ ಶಿಕ್ಷಣ ಪಡೆಯುವ ಹಕ್ಕು ಇದೆ. | | |

**ಕೇಂದ್ರ/ರಾಜ್ಯ ಸರ್ಕಾರದ ಕ್ರಮಗಳು**


| ಉಸ್ತುವಾರಿ ಸಚಿವಾಲಯ | ಕೇಂದ್ರ ಸರ್ಕಾರದ ಯೋಜನೆಗಳು | ಸಂಬಂಧಿತ ಕ್ರಮಗಳು | ಇತರ ಸಂಬಂಧಿತ ಸಚಿವಾಲಯಗಳು/ ಇಲಾಖೆಗಳು |
|---|---|---|---|
| ಗ್ರಾಮೀಣಾಭಿವೃದ್ಧಿ | 1. ರಾಷ್ಟ್ರೀಯ ನಗರ ಜೀವನ<br>2. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ | 1. ಪ್ರಧಾನ ಮಂತ್ರಿ ಜನ ಧನ ಯೋಜನೆ<br>2. ಪ್ರಧಾನ ಮಂತ್ರಿ ಜೀವನ ಜ್ಯೋತಿ ಭೀಮಾ ಯೋಜನೆ<br>3. ಅಟಲ್ ಪೆನ್ಷನ್ ಯೋಜನೆ | • ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್<br>• ಸಾಮಾಜಿಕ ಅಭಿವೃದ್ಧಿ ಮತ್ತು ಸಬಲೀಕರಣ ಇಲಾಖೆ |

2 ZERO HUNGER

# ಗುರಿ 2

## ಹಸಿವು ಮುಕ್ತ

### ಹಸಿವನ್ನು ಕೊನೆಗಾಣಿಸಿ, ಆಹಾರ ಭದ್ರತೆ ಮತ್ತು ಸುಧಾರಿತ ಪೌಷ್ಟಿಕತೆಯನ್ನು ಸಾಧಿಸಿ ಹಾಗು ಸುಸ್ಥಿರ ಕೃಷಿಯನ್ನು ಉತ್ತೇಜಿಸಿ

| | ಲಕ್ಷ್ಯಗಳು | | ಸೂಚಕಗಳು |
|---|---|---|---|
| 2.1 | 2030ರೊಳಗೆ, ಹಸಿವನ್ನು ಕೊನೆಗೊಳಿಸಿ ಮತ್ತು ಎಲ್ಲಾ ಜನರಿಗೂ ಅದರಲ್ಲೂ ವಿಶೇಷವಾಗಿ ಹಸುಳೆಗಳು ಸೇರಿದಂತೆ ಬಡ ಮತ್ತು ಅಸಹಾಯಕ ಪರಿಸ್ಥಿತಿಯಲ್ಲಿರುವ ಜನರಿಗೆ ಸುರಕ್ಷಿತ, ಪೌಷ್ಟಿಕಾಂಶಯುಕ್ತ ಮತ್ತು ಸಾಕಷ್ಟು ಆಹಾರವನ್ನು ವರ್ಷದುದ್ದಕ್ಕೂ ಲಭ್ಯವಿರುವುದನ್ನು ಖಾತ್ರಿಗೊಳಿಸಿ | 2.1.1. | ಅಪೌಷ್ಟಿಕತೆಯ ಇರುವಿಕೆ  |
| | | 2.1.2. | ಆಹಾರ ಅಭದ್ರತಾ ಅನುಭವ ಪ್ರಮಾಣದ (Food Insecurity Experience Scale-FIES) ಆಧಾರದ ಮೇಲೆ ಜನಸಂಖ್ಯೆಯಲ್ಲಿ ಸಾಧಾರಣ ಅಥವಾ ತೀವ್ರ ಆಹಾರದ ಅಭದ್ರತೆಯ ಪ್ರಮಾಣ |
| 2.2 | 2030ರೊಳಗೆ, ಎಲ್ಲಾ ವಿಧವಾದ ಅಪೌಷ್ಟಿಕತೆಯನ್ನು ಕೊನೆಗೊಳಿಸಿ, ಅದರಲ್ಲೂ, 2025ರೊಳಗೆ ಅಂತಾರಾಷ್ಟ್ರೀಯವಾಗಿ ಸಮ್ಮತಿಸಿದ 5 ವರ್ಷದೊಳಗಿನ ಮಕ್ಕಳ ಕುಂಠಿತ ಬೆಳವಣಿಗೆ (ಎತ್ತರಕ್ಕೆ ತಕ್ಕ ತೂಕವಿಲ್ಲದಿರುವುದು) ಮತ್ತು ಕ್ಷೀಣಿಸುವಿಕೆಯ (ವಯಸ್ಸಿಗೆ ತಕ್ಕ ಎತ್ತರವಿಲ್ಲದಿರುವುದು) ಲಕ್ಷ್ಯವನ್ನು ಸಾಧಿಸಿ ಮತ್ತು ಹದಿಹರೆಯದ ಹೆಣ್ಣುಮಕ್ಕಳು, ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರ ಹಾಗು ವೃದ್ಧರ ಪೋಷಕಾಂಶಗಳ ಕೊರತೆಯನ್ನು ನೀಗಿಸಿ | 2.2.1. | ಐದು ವರ್ಷದ ಒಳಗಿನ ಮಕ್ಕಳಲ್ಲಿ ಕುಂಠಿತತೆ ಇರುವುದು (ವಯಸ್ಸಿಗೆ ತಕ್ಕ ಎತ್ತರ, ವಿಶ್ವ ಆರೋಗ್ಯ ಸಂಸ್ಥೆಯ ಮಕ್ಕಳ ಬೆಳವಣಿಗೆಯ ದರ್ಜೆಯಿಂದ <–2 ಸರಾಸರಿಯಿಂದ ವಿಚಲತೆ ಹೊಂದಿರುವವರು)  |
| | | 2.2.2. | ಐದು ವರ್ಷದ ಒಳಗಿನ ಮಕ್ಕಳಲ್ಲಿ (ಕ್ಷೀಣಿಸುವಿಕೆ ಮತ್ತು ಹೆಚ್ಚು ತೂಕದ ವಿಧ) ಅಪೌಷ್ಟಿಕತೆ ಇರುವುದು (ಎತ್ತರಕ್ಕೆ ತಕ್ಕ ತೂಕ, ವಿಶ್ವ ಆರೋಗ್ಯ ಸಂಸ್ಥೆಯ ಮಕ್ಕಳ ಬೆಳವಣಿಗೆಯ ದರ್ಜೆಯಿಂದ <–2 ಸರಾಸರಿಯಿಂದ ವಿಚಲತೆ ಹೊಂದಿರುವವರು)  |


| | | | |
|---|---|---|---|
| 2.3 | 2030ರೊಳಗೆ, ಸುರಕ್ಷಿತ ಮತ್ತು ಸಮಾನ ಭೂಮಿಯ ಲಭ್ಯತೆಯ ಮೂಲಕ ಮತ್ತು ಇತರೆ ಉಪಯುಕ್ತ ಸಂಪನ್ಮೂಲಗಳನ್ನು ಒದಗಿಸಿ, ಮಾಹಿತಿ, ಜ್ಞಾನ, ಆರ್ಥಿಕ ಸೇವೆಗಳು, ಮಾರುಕಟ್ಟೆ ಮತ್ತು ಮೌಲ್ಯವರ್ಧನೆಯ ಅವಕಾಶಗಳು ಮತ್ತು ಕೃಷಿಯೇತರ ಉದ್ಯೋಗಗಳೂ ಸೇರಿದಂತೆ ಚಿಕ್ಕಪುಟ್ಟ ಪ್ರಮಾಣದಲ್ಲಿ ಆಹಾರೋತ್ಪಾದನೆಯಲ್ಲಿ ತೊಡಗಿರುವ ಸಣ್ಣ ಹಿಡುವಳಿದಾರರ ಅದರಲ್ಲೂ ವಿಶೇಷವಾಗಿ ಮಹಿಳೆಯರ, ಆದಿವಾಸಿಗಳ, ಕೌಟುಂಬಿಕ ಕೃಷಿಕರ, ಹೈನುಗಾರರ, ಮೀನುಗಾರರ ಉತ್ಪನ್ನತೆ ಮತ್ತು ಆದಾಯವನ್ನು ದ್ವಿಗುಣಗೊಳಿಸಿ | 2.3.1. | ಕೃಷಿ/ಸ್ಥಳೀಯ/ಅರಣ್ಯ ಉದ್ದಿಮೆಗಳ ಗಾತ್ರದ ವಿಭಾಗಗಳಲ್ಲಿ ಪ್ರತಿ ಕಾರ್ಮಿಕ ಘಟಕದಿಂದಾಗುವ ಉತ್ಪನ್ನದ ಪರಿಮಾಣ. |
| | | 2.3.2. | ಲಿಂಗ ಮತ್ತು ಸ್ಥಳೀಯ ಸ್ಥಾನಮಾನಕ್ಕೆ ಅನುಗುಣವಾಗಿ ಸಣ್ಣ ಪ್ರಮಾಣದ ಆಹಾರ ಉತ್ಪಾದಕರ ಸರಾಸರಿ ವರಮಾನ |
| 2.4 | 2030ರೊಳಗೆ, ಸುಸ್ಥಿರ ಆಹಾರ ಉತ್ಪಾದನಾ ವ್ಯವಸ್ಥೆಯನ್ನು ಖಾತ್ರಿಗೊಳಿಸಿ ಮತ್ತು ಈ ಸಲುವಾಗಿ ಹವಾಮಾನ ಬದಲಾವಣೆ, ಅತಿರೇಕದ ವಾತಾವರಣ, ಬರ, ನೆರೆ ಹಾಗು ಮತ್ತಿತರ ವಿಕೋಪಗಳನ್ನು ತಾಳಿಕೊಳ್ಳಬಲ್ಲ ಹಾಗೂ ಉತ್ಪಾದನಾ ಸಾಮರ್ಥ್ಯ ಮತ್ತು ಉತ್ಪಾದನೆಯನ್ನು ಹೆಚ್ಚಿಸಬಲ್ಲ ಪರಿಸರ ಸಮತೋಲನವನ್ನು ಕಾಯ್ದುಕೊಳ್ಳಲು ನೆರವು ನೀಡಲು ಮತ್ತು ಕ್ರಮೇಣ ಭೂಮಿ ಮತ್ತು ಮಣ್ಣಿನ ಗುಣಮಟ್ಟವನ್ನು ಹೆಚ್ಚಿಸಲು ಸೂಕ್ತವಾದ ಕೃಷಿ ವಿಧಾನಗಳನ್ನು ಜಾರಿಗೊಳಿಸಿ | 2.4.1. | ಉತ್ಪಾದನಾ ಮತ್ತು ಸುಸ್ಥಿರ ಕೃಷಿಗಾಗಿ ಇರುವ ಕೃಷಿ ಭೂಮಿಯ ಪ್ರಮಾಣ |
| 2.5 | 2020ರೊಳಗೆ, ರಾಷ್ಟ್ರೀಯ, ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸೂಕ್ತ ನಿರ್ವಹಣೆ ಮತ್ತು ವೈವಿಧ್ಯವಾದ ಬೀಜ ಮತ್ತು ಸಸಿಗಳ ಬ್ಯಾಂಕುಗಳ ಮೂಲಕ ಬೀಜಗಳ ಜೈವಿಕ ವೈವಿಧ್ಯತೆ, ಸಸಿ ಮತ್ತು ಸಸ್ಯಾಗಾರ, ಸಾಕು ಪ್ರಾಣಿಗಳು ಮತ್ತು ಅದಕ್ಕೆ ಸಂಬಂಧಿಸಿದ ವನ್ಯಜೀವಿಗಳನ್ನು ಕಾಪಾಡಿಕೊಳ್ಳಿ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಾಗಿರುವ ಒಪ್ಪಂದದಂತೆ ಜೈವಿಕ ಸಂಪನ್ಮೂಲಗಳ ಬಳಕೆಯಿಂದ ಬಂದ ಆದಾಯವನ್ನು ಮತ್ತು ಅದಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಜ್ಞಾನವನ್ನು ಸೂಕ್ತವಾಗಿ ಮತ್ತು ಸಮಾನವಾಗಿ ಹಂಚಿಕೊಳ್ಳುವುದನ್ನು ಉತ್ತೇಜಿಸಿ | 2.5.1. | ಆಹಾರ ಮತ್ತು ಕೃಷಿಯ ಸುರಕ್ಷತೆಗಾಗಿ ಮಧ್ಯಮ ಅಥವಾ ದೀರ್ಘಕಾಲಿಕಾ ಸಂರಕ್ಷಣಾ ಸೌಲಭ್ಯಗಳಿರುವ ಸಸ್ಯ ಮತ್ತು ಪ್ರಾಣಿಗಳ ಅನುವಂಶಿಕ ಸಂಪನ್ಮೂಲಗಳ ಸಂಖ್ಯೆ |
| | | 2.5.2 | ಅಳಿವಿನ ಅಪಾಯದಂಚಿನಲ್ಲಿರುವ, ಅಪಾಯದಂಚಿನಲ್ಲಿಲ್ಲದ ಅಥವಾ ಎಂತಹ ಅಪಾಯದಲ್ಲಿದೆ ಎಂದು ತಿಳಿಯದ ರೀತಿಯಲ್ಲಿ ವಿಭಾಗಿಸಿ ಕಂಡುಕೊಂಡಿರುವ ಸ್ಥಳೀಯ ಜೀವ ವೈವಿಧ್ಯಗಳ ಪ್ರಮಾಣ |
| 2.ಎ | ಅಭಿವೃದ್ಧಿಶೀಲ ದೇಶಗಳಲ್ಲಿ, ಅದರಲ್ಲೂ ವಿಶೇಷವಾಗಿ ಕನಿಷ್ಠ ಅಭಿವೃದ್ಧಿಯಾಗಿರುವ ದೇಶಗಳಲ್ಲಿ ಕೃಷಿ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಗ್ರಾಮೀಣ ಪ್ರದೇಶಗಳಲ್ಲಿ ಸೌಲಭ್ಯಗಳಿಗೆ, ಕೃಷಿ ಸಂಶೋಧನೆ ಮತ್ತು ಸೇವಾ ವಿಸ್ತರಣೆ, ತಾಂತ್ರಿಕ ಅಭಿವೃದ್ಧಿಗೆ ಮತ್ತು ಸಸ್ಯ ಹಾಗು ಜಾನುವಾರುಗಳ ವಂಶವಾಹಿ ಬ್ಯಾಂಕುಗಳಿಗೆ ಅಂತಾರಾಷ್ಟ್ರೀಯ ಸಹಕಾರದ ಮೂಲಕ ಹೂಡಿಕೆಗಳನ್ನು ಹೆಚ್ಚಿಸಿ | 2.ಎ.1. | ಸರ್ಕಾರದ ಖರ್ಚುಗಳಲ್ಲಿ ಕೃಷಿ ದೃಷ್ಟಿಕೋನದ ಸೂಚ್ಯಾಂಕ |
| | | 2.ಎ.2 | ಕೃಷಿ ಕ್ಷೇತ್ರಕ್ಕೆ ಅಧಿಕೃತವಾಗಿ ನೀಡಿರುವ ಹಣಕಾಸು ಹರಿವು (ಅಧಿಕೃತ ಅಭಿವೃದ್ಧಿ ಸಹಾಯ ಮತ್ತು ಇತರ ಅಧಿಕೃತ ಹರಿವುಗಳು) |

| | | | |
|---|---|---|---|
| 2.ಬಿ | ದೋಹಾ ಅಭಿವೃದ್ಧಿ ಶೃಂಗಸಭೆಯ ಅಧ್ಯಾದೇಶದಂತೆ, ಕೃಷಿ ರಫ್ತು ಸಹಾಯಧನವನ್ನೂ ಒಳಗೊಂಡಂತೆ ಅದರ ತತ್ಪರಿಣಾಮದ ಎಲ್ಲಾ ರಫ್ತು ಕ್ರಮಗಳನ್ನೂ ಜೊತೆಜೊತೆಯಾಗಿ ಕೊನೆಗೊಳಿಸಿ, ವಿಶ್ವ ಕೃಷಿ ಮಾರುಕಟ್ಟೆಯ ನಿರ್ಬಂಧನೆಗಳು ಮತ್ತು ಕೆಡಕುಗಳನ್ನು ಸರಿಪಡಿಸಿ | 2.ಬಿ.1. | ಉತ್ಪಾದನಾ ನೆರವು ಅಂದಾಜು |
| | | 2.ಬಿ.2. | ಕೃಷಿ ರಫ್ತು ಸಬ್ಸಿಡಿಗಳು / ಸಹಾಯ ಧನ |
| 2.ಸಿ | ಆಹಾರ ಸಾಮಗ್ರಿಗಳ ಬೆಲೆ ಏರಿಳಿಯುವ ಚಂಚಲತೆಯನ್ನು ತಡೆಯಲು, ಆಹಾರೋತ್ಪನ್ನಗಳ ಮಾರುಕಟ್ಟೆ ಮತ್ತವುಗಳಿಗೆ ಸಂಬಂಧಿಸಿದವುಗಳ ಸೂಕ್ತ ನಿರ್ವಹಣೆ ಕ್ರಮಗಳನ್ನು ಖಾತರಿಪಡಿಸಿ, ಆಹಾರ ಸಾಮಗ್ರಿಗಳ ಸಂಗ್ರಹವೂ ಸೇರಿದಂತೆ ಮಾರುಕಟ್ಟೆ ಕುರಿತು ಮಾಹಿತಿಯು ಸೂಕ್ತ ಸಮಯಕ್ಕೆ ದೊರೆಯುವ ವ್ಯವಸ್ಥೆಯನ್ನು ಕ್ರಮಬದ್ಧಗೊಳಿಸಿ | 2.ಸಿ.1. | ಆಹಾರ ಬೆಲೆ ವೈಪರೀತ್ಯಗಳ ಸೂಚಕಗಳು |

### ವಿವರಣೆ

ಸುಸ್ಥಿರ ಅಭಿವೃದ್ಧಿ ಗುರಿ 1ರ ಆಶಯಕ್ಕೂ ಮತ್ತು ಈ ಗುರಿಗೂ ನಿಕಟ ಸಂಬಂಧವಿದೆ ಏಕೆಂದರೆ ಬಡತನವನ್ನು ಕೊನೆಗಾಣಿಸಿದರೆ ಮಾತ್ರ ನಾವು ಹಸಿವನ್ನು ಕೊನೆಗಾಣಿಸಲು ಸಾಧ್ಯವಾಗುತ್ತದೆ. ಅಪೌಷ್ಟಿಕತೆಯ ಕಾರಣದಿಂದ ವಿವಿಧೆಡೆ ಮಕ್ಕಳು ಮರಣವನ್ನು ಹೊಂದುತ್ತಿದ್ದಾರೆ. ಯುನಿಸೆಫ್ ವರದಿಯ ಪ್ರಕಾರ ಇಡೀ ವಿಶ್ವದಲ್ಲಿ ಐದು ವರ್ಷದೊಳಗೆ ಮರಣ ಹೊಂದುವ ಮಕ್ಕಳ ಮರಣದಲ್ಲಿ ಭಾರತದ ಪಾಲು ಅತಿ ಹೆಚ್ಚು (ಶೇ. 22). ಭಾರತದಲ್ಲಿ 5 ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣ ಅತಿ ಹೆಚ್ಚಿದೆ ಮತ್ತು ಹೀಗೆ ಮರಣ ಹೊಂದುವ ಮಕ್ಕಳಲ್ಲಿ ಶೇ. 50ರಷ್ಟು ಮಕ್ಕಳು ಅಪೌಷ್ಟಿಕತೆಯಿಂದ ಮರಣ ಹೊಂದುತ್ತಾರೆ ಎಂಬುದಾಗಿ ವರದಿಗಳು ಹೇಳುತ್ತವೆ. ಕೇವಲ ಆಹಾರವಿಲ್ಲದ ಕಾರಣ ಮಕ್ಕಳು ಅಪೌಷ್ಟಿಕತೆಯಿಂದ ಬಳಲುವುದಿಲ್ಲ. ಕುಡಿಯಲು ಶುದ್ಧ ನೀರು ಸಿಗದಿರುವುದು, ಶೌಚಾಲಯ ಸೌಲಭ್ಯವಿಲ್ಲದಿರುವುದು, ಸ್ವಚ್ಛತೆ ಇಲ್ಲದಿರುವುದು ಸಹ ಮಕ್ಕಳನ್ನು ಅಪೌಷ್ಟಿಕತೆಗೆ ದೂಡುತ್ತವೆ. ಹೀಗಾಗಿ ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ಬಹುತೇಕ ಒಂದಕ್ಕೊಂದು ನಿಕಟವಾದ ಸಂಬಂಧವನ್ನು ಹೊಂದಿವೆ. ಇದರ ಜೊತೆಗೆ ಅಪೌಷ್ಟಿಕತೆ ಮಾನವನ, ಅದರಲ್ಲೂ ಬಹು ಮುಖ್ಯವಾಗಿ ಹೆಣ್ಣಿನ ಜೀವನ ಚಕ್ರಕ್ಕೆ ಸಂಬಂಧಿಸಿದ್ದಾಗಿದೆ. ಅಂದರೆ, ಹದಿಹರೆಯದ ಹೆಣ್ಣುಮಕ್ಕಳ ಪೌಷ್ಟಿಕತಾ ಮಟ್ಟ, ಗರ್ಭಿಣಿಯರ ಪೌಷ್ಟಿಕತಾ ಮಟ್ಟ ಮತ್ತು ಹಾಲುಣಿಸುವ ತಾಯಂದಿರ ಪೌಷ್ಟಿಕತಾ ಮಟ್ಟ, ಹೆಣ್ಣಿನ ವಿವಾಹದ ವಯಸ್ಸು ಇವೆಲ್ಲವನ್ನೂ ಗಣನೆಗೆ ತೆಗೆದುಕೊಂಡು ಸೂಕ್ತ ಕ್ರಮಗಳನ್ನು ಕೈಗೊಂಡರೆ ಮಾತ್ರ ಅಪೌಷ್ಟಿಕತೆಯನ್ನು ನಿವಾರಿಸಬಹುದು. ಹಾಗಾಗಿ, ಮಕ್ಕಳ ಅಪೌಷ್ಟಿಕತೆಗೆ ಕಾರಣಗಳನ್ನು ವಿವಿಧ ಆಯಾಮಗಳಲ್ಲಿ ಗಮನಿಸಿ ಅವುಗಳಿಗೆ ಸಮಗ್ರವಾದ ಪರಿಹಾರವನ್ನು ಕಂಡುಕೊಳ್ಳುವ ಅವಶ್ಯಕತೆಯಿದೆ. ಅಪೌಷ್ಟಿಕತೆಯನ್ನು ನಿವಾರಿಸಲು ಹದಿಹರೆಯದ ಹೆಣ್ಣುಮಕ್ಕಳಿಗೆ, ಗರ್ಭಿಣಿಯರಿಗೆ ಮತ್ತು ಹಾಲೂಡಿಸುತ್ತಿರುವ ತಾಯಂದಿರಿಗೆ ಅಂಗನವಾಡಿಗಳಿಂದ ಪೂರಕ ಪೌಷ್ಟಿಕ ಆಹಾರದ ವಿತರಣೆಯನ್ನು ಸರ್ಕಾರ ಮಾಡುತ್ತಿದೆ. ಅಂಗನವಾಡಿ ಮಕ್ಕಳಿಗೆ ಮತ್ತು ಶಾಲಾ ಮಕ್ಕಳಿಗೆ ಬಿಸಿಯೂಟ, ಕ್ಷೀರ ಭಾಗ್ಯ, ಇವೇ ಮೊದಲಾದ ಯೋಜನೆ/ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇಷ್ಟಾದರೂ, ಬಹುತೇಕ ಕಡೆಗಳಲ್ಲಿ ಹಸಿವು ತಡೆದು ಪೌಷ್ಟಿಕತೆ ಹೆಚ್ಚಿಸುವಲ್ಲಿ ನಿರೀಕ್ಷಿತ ಪ್ರಮಾಣದ ಫಲಿತಾಂಶ ಸಿಕ್ಕಿಲ್ಲದಿರುವುದು ಸತ್ಯ.

ಮಕ್ಕಳ ಪೌಷ್ಟಿಕತೆಗೆ ಸಂಬಂಧಿಸಿದ ಹಲವಾರು ಸೂಚಕಗಳಲ್ಲಿ ದಕ್ಷಿಣ ಭಾರತದ ರಾಜ್ಯಗಳ ಸ್ಥಿತಿಗತಿಯನ್ನು ಇಲ್ಲಿ ನೀಡಲಾಗಿದೆ.



| ಸೂಚಕಗಳು | ಕರ್ನಾಟಕ | ಆಂಧ್ರಪ್ರದೇಶ | ತೆಲಂಗಾಣ | ತಮಿಳುನಾಡು | ಕೇರಳ | ಪುದುಚೇರಿ |
|---|---|---|---|---|---|---|
| ರಕ್ತಹೀನತೆಯಿಂದ ಬಳಲುವ 6–59 ತಿಂಗಳ ವಯೋಮಾನದ ಮಕ್ಕಳು (%) | 60.9 | 58.6 | 60.7 | 50.7 | 35.6 | 44.9 |
| 15–49 ವರ್ಷದ ವಯೋಮಾನದ ಮಹಿಳೆಯರಲ್ಲಿ ರಕ್ತಹೀನತೆ (%) | 44.8 | 60.0 | 56.7 | 55.1 | 34.6 | 52.4 |
| 15–49 ವರ್ಷದ ವಯೋಮಾನದ ಗರ್ಭಿಣಿ ಮಹಿಳೆಯರಲ್ಲಿ ರಕ್ತಹೀನತೆ (%) | 45.4 | 52.9 | 49.8 | 44.4 | 22.6 | 26.0 |
| ಕಡಿಮೆ ತೂಕ ಹೊಂದಿರುವ 3 ವರ್ಷದೊಳಗಿನ ಮಕ್ಕಳ ಪ್ರಮಾಣ (%) | 35.2 | 31.9 | 28.5 | 23.8 | 16.1 | 22 |
| ಎತ್ತರಕ್ಕೆ ತಕ್ಕ ತೂಕವಿಲ್ಲದ 3 ವರ್ಷದೊಳಗಿನ ಮಕ್ಕಳ ಪ್ರಮಾಣ (%) | 36.2 | 31.4 | 28.1 | 27.1 | 15.7 | 23.7 |
| ವಯಸ್ಸಿಗೆ ತಕ್ಕ ಎತ್ತರವಿಲ್ಲದ 3 ವರ್ಷದೊಳಗಿನ ಮಕ್ಕಳ ಪ್ರಮಾಣ (%) | 36.2 | 31.4 | 28.1 | 27.1 | 19.7 | 23.7 |

**ಮೂಲ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 4: 2015–16**

ದಕ್ಷಿಣ ಭಾರತದ ರಾಜ್ಯಗಳನ್ನು ಗಮನಿಸಿದರೆ ಕರ್ನಾಟಕದಲ್ಲಿ ರಕ್ತಹೀನತೆಯಿಂದ ಬಳಲುವ ಮಕ್ಕಳ ಪ್ರಮಾಣ, ಕಡಿಮೆ ತೂಕ ಮತ್ತು ಎತ್ತರಕ್ಕೆ ತಕ್ಕ ತೂಕವನ್ನು ಹೊಂದಿಲ್ಲದ ಮಕ್ಕಳ ಪ್ರಮಾಣ ಉಳಿದೆಲ್ಲಾ ರಾಜ್ಯಗಳಿಗಿಂತ ಹೆಚ್ಚಿದೆ. ರಾಜ್ಯದಲ್ಲಿ ಸುಮಾರು ಅರ್ಧದಷ್ಟು ಸಂತಾನೋತ್ಪತ್ತಿ ವಯೋಮಾನದ ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದರೆ, ಸರಿ ಸುಮಾರು ಅಷ್ಟೇ ಪ್ರಮಾಣದ ಗರ್ಭಿಣಿ ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ.



## ನೀವು ಮಾಡಬಹುದಾದದ್ದು

- ನೀವು ವಾಸಿಸುವ ಪ್ರದೇಶದ ಪ್ರತಿಯೊಬ್ಬರಿಗೂ ಗೌರವಯುತವಾದ ಉದ್ಯೋಗ ಮತ್ತು ಉದ್ಯೋಗಕ್ಕೆ ತಕ್ಕ ವೇತನ ದೊರಕುವಂತೆ ನೋಡಿಕೊಳ್ಳಿ
- ನಿಮ್ಮ ಗ್ರಾಮದ ಪಡಿತರ ವಿತರಣಾ ವ್ಯವಸ್ಥೆಯಲ್ಲಿ ಜನರಿಗೆ ಸಿಗಬೇಕಾದ ಆಹಾರ ಧಾನ್ಯಗಳು ಸರಿಯಾಗಿ ವಿತರಣೆಯಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ.
- ಅಂಗನವಾಡಿಗಳಲ್ಲಿ 0–6 ವರ್ಷದ ಮಕ್ಕಳಿಗೆ, ಹದಿಹರೆಯದ ಹೆಣ್ಣುಮಕ್ಕಳಿಗೆ, ಗರ್ಭಿಣಿಯರಿಗೆ ಮತ್ತು ಬಾಣಂತಿಯರಿಗೆ ನೀಡುತ್ತಿರುವ ಪೂರಕ ಪೌಷ್ಟಿಕ ಆಹಾರದ ವಿತರಣೆಯನ್ನು ಆಗಾಗ್ಗೆ ಪರಿಶೀಲಿಸಿ, ಅದರ ಗುಣಮಟ್ಟದ ಬಗ್ಗೆ ಸಂಶಯವಿದ್ದಲ್ಲಿ ಸಂಬಂಧಪಟ್ಟವರಿಗೆ ಮಾಹಿತಿ/ದೂರು ನೀಡಿ.
- ನಿಮ್ಮ ಪ್ರದೇಶದ ಪ್ರಾಥಮಿಕ ಪೂರ್ವ ವಯಸ್ಸಿನ ಎಲ್ಲಾ ಮಕ್ಕಳೂ ಅಂಗನವಾಡಿಗೆ ದಾಖಲಾಗಿರುವುದು ಮತ್ತು ಪ್ರತಿನಿತ್ಯ ಹಾಜರಿರುವುದನ್ನು ಖಾತ್ರಿಪಡಿಸಿಕೊಳ್ಳಿ.
- ಶಾಲೆಗಳಲ್ಲಿ ಒದಗಿಸುತ್ತಿರುವ ಬಿಸಿಯೂಟದ ಗುಣಮಟ್ಟವನ್ನು ಉಸ್ತುವಾರಿ ಮಾಡಿ.
- ಅಂಗನವಾಡಿ ಸಲಹಾ ಸಮಿತಿ, ಶಾಲಾಭಿವೃದ್ಧಿ ಸಮಿತಿ, ಗ್ರಾಮ ನೈರ್ಮಲ್ಯ ಸಮಿತಿ ಇವೇ ಮೊದಲಾದ ಸಮಿತಿಯೊಡನೆ ಈ ಕುರಿತು ವಿಸ್ತೃತವಾಗಿ ಚರ್ಚಿಸಿ ಈ ಸಂಬಂಧ ಜಂಟಿಯಾಗಿ ಕ್ರಿಯಾಯೋಜನೆಯನ್ನು ರೂಪಿಸಿ ಜಾರಿಗಳಿಸಲು ನೆರವಾಗಿ.
- ಅಪೌಷ್ಟಿಕತೆ ಕುರಿತಾದ ಪ್ರಚಾರ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಮತ್ತು ಸಮುದಾಯಕ್ಕೆ ತಾಯಿಯ ಹಾಲಿನ ಮಹತ್ವದ ಬಗ್ಗೆ ಅರಿವು ಮೂಡಿಸಿ.
- ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವ ಕೃಷಿ ವಿಧಾನಗಳನ್ನು ಅಳವಡಿಸಿಕೊಳ್ಳಲು ಉತ್ತೇಜನ ನೀಡಿ ಮತ್ತು ಕೃಷಿಗೆ ಸಂಬಂಧಿಸಿದ ಜಾನುವಾರುಗಳ ರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಿರಿ.

## ಸವಾಲುಗಳು



- ಅಪೌಷ್ಟಿಕತೆಗೆ ಅನೇಕ ಕಾರಣಗಳು ಇರುವುದರಿಂದ (ಆಹಾರ ಪದ್ಧತಿ, ಬಾಲ್ಯವಿವಾಹ, ಹಾಗೂ ಶುದ್ಧವಾದ ನೀರು ಮತ್ತು ಶೌಚಾಲಯ, ಆರೋಗ್ಯ ಸೇವೆಯಲ್ಲಿ ಕೊರತೆ) ಇದನ್ನು ನಿವಾರಿಸಲು ಹಲವು ಇಲಾಖೆಗಳನ್ನು ಒಗ್ಗೂಡಿಸಿ ಕಾರ್ಯನಿರ್ವಹಿಸುವುದು ಸವಾಲಿನ ಕೆಲಸವೇ ಸರಿ.
- ಅಪೌಷ್ಟಿಕತೆ ಹೊಂದಿರುವವರನ್ನು ಬರಿಗಣ್ಣಿನಿಂದ ಗುರುತಿಸುವುದು ತುಸು ಕಷ್ಟದ ಕೆಲಸ.

**ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಸುಸ್ಥಿರ ಅಭಿವೃದ್ಧಿ ಗುರಿ 2 ಅರ್ಥ ಮಾಡಿಕೊಳ್ಳಲು ಓದಬೇಕಿರುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989ರ ನಿರ್ದಿಷ್ಟ ಪರಿಚ್ಛೇದಗಳು**

| ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ | ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ |
|---|---|---|---|
| 1 | ಮಕ್ಕಳೆಂದರೆ 18 ವರ್ಷದೊಳಗಿನವರು | 2 | ಮಕ್ಕಳ ನಡುವೆ ತಾರತಮ್ಯವಿರಬಾರದು |
| 4 | ಮಕ್ಕಳ ಹಕ್ಕುಗಳ ಜಾರಿಗೆ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು | 6 | ಎಲ್ಲ ಮಕ್ಕಳಿಗೆ ಜೀವಿಸುವ ಹಕ್ಕು ಇದೆ |
| 19 | ಮಕ್ಕಳನ್ನು ದುರುಪಯೋಗ ಮತ್ತು ನಿರ್ಲಕ್ಷ್ಯದ ವಿರುದ್ಧ ರಕ್ಷಿಸಬೇಕು | 20 | ಮಕ್ಕಳನ್ನು ಕೌಟುಂಬಿಕ ವಾತಾವರಣದಿಂದ ವಂಚಿಸಬಾರದು |
| 22 | ನಿರಾಶ್ರಿತರಾದ ಮಕ್ಕಳಿಗೆ ಆಶ್ರಯ ಒದಗಿಸಬೇಕು | 23 | ಅಂಗವಿಕಲತೆಯಿರುವ ಮಕ್ಕಳಿಗೆ ರಕ್ಷಣೆ ನೀಡಬೇಕು |
| 24 | ಎಲ್ಲ ಮಕ್ಕಳಿಗೆ ಮೂಲ ಸೇವೆಗಳನ್ನು ಒದಗಿಸಲೇಬೇಕು. | 26 | ಎಲ್ಲ ಮಕ್ಕಳಿಗೆ ಸಾಮಾಜಿಕ ಭದ್ರತೆ ದೊರೆಯಲೇಬೇಕು |
| 27 | ಎಲ್ಲ ಮಕ್ಕಳಿಗೆ ಸೂಕ್ತ ಜೀವನ ಮಟ್ಟ ದೊರೆಯಬೇಕು | 28 | ಎಲ್ಲ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕು ಇದೆ |
| 29 | ಎಲ್ಲ ಮಕ್ಕಳಿಗೆ ತಾರತಮ್ಯವಿಲ್ಲದೆ ಶಿಕ್ಷಣ ಪಡೆಯುವ ಹಕ್ಕು ಇದೆ. | | |

## ಕೇಂದ್ರ/ರಾಜ್ಯ ಸರ್ಕಾರದ ಕ್ರಮಗಳು

| ಉಸ್ತುವಾರಿ ಸಚಿವಾಲಯ | ಕೇಂದ್ರ/ರಾಜ್ಯ ಸರ್ಕಾರದ ಯೋಜನೆಗಳು | ಸಂಬಂಧಿತ ಕ್ರಮಗಳು | ಇತರ ಸಂಬಂಧಿತ ಸಚಿವಾಲಯಗಳು/ ಇಲಾಖೆಗಳು |
|---|---|---|---|
| ಕೃಷಿ ಇಲಾಖೆ (ರೈತಮಿತ್ರ) | 1. ಕೃಷಿ ನೀತಿ 2006<br>2. ಸಮಗ್ರ ಕೃಷಿ–ವ್ಯಾಪಾರ ಅಭಿವೃದ್ಧಿ ನೀತಿ 2015<br>3. ಕೃಷಿ ಭಾಗ್ಯ<br>4. ಭೂ ಚೇತನ<br>5. ರಾಷ್ಟ್ರೀಯ ಆಹಾರ ಸುರಕ್ಷತಾ ಯೋಜನೆ<br>6. ಸುಸ್ಥಿರ ಕೃಷಿಗಾಗಿ ರಾಷ್ಟ್ರೀಯ ಯೋಜನೆ<br>7. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ<br>8. ಆಹಾರ ಸಂಸ್ಕರಣಾ ರಾಷ್ಟ್ರೀಯ ಯೋಜನೆ | 1. ಪಡಿತರ ವಿತರಣಾ ವ್ಯವಸ್ಥೆ<br>2. ರಾಷ್ಟ್ರೀಯ ಪೌಷ್ಟಿಕತಾ ಯೋಜನೆ<br>3. ರಾಷ್ಟ್ರೀಯ ಆಹಾರ ಸುರಕ್ಷಾ ಕಾಯ್ದೆ 2013<br>4. ಸಮಗ್ರ ಶಿಶು ಅಭಿವೃದ್ಧಿ ಯೋಜನೆ | • ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ<br>• ಆರೋಗ್ಯ ಇಲಾಖೆ<br>• ಸಣ್ಣ ನೀರಾವರಿ<br>• ತೋಟಗಾರಿಕೆ ಇಲಾಖೆ<br>• ಪಶುಸಂಗೋಪನಾ ಇಲಾಖೆ<br>• ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ |





3 GOOD HEALTH AND WELL-BEING

# ಗುರಿ 3

## ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ

### ಎಲ್ಲರಿಗೂ ಎಲ್ಲ ವಯೋಮಾನದಲ್ಲೂ ಆರೋಗ್ಯಕರ ಜೀವನವನ್ನು ಖಾತರಿಪಡಿಸಿ ಯೋಗಕ್ಷೇಮವನ್ನು ಉತ್ತೇಜಿಸಿ

| | ಲಕ್ಷ್ಯಗಳು | | ಸೂಚಕಗಳು |
|---|---|---|---|
| 3.1 | 2030ರೊಳಗೆ, ಜಾಗತಿಕವಾಗಿ ಪ್ರತಿ 1 ಲಕ್ಷ ಜೀವಂತ ಹೆರಿಗೆಗಳಿಗೆ ತಾಯಂದಿರ ಮರಣ ಪ್ರಮಾಣವನ್ನು 70ಕ್ಕಿಂತ ಕಡಿಮೆಗೊಳಿಸಿ | 3.1.1. | ತಾಯಂದಿರ ಮರಣ ಅನುಪಾತ (Maternal Mortality Ratio - MMR) |
| | | 3.1.2. | ನುರಿತ ಆರೋಗ್ಯ ಕಾರ್ಯಕರ್ತರ ಸಹಾಯದಿಂದ ಆದ ಹೆರಿಗೆಗಳ ಪ್ರಮಾಣ |
| 3.2 | 2030ರೊಳಗೆ, ಎಲ್ಲಾ ದೇಶಗಳು ಪ್ರತಿ ಸಾವಿರ ಜೀವಂತ ಹೆರಿಗೆಗಳಲ್ಲಿ ನಾಲ್ಕು ವಾರದೊಳಗೆ ಮರಣ ಹೊಂದುವ ನವಜಾತ ಶಿಶುಗಳ ಮರಣ ಪ್ರಮಾಣವನ್ನು ಕನಿಷ್ಠ 12ಕ್ಕೆ ಮತ್ತು ಪ್ರತಿ ಸಾವಿರ ಜೀವಂತ ಹೆರಿಗೆಗಳಲ್ಲಿ ಮರಣ ಹೊಂದುವ 5 ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣವನ್ನು ಕನಿಷ್ಠ 25ಕ್ಕೆ ಇಳಿಸುವ ಗುರಿಯೊಂದಿಗೆ ತಡೆಗಟ್ಟಬಹುದಾದ ಕಾರಣಗಳಿಗೆ ಬಲಿಯಾಗುವ ನವಜಾತ ಶಿಶುಗಳು ಮತ್ತು 5 ವರ್ಷದೊಳಗಿನ ಮಕ್ಕಳ ಮರಣವನ್ನು ನಿಲ್ಲಿಸಿ | 3.2.1. | ಐದು ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣ (Under 5 Mortality Rate) |
| | | 3.2.2. | ಹುಟ್ಟಿದ ನಾಲ್ಕು ವಾರಗಳಲ್ಲಿ ಮರಣ ಹೊಂದುವ ಶಿಶುಗಳ ಪ್ರಮಾಣ (Neonatal Mortality Rate - NNMR) |

| | | | |
|---|---|---|---|
| 3.3 | 2030ರೊಳಗೆ, ಸಾಂಕ್ರಾಮಿಕವಾಗಿರುವ ಏಡ್ಸ್, ಕ್ಷಯ, ಮಲೇರಿಯಾ ಮತ್ತು ನಿರ್ಲಕ್ಷಿತ ಉಷ್ಣವಲಯ ರೋಗಗಳನ್ನು ಕೊನೆಗೊಳಿಸಿ ಮತ್ತು ಹೆಪಟಿಟಿಸ್, ನೀರಿನ ಸೋಂಕಿನಿಂದ ಹರಡುವ ರೋಗಗಳು ಮತ್ತು ಇತರೆ ಅಂಟು ರೋಗಗಳನ್ನು ತಡೆಗಟ್ಟಿ | 3.3.1. | ಲಿಂಗ, ವಯೋಮಾನ ಮತ್ತು ಮುಖ್ಯ ಜನಸಂಖ್ಯೆಯಲ್ಲಿ, ಪ್ರತಿ 1000 ಸೋಂಕುರಹಿತ ಜನಸಂಖ್ಯೆಯಲ್ಲಿ ಹೊಸದಾಗಿ ಹೆಚ್.ಐ.ವಿ. ಸೋಂಕುಗಳ ಸಂಖ್ಯೆ  |
| | | 3.3.2. | ಪ್ರತಿ ಸಾವಿರ ಜನಸಂಖ್ಯೆಯಲ್ಲಿ ಕ್ಷಯ ಪ್ರಕರಣಗಳು  |
| | | 3.3.3. | ಪ್ರತಿ ಸಾವಿರ ಜನಸಂಖ್ಯೆಯಲ್ಲಿ ಮಲೇರಿಯಾ ಪ್ರಕರಣಗಳು |
| | | 3.3.4. | ಪ್ರತಿ ಸಾವಿರ ಜನಸಂಖ್ಯೆಯಲ್ಲಿ ಹೆಪಟಿಟಸ್ ಬಿ ಪ್ರಕರಣಗಳು  |
| | | 3.3.5. | ನಿರ್ಲಕ್ಷಿತ ಪ್ರಾಂತೀಯ ಕಾಯಿಲೆಗಳ ವಿರುದ್ಧ ಕ್ರಮ ಕೈಗೊಳ್ಳುವ ಅವಶ್ಯಕತೆಯಿರುವ ಜನರ ಸಂಖ್ಯೆ |
| 3.4 | 2030ರೊಳಗೆ, ಸಾಂಕ್ರಾಮಿಕವಲ್ಲದ ರೋಗಗಳಿಂದಾಗುವ ಅಕಾಲಿಕ ಮರಣಗಳನ್ನು ತಡೆಗಟ್ಟಿ ಮತ್ತು ಚಿಕಿತ್ಸೆ ಹಾಗೂ ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮವನ್ನು ಉತ್ತೇಜಿಸುವ ಮೂಲಕ ಮೂರನೇ ಒಂದರಷ್ಟಕ್ಕೆ ತಗ್ಗಿಸಿ | 3.4.1. | ಹೃದಯ ಸಂಬಂಧಿ ಕಾಯಿಲೆಗಳಿಗೆ, ಅರ್ಬುದ, ಮಧುಮೇಹ ಅಥವಾ ತೀವ್ರ ಉಸಿರಾಟದ ಕಾಯಿಲೆಗಳಿಗೆ ಕಾರಣವಾಗುವ ಮರಣ ಪ್ರಮಾಣ  |
| | | 3.4.2. | ಆತ್ಮಹತ್ಯೆಯಿಂದಾಗುವ ಮರಣ ಪ್ರಮಾಣ |
| 3.5 | ಭ್ರಾಮಾಕಾರಕ ಹಾಗೂ ಮಾದಕ ವಸ್ತುಗಳ ದುರುಪಯೋಗ ಮತ್ತು ಅಪಾಯಕಾರಿ ಪ್ರಮಾಣದ ಮದ್ಯ ಬಳಕೆಯೂ ಸೇರಿದಂತೆ ಮಾದಕ ವಸ್ತುಗಳ ದುರುಪಯೋಗ ತಡೆ ಮತ್ತು ಚಿಕಿತ್ಸಾ ಕ್ರಮಗಳನ್ನು ಬಲಪಡಿಸಿ | 3.5.1. | ಮಾದಕ ವಸ್ತು ದುರುಪಯೋಗದ ತೊಂದರೆಗಳಿಗೆ ಚಿಕಿತ್ಸಾ ಕ್ರಮಗಳಿಗೆ ಒಳಪಟ್ಟಿರುವವರ (ಔಷಧ, ಮಾನಸಿಕ ಮತ್ತು ಪುನರ್ವಸತಿ ಹಾಗು ನಂತರದ ಸೇವೆಗಳು) ವ್ಯಾಪ್ತಿ/ಸಂಖ್ಯೆ.  |
| | | 3.5.2. | ರಾಷ್ಟ್ರೀಯ ಸಂದರ್ಭಕ್ಕೆ ಅನುಸಾರವಾಗಿ ವ್ಯಾಖ್ಯಾನಿಸಿರುವ (15 ವರ್ಷ ಅಥವಾ ಹೆಚ್ಚಿನವರು) ಕ್ಯಾಲೆಂಡರ್ ವರ್ಷದೊಳಗೆ ಲೀಟರಿನ ಲೆಕ್ಕದಲ್ಲಿ ಶುದ್ಧ ಮದ್ಯದ ತಲಾ ಬಳಕೆ, ಮದ್ಯದ ಹಾನಿಕಾರಕ ಬಳಕೆ ಪರಿಸ್ಥಿತಿ |

| | | | |
|---|---|---|---|
| 3.6 | 2020ರೊಳಗೆ, ಜಾಗತಿಕವಾಗಿ ರಸ್ತೆ ವಾಹನ ಅಪಘಾತಗಳಿಂದಾಗುವ ಸಾವು–ನೋವುಗಳ ಪ್ರಮಾಣವನ್ನು ಅರ್ಧಕ್ಕಿಳಿಸಿ | 3.6.1. | ರಸ್ತೆ ಸಂಚಾರದಿಂದಾಗುವ ಗಾಯಗಳಿಂದ ಮರಣ ಹೊಂದುವ ಪ್ರಮಾಣ |
| 3.7 | 2030ರೊಳಗೆ, ಕುಟುಂಬ ಯೋಜನೆ, ಮಾಹಿತಿ ಮತ್ತು ಶಿಕ್ಷಣದೊಂದಿಗೆ ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯ–ಆರೈಕೆ ಸೇವೆಗಳನ್ನು ಮತ್ತು ಸಂತಾನೋತ್ಪತ್ತಿ ಆರೋಗ್ಯ ಕಾರ್ಯಕ್ರಮಗಳನ್ನು ರಾಷ್ಟ್ರೀಯ ಯೋಜನೆ ಮತ್ತು ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಳ್ಳುವುದನ್ನು ಖಾತ್ರಿಗೊಳಿಸಿ | 3.7.1. | ಸಂತಾನೋತ್ಪತ್ತಿ ವಯೋಮಾನದ (15–49 ವರ್ಷದವರು) ಮಹಿಳೆಯರಲ್ಲಿ ತಮ್ಮ ಕುಟುಂಬ ಯೋಜನೆಯ ಅವಶ್ಯಕತೆಯನ್ನು ಆಧುನಿಕ ವಿಧಾನಗಳಿಂದ ಸಮಾಧಾನ ಹೊಂದಿದವರ ಪ್ರಮಾಣ. |
| | | 3.7.2. | ಪ್ರತಿ ಸಾವಿರ ಆಯಾ ವಯೋಮಾನದವರಲ್ಲಿ (10–14 ವರ್ಷ ಮತ್ತು 15–19 ವರ್ಷ) ಹದಿಹರೆಯದವರಿಗಾಗುವ ಹೆರಿಗೆಗಳು |
| 3.8 | ಸಾರ್ವತ್ರಿಕ ಆರೋಗ್ಯ ರಕ್ಷಣೆಯನ್ನು, ಆರ್ಥಿಕ ವಿಮಾ ರಕ್ಷಣೆ, ಅವಶ್ಯವಿರುವ ಗುಣಮಟ್ಟದ ಆರೋಗ್ಯ–ಪೋಷಣಾ ಸೇವೆಗಳು ಮತ್ತು ಎಲ್ಲರಿಗೂ ಅವಶ್ಯವಿರುವ ಕೈಗೆಟುಕಬಹುದಾದ ಸುರಕ್ಷಿತ, ಪರಿಣಾಮಕಾರಿ, ಗುಣಮಟ್ಟದ ಔಷಧಗಳು ಮತ್ತು ಲಸಿಕೆಗಳ ಲಭ್ಯತೆಯೂ ಒಳಗೊಂಡಂತೆ ಸಾಧಿಸಿ | 3.8.1. | ಅವಶ್ಯವಿರುವ ಆರೋಗ್ಯ ಸೇವೆಗಳ ವ್ಯಾಪ್ತಿ (ಸಾಮಾನ್ಯರಲ್ಲಿ ಮತ್ತು ಅತ್ಯಂತ ಅಸಹಾಯಕ ಜನಸಂಖ್ಯೆಯಲ್ಲಿ ಸಂತಾನೋತ್ಪತ್ತಿ, ಪ್ರಸವಾನಂತರ, ನವಜಾತ ಮತ್ತು ಮಕ್ಕಳ ಆರೋಗ್ಯ, ಸೋಂಕುಕಾರಕ ಕಾಯಿಲೆಗಳು, ಅಸಾಂಕ್ರಾಮಿಕ ರೋಗಗಳ ಚಿಕಿತ್ಸೆ ಮತ್ತು ಸೇವೆಗಳ ಸಾಮರ್ಥ್ಯಗಳು ಸೇರಿದಂತೆ ಮೊದಲೇ ಪತ್ತೆಹಚ್ಚುವ ಮಧ್ಯವರ್ತಿಕೆಯ ಆಧಾರದ ಮೇಲೆ ವ್ಯಾಖ್ಯಾನಿಸಲಾಗಿರುವ ಅವಶ್ಯವಿರುವ ಸೌಲಭ್ಯಗಳ ಸರಾಸರಿ ವ್ಯಾಪ್ತಿ) |
| | | 3.8.2 | ಪ್ರತಿ ಸಾವಿರ ಜನಸಂಖ್ಯೆಯಲ್ಲಿ ಆರೋಗ್ಯ ವಿಮೆ ಅಥವಾ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ವ್ಯಾಪ್ತಿಗೆ ಒಳಪಟ್ಟ ಜನರ ಸಂಖ್ಯೆ. |
| 3.9 | 2030ರೊಳಗೆ, ಅಪಾಯಕಾರಿ ರಾಸಾಯನಿಕಗಳು ಮತ್ತು ಕಲುಷಿತಗೊಂಡ ಗಾಳಿ, ನೀರು ಮತ್ತು ಮಣ್ಣು ಹಾಗು ಕಲಬೆರೆಕೆಯಿಂದಾಗುವ ಅನಾರೋಗ್ಯ ಮತ್ತು ಸಾವುಗಳ ಸಂಖ್ಯೆಯನ್ನು ಗಣನೀಯವಾಗಿ ಕಡಿಮೆಗೊಳಿಸಿ | 3.9.1. | ಮನೆಯ ಮತ್ತು ಸುತ್ತಲಿನ ವಾಯುಮಾಲಿನ್ಯದಿಂದ ಉಂಟಾಗುವ ಮರಣ ಪ್ರಮಾಣ |
| | | 3.9.2. | ಅಸುರಕ್ಷಿತ ನೀರು, ಅಸುರಕ್ಷಿತ ಶೌಚಾಲಯ ಮತ್ತು ಸ್ವಚ್ಛತೆಯ ಕೊರತೆಯಿಂದ (ಅಸುರಕ್ಷಿತ ನೀರು, ಶೌಚಾಲಯ ಮತ್ತು ಸ್ವಚ್ಛತೆಯ ಸೇವೆಗಳಿಗೆ ಒಡ್ಡಿಕೊಳ್ಳದಿರುವುದು) ಉಂಟಾಗುವ ಮರಣ ದರ |
| | | 3.9.3. | ಉದ್ದೇಶಪೂರ್ವಕವಲ್ಲದ ವಿಷಸೇವನೆಯಿಂದಾಗುವ ಮರಣ ದರ |

| | | | |
|---|---|---|---|
| 3.ಎ | ಎಲ್ಲಾ ದೇಶಗಳೂ ತಮಗೆ ಸೂಕ್ತವೆನಿಸಿದಂತೆ ವಿಶ್ವ ಆರೋಗ್ಯ ಸಂಸ್ಥೆಯು ರೂಪಿಸಿರುವ ತಂಬಾಕು ನಿಯಂತ್ರಣ ಒಡಂಬಡಿಕೆಯ ಚೌಕಟ್ಟನ್ನು ಜಾರಿಗೊಳಿಸುವುದನ್ನು ಸದೃಢಪಡಿಸಿ | 3.ಎ.1. | 15 ವರ್ಷದ ಮತ್ತು ಅದಕ್ಕಿಂತ ಹೆಚ್ಚಿನ ವಯೋಮಾನದ ವ್ಯಕ್ತಿಗಳಲ್ಲಿ ಪ್ರಸ್ತುತ ತಂಬಾಕು ಬಳಕೆಯು ವಯಸ್ಸಿಗೆ ತಕ್ಕಂತೆ ಇರುವ ಪರಿಸ್ಥಿತಿ |
| 3.ಬಿ | ಪ್ರಾಥಮಿಕವಾಗಿ ಅಭಿವೃದ್ಧಿಶೀಲ ದೇಶಗಳಲ್ಲಿ ಕಂಡು ಬರುವ ಸಾಂಕ್ರಾಮಿಕ ಮತ್ತು ಅಸಾಂಕ್ರಾಮಿಕ ರೋಗಗಳಿಗೆ ಲಸಿಕೆಗಳು ಮತ್ತು ಔಷಧಗಳ ಸಂಶೋಧನೆ ಮತ್ತು ಅಭಿವೃದ್ಧಿಗೆ ನೆರವು ನೀಡಬೇಕು, ಸಾರ್ವಜನಿಕ ಆರೋಗ್ಯ ರಕ್ಷಣೆಗಾಗಿ ಮತ್ತು ಮುಖ್ಯವಾಗಿ ಎಲ್ಲರಿಗೂ ಔಷಧಿಗಳು ದೊರೆಯುವಂತೆ ಬೌದ್ಧಿಕ ಆಸ್ತಿ ಹಕ್ಕಿನ ವ್ಯಾಪಾರೀ ಸಂಬಂಧಿತ ವಿಷಯಗಳ ಮೇಲಿನ ಒಪ್ಪಂದಗಳಲ್ಲಿ ಅಭಿವೃದ್ಧಿಶೀಲ ದೇಶಗಳಿಗಾಗಿ ನೀಡಿರುವ ಉದಾರತೆಯನ್ನು ಸಂಪೂರ್ಣವಾಗಿ ಉಪಯೋಗಿಸುವ ಸಾರ್ವಜನಿಕ ಆರೋಗ್ಯ ಕುರಿತು ಟ್ರಿಪ್ಸ್ (TRIPS) ದೋಹಾ ಘೋಷಣೆಯ ಒಪ್ಪಂದ ನೀಡಿರುವ ಹಕ್ಕಿನಂತೆ, ಎಲ್ಲರಿಗೂ ಅತ್ಯಾವಶ್ಯಕವಾದ ಔಷಧಗಳು ಮತ್ತು ಲಸಿಕೆಗಳು ಕೈಗೆಟಕುವ ಬೆಲೆಯಲ್ಲಿ ದೊರೆಯುವಂತೆ ಏರ್ಪಡಿಸಿ | 3.ಬಿ.1. | ಸುಸ್ಥಿರತೆಯ ಆಧಾರದಲ್ಲಿ ಕೈಗೆಟುಕಬಲ್ಲ ಔಷಧಗಳು ಮತ್ತು ಲಸಿಕೆಗಳ ಅವಕಾಶಗಳನ್ನು ಹೊಂದಿರುವ ಜನಸಂಖ್ಯೆಯ ಪ್ರಮಾಣ |
| | | 3.ಬಿ.2. | ವೈದ್ಯಕೀಯ ಸಂಶೋಧನೆ ಮತ್ತು ಮೂಲ ಆರೋಗ್ಯ ವಲಯಗಳಿಗೆ ಇರುವ ಒಟ್ಟು ನಿವ್ವಳ ಅಭಿವೃದ್ಧಿ ಸಹಾಯ |
| 3.ಸಿ | ಅಭಿವೃದ್ಧಿಶೀಲ ದೇಶಗಳಲ್ಲಿ, ಅದರಲ್ಲೂ ವಿಶೇಷವಾಗಿ ಕನಿಷ್ಠ ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ಮತ್ತು ಅಭಿವೃದ್ಧಿಶೀಲ ಸಣ್ಣ ದ್ವೀಪ ದೇಶಗಳಲ್ಲಿ ಆರೋಗ್ಯ ಕ್ಷೇತ್ರಕ್ಕೆ ಮೀಸಲಿಡುವ ಹಣಕಾಸು ಮತ್ತು ಆರೋಗ್ಯ ಕಾರ್ಯಕರ್ತರ ನೇಮಕಾತಿ, ಅಭಿವೃದ್ಧಿ, ತರಬೇತಿ ಮತ್ತು ಉಳಿಸಿಕೊಳ್ಳುವಿಕೆಯನ್ನು ಗಣನೀಯವಾಗಿ ಹೆಚ್ಚಿಸಿ | 3.ಸಿ.1. | ಆರೋಗ್ಯ ಕಾರ್ಯಕರ್ತರ ಸಾಂದ್ರತೆ ಮತ್ತು ವಿತರಣೆ |
| 3.ಡಿ | ಎಲ್ಲಾ ದೇಶಗಳ, ಅದರಲ್ಲೂ ವಿಶೇಷವಾಗಿ ಅಭಿವೃದ್ಧಿಶೀಲ ದೇಶಗಳಲ್ಲಿ ರಾಷ್ಟ್ರೀಯ ಮತ್ತು ಜಾಗತಿಕ ಅನಾರೋಗ್ಯಕರ ಅಪಾಯಗಳನ್ನೆದುರಿಸಲು ಮುಂಜಾಗ್ರತಾ ಕ್ರಮ, ಗಂಡಾಂತರ ನಿಯಂತ್ರಣ ಮತ್ತು ನಿರ್ವಹಣೆಗಾಗಿ ಸಾಮರ್ಥ್ಯವರ್ಧನೆ ಮಾಡಿ | 3.ಡಿ.1. | ಅಂತಾರಾಷ್ಟ್ರೀಯ ಆರೋಗ್ಯ ನಿಯಂತ್ರಣಗಳ ಸಾಮರ್ಥ್ಯ ಮತ್ತು ಆರೋಗ್ಯ ತುರ್ತಿಗೆ ಸಿದ್ಧತೆ |



## ವಿವರಣೆ

ಎಲ್ಲರಿಗೂ ಆರೋಗ್ಯಪೂರ್ಣ ಜೀವನವನ್ನು ಒದಗಿಸಲೇಬೇಕೆನ್ನುವುದು ಈ ಗುರಿಯ ಉದ್ದೇಶ. ಉತ್ತಮ ಆರೋಗ್ಯವನ್ನು ಹೊಂದುವುದು ನಮ್ಮ ದೇಶದ ಎಲ್ಲಾ ಪ್ರಜೆಗಳ ಸಾಂವಿಧಾನಿಕ ಹಕ್ಕಾಗಿದೆ. ವಿವಿಧ ರೀತಿಯ ಅಕಾಲಿಕ (ಶಿಶು ಮರಣ, ಮಕ್ಕಳ ಮರಣ, ಹೆರಿಗೆ ಸಮಯದಲ್ಲಿ ತಾಯಂದಿರ ಮರಣ, ಅಪಘಾತಗಳು ಮತ್ತು ಮಾದಕ ವಸ್ತುಗಳ ಬಳಕೆಯಿಂದಾಗುವ ಮರಣಗಳು) ಮರಣ ಪ್ರಮಾಣಗಳನ್ನು ಕಡಿಮೆಗೊಳಿಸುವ ಸಹಸ್ರಮಾನದ ಅಭಿವೃದ್ಧಿ ಗುರಿಗಳನ್ನು ನಾವು ಸಂಪೂರ್ಣವಾಗಿ ಸಾಧಿಸಲಾಗಿಲ್ಲ. ಈ ಬಾರಿಯಾದರೂ ಸಹ ಇಂತಹ ಮರಣ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಬೇಕಿದೆ. ಮಕ್ಕಳ ಹಕ್ಕುಗಳ ಒಡಂಬಡಿಕೆಯ ಪರಿಚ್ಛೇದ 6 ಮತ್ತು 24 ಸಹ ಇದೇ ವಿಚಾರಗಳನ್ನು ಹೇಳುತ್ತವೆ.

ಇದಲ್ಲದೆ ಬದಲಾಗುತ್ತಿರುವ ಹವಾಮಾನ, ಕಲುಷಿತಗೊಳ್ಳುತ್ತಿರುವ ಗಾಳಿ, ನೀರು, ರಾಸಾಯನಿಕಯುಕ್ತ ಆಹಾರ ಪದಾರ್ಥಗಳು, ಸಾಂಕ್ರಾಮಿಕ ರೋಗಗಳ ಜೊತೆಗೆ ತಳಮಟ್ಟದಲ್ಲಿ (ಗ್ರಾಮಪಂಚಾಯಿತಿಗಳ ಮಟ್ಟ ಮತ್ತು ಕೊಳೇಗೇರಿಗಳು, ಬಡವರಿರುವ ಸ್ಥಳಗಳಲ್ಲಿ) ತಜ್ಞ ವೈದ್ಯರು ಮತ್ತು ಆರೋಗ್ಯ ಕಾರ್ಯಕರ್ತರ ಕೊರತೆಯೂ ಸಹ ಮಕ್ಕಳ ಮತ್ತು ತಾಯಂದಿರ ಮರಣಕ್ಕೆ ಕಾರಣವಾಗುತ್ತಿವೆ. ಭಾರತ ಸರ್ಕಾರವು ಎಲ್ಲರ ಆರೋಗ್ಯಕ್ಕಾಗಿ 1983 ಮತ್ತು 2002ರಲ್ಲಿ ರಾಷ್ಟ್ರೀಯ ಆರೋಗ್ಯ ನೀತಿಯನ್ನು ರೂಪಿಸಿತ್ತು. 2015 ರಲ್ಲಿ ರೂಪಿಸಿರುವ ಮೂರನೇ ರಾಷ್ಟ್ರೀಯ ಆರೋಗ್ಯ ನೀತಿಯು ಜಾರಿಗೆ ಬಂದಿದೆ. ಕೇಂದ್ರ ಸರ್ಕಾರವು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಮತ್ತು ನಗರ ಆರೋಗ್ಯ ಅಭಿಯಾನವನ್ನು ಜಾರಿಗೆ ತಂದಿದ್ದರೂ ಸಹ ಇನ್ನೂ ಅನಾರೋಗ್ಯಗಳು ಕಾಡುತ್ತಲೇ ಇವೆ ಮತ್ತು ಮರಣಗಳು ಅದರಲ್ಲೂ ವಿಶೇಷವಾಗಿ ಮಕ್ಕಳ ಮತ್ತು ತಾಯಂದಿರ ಮರಣಗಳು ಸಂಭವಿಸುತ್ತಲೇ ಇವೆ.

**ದಕ್ಷಿಣ ಭಾರತದ ರಾಜ್ಯಗಳಲ್ಲಿರುವ ಶಿಶು ಮರಣ ಮತ್ತು ತಾಯಂದಿರ ಮರಣ ಪ್ರಮಾಣವನ್ನು ಇಲ್ಲಿ ನೀಡಲಾಗಿದೆ (ಮೂಲ: ಎಸ್.ಆರ್.ಎಸ್. 2015 ಮತ್ತು ಎಸ್.ಆರ್.ಎಸ್. 2011–13)**

| ಸೂಚಕಗಳು | ಕರ್ನಾಟಕ | ಆಂಧ್ರಪ್ರದೇಶ | ತೆಲಂಗಾಣ | ತಮಿಳುನಾಡು | ಕೇರಳ |
|---|---|---|---|---|---|
| ಹುಟ್ಟಿದ ನಾಲ್ಕು ವಾರದೊಳಗೆ ಮರಣ ಹೊಂದುವ ಶಿಶುಗಳ ಪ್ರಮಾಣ | 19 | 24 | 23 | 14 | 6 |
| ಶಿಶು ಮರಣ ಪ್ರಮಾಣ (ಪ್ರತಿ ಸಾವಿರ ಜೀವಂತ ಶಿಶುಗಳು ಜನಿಸಿ ಒಂದು ವರ್ಷದೊಳಗೆ ಬದುಕಿ ಬೆಳೆಯುತ್ತಿರುವಾಗ) | 28 | 37 | 34 | 19 | 12 |
| ಐದು ವರ್ಷಗೊಳಗಿನ ಮಕ್ಕಳ ಮರಣ ಪ್ರಮಾಣ (ಪ್ರತಿ ಸಾವಿರ ಜೀವಂತ ಶಿಶುಗಳು ಜನಿಸಿ 5 ವರ್ಷಗಳ ತನಕ ಬದುಕಿ ಬೆಳೆಯುತ್ತಿರುವಾಗ) | 31 | 39 | 34 | 20 | 13 |
| ತಾಯಂದಿರ ಮರಣ ಪ್ರಮಾಣ (ಪ್ರತಿ ಲಕ್ಷ ಹೆರಿಗೆಗಳಿಗೆ) | 133 | 92* | | 79 | 61 |

* **ಅವಿಭಜಿತ ಆಂಧ್ರಪ್ರದೇಶ**

ಕರ್ನಾಟಕದಲ್ಲಿ ಅಷ್ಟೇ ಅಲ್ಲದೆ ಭಾರತದ ಬಹುತೇಕ ರಾಜ್ಯಗಳಲ್ಲಿ ಕುಟುಂಬದ ಆದಾಯ ಮೂಲವಾಗಿರುವ ಪುರುಷರ ಅಕಾಲಿಕ ಸಾವು, ಅನೇಕ ಕುಟುಂಬಗಳನ್ನು ಬೀದಿ ಪಾಲು ಮಾಡುತ್ತಿದೆ. ಪುರುಷರ ಅಕಾಲಿಕ ಮರಣಗಳಿಗೆ ಕಾರಣಗಳು ಹಲವು – ಅಪಘಾತ, ಆತ್ಮಹತ್ಯೆ, ಮಾದಕ ವಸ್ತುಗಳ ಸೇವನೆ ಮತ್ತು ಕ್ಯಾನ್ಸರ್ ಹಾಗೂ ಹೃದಯಾಘಾತ. ತಂಬಾಕು ಮತ್ತು ಮದ್ಯಸೇವನೆಯೇ ಇವುಗಳಿಗೆ ಅತಿಯಾದ ಕಾರಣಗಳೆಂದು ವರದಿಗಳು ಹೇಳಿವೆ.

## ನೀವು ಮಾಡಬಹುದಾದದ್ದು

- ಬಾಲ್ಯವಿವಾಹವು ಶಿಶು ಮರಣ ಮತ್ತು ತಾಯಂದಿರ ಮರಣಕ್ಕೆ ಪ್ರಮುಖ ಕಾರಣಗಳಲ್ಲಿ ಒಂದಾಗಿರುವುದರಿಂದ ಎಲ್ಲಿಯಾದರೂ ಬಾಲ್ಯವಿವಾಹ ನಡೆಯುತ್ತಿರುವುದು ತಮ್ಮ ಗಮನಕ್ಕೆ ಬಂದಲ್ಲಿ ಸಂಬಂಧಪಟ್ಟವರಿಗೆ ದೂರು ನೀಡಿ. ಪ್ರಮುಖವಾಗಿ ಚೈಲ್ಡ್‌ಲೈನ್ 1098; ಪೊಲೀಸ್; ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ದೂರು ನೀಡಿ.
- ಹಲವಾರು ರೋಗಗಳಿಗೆ ಮತ್ತು ಮರಣಕ್ಕೆ ಕಾರಣವಾಗಬಹುದಾದ ಮದ್ಯಪಾನ, ಧೂಮಪಾನ ಮತ್ತು ಯಾವುದೇ ಭ್ರಮಾಕಾರಕ ವಸ್ತುಗಳ ಸೇವನೆಯ ವಿರುದ್ಧ (ಮಕ್ಕಳ ಹಕ್ಕುಗಳ ಒಡಂಬಡಿಕೆಯ ಪರಿಚ್ಛೇದ 33) ಹಾಗು ಏಡ್ಸ್, ಲೈಂಗಿಕ ಶಿಕ್ಷಣ, ಕುಟುಂಬ ಯೋಜನೆ ಮತ್ತು ಸಂತಾನೋತ್ಪತ್ತಿ ಆರೋಗ್ಯ ಇವೇ ಮೊದಲಾದವುಗಳ ಕುರಿತು ಜಾಗೃತಿ ಮೂಡಿಸುವ ಸರ್ಕಾರ ಅಥವಾ ಸ್ವಯಂಸೇವಾ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಕೈಜೋಡಿಸಿ.
- ಶುದ್ಧ ಕುಡಿಯುವ ನೀರು, ಶೌಚಾಲಯ, ಒಳಚರಂಡಿ, ಪರಿಸರ ಇವೇ ಮೊದಲಾದವುಗಳಿಗೆ ಆದ್ಯತೆ ನೀಡುವಂತೆ ಮತ್ತು ಆರೋಗ್ಯ ಕ್ಷೇತ್ರಕ್ಕೆ ಮೀಸಲಿಡುವ ಅನುದಾನದ ಪ್ರಮಾಣವನ್ನು ಹೆಚ್ಚಿಸುವುದರ ಜೊತೆಗೆ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಪಟ್ಟ

ಎಲ್ಲಾ ಹಂತದ ಮಾನವ ಸಂಪನ್ಮೂಲಗಳು, ಔಷಧಗಳು, ಲಸಿಕೆಗಳು ಇವೇ ಮೊದಲಾದವುಗಳನ್ನು ಸೂಕ್ತ ಪ್ರಮಾಣದಲ್ಲಿ ಒದಗಿಸುವಂತೆ ಸರ್ಕಾರವನ್ನು ಒತ್ತಾಯಿಸಿ.

- ತಮ್ಮ ಕ್ಷೇತ್ರದ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಇನ್ನಿತರ ಆರೋಗ್ಯ ಕೇಂದ್ರಗಳ ಕಾರ್ಯಚಟುವಟಿಕೆಗಳನ್ನು ಉಸ್ತುವಾರಿ ಮಾಡುವುದರ ಜೊತೆಗೆ ಅವುಗಳ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಬೇಕಾಗುವ ನೆರವನ್ನು ನೀಡಿ.
- ಬಹುತೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಬೇಕಾದ ಸಿಬ್ಬಂದಿ, ಉಪಕರಣಗಳು ಮತ್ತು ಔಷಧಿಗಳ ಕೊರತೆಯನ್ನು (ವೈದ್ಯರು ಮತ್ತು ಆರೋಗ್ಯ ಸಹಾಯಕರು) ಸಂಬಂಧಿಸಿದ ಸ್ಥಳೀಯ ಆಡಳಿತ ಮತ್ತು ಜನಪ್ರತಿನಿಧಿಗಳ ಗಮನಕ್ಕೆ ದೂರಿನ ರೂಪದಲ್ಲಿ ತನ್ನಿ.
- ಮಾದಕ ವಸ್ತುಗಳಿಂದ ಹೊರಬರಲು ಸಹಾಯ ಕೇಂದ್ರಗಳನ್ನು ನಿಮ್ಮ ಕ್ಷೇತ್ರಗಳಲ್ಲಿ ತೆರೆಯಿರಿ ಮತ್ತು ಅವುಗಳಿಗೆ ಬೇಕಾದ ಸಹಾಯ ಸೌಲಭ್ಯಗಳನ್ನು ಕಲ್ಪಿಸಿ.
- ಆತ್ಮಹತ್ಯೆ, ಅಪಘಾತ, ರೋಗಗಳಿಂದ ನಿಧನ ಹೊಂದಿದ ಕುಟುಂಬಗಳಿಗೆ ಬೇಕಾದ ಸಾಂತ್ವನ ಮತ್ತು ಪುನರ್ವಸತಿಗೆ ಸಹಾಯವಾಗುವ ಸರ್ಕಾರದ ಯೋಜನೆಗಳನ್ನು ಕುರಿತು ಅರಿವು ಮೂಡಿಸಿ ಮತ್ತು ಸಹಾಯಗಳನ್ನು ಕೊಡಿಸಿ.

**ಸವಾಲುಗಳು**



- ಆರೋಗ್ಯವು ಬಹು ಸಂಕೀರ್ಣ ವಿಚಾರವಾಗಿದ್ದು ಅನಾರೋಗ್ಯಕ್ಕೆ ಹಲವಾರು ಸಮಸ್ಯೆಗಳು ಕಾರಣವಾಗಿರುವುದರಿಂದ ಅವುಗಳನ್ನು ಬಹು ಆಯಾಮದ ದೃಷ್ಟಿಯಿಂದ ನೋಡಿ ಪರಿಹರಿಸುವುದು ತುಸು ಕಷ್ಟ.
- ಅನಾರೋಗ್ಯಕ್ಕೆ ಕಾರಣವಾಗುವ ಅನೇಕ ವಿಚಾರಗಳನ್ನು ಸಮಗ್ರವಾಗಿ ಅಭ್ಯಯಿಸಿ ಪರಿಹಾರಗಳನ್ನು ಕಂಡುಕೊಳ್ಳುವುದು ತೀರಾ ಸುಲಭವೇನಲ್ಲ.

**ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಸುಸ್ಥಿರ ಅಭಿವೃದ್ಧಿ ಗುರಿ 3 ಅರ್ಥ ಮಾಡಿಕೊಳ್ಳಲು ಓದಬೇಕಿರುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989ರ ನಿರ್ದಿಷ್ಟ ಪರಿಚ್ಛೇದಗಳು**

| ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ | ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ |
|---|---|---|---|
| 1 | ಮಕ್ಕಳೆಂದರೆ 18 ವರ್ಷದೊಳಗಿನವರು | 2 | ಮಕ್ಕಳ ನಡುವೆ ತಾರತಮ್ಯ/ಭೇದಭಾವ ಇರಬಾರದು/ಮಾಡಬಾರದು |
| 3 | ಎಲ್ಲ ನಿರ್ಧಾರಗಳು ಮಕ್ಕಳ ಹಿತದೃಷ್ಟಿಯಿಂದಲೇ ಆಗಬೇಕು | 4 | ಮಕ್ಕಳ ಹಕ್ಕುಗಳ ಜಾರಿಗೆ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು |
| 6 | ಎಲ್ಲ ಮಕ್ಕಳಿಗೆ ಜೀವಿಸುವ ಹಕ್ಕು ಇದೆ | 7 | ಎಲ್ಲ ಮಕ್ಕಳಿಗೆ ಹೆಸರಿರಬೇಕು ಮತ್ತು ನಾಗರೀಕತೆ/ ರಾಷ್ಟ್ರೀಯತೆ ದೊರಕಲೇಬೇಕು |
| 13 | ಮಕ್ಕಳಿಗೆ ವಿವಿಧ ಮೂಲಗಳಿಂದ ಮಾಹಿತಿ ಹೊಂದುವ ಸ್ವಾತಂತ್ರ್ಯ | 17 | ಮಕ್ಕಳಿಗೆ ಸೂಕ್ತವಾದ ಮಾಹಿತಿ ನೀಡುವ ಜವಾಬ್ದಾರಿ ಮಾಧ್ಯಮಗಳಿಗಿದೆ. |
| 19 | ಮಕ್ಕಳನ್ನು ದುರುಪಯೋಗ ಮತ್ತು ನಿರ್ಲಕ್ಷ್ಯದ ವಿರುದ್ಧ ರಕ್ಷಿಸಬೇಕು | 23 | ಅಂಗವಿಕಲತೆಯಿರುವ ಮಕ್ಕಳಿಗೆ ರಕ್ಷಣೆ ನೀಡಬೇಕು |
| 24 | ಎಲ್ಲ ಮಕ್ಕಳಿಗೆ ಮೂಲ ಸೇವೆಗಳನ್ನು ಒದಗಿಸಲೇಬೇಕು. | 25 | ಮಕ್ಕಳನ್ನು ದತ್ತು ನೀಡಿದಾಗ ಅಥವಾ ಮಕ್ಕಳನ್ನು ಯಾರದಾದರೂ ರಕ್ಷಣೆಯಲ್ಲಿ ಇರಿಸಿದಾಗ ನಿಯಮಿತ ಅವಧಿಗಳಲ್ಲಿ ಅದನ್ನು ಪರಾಮರ್ಶಿಸುತ್ತಿರಬೇಕು |
| 26 | ಎಲ್ಲ ಮಕ್ಕಳಿಗೆ ಸಾಮಾಜಿಕ ಭದ್ರತೆ ನೀಡಲೇಬೇಕು | 27 | ಎಲ್ಲ ಮಕ್ಕಳಿಗೆ ಸೂಕ್ತ ಜೀವನ ಮಟ್ಟ ದೊರೆಯಬೇಕು |
| 29 | ಎಲ್ಲ ಮಕ್ಕಳಿಗೆ ತಾರತಮ್ಯವಿಲ್ಲದೆ ಶಿಕ್ಷಣ ಪಡೆಯುವ ಹಕ್ಕು ಇದೆ. | 31 | ಎಲ್ಲ ಮಕ್ಕಳಿಗೆ ವಿಶ್ರಾಂತಿ ಪಡೆಯುವ ಮತ್ತು ಮನೋರಂಜನೆ ಹೊಂದುವ ಹಕ್ಕು ಇದೆ |
| 32 | ಮಕ್ಕಳ ಮೇಲೆ ಆರ್ಥಿಕ ಶೋಷಣೆ ನಿಲ್ಲಬೇಕು. ಮಕ್ಕಳನ್ನು ದುಡಿಯಲು ನೇಮಿಸಬಾರದು, ನೇಮಿಸಿಕೊಳ್ಳಬಾರದು | 33 | ಮಾದಕ ವಸ್ತುಗಳಿಗೆ ಬಲಿಯಾಗುವುದರ ವಿರುದ್ಧ ಮಕ್ಕಳನ್ನು ರಕ್ಷಿಸಬೇಕು. |

## ಕೇಂದ್ರ/ರಾಜ್ಯ ಸರ್ಕಾರದ ಕ್ರಮಗಳು

| ಉಸ್ತುವಾರಿ ಸಚಿವಾಲಯ | ಕೇಂದ್ರ/ರಾಜ್ಯ ಸರ್ಕಾರದ ಯೋಜನೆಗಳು | ಸಂಬಂಧಿತ ಕ್ರಮಗಳು | ಇತರ ಸಂಬಂಧಿತ ಸಚಿವಾಲಯಗಳು/ ಇಲಾಖೆಗಳು |
|---|---|---|---|
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 1. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನವೂ ಸೇರಿದಂತೆ ರಾಷ್ಟ್ರೀಯ ಆರೋಗ್ಯ ಅಭಿಯಾನ<br>2. ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣದಲ್ಲಿ ಮಾನವ ಸಂಪನ್ಮೂಲ<br>3. ರಾಷ್ಟ್ರೀಯ ಏಡ್ಸ್ ಮತ್ತು ಎಸ್.ಟಿ.ಡಿ. ನಿಯಂತ್ರಣ ಕಾರ್ಯಕ್ರಮ<br>4. ಸಮಗ್ರ ಶಿಶು ಅಭಿವೃದ್ಧಿ ಯೋಜನೆ<br>5. ಕಿಶೋರಿ ಶಕ್ತಿ ಯೋಜನೆ<br>6. ಸ್ವಾಧಾರ ಯೋಜನೆ | ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ | • ಆಯುಷ್<br>• ಕುಡಿಯುವ ನೀರು ಮತ್ತು ಶೌಚಾಲಯ<br>• ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ<br>• ಆಹಾರ ಸಂಸ್ಕರಣಾ ಕೈಗಾರಿಕೆಗಳು<br>• ಸಾರಿಗೆ ಇಲಾಖೆ |

**ಟಿಪ್ಪಣಿ**





4 QUALITY EDUCATION


# ಗುರಿ 4

## ಗುಣಮಟ್ಟದ ಶಿಕ್ಷಣ

### ಎಲ್ಲರಿಗೂ ಸಮನ್ವಯ ಮತ್ತು ಸಮಾನ ಗುಣಮಟ್ಟದ ಶಿಕ್ಷಣ ಮತ್ತು ಜೀವನದುದ್ದಕ್ಕೂ ಕಲಿಕೆಯ ಅವಕಾಶಗಳಿಗೆ ಉತ್ತೇಜನವನ್ನು ಖಾತ್ರಿಪಡಿಸಿ

| | ಲಕ್ಷ್ಯಗಳು | | ಸೂಚಕಗಳು |
|---|---|---|---|
| 4.1 | 2030ರೊಳಗೆ, ಎಲ್ಲಾ ಬಾಲಕರು ಮತ್ತು ಬಾಲಕಿಯರು ಸೂಕ್ತ ಮತ್ತು ಪರಿಣಾಮಕಾರಿ ಕಲಿಕೆಯ ಫಲಿತಾಂಶಗಳನ್ನು ನೀಡಬಲ್ಲ ಉಚಿತ, ಸಮಾನ ಮತ್ತು ಗುಣಮಟ್ಟದ ಪ್ರಾಥಮಿಕ ಹಾಗು ಪ್ರೌಢಶಿಕ್ಷಣವನ್ನು ಪೂರೈಸುವುದನ್ನು ಖಾತ್ರಿಪಡಿಸಿ | 4.1.1. | ಕನಿಷ್ಠ ಮಟ್ಟದ ಓದುವ ಮತ್ತು ಗಣಿತದ ಸಾಮರ್ಥ್ಯವನ್ನು ಹೊಂದಿರುವ (ಎ) 2/3ನೇ ತರಗತಿಯಲ್ಲಿರುವ (ಬಿ) ಪ್ರಾಥಮಿಕ ಹಂತದ ಕೊನೆಯಲ್ಲಿರುವ; ಮತ್ತು (ಸಿ) ಮಾಧ್ಯಮಿಕ ಹಂತದ ಕೊನೆಯಲ್ಲಿರುವ ಲಿಂಗಾವಾರು ಮಕ್ಕಳ ಮತ್ತು ಯುವಜನರ ಪ್ರಮಾಣ |
| 4.2 | 2030ರೊಳಗೆ, ಎಲ್ಲಾ ಬಾಲಕರು ಮತ್ತು ಬಾಲಕಿಯರಿಗೆ ಗುಣಮಟ್ಟದ ಬಾಲ್ಯಾರಂಭದ ಅಭಿವೃದ್ಧಿ, ಪೋಷಣೆ ಮತ್ತು ಪ್ರಾಥಮಿಕ ಶಿಕ್ಷಣಕ್ಕೆ ಸಜ್ಜುಗೊಳಿಸುವ ಸಲುವಾಗಿ ಪ್ರಾಥಮಿಕ ಪೂರ್ವ ಶಿಕ್ಷಣ ಲಭ್ಯವಾಗುವುದನ್ನು ಖಾತ್ರಿಗೊಳಿಸಿ | 4.2.1. | ಆರೋಗ್ಯ, ಕಲಿಕೆ ಮತ್ತು ಮಾನಸಿಕ ಯೋಗಕ್ಷೇಮಗಳಲ್ಲಿ ಅಭಿವೃದ್ಧಿಯ ಹಾದಿಯಲ್ಲಿರುವ 5 ವರ್ಷದೊಳಗಿನ ಮಕ್ಕಳ ಲಿಂಗಾವಾರು ಪ್ರಮಾಣ |
| | | 4.2.2. | ಲಿಂಗಾವಾರು ಔಪಚಾರಿಕ ಕಲಿಕೆಯಲ್ಲಿ (ಪ್ರಾಥಮಿಕ ಶಿಕ್ಷಣಕ್ಕೆ ಅಧಿಕೃತ ಪ್ರವೇಶ ವಯೋಮಾನಕ್ಕೆ ಒಂದು ವರ್ಷ ಮುಂಚೆ) ಭಾಗವಹಿಸುವವರ ದರ |
| 4.3 | 2030ರೊಳಗೆ, ಎಲ್ಲಾ ಪುರುಷರು ಮತ್ತು ಮಹಿಳೆಯರಿಗೆ ವಿಶ್ವವಿದ್ಯಾನಿಲಯದ ಮಟ್ಟದ ಹಂತವೂ ಸೇರಿದಂತೆ ಕೈಗೆಟುಕಬಲ್ಲ ಮತ್ತು ಗುಣಮಟ್ಟದ ತಾಂತ್ರಿಕ, ವೃತ್ತಿಪರ ಮತ್ತು ಉನ್ನತ ಶಿಕ್ಷಣದ ಸಮಾನ ಲಭ್ಯತೆಯನ್ನು ಖಾತ್ರಿಪಡಿಸಿ | 4.3.1. | ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ಮತ್ತು ತರಬೇತಿಯಲ್ಲಿ ಕಳೆದ 12 ತಿಂಗಳಿಂದ ಯುವಜನಾಂಗ ಮತ್ತು ವಯಸ್ಕರ ಲಿಂಗಾವಾರು ಭಾಗವಹಿಸಿದ ಪ್ರಮಾಣ. |
| 4.4 | 2030ರೊಳಗೆ, ಉದ್ಯೋಗಕ್ಕೆ ಸೇರಲು ಬೇಕಿರುವ ತಾಂತ್ರಿಕ ಮತ್ತು ವೃತ್ತಿಕೌಶಲ್ಯವೂ ಸೇರಿದಂತೆ ಸೂಕ್ತ ಕೌಶಲ್ಯಗಳನ್ನು ಹೊಂದಿರುವ, ಕೆಲಸಗಳಲ್ಲಿರುವ ಮತ್ತು ಉದ್ಯಮಶೀಲರಾಗಿರುವ ಯುವ ಸಮುದಾಯ ಮತ್ತು ವಯಸ್ಕರ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ ಮಾಡಿ | 4.4.1. | ಮಾಹಿತಿ ಮತ್ತು ಸಂವಹನ ತಾಂತ್ರಿಕತೆಯ ಕೌಶಲ್ಯದಲ್ಲಿ ಕೌಶಲ್ಯದ ವಿಧಗಳ ಆಧಾರಿತ ಯುವಜನಾಂಗ ಮತ್ತು ವಯಸ್ಕರ ಪ್ರಮಾಣ |

| | | | |
|---|---|---|---|
| 4.5 | 2030ರೊಳಗೆ, ಶಿಕ್ಷಣದಲ್ಲಿ ಲಿಂಗ ತಾರತಮ್ಯವನ್ನು ನಿವಾರಿಸುವುದು ಮತ್ತು ಅಂಗವಿಕಲ ವ್ಯಕ್ತಿಗಳು, ಮೂಲನಿವಾಸಿಗಳಿಗೆ ಮತ್ತು ಅಸಹಾಯಕ ಪರಿಸ್ಥಿತಿಯಲ್ಲಿರುವ ಮಕ್ಕಳೂ ಸೇರಿದಂತೆ ಎಲ್ಲಾ ದುರ್ಬಲರಿಗೂ ಎಲ್ಲಾ ಹಂತದ ಶಿಕ್ಷಣ ಮತ್ತು ವೃತ್ತಿಪರ ತರಬೇತಿಯಲ್ಲಿ ಸಮಾನ ಲಭ್ಯತೆಯನ್ನು ಖಾತ್ರಿಪಡಿಸಿ | 4.5.1. | ಈ ಪಟ್ಟಿಯಲ್ಲಿರುವ ವರ್ಗೀಕರಿಸಬಹುದಾದ ಎಲ್ಲರಿಗೂ ಶಿಕ್ಷಣ ಸೂಚಕಗಳ ಸಮಾನತೆ ಸೂಚ್ಯಂಕಗಳು (ಮಾಹಿತಿ ಲಭ್ಯವಿರುವ ಗಂಡು/ಹೆಣ್ಣು, ಗ್ರಾಮೀಣ/ನಗರ, ತಳ/ಎತ್ತರದ ಆರ್ಥಿಕ ಮಾಪಕಗಳು ಮತ್ತು ವಿಕಲಾಂಗ ಸ್ಥಿತಿ, ಮೂಲ ನಿವಾಸಿಗಳು ಮತ್ತು ತೊಂದರೆಗಳಿಂದ ಪೀಡಿತರಾದವರು.)  |
| 4.6 | 2030ರೊಳಗೆ, ಎಲ್ಲಾ ಯುವಕರು, ಗಮನಾರ್ಹ ಪ್ರಮಾಣದಲ್ಲಿ ಪುರುಷರೂ ಮತ್ತು ಮಹಿಳೆಯರೂ ಸೇರಿದಂತೆ ಎಲ್ಲರೂ ಅಕ್ಷರ ಮತ್ತು ಸಂಖ್ಯಾ ಜ್ಞಾನ ಪಡೆಯುವುದನ್ನು ಖಾತ್ರಿಪಡಿಸಿ | 4.6.1. | ನಿಗದಿತ ವಯೋಮಾನದ ಗುಂಪಿನ ಜನಸಂಖ್ಯೆಯಲ್ಲಿ ಕನಿಷ್ಠ ಸ್ಥಿರ ಮಟ್ಟದ (ಎ) ಅಕ್ಷರತೆ ಮತ್ತು (ಬಿ) ಗಣಿತಜ್ಞತೆಯ ಕೌಶಲ್ಯಗಳನ್ನು ಹೊಂದಿರುವ ಲಿಂಗಾವಾರು ಪ್ರತಿಶತ ಜನರು. |
| 4.7 | 2030ರೊಳಗೆ, ಎಲ್ಲಾ ಶಿಕ್ಷಣಾರ್ಥಿಗಳು ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸಲು ಅವಶ್ಯವಿರುವ ಕೌಶಲ್ಯಗಳನ್ನು, ಸುಸ್ಥಿರ ಅಭಿವೃದ್ಧಿಗಾಗಿ ಶಿಕ್ಷಣ ಮತ್ತು ಸುಸ್ಥಿರ ಜೀವನ ಶೈಲಿ, ಮಾನವ ಹಕ್ಕು, ಲಿಂಗ ಸಮಾನತೆ, ಶಾಂತಿ ಮತ್ತು ಅಹಿಂಸೆಯ ಸಂಸ್ಕೃತಿಯನ್ನು ಬೆಳೆಸುವ, ಜಾಗತಿಕ ನಾಗರೀಕತೆ ಮತ್ತು ಬಹುಸಂಸ್ಕೃತಿಯನ್ನು ಮತ್ತು ಸುಸ್ಥಿರ ಅಭಿವೃದ್ಧಿಗೆ ಕೊಡುಗೆ ಕೊಡುವ ಸಂಸ್ಕೃತಿಗಳನ್ನು ಗುರುತಿಸುವುದೇ ಮೊದಲಾದವುಗಳನ್ನು ಮೈಗೂಡಿಸಿಕೊಳ್ಳುವುದನ್ನು ಖಾತ್ರಿಪಡಿಸಿ | 4.7.1. | (ಎ) ರಾಷ್ಟ್ರೀಯ ಶಿಕ್ಷಣ ನೀತಿ; (ಬಿ) ಪಠ್ಯಕ್ರಮ; (ಸಿ) ಶಿಕ್ಷಕರ ಶಿಕ್ಷಣ ಮತ್ತು (ಡಿ) ವಿದ್ಯಾರ್ಥಿಗಳ ಮೌಲ್ಯಮಾಪನಗಳ ಎಲ್ಲಾ ಹಂತಗಳಲ್ಲಿ ಲಿಂಗ ಸಮಾನತೆ ಮತ್ತು ಮಾನವ ಹಕ್ಕುಗಳೂ ಸೇರಿದಂತೆ (1) ಜಾಗತಿಕ ನಾಗರೀಕತೆಯ ಶಿಕ್ಷಣ ಮತ್ತು (2) ಸುಸ್ಥಿರ ಅಭಿವೃದ್ಧಿಗಾಗಿ ಶಿಕ್ಷಣವನ್ನು ಮುಖ್ಯವಾಹಿನಿಗೊಳಿಸಿದ ವ್ಯಾಪ್ತಿ.  |
| 4.ಎ | ಮಕ್ಕಳು, ಅಂಗವಿಕಲರು ಮತ್ತು ಎಲ್ಲ ಲಿಂಗಿಗಳನ್ನು ಕುರಿತು ಸಂವೇದನೆಯುಳ್ಳ ಶೈಕ್ಷಣಿಕ ಸೌಲಭ್ಯಗಳನ್ನು ನಿರ್ಮಿಸುವುದು ಮತ್ತು ಉನ್ನತೀಕರಣಗೊಳಿಸುವುದು ಹಾಗೂ ಎಲ್ಲರಿಗೂ ಸುರಕ್ಷಿತ, ಅಹಿಂಸಾಪರ, ಸಮನ್ವಯ ಮತ್ತು ಪರಿಣಾಮಕಾರಿ ಕಲಿಕೆಯ ವಾತಾವರಣವನ್ನು ಒದಗಿಸಿ | 4.ಎ.1. | (ಎ) ವಿದ್ಯುಚ್ಛಕ್ತಿ; (ಬಿ) ಶೈಕ್ಷಣಿಕ ಉದ್ದೇಶಕ್ಕಾಗಿ ಅಂತರ್ಜಾಲ; (ಸಿ) ಶೈಕ್ಷಣಿಕ ಉದ್ದೇಶಕ್ಕಾಗಿ ಕಂಪ್ಯೂಟರ್‌ಗಳು; (ಡಿ) ವಿಕಲಾಂಗ ವಿದ್ಯಾರ್ಥಿಗಳಿಗೆ ಸೂಕ್ತವಾದ ಸೌಲಭ್ಯಗಳು ಮತ್ತು ಉಪಕರಣಗಳು; (ಇ) ಕುಡಿಯುವ ನೀರು; (ಎಫ್) ಲಿಂಗಾಧಾರಿತ ಮೂಲ ಶೌಚಾಲಯ ವ್ಯವಸ್ಥೆಗಳು ಮತ್ತು (ಜಿ) ಮೂಲ ಕೈತೊಳೆಯುವ ವ್ಯವಸ್ಥೆಗಳು (ವಾಷ್ ಸೂಚಕಗಳ ವ್ಯಾಖ್ಯಾನದಂತೆ) ಹೊಂದಿರುವ ಶಾಲೆಗಳ ಪ್ರಮಾಣ  |
| 4.ಬಿ | 2020ರೊಳಗೆ, ಅಭಿವೃದ್ಧಿ ಹೊಂದಿದ ದೇಶಗಳು ಮತ್ತಿತರೆ ಅಭಿವೃದ್ಧಿಶೀಲ ದೇಶಗಳಲ್ಲಿ ವೃತ್ತಿಪರ ತರಬೇತಿ ಮತ್ತು ಮಾಹಿತಿ ಹಾಗು ಸಂವಹನ ತಂತ್ರಜ್ಞಾನ, ತಾಂತ್ರಿಕ ಶಿಕ್ಷಣ ಮತ್ತು ವಿಜ್ಞಾನ ಕಾರ್ಯಕ್ರಮಗಳು ಸೇರಿದಂತೆ ಉನ್ನತ ಶಿಕ್ಷಣಕ್ಕೆ ದಾಖಲಾಗಲು ಅಭಿವೃದ್ಧಿಶೀಲ ದೇಶಗಳಲ್ಲಿ, ಅದರಲ್ಲೂ ವಿಶೇಷವಾಗಿ ಹಿಂದುಳಿದ ದೇಶಗಳು, ಅಭಿವೃದ್ಧಿಶೀಲ ಸಣ್ಣ ದ್ವೀಪ ದೇಶಗಳು ಮತ್ತು ಆಫ್ರಿಕಾ ದೇಶಗಳೂ ಸೇರಿದಂತೆ ಜಾಗತಿಕವಾಗಿ ಲಭ್ಯವಿರುವ ವಿದ್ಯಾರ್ಥಿವೇತನಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಿ | 4.ಬಿ.1. | ವಲಯ ಮತ್ತು ಶಿಕ್ಷಣದ ವಿಧಗಳಿಗೆ ಅನುಗುಣವಾಗಿ ವಿದ್ಯಾರ್ಥಿವೇತನಕ್ಕೆ ನೀಡಲಾಗುವ ಅಧಿಕೃತ ಅಭಿವೃದ್ಧಿ ನೆರವಿನ ಗಾತ್ರ  |

| | | | |
|---|---|---|---|
| 4.ಸಿ | 2030ರೊಳಗೆ, ವಿಶೇಷವಾಗಿ ಹಿಂದುಳಿದ ದೇಶಗಳು ಮತ್ತು ಅಭಿವೃದ್ಧಿಶೀಲ ಸಣ್ಣ ದ್ವೀಪ ದೇಶಗಳೂ ಸೇರಿದಂತೆ ಅಭಿವೃದ್ಧಿಶೀಲ ದೇಶಗಳಲ್ಲಿ ಶಿಕ್ಷಕರ ತರಬೇತಿಗೆ ಅಂತಾರಾಷ್ಟ್ರೀಯ ಸಹಕಾರಗಳ ಮೂಲಕ ಗುಣಮಟ್ಟದ ಶಿಕ್ಷಕರ ಪೂರೈಕೆಯನ್ನು ಗಣನೀಯವಾಗಿ ಹೆಚ್ಚಳ ಮಾಡಿ | 4.ಸಿ.1. | (ಎ) ಪ್ರಾಥಮಿಕ ಪೂರ್ವ; (ಬಿ) ಪ್ರಾಥಮಿಕ; (ಸಿ) ಮಾಧ್ಯಮಿಕ; (ಡಿ) ಪ್ರೌಢಶಿಕ್ಷಣದಲ್ಲಿ ಕನಿಷ್ಠ ಔಪಚಾರಿಕ ತರಬೇತಿಯನ್ನು (ಶೈಕ್ಷಣಿಕ ತರಬೇತಿ) ಸೇವೆಗೆ ಮೊದಲು ಮತ್ತು ಸೇವೆಯ ಅವಧಿಯಲ್ಲಿ ಯಾವುದೇ ದೇಶದ ಸಂಬಂಧಿತ ಮಟ್ಟದಲ್ಲಿ ಬೋಧನೆಗೆ ಅವಶ್ಯವಿರುವ ತರಬೇತಿಯನ್ನು ಹೊಂದಿರುವ ಶಿಕ್ಷಕರ ಪ್ರಮಾಣ  |

## ವಿವರಣೆ

ಪ್ರತಿಯೊಬ್ಬರಿಗೂ ಹೆಸರಿಗೆ ಮಾತ್ರದ ಶಿಕ್ಷಣ ಎನಿಸಿಕೊಳ್ಳದೆ, ಗುಣಮಟ್ಟದ ಶಿಕ್ಷಣ ದೊರೆಯಬೇಕೆಂಬುದು ಈ ಗುರಿಯ ಆಶಯವಾಗಿದೆ. ಇದಕ್ಕೆ ಗಂಡು–ಹೆಣ್ಣು, ಧರ್ಮ, ಭಾಷೆ, ವರ್ಣ, ಅಂಗವಿಕಲತೆ, ವಾಸಿಸುವ ಪ್ರದೇಶ ಇವೇ ಮೊದಲಾದ ಯಾವುದೇ ರೀತಿಯ ತಾರತಮ್ಯ ಮಾಡದೆ ಎಲ್ಲರಿಗೂ ಸಮಾನ ಗುಣಮಟ್ಟದ ಶಿಕ್ಷಣ ದೊರೆಯಲೇಬೇಕು. ಮಕ್ಕಳ ಹಕ್ಕುಗಳ ಒಡಂಬಡಿಕೆಯ ಪರಿಚ್ಛೇದ 28 ಮತ್ತು 29 ಸಹ ಇದೇ ವಿಚಾರವನ್ನು ಹೇಳುತ್ತವೆ. ಪ್ರಾಥಮಿಕ ಶಿಕ್ಷಣ ಭಾರತದ ಪ್ರತಿಯೊಬ್ಬ ಪ್ರಜೆಯ ಸಂವಿಧಾನಾತ್ಮಕ ಹಕ್ಕು ಕೂಡ ಹೌದು (ಪರಿಚ್ಛೇದ 21ಎ). ನಮ್ಮ ದೇಶದಲ್ಲಿ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ 2009ರಲ್ಲಿ ಜಾರಿಯಾಗಿದ್ದರೂ ಸಹ ಬಾಲಕಾರ್ಮಿಕ ಪದ್ಧತಿ, ದೇವದಾಸಿ ಪದ್ಧತಿ, ಬಾಲ್ಯವಿವಾಹ, ವಲಸೆ ಇವೇ ಹಲವಾರು ಕಾರಣಗಳಿಂದ ಅನೇಕ ಮಕ್ಕಳು ಶಾಲೆಯಿಂದ ಹೊರಗಿದ್ದಾರೆ ಮತ್ತು ಇವರಲ್ಲಿ ಬಹುತೇಕರು ಹಿಂದುಳಿದ ಜಾತಿ, ಪಂಗಡ, ಅಲ್ಪಸಂಖ್ಯಾತ ವರ್ಗ, ಬುಡಕಟ್ಟು ಜನಾಂಗದ ಮಕ್ಕಳು. ಅದರಲ್ಲೂ ಹೆಚ್ಚಾಗಿ ಹೆಣ್ಣು ಮಕ್ಕಳಿದ್ದಾರೆ.

ತೀರ ಮೂಲೆಗುಂಪಾಗಿರುವ ಹಳ್ಳಿಗಳು ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಈಗಲೂ ಅಂಗನವಾಡಿ ಮತ್ತು ಶಾಲಾ ವ್ಯವಸ್ಥೆ ಸಮರ್ಪಕವಾಗಿಲ್ಲ. ಹೀಗೆ ದೂರದೂರದಲ್ಲಿರುವ ಶಾಲೆಗಳಿಗೆ ಶಿಕ್ಷಕರು ತಲುಪುವುದು ಕೂಡಾ ದುಸ್ತರವಾಗಿದೆ. ಈ ಪ್ರದೇಶಗಳ ಸಮುದಾಯಗಳಿಗೆ ಶಿಕ್ಷಣ ಒದಗಿಸುವಲ್ಲಿ ಸ್ವಯಂಸೇವಾ ಸಂಘಟನೆಗಳು ಸಾಕಷ್ಟು ಪ್ರಯತ್ನಗಳನ್ನು ನಡೆಸಿದ್ದಾರೆ. ಸರ್ಕಾರದ ವ್ಯವಸ್ಥೆಗಳು ಇದ್ದರೆ, ಅವುಗಳ ಜಾರಿ, ಗುಣಮಟ್ಟವನ್ನು ಉಸ್ತುವಾರಿ ಮಾಡುವ ಕೆಲಸವನ್ನು ಸ್ಥಳೀಯ ಸರ್ಕಾರಗಳು ನಿರ್ವಹಿಸಬೇಕಿದೆ.

ದಕ್ಷಿಣ ಭಾರತದ ರಾಜ್ಯಗಳಲ್ಲಿ ಶಾಲೆಯಿಂದ ಹೊರಗಿರುವ 5–13 ವರ್ಷದ ಮಕ್ಕಳ ಪ್ರಮಾಣ ಹೀಗಿದೆ
(ಮೂಲ: www.educationforallindia.com 2014)

| ರಾಜ್ಯ | ಬಾಲಕರು | ಬಾಲಕಿಯರು | ಒಟ್ಟು |
|---|---|---|---|
| ಕರ್ನಾಟಕ | 65,991 | 56,147 | 122,138 |
| ಆಂಧ್ರಪ್ರದೇಶ * | 56,648 | 51,180 | 107,828 |
| ಕೇರಳ | 19,278 | 12,899 | 32,177 |
| ತಮಿಳುನಾಡು | 21,301 | 25,228 | 57,527 |
| ಪುದುಚೇರಿ | – | 285 | 285 |

*** ಅವಿಭಜಿತ ಆಂಧ್ರಪ್ರದೇಶ**

## ನೀವು ಮಾಡಬಹುದಾದದ್ದು

- ನಿಮಗೆ ಬಾಲಕಾರ್ಮಿಕರು ಅಥವಾ ಶಾಲೆಯಿಂದ ಹೊರಗಿರುವ ಮಕ್ಕಳು ಕಂಡುಬಂದಲ್ಲಿ ಸಂಬಂಧಪಟ್ಟವರಿಗೆ ದೂರು ನೀಡುವುದರ ಜೊತೆಗೆ ಆ ಮಕ್ಕಳನ್ನು ಶಾಲೆಗೆ ದಾಖಲಿಸಲು ನೆರವಾಗಿ (ಮಕ್ಕಳ ಹಕ್ಕುಗಳ ಒಡಂಬಡಿಕೆಯ ಪರಿಚ್ಛೇದ 32). ಚೈಲ್ಡ್‌ಲೈನ್ 1098ಗೆ ದೂರು ನೀಡಬಹುದು. ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕವನ್ನು ಸಂಪರ್ಕಿಸಬಹುದು.
- ಎಲ್ಲಿಯಾದರೂ ಬಾಲ್ಯವಿವಾಹ ನಡೆಯುತ್ತಿರುವುದು ಮತ್ತು ದೇವದಾಸಿ ಪದ್ಧತಿಗೆ ಮಕ್ಕಳನ್ನು ದೂಡುತ್ತಿರುವುದು ತಮ್ಮ ಗಮನಕ್ಕೆ ಬಂದಲ್ಲಿ ಸಂಬಂಧಪಟ್ಟವರಿಗೆ ದೂರು ನೀಡಲೇಬೇಕು (ಮಕ್ಕಳ ಹಕ್ಕುಗಳ ಒಡಂಬಡಿಕೆಯ ಪರಿಚ್ಛೇದ 34).
- ತಮ್ಮ ಗ್ರಾಮದ ಅಂಗನವಾಡಿ, ಆರೋಗ್ಯ ಕೇಂದ್ರ, ಶಾಲೆಗೆ ಭೇಟಿ ಕೊಟ್ಟು ಅಲ್ಲಿರುವ ಸೌಲಭ್ಯಗಳ ಕೊರತೆಯ ಕುರಿತು ಸಂಬಂಧಪಟ್ಟವರೊಡನೆ ಚರ್ಚಿಸಿ ಶಾಲೆಗೆ ಸೂಕ್ತ ಸೌಲಭ್ಯಗಳನ್ನು ಒದಗಿಸಲು ನೆರವಾಗಿ. ಅಂಗನವಾಡಿ ಸಲಹಾ ಸಮಿತಿ; ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಹಾಗೂ ಆರೋಗ್ಯ ಕೇಂದ್ರದ ಸಲಹಾ ಸಮಿತಿಯೊಡನೆ ಸಂಪರ್ಕ ಇಟ್ಟುಕೊಂಡು ಸಮಸ್ಯೆಗಳನ್ನು ಕುರಿತು ಚರ್ಚಿಸಿ.

- ಮಕ್ಕಳ ಹಕ್ಕುಗಳ ಗ್ರಾಮಸಭೆ ಮತ್ತು ಸಾಮಾನ್ಯ ಗ್ರಾಮಸಭೆಯಲ್ಲಿ ಈ ವಿಚಾರಗಳನ್ನು ತೆಗೆದುಕೊಂಡು ಸೂಕ್ತ ಕ್ರಮಕ್ಕಾಗಿ ಆಗ್ರಹಿಸಿ.
- ಕಡ್ಡಾಯ ಶಿಕ್ಷಣ ಕಾಯ್ದೆ ಕೇವಲ 8 ವರ್ಷಗಳ ಶಿಕ್ಷಣವನ್ನು ಖಾತ್ರಿಗೊಳಿಸುವುದರಿಂದ ಹೆಚ್ಚಿನ ಶಿಕ್ಷಣಕ್ಕೆ ಅಥವಾ ಕೌಶಲ್ಯ ತರಬೇತಿ ಪಡೆಯಲು ಸರ್ಕಾರ ಒದಗಿಸುತ್ತಿರುವ ವ್ಯವಸ್ಥೆಗಳ ಕುರಿತು (ಉಚಿತ ವಸತಿ ನಿಲಯ, ವಿದ್ಯಾರ್ಥಿವೇತನ ಇತ್ಯಾದಿಗಳು) ಸಮುದಾಯಗಳಲ್ಲಿ ಮಾಹಿತಿ ನೀಡುವ ಕಾರ್ಯವನ್ನು ಮಾಡುವುದು.

**ಸವಾಲುಗಳು**



- ಅನೇಕ ಮಕ್ಕಳು ತಮ್ಮ ಕುಟುಂಬದ ಜೊತೆ ವಲಸೆ ಹೋಗುವುದರಿಂದ ಅವರಿಗೆ ಅಂಗನವಾಡಿ ಮತ್ತು ಶಾಲಾ ಸೌಲಭ್ಯಗಳನ್ನು ಮಾಡಿಕೊಡುವುದು ಕಷ್ಟವೆಂದು ಸರ್ಕಾರ ಹೇಳುತ್ತದೆ.
- ಜೊತೆಗೆ ಇಂತಹವರ ಶೈಕ್ಷಣಿಕ ಪ್ರಗತಿಯನ್ನು ಅನುಸರಣೆ ಮಾಡುವುದು ಕಷ್ಟದ ಕೆಲಸ.
- ಕಡುಬಡವ ಕುಟುಂಬದ ಮಕ್ಕಳು ಶಾಲೆಗೆ ಹೋಗಬೇಕಾದರೆ ಅವರ ಕುಟುಂಬಗಳನ್ನು ಆರ್ಥಿಕವಾಗಿ ಸದೃಢಗೊಳಿಸುವುದು ಅಥವಾ ಕುಟುಂಬದ ವಯಸ್ಕರಿಗೆ ವರ್ಷಪೂರ್ತಿ ಉದ್ಯೋಗ ಮತ್ತು ಅದಕ್ಕೆ ತಕ್ಕ ವೇತನ/ಕೂಲಿ ದೊರೆಯುವಂತೆ ನೋಡಿಕೊಳ್ಳುವುದು ಕಷ್ಟಕರ.

**ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಸುಸ್ಥಿರ ಅಭಿವೃದ್ಧಿ ಗುರಿ 4 ಅರ್ಥ ಮಾಡಿಕೊಳ್ಳಲು ಓದಬೇಕಿರುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989ರ ನಿರ್ದಿಷ್ಟ ಪರಿಚ್ಛೇದಗಳು**

| ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ | ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ |
|---|---|---|---|
| 1 | ಮಕ್ಕಳೆಂದರೆ 18 ವರ್ಷದೊಳಗಿನವರು | 2 | ಮಕ್ಕಳ ನಡುವೆ ತಾರತಮ್ಯ/ಭೇದಭಾವ ಇರಬಾರದು/ಮಾಡಬಾರದು |
| 3 | ಎಲ್ಲ ನಿರ್ಧಾರಗಳು ಮಕ್ಕಳ ಹಿತದೃಷ್ಟಿಯಿಂದಲೇ ಆಗಬೇಕು | 4 | ಮಕ್ಕಳ ಹಕ್ಕುಗಳ ಜಾರಿಗೆ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು |
| 6 | ಎಲ್ಲ ಮಕ್ಕಳಿಗೆ ಜೀವಿಸುವ ಹಕ್ಕು ಇದೆ | 14 | ಮಕ್ಕಳಿಗೆ ತಮಗೆ ಒಪ್ಪುವ ಧರ್ಮವನ್ನು ಪಾಲಿಸುವ ತಮ್ಮ ಆತ್ಮಸಾಕ್ಷಿಯಂತೆ ನಡೆದುಕೊಳ್ಳುವ ಸ್ವಾತಂತ್ರ್ಯವಿದೆ |
| 17 | ಮಕ್ಕಳಿಗೆ ಸೂಕ್ತವಾದ ಮಾಹಿತಿ ನೀಡುವ ಜವಾಬ್ದಾರಿ ಮಾಧ್ಯಮಗಳಿಗಿದೆ. | 18 | ಮಕ್ಕಳ ಆರೈಕೆ, ಲಾಲನೆ ಪಾಲನೆಯ ರಕ್ಷಣೆ ಮಾಡುವ ಜವಾಬ್ದಾರಿ ಪೋಷಕರದ್ದು |
| 19 | ಮಕ್ಕಳನ್ನು ದುರುಪಯೋಗ ಮತ್ತು ನಿರ್ಲಕ್ಷ್ಯದ ವಿರುದ್ಧ ರಕ್ಷಿಸಬೇಕು | 22 | ನಿರಾಶ್ರಿತರಾದ ಮಕ್ಕಳಿಗೆ ಆದ್ಯತೆಯಿಂದ ರಕ್ಷಣೆ ನೀಡಬೇಕು |
| 23 | ಅಂಗವಿಕಲತೆಯಿರುವ ಮಕ್ಕಳಿಗೆ ರಕ್ಷಣೆ ನೀಡಬೇಕು | 28 | ಎಲ್ಲ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕು ಇದೆ |
| 29 | ಎಲ್ಲ ಮಕ್ಕಳಿಗೆ ತಾರತಮ್ಯವಿಲ್ಲದೆ ಶಿಕ್ಷಣ ಪಡೆಯುವ ಹಕ್ಕು ಇದೆ. | 30 | ಅಲ್ಪಸಂಖ್ಯಾತ ವರ್ಗ / ಧರ್ಮ / ಜಾತಿಗಳ ಎಲ್ಲ ಮಕ್ಕಳಿಗೆ ಎಲ್ಲ ಹಕ್ಕುಗಳು ಇದೆ |
| 31 | ಎಲ್ಲ ಮಕ್ಕಳಿಗೆ ವಿಶ್ರಾಂತಿ ಪಡೆಯುವ ಮತ್ತು ಮನೋರಂಜನೆ ಹೊಂದುವ ಹಕ್ಕು ಇದೆ | 32 | ಮಕ್ಕಳ ಮೇಲೆ ಆರ್ಥಿಕ ಶೋಷಣೆ ನಿಲ್ಲಬೇಕು. ಮಕ್ಕಳನ್ನು ದುಡಿಯಲು ನೇಮಿಸಬಾರದು, ನೇಮಿಸಿಕೊಳ್ಳಬಾರದು |
| 33 | ಮಾದಕ ವಸ್ತುಗಳಿಗೆ ಬಲಿಯಾಗುವುದರ ವಿರುದ್ಧ ಮಕ್ಕಳನ್ನು ರಕ್ಷಿಸಬೇಕು. | 34 | ಮಕ್ಕಳ ಮೇಲೆ ಲೈಂಗಿಕ ಶೋಷಣೆ / ದಾಳಿ ಆಗದಂತೆ ಎಲ್ಲೆಡೆ ರಕ್ಷಿಸಬೇಕು |

| | | | |
|---|---|---|---|
| 36 | ಮಕ್ಕಳನ್ನು ಯಾವುದೇ ರೀತಿಯ ಶೋಷಣೆಗಳ ವಿರುದ್ಧ ರಕ್ಷಿಸುವುದು ಸರ್ಕಾರ ಮತ್ತು ಸಮಾಜದ ಜವಾಬ್ದಾರಿ | 37 | ಯಾವುದೇ ಮಗುವಿಗೆ ಎಂತಹದೇ ಸಂದರ್ಭದಲ್ಲೂ ಚಿತ್ರಹಿಂಸೆ, ಮರಣದಂಡನೆ ನೀಡಬಾರದು |
| 38 | ಯುದ್ಧ, ಸಶಸ್ತ್ರ ಸಂಘರ್ಷಗಳಾದಲ್ಲಿ ಮಕ್ಕಳಿಗೆ ಆದ್ಯತೆಯಿಂದ ರಕ್ಷಣೆ ನೀಡಬೇಕು | 40 | ಮಕ್ಕಳಿಗೆ ನ್ಯಾಯ ಒದಗಿಸುವ ವ್ಯವಸ್ಥೆ ಇರಲೇಬೇಕು |
| 42 | ಮಕ್ಕಳ ಹಕ್ಕುಗಳನ್ನು ಕುರಿತು ಸರ್ಕಾರ ವಿಸ್ತೃತವಾದ ಪ್ರಚಾರ ಮಾಡಿ ಎಲ್ಲರಿಗೂ ಈ ಕುರಿತು ಮಾಹಿತಿ, ಅರಿವು ಮೂಡಿಸಬೇಕು. | | |

## ಭಾರತ/ ರಾಜ್ಯ ಸರ್ಕಾರದ ಕ್ರಮಗಳು

| ಉಸ್ತುವಾರಿ ಸಚಿವಾಲಯ | ಕೇಂದ್ರ/ರಾಜ್ಯ ಸರ್ಕಾರದ ಯೋಜನೆಗಳು | ಸಂಬಂಧಿತ ಕ್ರಮಗಳು | ಇತರ ಸಂಬಂಧಿತ ಸಚಿವಾಲಯಗಳು/ ಇಲಾಖೆಗಳು |
|---|---|---|---|
| ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | 1. ಸರ್ವ ಶಿಕ್ಷಣ ಅಭಿಯಾನ<br>2. ಮಾಧ್ಯಮಿಕ ಅಭಿಯಾನ ಯೋಜನೆ<br>3. ರಾಷ್ಟ್ರೀಯ ಉಚ್ಚ ಶಿಕ್ಷಣ ಅಭಿಯಾನ<br>4. ಶಿಕ್ಷಕರ ತರಬೇತಿ ಮತ್ತು ಸಾಕ್ಷರತೆಯೂ ಸೇರಿದಂತೆ ಶೈಕ್ಷಣಿಕ ಅಭಿವೃದ್ಧಿಗೆ ನೆರವು<br>5. ಮಧ್ಯಾಹ್ನದ ಬಿಸಿಯೂಟ<br>6. ಕ್ಷೀರಭಾಗ್ಯ ಯೋಜನೆ | ಪಢೇ ಭಾರತ್, ಬಢೇ ಭಾರತ್ | • ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ<br>• ಆಹಾರ ಮತ್ತು ನಾಗರೀಕ ಸರಬರಾಜು<br>• ವೃತ್ತಿಪರ ತರಬೇತಿ ಸಂಸ್ಥೆಗಳು<br>• ವಿದೇಶಾಂಗ ವ್ಯವಹಾರ |



5 GENDER EQUALITY

# ಗುರಿ 5


## ಗುರಿ 5. ಲಿಂಗ ಸಮಾನತೆ

### ಲಿಂಗ ಸಮಾನತೆಯನ್ನು ಸಾಧಿಸಿ ಮತ್ತು ಮಹಿಳೆಯರು ಹಾಗು ಹೆಣ್ಣುಮಕ್ಕಳನ್ನು ಸಶಕ್ತರನ್ನಾಗಿಸಿ

| | ಲಕ್ಷ್ಯಗಳು | | ಸೂಚಕಗಳು |
|---|---|---|---|
| 5.1 | ಎಲ್ಲಾ ಮಹಿಳೆಯರು ಮತ್ತು ಹೆಣ್ಣುಮಕ್ಕಳ ವಿರುದ್ಧದ ಎಲ್ಲಾ ವಿಧವಾದ ತಾರತಮ್ಯವನ್ನು ಎಲ್ಲೆಡೆ ಕೊನೆಗೊಳಿಸಿ | 5.1.1. | ಲಿಂಗಾಧಾರಿತ ತಾರತಮ್ಯವನ್ನು ತೊಡೆಯಲು ಹಾಗೂ ಸಮಾನತೆಯನ್ನು ಜಾರಿ ಮಾಡಲು ಉತ್ತೇಜಿಸಿ. ಉಸ್ತುವಾರಿ ಮಾಡಲು ಸಮರ್ಪಕವಾದ ಕಾನೂನು ವ್ಯವಸ್ಥೆ ಅಸ್ತಿತ್ವದಲ್ಲಿ ಇದೆಯೋ ಇಲ್ಲವೋ? |
| 5.2 | ಮಾನವ ಕಳ್ಳಸಾಗಣೆ ಮತ್ತು ಲೈಂಗಿಕ ಹಾಗು ಇತರ ಎಲ್ಲ ರೀತಿಯ ಶೋಷಣೆಗಳೂ ಸೇರಿದಂತೆ ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ ಎಲ್ಲಾ ಮಹಿಳೆಯರು ಮತ್ತು ಹೆಣ್ಣುಮಕ್ಕಳ ವಿರುದ್ಧದ ಎಲ್ಲಾ ವಿಧವಾದ ದೌರ್ಜನ್ಯಗಳನ್ನು ತೊಡೆದುಹಾಕಿ | 5.2.1. | 15 ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟ ವಯೋಮಾನದ ನಿಕಟ ಸಂಗಾತಿಯುಳ್ಳ ಹೆಂಗಸರು ಮತ್ತು ಹುಡುಗಿಯರಲ್ಲಿ ಪ್ರಸ್ತುತವಿರುವ ಅಥವಾ ಹಿಂದಿನ ನಿಕಟ ಸಂಗಾತಿಯಿಂದ ಕಳೆದ 12 ತಿಂಗಳಲ್ಲಿ ದೈಹಿಕ, ಲೈಂಗಿಕ ಅಥವಾ ಮಾನಸಿಕ ದೌರ್ಜನ್ಯಕ್ಕೆ ಒಳಗಾದವರು. ವಯೋಮಾನವಾರು ಮತ್ತು ದೌರ್ಜನ್ಯದ ರೀತಿಗೆ ಅನುಗುಣವಾದ ಪ್ರಮಾಣ |
| | | 5.2.2. | 15 ವರ್ಷ ಅದಕ್ಕಿಂತ ಮೇಲ್ಪಟ್ಟ ವಯೋಮಾನದ ಹೆಂಗಸರು ಮತ್ತು ಹುಡುಗಿಯರಲ್ಲಿ ಅವರ ನಿಕಟ ಸಂಗಾತಿಯನ್ನು ಹೊರತುಪಡಿಸಿ ಬೇರೆ ವ್ಯಕ್ತಿಯಿಂದ ಕಳೆದ 12 ತಿಂಗಳಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾದವರ ವಯೋಮಾನವಾರು ಮತ್ತು ಘಟನೆ ನಡೆದ ಸ್ಥಳಾವಾರು ಪ್ರಮಾಣ |

| | | | |
|---|---|---|---|
| 5.3 | ಎಲ್ಲಾ ಹಾನಿಕಾರಕ ಸಂಪ್ರದಾಯಗಳಾದ ಬಾಲ್ಯವಿವಾಹ, ಅವಧಿಪೂರ್ವ ಮತ್ತು ಬಲವಂತದ ಮದುವೆ ಮತ್ತು ಸ್ತ್ರೀ ಜನನಾಂಗ ಛೇದನದಂತಹ ಸಂಪ್ರದಾಯಗಳನ್ನು ತೊಡೆದುಹಾಕಿ | 5.3.1. | 20–24 ವಯೋಮಾನದ ಮಹಿಳೆಯರು 15 ವರ್ಷದೊಳಗೆ ಮತ್ತು 18 ವರ್ಷದೊಳಗೆ ಮದುವೆಯಾಗಿರುವುದು ಅಥವಾ ಸಂಬಂಧವನ್ನು ಹೊಂದಿರುವವರ ಪ್ರಮಾಣ |
| | | 5.3.2. | 15–49 ವಯೋಮಾನದ ಹುಡುಗಿಯರು ಮತ್ತು ಮಹಿಳೆಯರಲ್ಲಿ ಸ್ತ್ರೀ ಜನನಾಂಗ ಛೇದನದಂತಹ ಕೃತ್ಯಕ್ಕೆ ಗುರಿಯಾಗಿರುವವರ ವಯೋಮಾನವಾರು ಪ್ರಮಾಣ. |
| 5.4 | ವೇತನರಹಿತ ಸೇವೆ ಮತ್ತು ಗೃಹಕೃತ್ಯಗಳನ್ನು ಸಾರ್ವಜನಿಕ ಸೇವೆಯ ಒದಗಣೆ, ಮೂಲಸೌಲಭ್ಯಗಳು ಮತ್ತು ಸಾಮಾಜಿಕ ರಕ್ಷಣಾ ನೀತಿಗಳ ಮೂಲಕ ಗುರುತಿಸಿ ಮತ್ತು ಮೌಲ್ಯ ನೀಡಿ, ಪ್ರತಿ ಮನೆಗಳು ಹಾಗು ಕುಟುಂಬಗಳಲ್ಲಿ ಆಯಾ ದೇಶಕ್ಕೆ ಸೂಕ್ತವೆನಿಸಿದಂತೆ ಜವಾಬ್ದಾರಿಗಳನ್ನು ಹಂಚಿಕೊಳ್ಳುವುದನ್ನು ಉತ್ತೇಜಿಸಿ | 5.4.1. | ಲಿಂಗ, ವಯಸ್ಸು ಮತ್ತು ಸ್ಥಳಕ್ಕನುಗುಣವಾಗಿ ಗೃಹಕೃತ್ಯ ಹಾಗು ಸೇವಾ ಕೆಲಸಗಳಿಗೆ ಮೀಸಲಿಡುವ ಸಮಯದ ಪ್ರಮಾಣ |
| 5.5 | ರಾಜಕೀಯ, ಆರ್ಥಿಕ ಮತ್ತು ಸಾರ್ವಜನಿಕ ಜೀವನದಲ್ಲಿ ನಿರ್ಧಾರ ತೆಗೆದುಕೊಳ್ಳುವ ಎಲ್ಲಾ ಹಂತಗಳಲ್ಲಿ ಮಹಿಳೆಯರ ಸಂಪೂರ್ಣ ಮತ್ತು ಪರಿಣಾಮಕಾರಿ ಭಾಗವಹಿಸುವಿಕೆಯನ್ನು ಮತ್ತು ನಾಯಕತ್ವ ವಹಿಸಲು ಸಮಾನ ಅವಕಾಶಗಳನ್ನು ಖಾತ್ರಿಪಡಿಸಿ | 5.5.1. | ರಾಷ್ಟ್ರೀಯ ಲೋಕಸಭೆಯಲ್ಲಿ ಮತ್ತು ಸ್ಥಳೀಯ ಸರ್ಕಾರಗಳಲ್ಲಿ ಮಹಿಳಾ ಸದಸ್ಯರ ಪ್ರಮಾಣ |
| | | 5.5.2. | ನಿರ್ವಾಹಕ ಸ್ಥಾನದಲ್ಲಿರುವ ಮಹಿಳೆಯರ ಪ್ರಮಾಣ |
| 5.6. | ಜನಸಂಖ್ಯೆ ಮತ್ತು ಅಭಿವೃದ್ಧಿ ಕುರಿತಾದ ಅಂತಾರಾಷ್ಟ್ರೀಯ ಸಮ್ಮೇಳನದ ಕ್ರಿಯಾ ಕಾರ್ಯಕ್ರಮ ಮತ್ತು ಕ್ರಿಯೆ ಹಾಗು ಹೊರಹೊಮ್ಮಿದ ದಾಖಲೆಗಳನ್ನು ಪರಿಶೀಲಿಸುವ ಸಮ್ಮೇಳನಗಳ ಬೀಜಿಂಗ್ ವೇದಿಕೆಯಲ್ಲಿ ಸಮ್ಮತಿಸಿದಂತೆ ಲೈಂಗಿಕ ಮತ್ತು ಸಂತಾನೋತ್ಪತಿ ಆರೋಗ್ಯ ಮತ್ತು ಸಂತಾನೋತ್ಪತ್ತಿ ಹಕ್ಕುಗಳ ಸಾರ್ವತ್ರಿಕ ಲಭ್ಯತೆಯನ್ನು ಖಾತ್ರಿಪಡಿಸಿ | 5.6.1. | 15–49 ವಯೋಮಾನದ ಮಹಿಳೆಯರಲ್ಲಿ ಲೈಂಗಿಕ ಸಂಬಂಧ, ಗರ್ಭನಿರೋಧಕದ ಬಳಕೆ ಮತ್ತು ಸಂತಾನೋತ್ಪತ್ತಿ ಆರೋಗ್ಯ ಮತ್ತು ಪೋಷಣೆ ಕುರಿತು ಸ್ವಂತವಾಗಿ ತೀರ್ಮಾನ ತೆಗೆದುಕೊಳ್ಳುವ ಮಹಿಳೆಯರ ಪ್ರಮಾಣ. |
| | | 5.6.2. | 15–49 ವಯೋಮಾನದ ಮಹಿಳೆಯರಿಗೆ ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯ ಪೋಷಣೆ, ಮಾಹಿತಿ ಮತ್ತು ಶಿಕ್ಷಣದ ಲಭ್ಯತೆಯನ್ನು ಖಾತ್ರಿಪಡಿಸುವ ಕಾನೂನು ಮತ್ತು ನಿಯಂತ್ರಣಗಳನ್ನು ಹೊಂದಿರುವ ದೇಶಗಳ ಸಂಖ್ಯೆ |

| | | | |
|---|---|---|---|
| 5.ಎ | ಮಹಿಳೆಯರಿಗೆ ಆರ್ಥಿಕ ಸಂಪನ್ಮೂಲಗಳ ಜೊತೆಗೆ ಭೂಮಿ ಮತ್ತು ಇತರ ಸ್ವರೂಪಗಳ ಆಸ್ತಿ, ಆರ್ಥಿಕ ಸೇವೆಗಳು, ಪಿತ್ರಾರ್ಜಿತ ಮತ್ತು ನೈಸರ್ಗಿಕ ಸಂಪನ್ಮೂಲಗಳ ಮೇಲೆ ಮಾಲೀಕತ್ವ ಮತ್ತು ನಿಯಂತ್ರಣದ ಲಭ್ಯತೆ, ಸಮಾನ ಹಕ್ಕುಗಳನ್ನು ಒದಗಿಸಲು ರಾಷ್ಟ್ರೀಯ ಕಾನೂನುಗಳಲ್ಲಿ ಸುಧಾರಣೆಯನ್ನು ಕೈಗೊಳ್ಳಿ | 5.ಎ.1. | (ಎ) ತಮ್ಮ ಕೃಷಿ ಭೂಮಿಯ ಮೇಲಿನ ಸ್ವಾಮ್ಯತೆ ಅಥವಾ ಸುರಕ್ಷಿತ ಹಕ್ಕುಗಳನ್ನು ಹೊಂದಿರುವ ಒಟ್ಟು ಕೃಷಿ ಸಮುದಾಯದ ಲಿಂಗಾವಾರು ಪ್ರಮಾಣ; (ಬಿ) ಕೃಷಿ ಭೂಮಿಯ ಮಾಲೀಕತ್ವ ಅಥವಾ ಹಕ್ಕುಗಳನ್ನು ಹೊಂದಿರುವವರಲ್ಲಿ ಅಧಿಕಾರಾವಧಿ ವಿಧದ ಆಧಾರಿತ ಮಹಿಳೆಯರ ಪಾಲು. |
| | | 5.ಎ.2. | ಮಹಿಳೆಯರಿಗೆ ಭೂಮಿಯ ಮೇಲಿನ ಅಧಿಕಾರ ಮತ್ತು/ ಅಥವಾ ನಿಯಂತ್ರಣದ ಖಾತ್ರಿಗಾಗಿ ಕಾನೂನಿನ ಚೌಕಟ್ಟನ್ನು (ಸಾಂಪ್ರದಾಯಿಕ ನಿಯಮವೂ ಸೇರಿದಂತೆ) ಹೊಂದಿರುವ ದೇಶಗಳ ಪ್ರಮಾಣ. |
| 5.ಬಿ | ಮಹಿಳೆಯರ ಸಶಕ್ತೀಕರಣವನ್ನು ಉತ್ತೇಜಿಸಲು ನೆರವಾಗುವ ತಂತ್ರಜ್ಞಾನವನ್ನು, ವಿಶೇಷವಾಗಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಬಳಕೆಯನ್ನು ಹೆಚ್ಚಿಸಿ | 5.ಬಿ.1. | ಸ್ವಂತ ಮೊಬೈಲ್ ಅಥವಾ ದೂರವಾಣಿಯನ್ನು ಹೊಂದಿರುವವರ ಲಿಂಗಾವಾರು ಪ್ರಮಾಣ. |
| 5.ಸಿ | ಎಲ್ಲಾ ಹಂತಗಳಲ್ಲಿ ಲಿಂಗ ಸಮಾನತೆ ಮತ್ತು ಮಹಿಳೆಯರ ಹಾಗು ಹೆಣ್ಣುಮಕ್ಕಳ ಸಶಕ್ತತೆಗಾಗಿ ಸಮರ್ಥ ನೀತಿಗಳನ್ನು ಮತ್ತು ಜಾರಿಗೊಳಿಸಬಲ್ಲ ಕಾನೂನುಗಳನ್ನು ಅಳವಡಿಸಿ ಅವುಗಳನ್ನು ಸದೃಢಗೊಳಿಸಿ | 5.ಸಿ.1. | ಲಿಂಗ ಸಮಾನತೆ ಮತ್ತು ಮಹಿಳಾ ಸದೃಢತೆಗೆ ಮೀಸಲಿಟ್ಟ ಹಣದ ಪ್ರಮಾಣ ಮತ್ತು ಬಳಕೆಯನ್ನು ಪತ್ತೆ ಮಾಡುವ ವ್ಯವಸ್ಥೆಯನ್ನು ಹೊಂದಿರುವ ದೇಶಗಳ ಪ್ರಮಾಣ. |



## ವಿವರಣೆ

ಎಲ್ಲಾ ವಲಯಗಳಲ್ಲಿ ಲಿಂಗ ಸಮಾನತೆಯನ್ನು ಸಾಧಿಸುವುದು ಈ ಗುರಿಯ ಉದ್ದೇಶವಾಗಿದೆ. ಮಕ್ಕಳ ಹಕ್ಕುಗಳ ಒಡಂಬಡಿಕೆ ಪರಿಚ್ಛೇದ 2 ಸಹ ಯಾವುದೇ ಕಾರಣಕ್ಕೂ ಯಾರೂ ಎಲ್ಲಿಯೂ ಯಾವುದೇ ವಿಚಾರಕ್ಕೂ ತಾರತಮ್ಯಕ್ಕೆ ಗುರಿಯಾಗಬಾರದು ಮತ್ತು ಯಾರೂ ಮಕ್ಕಳ ನಡುವೆ ತಾರತಮ್ಯ ಮಾಡಬಾರದು ಎಂದು ಹೇಳುತ್ತದೆ. ಪ್ರಸ್ತುತ 21ನೇ ಶತಮಾನದಲ್ಲೂ ಬಹುತೇಕ ರಂಗಗಳಲ್ಲಿ ಮಹಿಳೆಯರ ಮತ್ತು ಹೆಣ್ಣುಮಕ್ಕಳನ್ನು ನಿರ್ಲಕ್ಷಿಸಲಾಗುತ್ತಿದೆ. ಹೆಣ್ಣುಮಕ್ಕಳ ನಿರ್ಲಕ್ಷ್ಯ ಹೆಣ್ಣುಭ್ರೂಣ ಹತ್ಯೆ, ಶಿಶು ಹತ್ಯೆಯಿಂದ ಆರಂಭವಾಗಿ ಮುಂದೆ ಪ್ರಾಥಮಿಕ ಶಿಕ್ಷಣ, ಆಟೋಟಗಳಲ್ಲಿ ಅವಕಾಶಗಳನ್ನು ನೀಡದಿರುವುದು, ಉನ್ನತ ಶಿಕ್ಷಣಕ್ಕೆ ಅವಕಾಶಗಳನ್ನು ನೀಡದಿರುವುದು, ಉದ್ಯೋಗವಕಾಶದಲ್ಲಿ ನಿರ್ಲಕ್ಷ್ಯವೇ ಮೊದಲಾದವುಗಳಲ್ಲಿ ಮುಂದುವರೆದು, ಮದುವೆ, ನಿರ್ಧಾರ ಕೈಗೊಳ್ಳುವುದೇ ಮೊದಲಾದವುಗಳಲ್ಲಿ ಕಂಡುಬರುತ್ತದೆ. ಭ್ರೂಣ ಪತ್ತೆ ತಂತ್ರಜ್ಞಾನ ನಿಷೇಧ ಕಾಯ್ದೆ, ಬಾಲ್ಯವಿವಾಹ ನಿಷೇಧ ಕಾಯ್ದೆ, ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ತಡೆಗಟ್ಟುವ ಕಾಯ್ದೆಗಳು ದೇಶದಲ್ಲಿ ಜಾರಿಯಲ್ಲಿದ್ದರೂ ಸಹ ಹೆಣ್ಣು ಮಕ್ಕಳ ಮೇಲೆ ದೈಹಿಕ, ಲೈಂಗಿಕ ದೌರ್ಜನ್ಯಗಳು ನಡೆಯುತ್ತಲೇ ಇವೆ ಮತ್ತು ಬಾಲಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಯಿಂದ ಹೊರಗಿದ್ದಾರೆ ಹಾಗೂ ಸಾಗಣೆಗೆ ಒಳಗಾಗುತ್ತಿದ್ದಾರೆ. ಬಹುತೇಕ ಕೌಟುಂಬಿಕ ನಿರ್ಧಾರಗಳಲ್ಲಿ ಮಹಿಳೆಯರ ಅಭಿಪ್ರಾಯಗಳಿಗೆ ಮನ್ನಣೆ ಸಿಗುತ್ತಿಲ್ಲ.

**ದಕ್ಷಿಣ ಭಾರತದ ರಾಜ್ಯಗಳಲ್ಲಿ ಲಿಂಗ ಪ್ರಮಾಣ (ಜನಗಣತಿ 2011) ಮತ್ತು ಬಾಲ್ಯವಿವಾಹಗಳ (ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 2015–16) ಪ್ರಮಾಣವನ್ನು ಇಲ್ಲಿ ನೀಡಲಾಗಿದೆ.**

| ವಿಷಯ | ಕರ್ನಾಟಕ | ಆಂಧ್ರಪ್ರದೇಶ | ತೆಲಂಗಾಣ | ಕೇರಳ | ತಮಿಳುನಾಡು | ಪುದುಚೇರಿ | ಭಾರತ |
|---|---|---|---|---|---|---|---|
| ಸಾಮಾನ್ಯ ಲಿಂಗ ಪ್ರಮಾಣ | 968 | 993 | | 1084 | 996 | 1037 | 933 |
| 0–6 ವರ್ಷದ ಲಿಂಗ ಪ್ರಮಾಣ | 949 | 939 | | 964 | 943 | 967 | 914 |
| 0–18 ವರ್ಷದೊಳಗಿನ ಮಕ್ಕಳಲ್ಲಿ ಲಿಂಗ ಪ್ರಮಾಣ | 936 | 938 | | 963 | 939 | 961 | 908 |
| 19–22 ವರ್ಷದೊಳಗಿನವರ ಲಿಂಗ ಪ್ರಮಾಣ | 960 | 1009 | | 1003 | 1009 | 1068 | 916 |
| 20–24 ವಯೋಮಾನದ ಮಹಿಳೆಯರಲ್ಲಿ 18 ವರ್ಷಕ್ಕೆ ಮೊದಲೇ ಮದುವೆಯಾದವರು (%) | 23.2 | 32.7 | 25.7 | | 15.7 | 10.7 | 26.8 |

## ಸವಾಲುಗಳು


- ಲಿಂಗ ಸಮಾನತೆಯನ್ನು ವಾಸ್ತವ ದೃಷ್ಟಿಕೋನದಿಂದ ಕುಟುಂಬದಿಂದಲೇ ಅಳವಡಿಸುವುದು ಸವಾಲು
- ಲಿಂಗ ಪ್ರಮಾಣ 18 ವರ್ಷದ ತನಕದಲ್ಲಿ ತೀರಾ ಕುಸಿತ ಕಂಡರೂ, 19 ವರ್ಷದವರ ನಂತರ ಸ್ವಲ್ಪ ಉತ್ತಮಗೊಳ್ಳಲು ಕಾರಣಗಳನ್ನು ಕಂಡುಕೊಳ್ಳಲೇಬೇಕಿದೆ.
- ಈ ಸಮಾನತೆಯನ್ನು ಇಡೀ ಸಮುದಾಯದ ಎಲ್ಲಾ ಕ್ಷೇತ್ರಗಳಲ್ಲಿ ತರುವುದು ಇನ್ನೂ ಸವಾಲು.

## ನೀವು ಮಾಡಬಹುದಾದದ್ದು

- ಬಾಲಕಿಯರಿಗೆ ಮತ್ತು ಮಹಿಳೆಯರಿಗೆ ಎಲ್ಲಾ ರಂಗಗಳಲ್ಲಿ ಸಮಾನ ಅವಕಾಶ ನೀಡಿ ಮತ್ತು ಅವರು ಭಾಗವಹಿಸಲು ಪ್ರೋತ್ಸಾಹಿಸುವುದನ್ನು ನಿಮ್ಮ ಕುಟುಂಬದಿಂದಲೇ ಪ್ರಾರಂಭಿಸಿ.
- ಮಹಿಳೆಯರು ಮತ್ತು ಬಾಲಕಿಯರು ದೈಹಿಕ, ಮಾನಸಿಕ, ಲೈಂಗಿಕ ಶೋಷಣೆಗೆ ಒಳಗಾಗಿದ್ದಲ್ಲಿ ಸಂಬಂಧಪಟ್ಟವರಿಗೆ ದೂರು ನೀಡಿ ತಪ್ಪಿತಸ್ಥರಿಗೆ ಶಿಕ್ಷೆಯಾಗುವ ತನಕ ಅನುಸರಣೆ ಮಾಡಿ.
- ಶೋಷಣೆಗೆ ಒಳಗಾದವರಿಗೆ ಮತ್ತು ಅವರ ಕುಟುಂಬದವರಿಗೆ ಆಪ್ತಸಮಾಲೋಚನೆಗೆ ಒಳಪಡಿಸಲು ಪ್ರಯತ್ನಿಸಿ.
- ಮಹಿಳೆಯರ ರಕ್ಷಣೆಗೆ ಇರುವ ಕಾನೂನುಗಳ ಕುರಿತು ಜಾಗೃತಿಗೊಳಿಸುವ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ
- ಯಾವುದೇ ಕಾರಣಕ್ಕೂ ಮಹಿಳೆಯರ/ಬಾಲಕಿಯರ ಆತ್ಮಗೌರವಕ್ಕೆ ಧಕ್ಕೆಯಾಗದಂತೆ ವರ್ತಿಸಿ
- ನಿಮ್ಮ ಪ್ರದೇಶದಲ್ಲಿ ದೇವದಾಸಿ, ಬೆತ್ತಲೆಸೇವೆ ಇವೇ ಮೊದಲಾದ ಆಚರಣೆಗಳು ಚಾಲ್ತಿಯಲ್ಲಿದ್ದಲ್ಲಿ ಸಂಬಂಧಪಟ್ಟವರಿಗೆ ದೂರು ನೀಡಿ.

**ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಸುಸ್ಥಿರ ಅಭಿವೃದ್ಧಿ ಗುರಿ 5 ಅರ್ಥ ಮಾಡಿಕೊಳ್ಳಲು ಓದಬೇಕಿರುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989ರ ಪರಿಚ್ಛೇದಗಳು**

| ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ | ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ |
|---|---|---|---|
| 1 | ಮಕ್ಕಳೆಂದರೆ 18 ವರ್ಷದೊಳಗಿನವರು | 2 | ಮಕ್ಕಳ ನಡುವೆ ತಾರತಮ್ಯ/ಭೇದಭಾವ ಇರಬಾರದು/ಮಾಡಬಾರದು |
| 4 | ಮಕ್ಕಳ ಹಕ್ಕುಗಳ ಜಾರಿಗೆ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು | 5 | ಮಕ್ಕಳನ್ನು ಕುರಿತು ಪಾಲಕರಿಗೆ ಮತ್ತು ಪೋಷಕರಿಗೆ ಪ್ರಮುಖ ಜವಾಬ್ದಾರಿ ಇದೆ. |
| 9 | ಮಕ್ಕಳ ರಕ್ಷಣೆಯಲ್ಲಿ ಪೋಷಕರ ಪಾತ್ರ ಪ್ರಮುಖವಾಗಿ ಇದೆ. | 10 | ಮಕ್ಕಳಿಗೆ ತಮ್ಮ ತಮ್ಮ ಪೋಷಕರೊಂದಿಗೆ ಇರುವ ಹಕ್ಕು ಇದೆ |
| 18 | ಮಕ್ಕಳ ಆರೈಕೆ, ಲಾಲನೆ ಪಾಲನೆಯ ರಕ್ಷಣೆ ಮಾಡುವ ಜವಾಬ್ದಾರಿ ಪೋಷಕರದ್ದು | 19 | ಮಕ್ಕಳನ್ನು ದುರುಪಯೋಗ ಮತ್ತು ನಿರ್ಲಕ್ಷ್ಯದ ವಿರುದ್ಧ ರಕ್ಷಿಸಬೇಕು |
| 20 | ಕುಟುಂಬಗಳಿಂದ ದೂರವಾದ ಮಕ್ಕಳನ್ನು ರಕ್ಷಿಸಬೇಕು, ಅವರಿಗೆ ಪರ್ಯಾಯ ವ್ಯವಸ್ಥೆ ಮಾಡಬೇಕು | 22 | ನಿರಾಶ್ರಿತರಾದ ಮಕ್ಕಳಿಗೆ ಆದ್ಯತೆಯಿಂದ ರಕ್ಷಣೆ ನೀಡಬೇಕು |
| 24 | ಎಲ್ಲ ಮಕ್ಕಳಿಗೆ ಮೂಲ ಸೇವೆಗಳನ್ನು ಒದಗಿಸಲೇಬೇಕು. | 26 | ಎಲ್ಲ ಮಕ್ಕಳಿಗೆ ಸಾಮಾಜಿಕ ಭದ್ರತೆ ನೀಡಲೇಬೇಕು |
| 27 | ಎಲ್ಲ ಮಕ್ಕಳಿಗೆ ಸೂಕ್ತ ಜೀವನ ಮಟ್ಟ ದೊರೆಯಬೇಕು | 28 | ಎಲ್ಲ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕು ಇದೆ |
| 29 | ಎಲ್ಲ ಮಕ್ಕಳಿಗೆ ತಾರತಮ್ಯವಿಲ್ಲದೆ ಶಿಕ್ಷಣ ಪಡೆಯುವ ಹಕ್ಕು ಇದೆ. | 32 | ಮಕ್ಕಳ ಮೇಲೆ ಆರ್ಥಿಕ ಶೋಷಣೆ ನಿಲ್ಲಬೇಕು. ಮಕ್ಕಳನ್ನು ದುಡಿಯಲು ನೇಮಿಸಬಾರದು, ನೇಮಿಸಿಕೊಳ್ಳಬಾರದು |
| 34 | ಮಕ್ಕಳ ಮೇಲೆ ಲೈಂಗಿಕ ಶೋಷಣೆ / ದಾಳಿ ಆಗದಂತೆ ಎಲ್ಲೆಡೆ ರಕ್ಷಿಸಬೇಕು | 35 | ಮಕ್ಕಳ ಮಾರಾಟ ಮಾಡುವುದು ಅಥವಾ ಅಕ್ರಮ ಬಂಧನದಲ್ಲಿಡುವುದರ ವಿರುದ್ಧ ರಕ್ಷಣೆ |
| 36 | ಮಕ್ಕಳನ್ನು ಯಾವುದೇ ರೀತಿಯ ಶೋಷಣೆಗಳ ವಿರುದ್ಧ ರಕ್ಷಿಸುವುದು ಸರ್ಕಾರ ಮತ್ತು ಸಮಾಜದ ಜವಾಬ್ದಾರಿ | 37 | ಯಾವುದೇ ಮಗುವಿಗೆ ಎಂತಹದೇ ಸಂದರ್ಭದಲ್ಲೂ ಚಿತ್ರಹಿಂಸೆ, ಮರಣದಂಡನೆ ನೀಡಬಾರದು |
| 38 | ಯುದ್ಧ, ಸಶಸ್ತ್ರ ಸಂಘರ್ಷಗಳಾದಲ್ಲಿ ಮಕ್ಕಳಿಗೆ ಆದ್ಯತೆಯಿಂದ ರಕ್ಷಣೆ ನೀಡಬೇಕು | 39 | ಕಾನೂನಿನೊಡನೆ ಸಂಘರ್ಷದಲ್ಲಿದ್ದ ಮಕ್ಕಳಿಗೆ ಪುನರ್ವಸತಿಯ ಹಕ್ಕು ಇದೆ |



## ಭಾರತ/ ರಾಜ್ಯ ಸರ್ಕಾರದ ಕ್ರಮಗಳು

| ಉಸ್ತುವಾರಿ ಸಚಿವಾಲಯ | ಕೇಂದ್ರ/ರಾಜ್ಯ ಸರ್ಕಾರದ ಯೋಜನೆಗಳು | ಸಂಬಂಧಿತ ಕ್ರಮಗಳು | ಇತರ ಸಂಬಂಧಿತ ಸಚಿವಾಲಯಗಳು/ ಇಲಾಖೆಗಳು |
|---|---|---|---|
| ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 1. ಇಂದಿರಾ ಗಾಂಧಿ ಮಾತೃತ್ವ ಸಹಯೋಗ<br>2. ಸಬಲಾ (ಹದಿಹರೆಯದ ಹುಡುಗಿಯರ ಸಶಕ್ತತೆ) | 1. ಬೇಟಿ ಬಚಾವೋ ಬೇಟಿ ಪಡಾವೋ<br>2. ಸುಕನ್ಯಾ ಸಂವೃದ್ಧಿ ಯೋಜನೆ<br>3. ಮಹಿಳೆಯರ ತರಬೇತಿ ಮತ್ತು ಉದ್ಯೋಗಕ್ಕೆ ನೆರವು<br>4. ಜನನಿ ಸುರಕ್ಷಾ ಯೋಜನೆ<br>5. ಸ್ವಾಧಾರ (ಕಷ್ಟದಲ್ಲಿರುವ ಮಹಿಳೆಯರಿಗಾಗಿ ಯೋಜನೆ)<br>6. ಕಸ್ತೂರಿಬಾ ಗಾಂಧಿ ಬಾಲಿಕಾ ವಿದ್ಯಾಲಯ | • ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ<br>• ನಗರಾಭಿವೃದ್ಧಿ<br>• ಸಾಮಾಜಿಕ ನ್ಯಾಯ<br>• ಆರೋಗ್ಯ ಮತ್ತು ಕುಟುಂಬ ಕಲ್ಯಾಣ |













# ಗುರಿ 6

## ಸ್ವಚ್ಛ ನೀರು ಮತ್ತು ನೈರ್ಮಲ್ಯ

### ಎಲ್ಲರಿಗೂ ನೀರು ಮತ್ತು ನೈರ್ಮಲ್ಯದ ಲಭ್ಯತೆ ಮತ್ತು ಅದರ ಸುಸ್ಥಿರ ನಿರ್ವಹಣೆಯನ್ನು ಖಾತ್ರಿಗೊಳಿಸಿ

| | ಲಕ್ಷ್ಯಗಳು | | ಸೂಚಕಗಳು |
|---|---|---|---|
| 6.1 | 2030ರೊಳಗೆ, ಎಲ್ಲರಿಗೂ ಸುರಕ್ಷಿತ ಮತ್ತು ಕೈಗೆಟುಕಬಲ್ಲ ಕುಡಿಯುವ ನೀರಿನ ಸಾರ್ವತ್ರಿಕ ಮತ್ತು ಸಮಾನ ಲಭ್ಯತೆಯನ್ನು ಸಾಧಿಸಿ | 6.1.1. | ಸುರಕ್ಷಿತವಾಗಿ ನಿರ್ವಹಿಸಲ್ಪಡುತ್ತಿರುವ ಕುಡಿಯುವ ನೀರಿನ ಸೇವೆಯನ್ನು ಬಳಸುತ್ತಿರುವ ಜನಸಂಖ್ಯೆಯ ಪ್ರಮಾಣ  |
| 6.2 | 2030ರೊಳಗೆ, ಎಲ್ಲರಿಗೂ ಸಾಕಷ್ಟು ಪ್ರಮಾಣದ ಮತ್ತು ಸಮಾನ ನೈರ್ಮಲ್ಯ ಮತ್ತು ಸ್ವಚ್ಛತೆಯ ಲಭ್ಯತೆಯನ್ನು ಸಾಧಿಸುವುದು ಮತ್ತು ಬಯಲು ಶೌಚವನ್ನು ಕೊನೆಗಾಣಿಸಿ, ಮಹಿಳೆಯರು ಮತ್ತು ಹೆಣ್ಣುಮಕ್ಕಳಿಗೆ ಮತ್ತು ಅಸಹಾಯಕ ಪರಿಸ್ಥಿತಿಯಲ್ಲಿರುವವರ ಅವಶ್ಯಕತೆಗಳಿಗೆ ವಿಶೇಷ ಗಮನ ನೀಡಿ | 6.2.1. | ಸೋಪು ಮತ್ತು ನೀರಿನಿಂದ ಕೈತೊಳೆಯುವ ಸೌಲಭ್ಯವೂ ಸೇರಿದಂತೆ ಸುರಕ್ಷಿತವಾಗಿ ನಿರ್ವಹಿಸಲ್ಪಡುತ್ತಿರುವ ಶೌಚಾಲಯವನ್ನು ಬಳಸುತ್ತಿರುವ ಜನಸಂಖ್ಯೆಯ ಪ್ರಮಾಣ  |
| 6.3 | 2030ರೊಳಗೆ, ಮಾಲಿನ್ಯವನ್ನು ಕಡಿಮೆಗೊಳಿಸಿ, ತ್ಯಾಜ್ಯ ಸುರಿಯುವಿಕೆಯನ್ನು ನಿರ್ಮೂಲನೆಗೊಳಿಸಿ ಮತ್ತು ಹಾನಿಕಾರಕ ರಾಸಾಯನಿಕಗಳು ಮತ್ತು ವಸ್ತುಗಳನ್ನು ನೀರಿಗೆ ಬಿಡುವುದನ್ನು ಕಡಿಮೆಗೊಳಿಸಿ ನೀರಿನ ಗುಣಮಟ್ಟವನ್ನು ಸುಧಾರಿಸಿ, ಸಂಸ್ಕರಣೆಗೊಳಿಸದ ತ್ಯಾಜ್ಯ ನೀರಿನ ಪ್ರಮಾಣವನ್ನು ಅರ್ಧಕ್ಕಿಳಿಸಿ ಮತ್ತು ಜಾಗತಿಕವಾಗಿ ಸಂಸ್ಕರಣೆ ಹಾಗು ಸುರಕ್ಷಿತ ಮರುಬಳಕೆಯ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಿ | 6.3.1. | ಸುರಕ್ಷಿತವಾಗಿ ಸಂಸ್ಕರಿಸಿದ ತ್ಯಾಜ್ಯ ನೀರಿನ ಪ್ರಮಾಣ |
| | | 6.3.2 | ಉತ್ತಮ ಗುಣಮಟ್ಟದ ನೀರನ್ನು ಹೊಂದಿರುವ ಜಲಸಂಗ್ರಹಾಲಯಲಗಳ (ಕೆರೆ, ಕುಂಟೆ, ಇತ್ಯಾದಿಗಳನ್ನೂ ಒಳಗೊಂಡು) ಪ್ರಮಾಣ |
| 6.4 | 2030ರೊಳಗೆ, ಎಲ್ಲಾ ವಲಯಗಳಲ್ಲೂ ನೀರಿನ ಬಳಕೆಯ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸಿ ಮತ್ತು ನೀರಿನ ಕೊರತೆಯನ್ನು ನಿವಾರಿಸಲು ನೀರಿನ ಸುಸ್ಥಿರ ಬಳಕೆ ಮತ್ತು ಶುದ್ಧನೀರಿನ ರವಾನೆಯನ್ನು ಖಾತ್ರಿಗೊಳಿಸಿ ಮತ್ತು ನೀರಿನ ಕೊರತೆಯನ್ನು ಅನುಭವಿಸುತ್ತಿರುವ ಜನರ ಪ್ರಮಾಣವನ್ನು ಗಣನೀಯವಾಗಿ ಇಳಿಸಿ | 6.4.1. | ಕಾಲಾನುಕಾಲದಲ್ಲಿ ನೀರಿನ ಸಮರ್ಥ ಬಳಕೆಯಲ್ಲಿನ ಬದಲಾವಣೆ |
| | | 6.4.2. | ನೀರಿನ ಒತ್ತಡದ ಮಟ್ಟ: ಲಭ್ಯವಿರುವ ಶುದ್ಧ ನೀರಿನ ಮೂಲಗಳಿಂದ ಶುದ್ಧ ನೀರನ್ನು ಹೊರತೆಗೆಯುವ ಪ್ರಮಾಣ |

| | | | |
|---|---|---|---|
| 6.5 | 2030ರೊಳಗೆ, ಸೂಕ್ತವಾದ ಗಡಿಗಳಾಚೆಯ ಸಹಕಾರಗಳ ಮೂಲಕವೂ ಸೇರಿದಂತೆ ಎಲ್ಲಾ ಹಂತಗಳಲ್ಲಿ ಜಲ ಸಂಪನ್ಮೂಲಗಳ ಸಮಗ್ರ ನಿರ್ವಹಣೆಯನ್ನು ಜಾರಿಗೊಳಿಸಿ | 6.5.1. | ಸಮಗ್ರ ಜಲಸಂಪನ್ಮೂಲ ನಿರ್ವಹಣಾ ಜಾರಿಯ ಮಟ್ಟ (0–100) |
| | | 6.5.2. | ನೀರಿನ ಸಹಕಾರಕ್ಕೆ ಕಾರ್ಯಾಚರಣೆಯ ವ್ಯವಸ್ಥೆಯನ್ನು ಹೊಂದಿರುವ ಗಡಿಗಳಾಚೆಯ ಜಲಾನಯನದ ವಿಸ್ತೀರ್ಣ |
| 6.6 | 2020ರೊಳಗೆ, ಪರ್ವತಗಳು, ಅರಣ್ಯಗಳು, ತೇವಪ್ರದೇಶಗಳು, ನದಿಗಳು, ನೀರಿನ ಸೆಲೆಗಳು ಮತ್ತು ಕೊಳಗಳೂ ಸೇರಿದಂತೆ ಜಲ ಸಂಬಂಧಿತ ಪರಿಸರ ವ್ಯವಸ್ಥೆಗಳನ್ನು ರಕ್ಷಿಸಿ ಮತ್ತು ಮರುಪೂರಣಗೊಳಿಸಿ | 6.6.1. | ಕಾಲಾನುಕ್ರಮದಲ್ಲಿ ಬದಲಾಗುವ ಜಲ ಸಂಬಂಧಿತ ಪರಿಸರ ವ್ಯವಸ್ಥೆಯ ಮಟ್ಟ |
| 6.ಎ | 2030ರೊಳಗೆ, ಲವಣಾಂಶ ಕಡಿಮೆಗೊಳಿಸಿ, ಮಳೆ ನೀರು ಸಂಗ್ರಹ, ನೀರಿನ ಗುಣಮಟ್ಟ ಹೆಚ್ಚಿಸುವಿಕೆ, ತ್ಯಾಜ್ಯನೀರಿನ ಸಂಸ್ಕರಣೆ ಮತ್ತು ಮರುಬಳಕೆಯ ತಂತ್ರಜ್ಞಾನಗಳೂ ಸೇರಿದಂತೆ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿತ ಚಟುವಟಿಕೆ ಮತ್ತು ಕಾರ್ಯಕ್ರಮಗಳಿಗೆ ಅಂತಾರಾಷ್ಟ್ರೀಯ ಸಹಕಾರ ಮತ್ತು ಸಾಮರ್ಥ್ಯವರ್ಧನೆಯ ನೆರವನ್ನು ವಿಸ್ತರಿಸಿ | 6.ಎ.1. | ಸರ್ಕಾರದಿಂದ ನಿರ್ವಹಿಸಲ್ಪಡುವ ವೆಚ್ಚದ ಯೋಜನೆಗಳ ಭಾಗವಾಗಿ ನೀರು ಮತ್ತು ಶೌಚಾಲಯ ಸಂಬಂಧಿತ ವ್ಯವಸ್ಥೆಗಳ ಅಧಿಕೃತ ಅಭಿವೃದ್ಧಿಗೆ ನೆರವಿನ ಮೊತ್ತ |
| 6.ಬಿ | ನೀರು ಮತ್ತು ಶೌಚಾಲಯ ನಿರ್ವಹಣೆಯನ್ನು ಸುಧಾರಿಸುವಲ್ಲಿ ಸ್ಥಳೀಯ ಸಮುದಾಯಗಳ ಭಾಗವಹಿಸುವಿಕೆಗೆ ನೆರವು ನೀಡಿ ಮತ್ತು ಸದೃಢಗೊಳಿಸಿ | 6.ಬಿ.1. | ನೀರು ಮತ್ತು ಶೌಚಾಲಯ ನಿರ್ವಹಣೆಗಾಗಿ ಸ್ಥಳೀಯ ಸಮುದಾಯದ ಭಾಗವಹಿಸುವಿಕೆಗಾಗಿ ಸಜ್ಜಿತವಿರುವ ಮತ್ತು ಕಾರ್ಯಾಚರಣೆಯ ನೀತಿಗಳು ಮತ್ತು ವಿಧಿವಿಧಾನಗಳನ್ನು ಹೊಂದಿರುವ ಸ್ಥಳೀಯ ಆಡಳಿತ ಘಟಕಗಳ ಪ್ರಮಾಣ. |

**ವಿವರಣೆ**

ಎಲ್ಲರಿಗೂ ಶುದ್ಧ ಕುಡಿಯುವ ನೀರು ಮತ್ತು ಶೌಚಾಲಯವನ್ನು ಖಾತ್ರಿಪಡಿಸುವುದು ಮತ್ತು ಸುಸ್ಥಿರಗೊಳಿಸುವುದು ಈ ಗುರಿಯ ಉದ್ದೇಶ. ಅಶುದ್ಧ ನೀರಿನಿಂದಲೇ ಅತಿಸಾರ, ಕಾಲರಾ ಮತ್ತು ಮಲೇರಿಯಾದಂತಹ ಕಾಯಿಲೆಗಳು ಹರಡುತ್ತವೆ. ಯುನಿಸೆಫ್ ವರದಿಗಳ ಪ್ರಕಾರ ದೇಶದಲ್ಲಿ ಪ್ರತಿವರ್ಷ ಸುಮಾರು 6 ಲಕ್ಷ ಐದು ವರ್ಷದೊಳಗಿನ ಮಕ್ಕಳು ಸಾಯುತ್ತಿದ್ದಾರೆ ಮತ್ತು ಇದಕ್ಕೆ ಮುಖ್ಯ ಕಾರಣ ಶುದ್ಧ ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ ಲಭ್ಯವಿಲ್ಲದಿರುವುದು.

ಒಂದು ಅಂದಾಜಿನ ಪ್ರಕಾರ ಪ್ರತಿ ವರ್ಷ ಭಾರತದಲ್ಲಿ ಸುಮಾರು 3.77 ಕೋಟಿ ಜನರು ನೀರು ಸಂಬಂಧಿತ ಕಾಯಿಲೆಗಳಿಂದ ಬಳಲುತ್ತಾರೆ. ಅತಿಸಾರ ಒಂದರಿಂದಲೇ ಪ್ರತಿ ವರ್ಷ ಭಾರತದಲ್ಲಿ 15 ಲಕ್ಷ ಮಕ್ಕಳ ಮರಣ ಹೊಂದುತ್ತಿದ್ದಾರೆ.

2011ರ ಜನಗಣತಿಯ ಪ್ರಕಾರ ದಕ್ಷಿಣ ಭಾರತದ ರಾಜ್ಯಗಳಲ್ಲಿ ಶುದ್ಧ ಕುಡಿಯುವ ನೀರು ಲಭ್ಯವಿರುವ ಮತ್ತು ಶೌಚಾಲಯವನ್ನು ಹೊಂದಿದ ಕುಟುಂಬಗಳ ಪ್ರಮಾಣ ಈ ರೀತಿಯಾಗಿದೆ.

| ವಿಷಯ | ಕರ್ನಾಟಕ | ಆಂಧ್ರಪ್ರದೇಶ | ಕೇರಳ | ತಮಿಳುನಾಡು | ಪುದುಚೇರಿ | ಭಾರತ |
|---|---|---|---|---|---|---|
| ಸುರಕ್ಷಿತ ಕುಡಿಯುವ ನೀರಿನ ಲಭ್ಯತೆಯನ್ನು ಹೊಂದಿರುವ ಕುಟುಂಬಗಳು (%) | 87.5 | 90.5 | 33.5 | 92.5 | 97.8 | 85.5 |
| ಶೌಚಾಲಯ ವ್ಯವಸ್ಥೆಯನ್ನು ಹೊಂದಿರುವ ಕುಟುಂಬಗಳು (%) | 51.2 | 49.6 | 95.2 | 47.3 | 68.4 | 46.9 |

ಭಾರತದಲ್ಲಿ ಶೇಕಡಾ 85ಕ್ಕೂ ಹೆಚ್ಚು ಜನರಿಗೆ ಸುರಕ್ಷಿತ ಕುಡಿಯುವ ನೀರಿನ ಲಭ್ಯತೆಯಿದ್ದರೂ ಸಹ ನೀರಿನ ಕಾರಣಗಳಿಂದ ಉಂಟಾಗುವ ರೋಗಗಳಿಂದ ಮರಣ ಹೊಂದುತ್ತಿರುವವರ ಪ್ರಮಾಣ ದೇಶದಲ್ಲಿ ಹೆಚ್ಚಿದೆ ಮತ್ತು ನೀರಿನ ಲಭ್ಯತೆಯ ಪ್ರಮಾಣದ ಬಗ್ಗೆ ಹೆಚ್ಚಿನ ಮಾಹಿತಿಯಿಲ್ಲ.

ರಾಜ್ಯದಲ್ಲಿ ಸುಮಾರು ಅರ್ಧದಷ್ಟು ಕುಟುಂಬಗಳಲ್ಲಿ ಮಾತ್ರ ಶೌಚಾಲಯ ವ್ಯವಸ್ಥೆಯಿದೆ. ಆದರೆ ಇವುಗಳಲ್ಲಿ ಬಳಸಲ್ಪಡುತ್ತಿರುವ ಶೌಚಾಲಯಗಳೆಷ್ಟು ಎಂಬುದರ ಕುರಿತು ಸರಿಯಾದ ಮಾಹಿತಿ ಇಲ್ಲ.

ರಾಜ್ಯದ ಅನೇಕ ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರು ಮತ್ತು ಶೌಚಾಲಯ (ಅದರಲ್ಲೂ ಹೆಣ್ಣುಮಕ್ಕಳ ಪ್ರತ್ಯೇಕ ಶೌಚಾಲಯ) ಗಳ ವ್ಯವಸ್ಥೆಯಿಲ್ಲ. ಶೌಚಾಲಯವಿದ್ದರೂ ಸಹ ಅವು ಬಳಸಲು ಯೋಗ್ಯವಾಗಿಲ್ಲ. ಬಹುತೇಕ ಹದಿಹರೆಯದ ಹೆಣ್ಣುಮಕ್ಕಳು ಶಾಲೆ ತೊರೆಯುವುದಕ್ಕೆ ಇದು ಪ್ರಮುಖ ಕಾರಣವಾಗಿದೆ. ಹೆಚ್ಚುತ್ತಿರುವ ನಗರೀಕರಣ, ಕೈಗಾರಿಕೀಕರಣದಿಂದಾಗಿ ಕುಡಿಯುವ ನೀರಿನ ಮೂಲಗಳು ಕಲುಷಿತವಾಗುತ್ತಿವೆ. ಕಾರ್ಖಾನೆಗಳು ಹೊರಬಿಡುತ್ತಿರುವ ರಾಸಾಯನಿಕಗಳು ಕುಡಿಯುವ ನೀರಿನ ಮೂಲಗಳಿಗೆ ಸೇರಿ ಅನೇಕ ರೋಗಗಳಿಗೆ ಕಾರಣವಾಗುತ್ತಿದೆ.



## ನೀವು ಮಾಡಬಹುದಾದದ್ದು

- ನಿಮ್ಮ ಸಮುದಾಯ, ಗ್ರಾಮದ ಜನರಿಗೆ ಬಯಲು ಶೌಚದಿಂದಾಗುವ ದುಷ್ಪರಿಣಾಮಗಳ ಕುರಿತು ಮತ್ತು ಶೌಚಾಲಯ ನಿರ್ಮಿಸಿಕೊಳ್ಳಲು ಸರ್ಕಾರ ನೀಡುವ ಧನಸಹಾಯದ ಕುರಿತು ಮಾಹಿತಿ ನೀಡಿ.
- ಕುಡಿಯುವ ನೀರಿನ ಮೂಲಗಳು ಕಲುಷಿತವಾಗದಂತೆ ಎಚ್ಚರವಹಿಸುವುದರ ಜೊತೆಗೆ ನೀರಿನ ಸಮರ್ಥ ಬಳಕೆ ಮತ್ತು ನಿರ್ವಹಣೆಯನ್ನು ಮಾಡಿ. ಜಲ, ಶೌಚಾಲಯ, ಸ್ವಚ್ಛತೆ ಹಾಗು ಕೈತೊಳೆಯುವ ಆಂದೋಲನ ಇವೇ ಮೊದಲಾದ ಸ್ವಚ್ಛತೆಯ ಕುರಿತು ಜಾಗೃತಿ ಮೂಡಿಸುವ ಆಂದೋಲನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಮತ್ತು ತಮ್ಮ ಕುಟುಂಬ, ಸ್ನೇಹಿತರಿಗೂ ಇಂತಹವುಗಳಲ್ಲಿ ಭಾಗವಹಿಸಲು ಪ್ರೋತ್ಸಾಯಿಸಿ.
- ನಿಮ್ಮ ಸಮುದಾಯಗಳು ವಾಸಿಸುವ ಸ್ಥಳಗಳ ಸುತ್ತಮುತ್ತ ಇರಬಹುದಾದ ಕಾರ್ಖಾನೆಗಳು ತಮ್ಮ ತ್ಯಾಜ್ಯವನ್ನು ನೇರವಾಗಿ ಕೆರೆ, ಕುಂಟೆ, ನದಿ ಮೊದಲಾದ ಜಲಾಗಾರಗಳಿಗೆ ಬಿಡುತ್ತಿದ್ದಲ್ಲಿ, ಅಥವಾ ಗುಟ್ಟಾಗಿ ಭೂಗರ್ಭಕ್ಕೆ ಸೇರಿಸುವ ಪ್ರಯತ್ನಗಳನ್ನು ಮಾಡುತ್ತಿದ್ದಲ್ಲಿ ಅದನ್ನು ತಡೆಯಲು ತಿಳಿಸಿ ಮತ್ತು ಸಂಬಂಧಿತರಿಗೆ ದೂರು ನೀಡಿ.
- ಎಲ್ಲ ರೀತಿಯ ತ್ಯಾಜ್ಯಗಳನ್ನು, ಗ್ರಾಮಸಾರವನ್ನೂ ಸೇರಿಸಿಕೊಂಡು ಶುದ್ಧೀಕರಿಸಿಯೇ, ಸಾಧ್ಯವಾದಷ್ಟೂ ಮರುಬಳಕೆಗೆ ಯೋಗ್ಯವಾಗಿರುವಷ್ಟು ಶುದ್ಧ ಮಾಡಿಯೇ ಹೊರಬಿಡುವ ವ್ಯವಸ್ಥೆ ಇದೆಯೇ ಎಂದು ಪರೀಕ್ಷಿಸಿ.
- ನಿಮ್ಮ ಸುತ್ತಮುತ್ತಲಿರುವ ಜಲಾಗಾರಗಳು, ಎಷ್ಟೇ ಸಣ್ಣದಾಗಿರಲಿ ಅಥವಾ ದೊಡ್ಡದಾಗಿರಲಿ, ಅದನ್ನು ಶುದ್ಧವಾಗಿರಿಸಿಕೊಳ್ಳುವ ಯತ್ನವನ್ನು ಮಾಡಲೇಬೇಕು. ಜಲಾನಯದ ಪ್ರದೇಶಗಳನ್ನು ರಕ್ಷಿಸಬೇಕು. ಮುಖ್ಯವಾಗಿ ಕಾಲಕಾಲಕ್ಕೆ ಅವನ್ನು ಹೂಳು ತೆಗೆದು ಶುದ್ಧ ಮಾಡುವ ಮತ್ತು ನೀರು ಬರುವ ಕಾಲುವೆಗಳನ್ನು ಒತ್ತುವರಿಯಾಗದಂತೆ ರಕ್ಷಿಸಿಕೊಳ್ಳುವ ಜವಾಬ್ದಾರಿ ಸ್ಥಳೀಯ ಸರ್ಕಾರಗಳದ್ದು.
- ಎಲ್ಲ ಸಮುದಾಯಗಳು, ಮನೆಗಳು ಆದಷ್ಟೂ ಮಳೆನೀರು ಕೊಯ್ಲು ಮಾಡುವ ಪದ್ಧತಿಯನ್ನು ರೂಢಿಸಿಕೊಳ್ಳುವುದನ್ನು ಪ್ರಚಾರ ಮಾಡಿ.

## ಸವಾಲುಗಳು



ಶುದ್ಧ ನೀರಿನ ಉಳಿವು, ಅಂತರ್ಜಲ ಬಳಕೆ ಇವೇ ಮೊದಲಾದವುಗಳು ಗಣಿಗಾರಿಕೆ, ಕೈಗಾರಿಕೆಗಳಿಂದ ಹೆಚ್ಚಿನ ಹಾನಿಗೊಳಗಾಗುವುದರಿಂದ ಇಂತಹವುಗಳ ವಿರುದ್ಧ ಬಹು ದೊಡ್ಡ ಆಂದೋಲನವನ್ನು ನಡೆಸುವುದು ಎಲ್ಲರೂ ಒಟ್ಟಾಗಿ ಕೈಜೋಡಿಸಿದಾಗ ಮಾತ್ರ ಸಾಧ್ಯ.

ಶೌಚಾಲಯ ಬಳಕೆಯು ಜನರ ಮನೋಭಾವವನ್ನು ಅವಲಂಬಿಸಿರುವುದರಿಂದ ಅವರಲ್ಲಿ ಜಾಗೃತಿ ಮೂಡಿಸಿ ಮನಸ್ಸನ್ನು ಪರಿವರ್ತನೆಗೊಳಿಸುವುದು ದೀರ್ಘಕಾಲಿಕ ಕೆಲಸ.

**ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಸುಸ್ಥಿರ ಅಭಿವೃದ್ಧಿ ಗುರಿ 6 ಅರ್ಥ ಮಾಡಿಕೊಳ್ಳಲು ಓದಬೇಕಿರುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989ರ ಪರಿಚ್ಛೇದಗಳು**

| ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ | ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ |
|---|---|---|---|
| 1 | ಮಕ್ಕಳೆಂದರೆ 18 ವರ್ಷದೊಳಗಿನವರು | 2 | ಮಕ್ಕಳ ನಡುವೆ ತಾರತಮ್ಯ/ಭೇದಭಾವ ಇರಬಾರದು/ಮಾಡಬಾರದು |
| 3 | ಎಲ್ಲ ನಿರ್ಧಾರಗಳು ಮಕ್ಕಳ ಹಿತದೃಷ್ಟಿಯಿಂದಲೇ ಆಗಬೇಕು | 4 | ಮಕ್ಕಳ ಹಕ್ಕುಗಳ ಜಾರಿಗೆ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು |

| | | | |
|---|---|---|---|
| 6 | ಎಲ್ಲ ಮಕ್ಕಳಿಗೆ ಜೀವಿಸುವ ಹಕ್ಕು ಇದೆ | 12 | ಮಕ್ಕಳಿಗೆ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ ಇದೆ |
| 13 | ಮಕ್ಕಳಿಗೆ ವಿವಿಧ ಮೂಲಗಳಿಂದ ಮಾಹಿತಿ ಹೊಂದುವ ಸ್ವಾತಂತ್ರ್ಯ | 15 | ಮಕ್ಕಳಿಗೂ ಸಂಘಟಿತರಾಗಿರುವ ಹಕ್ಕಿದೆ |
| 16 | ಮಕ್ಕಳ ಖಾಸಗೀ ಬದುಕಿನ ಮೇಲೆ ಯಾರೂ ದಾಳಿ ಮಾಡುವಂತಿಲ್ಲ | 17 | ಮಕ್ಕಳಿಗೆ ಸೂಕ್ತವಾದ ಮಾಹಿತಿ ನೀಡುವ ಜವಾಬ್ದಾರಿ ಮಾಧ್ಯಮಗಳಿಗಿದೆ. |
| 22 | ನಿರಾಶ್ರಿತರಾದ ಮಕ್ಕಳಿಗೆ ಆದ್ಯತೆಯಿಂದ ರಕ್ಷಣೆ ನೀಡಬೇಕು | 23 | ಅಂಗವಿಕಲತೆಯಿರುವ ಮಕ್ಕಳಿಗೆ ರಕ್ಷಣೆ ನೀಡಬೇಕು |
| 24 | ಎಲ್ಲ ಮಕ್ಕಳಿಗೆ ಮೂಲ ಸೇವೆಗಳನ್ನು ಒದಗಿಸಲೇಬೇಕು. | 27 | ಎಲ್ಲ ಮಕ್ಕಳಿಗೆ ಸೂಕ್ತ ಜೀವನ ಮಟ್ಟ ದೊರೆಯಬೇಕು |
| 28 | ಎಲ್ಲ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕು ಇದೆ | 29 | ಎಲ್ಲ ಮಕ್ಕಳಿಗೆ ತಾರತಮ್ಯವಿಲ್ಲದೆ ಶಿಕ್ಷಣ ಪಡೆಯುವ ಹಕ್ಕು ಇದೆ. |
| 32 | ಮಕ್ಕಳ ಮೇಲೆ ಆರ್ಥಿಕ ಶೋಷಣೆ ನಿಲ್ಲಬೇಕು. ಮಕ್ಕಳನ್ನು ದುಡಿಯಲು ನೇಮಿಸಬಾರದು, ನೇಮಿಸಿಕೊಳ್ಳಬಾರದು | 34 | ಮಕ್ಕಳ ಮೇಲೆ ಲೈಂಗಿಕ ಶೋಷಣೆ / ದಾಳಿ ಆಗದಂತೆ ಎಲ್ಲೆಡೆ ರಕ್ಷಿಸಬೇಕು |
| 36 | ಮಕ್ಕಳನ್ನು ಯಾವುದೇ ರೀತಿಯ ಶೋಷಣೆಗಳ ವಿರುದ್ಧ ರಕ್ಷಿಸುವುದು ಸರ್ಕಾರ ಮತ್ತು ಸಮಾಜದ ಜವಾಬ್ದಾರಿ | 38 | ಯುದ್ಧ, ಸಶಸ್ತ್ರ ಸಂಘರ್ಷಗಳಾದಲ್ಲಿ ಮಕ್ಕಳಿಗೆ ಆದ್ಯತೆಯಿಂದ ರಕ್ಷಣೆ ನೀಡಬೇಕು |

## ಭಾರತ/ ರಾಜ್ಯ ಸರ್ಕಾರದ ಕ್ರಮಗಳು

| ಉಸ್ತುವಾರಿ ಸಚಿವಾಲಯ | ಕೇಂದ್ರ/ರಾಜ್ಯ ಸರ್ಕಾರದ ಯೋಜನೆಗಳು | ಸಂಬಂಧಿತ ಕ್ರಮಗಳು | ಇತರ ಸಂಬಂಧಿತ ಸಚಿವಾಲಯಗಳು/ ಇಲಾಖೆಗಳು |
|---|---|---|---|
| ಜಲಸಂಪನ್ಮೂಲ ಇಲಾಖೆ | 1. ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆ<br>2. ನಿರ್ಮಲ ಭಾರತ ಅಭಿಯಾನ<br>3. ಪ್ರಧಾನ ಮಂತ್ರಿ ಕೃಷಿ ಸಿಂಚಯೀ ಯೋಜನೆ<br>4. ರಾಷ್ಟ್ರೀಯ ನದಿ ಸಂರಕ್ಷಣಾ ಯೋಜನೆ | 1. ನಮಾಮಿ ಗಂಗೆ – ಸಮಗ್ರ ಗಂಗೆ ರಕ್ಷಿಸಿ ಆಂದೋಲನ<br>2. ನದಿ ಜೋಡಣೆ ಯೋಜನೆ | • ಕುಡಿಯುವ ನೀರು ಮತ್ತು ಶೌಚಾಲಯ<br>• ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ<br>• ಕೃಷಿ ಇಲಾಖೆ<br>• ಭೂ ಸಂಪನ್ಮೂಲ ಇಲಾಖೆ<br>• ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ |

7 AFFORDABLE AND CLEAN ENERGY

# ಗುರಿ 7

## ಕೈಗೆಟುಕಬಹುದಾದ ಮತ್ತು ಶುದ್ಧ ಇಂಧನ ಶಕ್ತಿ

### ಎಲ್ಲರಿಗೂ ಕೈಗೆಟುಕಬಲ್ಲ, ವಿಶ್ವಾಸಾರ್ಹ, ಸುಸ್ಥಿರ ಮತ್ತು ಆಧುನಿಕ ಇಂಧನದ ಲಭ್ಯತೆಯನ್ನು ಖಾತ್ರಿಗೊಳಿಸಿ

| | ಲಕ್ಷ್ಯಗಳು | | ಸೂಚಕಗಳು |
|---|---|---|---|
| 7.1 | 2030ರೊಳಗೆ, ಕೈಗೆಟುಕಬಹುದಾದ, ವಿಶ್ವಾಸಾರ್ಹ ಮತ್ತು ಆಧುನಿಕ ಇಂಧನ ಶಕ್ತಿ ಸೇವೆಗಳು ಎಲ್ಲರಿಗೂ ದೊರಕುವುದನ್ನು ಖಾತ್ರಿಪಡಿಸಿ | 7.1.1. | ವಿದ್ಯುಚ್ಛಕ್ತಿಯ ಲಭ್ಯತೆಯಿರುವ ಜನಸಂಖ್ಯೆಯ ಪ್ರಮಾಣ  |
| | | 7.1.2. | ಶುದ್ಧ ಇಂಧನ ಮತ್ತು ತಂತ್ರಜ್ಞಾನವನ್ನು ಪ್ರಾಥಮಿಕವಾಗಿ ಅವಲಂಬಿಸಿರುವ ಜನಸಂಖ್ಯೆಯ ಪ್ರಮಾಣ |
| 7.2 | 2030ರೊಳಗೆ, ಜಾಗತಿಕವಾಗಿ ವಿದ್ಯುಚ್ಛಕ್ತಿ ಜನಕಗಳ ಇಂಧನಗಳಲ್ಲಿ ನವೀಕರಿಸಬಹುದಾದ ಶಕ್ತಿಯ ಅಂಶವನ್ನು ಗಮನಾರ್ಹವಾಗಿ ಹೆಚ್ಚಿಸಿ | 7.2.1. | ಅಂತಿಮ ಇಂಧನ ಬಳಕೆಯ ಪ್ರಮಾಣದಲ್ಲಿ ನವೀಕರಿಸಿದ ಇಂಧನದ ಪಾಲು |
| 7.3 | 2030ರೊಳಗೆ, ವಿದ್ಯುಚ್ಛಕ್ತಿಯ ದಕ್ಷತೆಯಲ್ಲಿ ಜಾಗತಿಕ ಸುಧಾರಣಾ ಮಟ್ಟವನ್ನು ದ್ವಿಗುಣಗೊಳಿಸಿ | 7.3.1. | ಇಂಧನದ ತೀವ್ರತೆಯನ್ನು ಪ್ರಾಥಮಿಕ ಇಂಧನ ಮತ್ತು ನಿವ್ವಳ ಆಂತರಿಕ ಉತ್ಪನ್ನಗಳಲ್ಲಿ (ಜಿಡಿಪಿ) ಅಳೆಯುವುದು |
| 7.ಎ | 2030ರೊಳಗೆ, ನವೀಕರಿಸಬಹುದಾದ ಶಕ್ತಿ, ಶಕ್ತಿಯ ದಕ್ಷತೆ ಮತ್ತು ಆಧುನಿಕ ಮತ್ತು ಶುದ್ಧ ಜೀವ್ಯವಶೇಷ–ಇಂಧನ ತಂತ್ರಜ್ಞಾನವನ್ನು ಒಳಗೊಂಡ ಶುದ್ಧ ವಿದ್ಯುಚ್ಛಕ್ತಿ ಸಂಶೋಧನೆ ಮತ್ತು ತಂತ್ರಜ್ಞಾನದ ಲಭ್ಯತೆಗಾಗಿ ಹೆಚ್ಚಿನ ಅಂತಾರಾಷ್ಟ್ರೀಯ ಸಹಕಾರ ಹೆಚ್ಚಿಸಿ ಮತ್ತು ಶಕ್ತಿಗಾಗಿ ಮೂಲಸೌಕರ್ಯಗಳು ಮತ್ತು ಶಕ್ತಿ ತಂತ್ರಜ್ಞಾನಕ್ಕಾಗಿ ಹೆಚ್ಚಿನ ಹೂಡಿಕೆಯನ್ನು ಉತ್ತೇಜಿಸಿ | 7.ಎ.1. | 100 ಬಿಲಿಯನ್ (10,000 ಕೋಟಿ) ಅಮೇರಿಕನ್ ಡಾಲರುಗಳನ್ನು ನೀಡುವ ಗುರಿಯ ಬದ್ಧತೆಯನ್ನು ನಿಜ ಮಾಡಲು 2020ರಿಂದ ಪ್ರತಿ ವರ್ಷವೂ ಸಂಗ್ರಹಿಸಲ್ಪಡುವ ಒಟ್ಟು ಮೊತ್ತ. |
| 7.ಬಿ | 2030ರೊಳಗೆ, ಅಭಿವೃದ್ಧಿಶೀಲ ದೇಶಗಳಲ್ಲಿ ಅದರಲ್ಲೂ ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳು, ಚಿಕ್ಕ ದ್ವೀಪ ಅಭಿವೃದ್ಧಿಪರ ದೇಶಗಳು ಮತ್ತು ಭೂಆವೃತ್ತ ಅಭಿವೃದ್ಧಿಶೀಲ ದೇಶಗಳಿಗೆ ಅವುಗಳ ಬೆಂಬಲ ಕಾರ್ಯಕ್ರಮಗಳಿಗೆ ಅನುಗುಣವಾದ ರೀತಿಯಲ್ಲಿ ನವೀನ ಮತ್ತು ಸುಸ್ಥಿರ ಶಕ್ತಿ ಸೇವೆಗಳ ಮೂಲಸೌಕರ್ಯಗಳನ್ನು ವಿಸ್ತರಿಸಿ ತಂತ್ರಜ್ಞಾನವನ್ನು ಉನ್ನತೀಕರಿಸಿ | 7.ಬಿ.1. | ನಿವ್ವಳ ಆಂತರಿಕ ಉತ್ಪನ್ನಗಳ ಶೇಕಡಾವಾರು ಪ್ರಮಾಣದಲ್ಲಿ ಇಂಧನ ಸಾಮರ್ಥ್ಯಗಳಿಗೆ ಹೂಡುವುದು ಮತ್ತು ಸುಸ್ಥಿರ ಅಭಿವೃದ್ಧಿಯ ಸೇವೆಗಳಿಗಾಗಿ ಮೂಲಸೌಲಭ್ಯಗಳು ಮತ್ತು ತಾಂತ್ರಿಕತೆಗಾಗಿ ವಿದೇಶಿ ನೇರ ಬಂಡವಾಳದ ಮೊತ್ತವನ್ನು ಆರ್ಥಿಕವಾಗಿ ವರ್ಗಾಯಿಸುವುದು |

## ವಿವರಣೆ

ಬದಲಾಗುತ್ತಿರುವ ಜೀವನ ಶೈಲಿ ಮತ್ತು ಹೆಚ್ಚುತ್ತಿರುವ ತಂತ್ರಜ್ಞಾನದಿಂದಾಗಿ ಪ್ರಸ್ತುತ ಇಂಧನ ಶಕ್ತಿಯ ಅವಶ್ಯಕತೆ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ವಿದ್ಯುಚ್ಛಕ್ತಿಯಂತಹ ಇಂಧನಕ್ಕೆ ಬಹುತೇಕ ನಗರ ಗ್ರಾಮೀಣ ಪ್ರದೇಶಗಳಲ್ಲಿ ಬೇಡಿಕೆ ಎಲ್ಲರಿಂದಲೂ ಇರುತ್ತದೆ. ಬೇಡಿಕೆ ಹೆಚ್ಚಿರುವುದು ಮತ್ತು ಉತ್ಪಾದನೆ ಕಡಿಮೆಯಿರುವುದು ವಿದ್ಯುತ್‌ನ ವಿಚಾರದಲ್ಲಿ ವಾಸ್ತವ. ನಮ್ಮಲ್ಲಿ ಜಲಸ್ಥಾವರಗಳಿಂದ ಸಾಕಷ್ಟು (13.5%) ವಿದ್ಯುತ್ತನ್ನು ಉತ್ಪಾದಿಸುತ್ತಿರುವುದರಿಂದ ಮಳೆಯ ಕೊರತೆಯಿಂದಾಗಿ ಆ ಸ್ಥಾವರಗಳಿಂದ ಪೂರ್ಣ ಪ್ರಮಾಣದ ವಿದ್ಯುತ್ ಉತ್ಪಾದನೆ ಸಾಧ್ಯವಾಗುತ್ತಿಲ್ಲ ಜೊತೆಗೆ ವಿದ್ಯುತ್ತಿನ ಪ್ರಸರಣಾ ನಷ್ಟವೂ ಹೆಚ್ಚಿದೆ. ಹೊಸ ಸ್ಥಾವರಗಳನ್ನು ನಿರ್ಮಿಸಲು ಪರಿಸರ ನಾಶವೂ ಸೇರಿದಂತೆ ಹಲವಾರು ಅಡಚಣೆಗಳು. ಕಲ್ಲಿದ್ದಲು ಸ್ಥಾವರಕ್ಕೆ ಕಲ್ಲಿದ್ದಲು ಸಾಗಣೆಯ ವೆಚ್ಚವೇ ಹೆಚ್ಚು. ಹಾಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಹಳ ಹಿಂದಿನಿಂದಲೇ ಪರ್ಯಾಯ ಇಂಧನಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಾ ಬಂದಿರುವುದರ ಜೊತೆಗೆ ಸೌರ ಶಕ್ತಿ ಮತ್ತು ಪವನ ಶಕ್ತಿಗಳಿಂದಲೂ ಸಹ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ವಿದ್ಯುತ್ ಉತ್ಪಾದನೆ ಮಾಡುತ್ತಿವೆ. ಆದರೂ ಸಹ ಇನ್ನೂ ಗ್ರಾಮೀಣ ಪ್ರದೇಶದಲ್ಲಿ, ಅದರಲ್ಲೂ ಬೇಸಿಗೆಯಲ್ಲಿ ವಿದ್ಯುತ್ ಕಡಿತ ಹೆಚ್ಚಿರುತ್ತದೆ. ಈ ವಿದ್ಯುತ್ ಕಡಿತದಿಂದಾಗಿ ರೈತರ ಜಮೀನುಗಳಿಗೆ ನೀರು ಹಾಯಿಸಲು ಬೇಕಾದ ವಿದ್ಯುತ್ ಅಭಾವ ಒಂದೆಡೆ, ನಗರಗಳಲ್ಲಿ ಕಾರ್ಖಾನೆಗಳಲ್ಲಿ ಉತ್ಪಾದನೆಗೆ ಹೊಡೆತ ಇನ್ನೊಂದೆಡೆ. ನೀರಿಲ್ಲದೆ ಫಸಲು ಹಾನಿಯಾಗಿ ಗ್ರಾಮೀಣ ಕುಟುಂಬಗಳು ಮತ್ತವರ ಮಕ್ಕಳ ಮೇಲೆ ನೇರ ಪರಿಣಾಮ ಬೀರುತ್ತಿದೆ. ಜೊತೆಗೆ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಕೊರತೆ ಮಕ್ಕಳ ವಿದ್ಯಾಭ್ಯಾಸದ ಮೇಲೂ ನೇರ ಪರಿಣಾಮ ಬೀರುತ್ತದೆ. ಬಹುತೇಕ ಗ್ರಾಮೀಣರು ಈಗಲೂ ಬಯಲು ಶೌಚಾಲಯವನ್ನೇ ಬಳಸುತ್ತಿರುವುದು, ಅವರು ಸಂಜೆ ಕತ್ತಲಾದ ಮೇಲೆ ಅಥವಾ ಇನ್ನೂ ಸೂರ್ಯ ಮೂಡುವ ಮೊದಲು ಬಯಲಿಗೆ ಹೋಗುವುದರಿಂದ, ಈಗಲೂ ಅಲ್ಲಲ್ಲಿ ಹಾವು ಕಡಿತ, ಅತ್ಯಾಚಾರ, ಇತ್ಯಾದಿಗಳಿಗೆ ಬಲಿಯಾಗುತ್ತಿರುವುದು ವಾಸ್ತವ. ವಿದ್ಯುತ್ ಅಭಾವದಿಂದಾಗಿ ವಿದ್ಯುತ್ತನ್ನೇ ಅವಲಂಬಿಸಿದ ಉದ್ದಿಮೆಗಳು ಮತ್ತು ಸಣ್ಣ ಕೈಗಾರಿಕೆಗಳ ಉತ್ಪಾದನೆಯಲ್ಲಿ ಕುಂಠಿತವಾಗುತ್ತಿರುವುದರಿಂದ ಅದರ ಪ್ರಭಾವ ಉದ್ದಿಮೆದಾರರಿಗೆ ನಷ್ಟವಲ್ಲದೆ, ದೇಶದ ಆರ್ಥಿಕತೆಯ ಮೇಲೂ ಪರಿಣಾಮ ಬೀರುತ್ತಿರುವುದರಲ್ಲಿ ಸಂದೇಹವೇ ಇಲ್ಲ. ಇದರ ಜೊತೆಗೆ ಶಾಲೆ, ವಿದ್ಯಾರ್ಥಿಗಳ ವಸತಿನಿಲಯಗಳಲ್ಲಿ ವಿದ್ಯುತ್ ಕೊರತೆಯಿಂದಾಗುವ ತೊಂದರೆಗಳು ಹಲವಾರು. ಅನೇಕ ವರದಿಗಳು ಶೇ. 95ಕ್ಕೂ ಹೆಚ್ಚು ಮನೆಗಳು ವಿದ್ಯುತ್ ಸಂಪರ್ಕ ಹೊಂದಿರುವಾಗಿ ಹೇಳುತ್ತಿದ್ದರೂ ಸಹ ವಿದ್ಯುತ್ ಕೊರತೆಯಿಂದಾಗಿ ಆ ಮನೆಗಳು ಅದರ ಸಂಪೂರ್ಣ ಪ್ರಯೋಜನವನ್ನು ಪಡೆಯಲಾಗುತ್ತಿಲ್ಲ. ಈಗೀಗ ಸೌರ ಮತ್ತು ಪವನ ಶಕ್ತಿ ಉತ್ಪಾದನೆಗೆ ಪ್ರೋತ್ಸಾಹ ನೀಡಲಾಗುತ್ತಿದ್ದು, ಕರ್ನಾಟಕದಲ್ಲಿ ಸೌರ ವಿದ್ಯುತ್ ಘಟಕಗಳ ಸಂಖ್ಯೆ ಮತ್ತು ವ್ಯಾಪ್ತಿ ನಿಧನಿಧಾನವಾಗಿ ಹೆಚ್ಚಾಗುತ್ತಿದೆ.

ದಕ್ಷಿಣ ಭಾರತದ ರಾಜ್ಯಗಳಲ್ಲಿ ವಿದ್ಯುತ್ ಸಂಪರ್ಕ ಹೊಂದಿರುವ ಮನೆಗಳ ಶೇಕಡಾವಾರು ಪ್ರಮಾಣ (ಮೂಲ: ಎನ್.ಎಸ್.ಎಸ್.ಓ 2012) ಇಲ್ಲಿ ನೀಡಲಾಗಿದೆ. ಇದರ ಪ್ರಕಾರ ಬಹುತೇಕ ಎಲ್ಲಾ ರಾಜ್ಯಗಳಲ್ಲೂ ಸಹ ಗ್ರಾಮೀಣ ಪ್ರದೇಶಕ್ಕಿಂತ ನಗರ ಪ್ರದೇಶದಲ್ಲಿ ವಿದ್ಯುತ್ ಸಂಪರ್ಕ ಹೊಂದಿರುವ ಮನೆಗಳ ಪ್ರಮಾಣ ತುಸು ಹೆಚ್ಚು ಎನ್ನಬಹುದು.

| ರಾಜ್ಯಗಳು | ಗ್ರಾಮೀಣ | ನಗರ |
|---|---|---|
| ಕರ್ನಾಟಕ | 95.3 | 99.5 |
| ಆಂಧ್ರಪ್ರದೇಶ* | 98.3 | 99.3 |
| ಕೇರಳ | 96.7 | 98.7 |
| ತಮಿಳುನಾಡು | 97.3 | 98.8 |
| ಪುದುಚೇರಿ | 100 | 99.1 |

* **ಅವಿಭಜಿತ ಆಂಧ್ರಪ್ರದೇಶ**

## ನೀವು ಮಾಡಬಹುದಾದದ್ದು

- ವಿದ್ಯುಚ್ಛಕ್ತಿಯನ್ನು ಅವಶ್ಯವಿದ್ದಲ್ಲಿ ಮಾತ್ರವೇ ಬಳಸುವುದರ ಮೂಲಕ ಅನವಶ್ಯಕ ಬಳಕೆಯನ್ನು ನಿಲ್ಲಿಸಿ. ವಿದ್ಯುತ್ ಉಪಕರಣಗಳನ್ನು ಕೊಳ್ಳುವಾಗ ಅದರ ಮೇಲೆ 'ಸ್ಟಾರ್ ಲೇಬಲ್' ಇರುವುದನ್ನು ಗಮನಿಸಿ, ಆದಷ್ಟು ಹೆಚ್ಚಿನ ಸ್ಟಾರ್‌ಗಳು ಇರುವ ಉಪಕರಣಗಳನ್ನೇ ತೆಗೆದುಕೊಳ್ಳಿ
- ಸಾರ್ವಜನಿಕ ವಿದ್ಯುದೀಕರಣ ವ್ಯವಸ್ಥೆಗಳನ್ನು ಮಾಡುವಾಗ ಗುಣಮಟ್ಟದ ಉಪಕರಣಗಳನ್ನು ಬಳಸಲು ಸಂಬಂಧಿಸಿದ ಗುತ್ತಿಗೆದಾರರಿಗೆ ತಾಕೀತು ಮಾಡಿ.
- ಪರ್ಯಾಯ ಶಕ್ತಿಯ ಮೂಲವಾದ ಸೌರಶಕ್ತಿ ಇಂಧನವನ್ನು ಮನೆಗಳಿಗೆ ಬಳಸಲು ಪ್ರಯತ್ನಿಸಿ ಮತ್ತು ಇತರರನ್ನೂ ಪ್ರೋತ್ಸಾಹಿಸಿ.
- ಹಗಲು ಹೊತ್ತು ಬೀದಿ ದೀಪಗಳು ಉರಿಯುತ್ತಿದ್ದಲ್ಲಿ ವಿದ್ಯುತ್ ಇಲಾಖೆಗೆ ಅಥವಾ ಸ್ಥಳೀಯ ಆಡಳಿತಕ್ಕೆ ಮಾಹಿತಿ ನೀಡಿ.

## ಸವಾಲುಗಳು

- ದೈನಂದಿನ ಬಹುತೇಕ ಎಲ್ಲಾ ಕಾರ್ಯಗಳಿಗೂ ಸಹ ನಾವು ವಿದ್ಯುತ್ತನ್ನು ಅವಲಂಭಿಸಿರುವುದರಿಂದ ಇದರ ಬಳಕೆಯನ್ನು ನಿಯಂತ್ರಿಸುವುದು ತುಸು ಕಷ್ಟಕರ.
- ಪರ್ಯಾಯ ಇಂಧನಕ್ಕೆ ಇನ್ನೂ ವ್ಯಾಪಕವಾದ ಪ್ರಚಾರ ಸಿಕ್ಕಿಲ್ಲ ಮತ್ತು ಅದರ ಉತ್ಪಾದನೆಯೂ ಸಹ ಹೆಚ್ಚಿಲ್ಲದಿರುವುದರಿಂದ ವಿದ್ಯುತ್ತಿನ ಮೇಲೆಯೇ ಅವಲಂಬಿಸಬೇಕಾದ ಅನಿವಾರ್ಯತೆ.

**ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಸುಸ್ಥಿರ ಅಭಿವೃದ್ಧಿ ಗುರಿ 7 ಅರ್ಥ ಮಾಡಿಕೊಳ್ಳಲು ಓದಬೇಕಿರುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989ರ ಪರಿಚ್ಛೇದಗಳು**

| ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ | ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ |
|---|---|---|---|
| 2 | ಮಕ್ಕಳ ನಡುವೆ ತಾರತಮ್ಯ/ಭೇದಭಾವ ಇರಬಾರದು/ಮಾಡಬಾರದು | 4 | ಮಕ್ಕಳ ಹಕ್ಕುಗಳ ಜಾರಿಗೆ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು |
| 17 | ಮಕ್ಕಳಿಗೆ ಸೂಕ್ತವಾದ ಮಾಹಿತಿ ನೀಡುವ ಜವಾಬ್ದಾರಿ ಮಾಧ್ಯಮಗಳಿಗಿದೆ. | 24 | ಎಲ್ಲ ಮಕ್ಕಳಿಗೆ ಮೂಲ ಸೇವೆಗಳನ್ನು ಒದಗಿಸಲೇಬೇಕು. |
| 27 | ಎಲ್ಲ ಮಕ್ಕಳಿಗೆ ಸೂಕ್ತ ಜೀವನ ಮಟ್ಟ ದೊರೆಯಬೇಕು | 28 | ಎಲ್ಲ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕು ಇದೆ |
| 29 | ಎಲ್ಲ ಮಕ್ಕಳಿಗೆ ತಾರತಮ್ಯವಿಲ್ಲದೆ ಶಿಕ್ಷಣ ಪಡೆಯುವ ಹಕ್ಕು ಇದೆ. | | |

## ಭಾರತ/ ರಾಜ್ಯ ಸರ್ಕಾರದ ಕ್ರಮಗಳು

| ಉಸ್ತುವಾರಿ ಸಚಿವಾಲಯ | ಕೇಂದ್ರ/ರಾಜ್ಯ ಸರ್ಕಾರದ ಯೋಜನೆಗಳು | ಸಂಬಂಧಿತ ಕ್ರಮಗಳು | ಇತರ ಸಂಬಂಧಿತ ಸಚಿವಾಲಯಗಳು/ ಇಲಾಖೆಗಳು |
|---|---|---|---|
| ಇಂಧನ ಇಲಾಖೆ | 1. ದೀನ ದಯಾಳು ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ<br>2. ರಾಷ್ಟ್ರೀಯ ಸೌರಶಕ್ತಿ ಯೋಜನೆ<br>3. ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆ<br>4. ರಾಷ್ಟ್ರೀಯ ಇಂಧನ ನೀತಿ<br>5. ನಿರಂತರ ಜ್ಯೋತಿ ಯೋಜನೆ<br>6. ಗಂಗಾ ಕಲ್ಯಾಣ ಯೋಜನೆ | • ಇಂಧನ<br>• ಹೊಸ ಮತ್ತು ನವೀಕರಿಸಬಹುದಾದ ಯೋಜನೆ<br>• ಕಲ್ಲಿದ್ದಲು<br>• ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ | • ಗ್ರಾಮೀಣಾಭಿವೃದ್ಧಿ<br>• ನಗರಾಭಿವೃದ್ಧಿ<br>• ಕೈಗಾರಿಕಾ<br>• ಕೃಷಿ<br>• ನಗರ |


8 DECENT WORK AND ECONOMIC GROWTH

# ಗುರಿ 8

## ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ

**ಎಲ್ಲರಿಗೂ ಸುಸ್ಥಿರವಾದ, ಸಮನ್ವಯ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆ, ಸಂಪೂರ್ಣ ಮತ್ತು ಉತ್ಪಾದಕ ಉದ್ಯೋಗ ಹಾಗೂ ಗೌರವಯುತವಾದ ಕೆಲಸವನ್ನು ಉತ್ತೇಜಿಸಿ**

| | ಲಕ್ಷ್ಯಗಳು | | ಸೂಚಕಗಳು |
|---|---|---|---|
| 8.1. | ರಾಷ್ಟ್ರೀಯ ಪರಿಸ್ಥಿತಿಗಳ ಪ್ರಕಾರ ತಲಾ ಆರ್ಥಿಕ ಅಭಿವೃದ್ಧಿಯನ್ನು ಉಳಿಸಿಕೊಂಡು, ಅದರಲ್ಲೂ ನಿರ್ದಿಷ್ಟವಾಗಿ, ಕನಿಷ್ಠ ಅಭಿವೃದ್ಧಿಯಾಗಿರುವ ದೇಶಗಳಲ್ಲಿ ವಾರ್ಷಿಕ ಕನಿಷ್ಠ ಶೇ.7ರಷ್ಟು ದೇಶೀಯ ಉತ್ಪನ್ನ ಬೆಳವಣಿಗೆಯನ್ನುಳಿಸಿಕೊಳ್ಳಿ | 8.1.1. | ನಿಜವಾದ ನಿವ್ವಳ ಆಂತರಿಕ ಉತ್ಪನ್ನಗಳ ತಲಾವಾರು ವಾರ್ಷಿಕ ಅಭಿವೃದ್ಧಿಯ ದರ |
| 8.2 | ಮೌಲ್ಯವರ್ಧನೆ ಮತ್ತು ಶ್ರಮಿಕ ಪ್ರಧಾನ ಕ್ಷೇತ್ರಗಳತ್ತ ಕೇಂದ್ರೀಕರಿಸುವುದನ್ನೂ ಒಳಗೊಂಡು ತಂತ್ರಜ್ಞಾನದ ಉನ್ನತೀಕರಣ ಮತ್ತು ವೈವಿಧ್ಯತೆಗೆ ಗಮನ ಕೊಡುವುದರ ಮೂಲಕ ಉನ್ನತ ಮಟ್ಟದ ಆರ್ಥಿಕ ಉತ್ಪಾದನೆಯನ್ನು ಸಾಧಿಸಿ | 8.2.1. | ನಿಜವಾದ ನಿವ್ವಳ ಆಂತರಿಕ ಉತ್ಪನ್ನಗಳ ವಾರ್ಷಿಕ ಉದ್ಯೋಗ ಹೊಂದಿರುವ ಪ್ರತಿ ವ್ಯಕ್ತಿಯ ಅಭಿವೃದ್ಧಿಯ ದರ |
| 8.3 | ಉತ್ಪಾದನಾ ಚಟುವಟಿಕೆಗಳಿಗೆ, ಗೌರವಯುತವಾದ ಉದ್ಯೋಗ ಸೃಜನೆಗೆ, ಉದ್ಯಮಶೀಲತೆಗೆ, ಸೃಜನಶೀಲತೆ ಮತ್ತು ಆವಿಷ್ಕಾರಗಳಿಗೆ ನೆರವು ನೀಡುವ ಸಲುವಾಗಿ ಅಭಿವೃದ್ಧಿ ಆಧಾರಿತ ನೀತಿಗಳನ್ನು ಉತ್ತೇಜಿಸಿ ಮತ್ತು ಆರ್ಥಿಕ ಸೇವೆಯ ಲಭ್ಯತೆಯ ಮೂಲಕವೂ ಸೇರಿದಂತೆ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳನ್ನು ಕ್ರಮಬದ್ಧಗೊಳಿಸಲು ಮತ್ತು ಬೆಳೆಸಲು ಪ್ರೋತ್ಸಾಹಿಸಿ | 8.3.1. | ಕೃಷಿಯೇತರ ವಲಯಗಳ ಉದ್ಯೋಗಗಳಲ್ಲಿ ಅನೌಪಚಾರಿಕ ಉದ್ಯೋಗಗಳ ಲಿಂಗಾವಾರು ಪ್ರಮಾಣ |
| 8.4 | 2030ರವರೆಗೂ ಬಳಕೆ ಮತ್ತು ಉತ್ಪಾದನೆ ಮತ್ತು ಜಾಗತಿಕ ಸಂಪನ್ಮೂಲ ದಕ್ಷತೆಯನ್ನು ಗಮನಾರ್ಹವಾಗಿ ವೃದ್ಧಿಸಿ ಮತ್ತು ಅಭಿವೃದ್ಧಿ ಹೊಂದಿದ ದೇಶಗಳ ಮುಂಚೂಣಿಯೊಂದಿಗೆ 10 ವರ್ಷಗಳ ಕಾರ್ಯಕ್ರಮಗಳ ಚೌಕಟ್ಟುಗಳಿಗನುಗುಣವಾಗಿ ಸುಸ್ಥಿರ ಬಳಕೆ ಮತ್ತು ಉತ್ಪಾದನೆಗಾಗಿ ಆರ್ಥಿಕ ಬೆಳವಣಿಗೆಯನ್ನು ಪರಿಸರ ವಿನಾಶದಿಂದ ಬೇರ್ಪಡಿಸುವುದಕ್ಕೆ ಪ್ರಯತ್ನಿಸಿ | 8.4.1. | ವಸ್ತುಗಳ ಬಳಕೆ, ತಲಾವಾರು ವಸ್ತುಗಳ ಬಳಕೆ ಮತ್ತು ನಿವ್ವಳ ಆಂತರಿಕ ಉತ್ಪನ್ನಗಳಾವಾರು ವಸ್ತುಗಳ ಬಳಕೆ |
| | | 8.4.2. | ಆಂತರಿಕ ವಸ್ತುಗಳ ಬಳಕೆ, ಆಂತರಿಕ ವಸ್ತುಗಳ ತಲಾವಾರು ಬಳಕೆ ಮತ್ತು ನಿವ್ವಳ ಆಂತರಿಕ ಉತ್ಪನ್ನವಾರು ಆಂತರಿಕ ವಸ್ತುಗಳ ಬಳಕೆ |

| | | | |
|---|---|---|---|
| 8.5 | 2030ರೊಳಗೆ, ಎಲ್ಲಾ ಯುವ ಜನಾಂಗ ಮತ್ತು ಅಂಗವಿಕಲ ವ್ಯಕ್ತಿಗಳೂ ಸೇರಿದಂತೆ ಎಲ್ಲಾ ಮಹಿಳೆಯರು ಮತ್ತು ಪುರುಷರಿಗೆ ಪೂರ್ಣಾವಧಿ ಮತ್ತು ಉತ್ಪನ್ನಶೀಲ ಉದ್ಯೋಗ ಹಾಗೂ ಸಮಾನ ಮೌಲ್ಯದ ಕೆಲಸಕ್ಕೆ ಸಮಾನ ವೇತನ ಸಾಧಿಸಿ | 8.5.1. | ವೃತ್ತಿವಾರು, ಲಿಂಗಾವಾರು ಮತ್ತು ವಿಕಲಾಂಗ ವ್ಯಕ್ತಿವಾರು ಪುರುಷ ಮತ್ತು ಮಹಿಳಾ ನೌಕರರ ಪ್ರತಿ ಗಂಟೆಯ ಸರಾಸರಿ ವರಮಾನ |
| | | 8.5.2. | ಲಿಂಗಾವಾರು, ವಯೋಮಾನಾವಾರು ಮತ್ತು ವಿಕಲಾಂಗ ವ್ಯಕ್ತಿವಾರು ನಿರುದ್ಯೋಗದ ದರ |
| 8.6 | 2020ರೊಳಗೆ, ಉದ್ಯೋಗ, ಶಿಕ್ಷಣ ಅಥವಾ ತರಬೇತಿಯಿಂದ ಹೊರಗಿರುವ ಯುವಜನರ ಪ್ರಮಾಣವನ್ನು ಗಣನೀಯವಾಗಿ ಕಡಿಮೆಗೊಳಿಸಿ | 8.6.1. | ಶಿಕ್ಷಣ, ಉದ್ಯೋಗ ಅಥವಾ ತರಬೇತಿಯಲ್ಲಿಲ್ಲದ ಯುವಕರ (15–24 ವರ್ಷದವರು) ಪ್ರಮಾಣ |
| 8.7 | ಬಲವಂತದ ದುಡಿಮೆ ನಿರ್ಮೂಲನೆಗೊಳಿಸಲು, ಆಧುನಿಕ ಗುಲಾಮಗಿರಿ ಮತ್ತು ಮಾನವ ಕಳ್ಳಸಾಗಾಣಿಕೆಯನ್ನು ಕೊನೆಗಾಣಿಸಿ ಮತ್ತು ಅತ್ಯಂತ ಕೆಟ್ಟ ಸ್ವರೂಪದ ಬಾಲಕಾರ್ಮಿಕ ಪದ್ಧತಿಯನ್ನು ನಿಷೇಧಿಸಿ ನಿರ್ಮೂಲನಗೊಳಿಸಲು ಹಾಗೂ ಮಕ್ಕಳನ್ನು ಸೈನಿಕರಾಗಿ ನೇಮಿಸಿ ಬಳಸುವುದನ್ನು ಕೊನೆಗಾಣಿಸಲು ತಕ್ಷಣವೇ ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡು, 2025ರೊಳಗೆ ಎಲ್ಲ ರೀತಿಯ ಬಾಲಕಾರ್ಮಿಕ ಪದ್ಧತಿಯನ್ನು ಕೊನೆಗಾಣಿಸಿ | 8.7.1. | 5–17 ವರ್ಷದ ಮಕ್ಕಳಲ್ಲಿ ಬಾಲಕಾರ್ಮಿಕರಾಗಿ ತೊಡಗಿರುವವರ ಲಿಂಗ ಮತ್ತು ವಯೋಮಾನಾವಾರು ಪ್ರಮಾಣ  |
| 8.8 | ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಿ, ವಲಸೆ ಕಾರ್ಮಿಕರು, ಅದರಲ್ಲೂ ಮಹಿಳಾ ವಲಸೆಗಾರರು ಮತ್ತು ಅನಿಶ್ಚಿತ ಉದ್ಯೋಗದಲ್ಲಿರುವವರೂ ಸೇರಿದಂತೆ ಎಲ್ಲಾ ಕಾರ್ಮಿಕರಿಗೂ ಸುರಕ್ಷಿತ ಮತ್ತು ಸುಭದ್ರ ಕೆಲಸದ ವಾತಾವರಣವನ್ನು ಅಭಿವೃದ್ಧಿಪಡಿಸಿ | 8.8.1. | ಲಿಂಗಾವಾರು, ವಲಸೆ ಸ್ಥಿತಿವಾರು ಮಾರಣಾಂತಿಕ ಮತ್ತು ಮಾರಣಾಂತಿಕವಲ್ಲದ ಔದ್ಯೋಗಿಕ ಗಾಯಗಳ ಆವರ್ತನಾ ದರ |
| | | 8.8.2. | ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಪಠ್ಯಮೂಲ ಮತ್ತು ರಾಷ್ಟ್ರೀಯ ಶಾಸನಗಳ ಆಧಾರದ ಮೇಲೆ ಕಾರ್ಮಿಕ ಹಕ್ಕುಗಳ ರಾಷ್ಟ್ರೀಯ ಅನುಸರಣೆಯಲ್ಲಿ (ಸಂಘಟಿತರಾಗುವ ಸ್ವಾತಂತ್ರ್ಯ ಮತ್ತು ಸಾಮೂಹಿಕ ಚೌಕಾಸಿ) ಲಿಂಗಾವಾರು ಮತ್ತು ವಲಸೆ ಸ್ಥಿತಿವಾರು ಹೆಚ್ಚಳ |
| 8.9 | 2030ರೊಳಗೆ, ಸ್ಥಳೀಯ ಸಂಸ್ಕೃತಿ ಮತ್ತು ಉತ್ಪನ್ನಗಳನ್ನು ಉತ್ತೇಜಿಸುವ ಮತ್ತು ಉದ್ಯೋಗಗಳನ್ನು ಸೃಷ್ಟಿಸುವ ಸುಸ್ಥಿರ ಪ್ರವಾಸೋದ್ಯಮವನ್ನು ಉತ್ತೇಜಿಸಲು ನೀತಿಗಳನ್ನು ರೂಪಿಸಿ ಜಾರಿಗೊಳಿಸಿ | 8.9.1. | ಒಟ್ಟು ಆಂತರಿಕ ನಿವ್ವಳ ಉತ್ಪನ್ನಗಳಲ್ಲಿ ಮತ್ತು ಅಭಿವೃದ್ಧಿ ದರಗಳಲ್ಲಿ ಪ್ರವಾಸೋದ್ಯಮದಿಂದಾದ ನೇರ ನಿವ್ವಳ ಆಂತರಿಕ ಉತ್ಪನ್ನಗಳ ಪ್ರಮಾಣ |
| | | 8.9.2. | ಒಟ್ಟು ಉದ್ಯೋಗಗಳಲ್ಲಿ ಮತ್ತು ಉದ್ಯೋಗಗಳ ಅಭಿವೃದ್ಧಿ ದರಗಳ ಪ್ರಮಾಣದಲ್ಲಿ ಪ್ರವಾಸೋದ್ಯಮ ವಲಯಗಳಲ್ಲಿರುವ ಲಿಂಗಾವಾರು ಉದ್ಯೋಗಗಳ ಸಂಖ್ಯೆ |

| | | | |
|---|---|---|---|
| 8.10 | ಎಲ್ಲರಿಗೂ ಹಣಕಾಸು ಬ್ಯಾಂಕ್, ವಿಮೆ ಮತ್ತು ಆರ್ಥಿಕ ಸೇವೆಗಳ ಲಭ್ಯತೆಯನ್ನು ಪ್ರೋತ್ಸಾಹಿಸಿ ವಿಸ್ತರಿಸಲು ಸ್ಥಳೀಯ ಆರ್ಥಿಕ ಸಂಸ್ಥೆಗಳ ಸಾಮರ್ಥ್ಯವನ್ನು ವೃದ್ಧಿಸಿ | 8.10.1. | ವಾಣಿಜ್ಯ ಬ್ಯಾಂಕುಗಳ ಶಾಖೆಗಳ ಸಂಖ್ಯೆ ಮತ್ತು ಪ್ರತಿ 1,00,000 ವಯಸ್ಕರರಿಗಿರುವ ಸ್ವಯಂಚಾಲಿತ ಹಣ ನೀಡುವ ಯಂತ್ರಗಳ (ಎ.ಟಿ.ಎಂ.) ಸಂಖ್ಯೆ |
| | | 8.10.2. | ಬ್ಯಾಂಕುಗಳಲ್ಲಿ ಅಥವಾ ಇತರೆ ವ್ಯಾಪಾರಿ ಸಂಸ್ಥೆಗಳಲ್ಲಿ ಅಥವಾ ಮೊಬೈಲ್ ಹಣ ಸೇವೆಯನ್ನು ಒದಗಿಸುವವರಲ್ಲಿ ಖಾತೆಯನ್ನು ಹೊಂದಿರುವ ವಯಸ್ಕರ (15 ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟವರು) ಸಂಖ್ಯೆ. |
| 8.ಎ | ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳಿಗೆ ವಾಣಿಜ್ಯ ಸಂಬಂಧಿತ ತಾಂತ್ರಿಕ ನೆರವಿಗೆ ವರ್ಧಿತ ಸಮಗ್ರ ಚೌಕಟ್ಟಿನ ಮೂಲಕವೂ ಸೇರಿದಂತೆ ಅಭಿವೃದ್ಧಿಶೀಲ ದೇಶಗಳಿಗೆ, ಅದರಲ್ಲೂ ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳಿಗೆ ವಾಣಿಜ್ಯ ಸಂಬಂಧಿತ ನೆರವನ್ನು ಹೆಚ್ಚಿಸಿ | 8.ಎ.1. | ವ್ಯಾಪಾರಿ ಬದ್ಧತೆ ಮತ್ತು ವಿತರಣೆಗಾಗಿ ನೆರವು |
| 8.ಬಿ | 2020ರೊಳಗೆ, ಯುವಜನರ ಔದ್ಯೋಗೀಕರಣಕ್ಕೆ ಜಾಗತಿಕ ಕಾರ್ಯತಂತ್ರವನ್ನು ರೂಪಿಸಿ ಕಾರ್ಯಗತಗೊಳಿಸಿ ಮತ್ತು ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಜಾಗತಿಕ ಉದ್ಯೋಗ ಒಪ್ಪಂದವನ್ನು ಜಾರಿಗೊಳಿಸಿ | 8.ಬಿ.1. | ರಾಷ್ಟ್ರೀಯ ಆಯವ್ಯಯ ಮತ್ತು ನಿವ್ವಳ ಆಂತರಿಕ ಉತ್ಪನ್ನಗಳಲ್ಲಿ ಒಟ್ಟಾರೆಯಾಗಿ ಸಾಮಾಜಿಕ ರಕ್ಷಣೆ ಮತ್ತು ಔದ್ಯೋಗಿಕ ಕಾರ್ಯಕ್ರಮಗಳಿಗೆ ಸರ್ಕಾರ ಖರ್ಚು ಮಾಡುವ ಹಣದ ಪ್ರಮಾಣ |

**ವಿವರಣೆ**

ವಿಜ್ಞಾನದ ಆವಿಷ್ಕಾರಗಳು ಹೆಚ್ಚಿದಂತೆ ಯಂತ್ರಗಳ ಬಳಕೆಯೂ ಹೆಚ್ಚಾಗಿ ಮಾನವ ಶ್ರಮಿಕ ಕೆಲಸಗಳ ಅವಶ್ಯಕತೆ ಕಡಿಮೆಯಾಗಿ ಅತಿ ಹೆಚ್ಚಿನ ನಿರುದ್ಯೋಗಕ್ಕೆ ಕಾರಣವಾದರೂ ಸಹ ಅದೇ ಸಮಯಕ್ಕೆ ಹೊಸ ಹೊಸ ಉದ್ದಿಮೆಗಳು ಬೆಳಕಿಗೆ ಬಂದು ಹೆಚ್ಚಿನ ಜನರಿಗೆ ಉದ್ಯೋಗ ನೀಡಿರುವುದೂ ಸಹ ಅಷ್ಟೇ ನಿಜ. ಆದರೆ ಭಾರತದಂಥಹ ದೇಶದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ಎಲ್ಲರಿಗೂ ಗೌರವಯುತ (ಸಮರ್ಪಕ ವೇತನದೊಂದಿಗೆ) ಕೆಲಸ ದೊರೆಯುವುದು ಕಷ್ಟಕರ ಸ್ಥಿತಿಯಲ್ಲಿದೆ. ಯಾವುದೇ ದೇಶದ ಬೆಳವಣಿಗೆಗೆ ಆ ದೇಶದ ಶ್ರಮಿಕ ವರ್ಗದ ಕೊಡುಗೆ ಅಗಾಧವಾದರೂ ಸಹ ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಲ್ಲಿ ಅಗಾಧವಾದ ವ್ಯತ್ಯಾಸಗಳಿವೆ.

ಬರ, ನೆರೆ, ಯಾಂತ್ರೀಕರಣ ಇವೇ ಹಲವಾರು ಕಾರಣಗಳಿಂದ ಗ್ರಾಮೀಣ ಪ್ರದೇಶಗಳಲ್ಲಿ ದುಡಿಮೆಯ ಅವಕಾಶ ಕಡಿಮೆಯಾಗುತ್ತಿರುವುದರಿಂದ ವಲಸೆಯ ಪ್ರಮಾಣ ಹೆಚ್ಚಾಗುತ್ತಿದೆ. ಹೀಗೆ ನಗರಕ್ಕೆ ವಲಸೆ ಬರುವ ಕುಟುಂಬಗಳ ಮಕ್ಕಳು ತಮ್ಮ ಶಿಕ್ಷಣ, ಆರೋಗ್ಯ, ರಕ್ಷಣೆ ಮತ್ತು ಭಾಗವಹಿಸುವಿಕೆಯ ಹಕ್ಕುಗಳಿಂದ ವಂಚಿತರಾಗುತ್ತಿದ್ದಾರೆ. ಇದರ ಜೊತೆಗೆ ಕಡಿಮೆ ಕೂಲಿ ಮತ್ತು ಹೆಚ್ಚಿನ ಕೆಲಸದ ಲಾಲಸೆಯಿಂದ ಮಕ್ಕಳಿಂದ ದುಡಿಸಿಕೊಳ್ಳುವುದರಿಂದ ವಯಸ್ಕರಿಗೆ ದುಡಿಮೆಯ ಅವಕಾಶ ಕಡಿಮೆಯಾಗುತ್ತಿದೆ. ರಾಜ್ಯದಲ್ಲಿ ಸುಮಾರು 1,22,138 ಮಕ್ಕಳು ಶಾಲಾಶಿಕ್ಷಣದಿಂದ ಹೊರಗಿದ್ದಾರೆ ಮತ್ತು ಇವರಲ್ಲಿ ಬಹುತೇಕ ಮಕ್ಕಳು ಬಾಲಕಾರ್ಮಿಕರಾಗಿ ದುಡಿಯುತ್ತಿದ್ದಾರೆ (www.schooleducation.org 2015).

ಮಕ್ಕಳಿಂದ ದುಡಿಸಿಕೊಳ್ಳುತ್ತಿರುವ ಅತಿ ದೊಡ್ಡ ಕ್ಷೇತ್ರ 'ಕೃಷಿ ಮತ್ತು ಕೃಷಿ ಆಧಾರಿತ ವಿವಿಧ ಕೆಲಸಗಳು ಹಾಗೂ ಉದ್ದಿಮೆಗಳು'. ಅದು ಹೊಲ ಗದ್ದೆ ತೋಟದ ಕೆಲಸಗಳು, ಕಾಡುಗಳಿಂದ ಕಿರು ಉತ್ಪನ್ನಗಳ ಸಂಗ್ರಹ ಮತ್ತು ಅವುಗಳ ವಿಂಗಡನೆ, ಹೈನುಗಾರಿಕೆ, ಕುರಿ, ಮೇಕೆ, ಹಂದಿ, ಕೋಳಿ ಸಾಕಾಣೆ, ಇತ್ಯಾದಿ ಕೆಲಸಗಳಿರಬಹುದು. ಮಕ್ಕಳನ್ನು ಜೀತಕ್ಕಿಟ್ಟುಕೊಂಡಿರುವ ಪ್ರಕರಣಗಳು ಈಗಲೂ ಆಗಾಗ್ಗೆ ಕಂಡುಬರುತ್ತದೆ. ಒಂದು ರೀತಿಯಲ್ಲಿ ಕನಿಷ್ಠ ವೇತನಕ್ಕಿಂತಲೂ ಕಡಿಮೆ ಕೂಲಿ, ಬಲವಂತದ ಕೆಲಸಗಳಂತಹ ಪ್ರಕರಣಗಳನ್ನು ಜೀತದ ಪ್ರಕರಣಗಳೆಂದೇ ಪರಿಗಣಿಸಬೇಕಾಗಿದೆ.

ಮಕ್ಕಳು ಬಾಲ್ಯದಿಂದಲೇ ದುಡಿಮೆಗೆ ತೊಡಗಿಕೊಂಡಲ್ಲಿ ಅವರ ಶಿಕ್ಷಣ, ಆರೋಗ್ಯ, ಜೀವನ ಕೌಶಲ್ಯಕ್ಕೆ ಪೆಟ್ಟು ಬೀಳುವುದಲ್ಲದೆ, ಅವರು ಅಂಗವಿಕಲರಾಗುವ ಸಾಧ್ಯತೆಗಳೂ ಅತಿ ಹೆಚ್ಚು. ಬಾಲಕಾರ್ಮಿಕ ಪದ್ಧತಿಯ ಕೆಟ್ಟ ಪರಿಣಾಮ ಅವರ ಜೀವನದುದ್ದಕ್ಕೂ (ಮಾದಕ ವಸ್ತುಗಳಿಗೆ ಬಲಿಯಾಗುವುದು, ಬಹುಬೇಗನೆ ಮದುವೆ ಮತ್ತು ಮಕ್ಕಳನ್ನು ಪಡೆಯುವುದು, ಸಾಲಗಳ ಸುಳಿಗೆ ಸಿಲುಕುವುದು, ಇತ್ಯಾದಿ) ಆಗುವುದು ಒಂದೆಡೆಯಾದರೆ, ಬಾಲಕಾರ್ಮಿಕರು ಕೌಶಲ್ಯರಹಿತರಾಗಿ ಅಥವಾ ಅರೆಬರೆ ಕೌಶಲ್ಯ ಕಲಿತವರಾಗಿ, ಮುಂದೆ ವಯಸ್ಕರಾದಾಗ ಅವರು ದೇಶಕ್ಕೆ ಒಂದು ರೀತಿಯಲ್ಲಿ ಹೊರೆಯೇ ಆಗುತ್ತಾರೆ ಮತ್ತು ಅದು ಬಹುಕಾಲ ಆವರ್ತನಗಳಲ್ಲಿ ದೇಶದ ಆರ್ಥಿಕತೆಯ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತದೆ.

ದುಡಿಮೆಗಾಗಿ ಮಕ್ಕಳನ್ನು ವಿವಿಧ ಪ್ರದೇಶಗಳಿಂದ ನಗರಗಳಿಗೆ ಸಾಗಿಸಿಕೊಂಡು ಬರುವ ಪ್ರಕರಣಗಳು 21ನೇ ಶತಮಾನದಲ್ಲೂ ನಡೆದಿರುವುದು ದುರದೃಷ್ಟಕರ. ಎಷ್ಟು ಮಕ್ಕಳು ಸಾಗಣೆಗೆ ಒಳಗಾಗಿದ್ದಾರೆ ಎಂದು ವಿವರಿಸುವುದು ಕಷ್ಟಸಾಧ್ಯ. ಸದ್ಯ ಬೆಂಗಳೂರು ನಗರಕ್ಕೆ

ದೇಶದ ಉತ್ತರ ಮತ್ತು ಪೂರ್ವ ಭಾಗಗಳಿಂದ ಮಕ್ಕಳನ್ನು ವಿವಿಧ ರೀತಿಯ ಕೆಲಸಗಳಿಗೆ ಹಚ್ಚಲು ಸಾಗಿಸಿಕೊಂಡು (ಕಳ್ಳತನದಿಂದ, ಪೋಷಕರ ಒಪ್ಪಿಗೆ ಪಡೆದು ಅಥವಾ ಪೋಷಕರಿಂದಲೋ ಕಳ್ಳತನ ಮಾಡಿದವರಿಂದಲೋ ಮಕ್ಕಳನ್ನು ಕೊಂಡು) ಬರುತ್ತಿರುವುದು ಹೆಚ್ಚಿದೆ. ಹೀಗೆ ಸಾಗಣೆಗೊಳಗಾದ ಮಕ್ಕಳನ್ನು ಪತ್ತೆ ಮಾಡಿ ರಕ್ಷಿಸುವ ಕೆಲಸವನ್ನು ಚೈಲ್ಡ್‌ಲೈನ್ 1098 ಒಳಗೊಂಡಂತೆ ಹಲವಾರು ಸ್ವಯಂಸೇವಾ ಸಂಘಟನೆಗಳು ನಡೆಸಿವೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಜಾರಿಯಲ್ಲಿರುವ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕಗಳು ಹಾಗೂ ಪೊಲೀಸರು, ಕಾರ್ಮಿಕ ಇಲಾಖೆ ದುಡಿಮೆಯಲ್ಲಿ ಬಿದ್ದಿರುವ ಮಕ್ಕಳನ್ನು ರಕ್ಷಿಸುವ ಮಹತ್ತರವಾದ ಕೆಲಸದಲ್ಲಿ ತೊಡಗಿವೆ. ಇದರೊಂದಿಗೆ ಮಕ್ಕಳನ್ನು ದುಡಿಮೆಗೋ, ಶಿಕ್ಷಣಕ್ಕೋ, ಮದುವೆಗೋ ಕರೆತರುವುದಾಗಿ ಹೇಳಿ ಲೈಂಗಿಕ ದುರುಪಯೋಗಕ್ಕೆ ಹಾಕುವವರನ್ನೂ ತಡೆದು ಕ್ರಮ ಕೈಗೊಳ್ಳುವುದು ನಡೆದಿದೆ. ನ್ಯಾಯಾಲಯದ ನಿರ್ದೇಶನದಂತೆ ಈಗ ರೈಲ್ವೆ ಪೊಲೀಸರಿಗೂ ಸಾಗಣೆಗೊಳಗಾದ ಮಕ್ಕಳನ್ನು ಪತ್ತೆ ಹಚ್ಚಿ ರಕ್ಷಿಸುವ ಹೆಚ್ಚಿನ ಹೊಣೆಯನ್ನು ವಹಿಸಲಾಗಿದೆ.

ಭಾರತದಲ್ಲಿ ಮಕ್ಕಳನ್ನು ನೇರವಾಗಿ ಸೈನ್ಯಕ್ಕೆ ಸೇರಿಸಿಕೊಳ್ಳುವಂತಹ ಪ್ರಕರಣಗಳು ಕಂಡುಬಂದಿಲ್ಲವಾದರೂ, ಭಯೋತ್ಪಾದನಾ ಸಂಘಟನೆಗಳು, ಕ್ರಾಂತಿಕಾರೀ ಸಂಘಟನೆಗಳು ಮತ್ತು ಭೂಗತ ಅಪರಾಧೀ ಜಗತ್ತು ಮಕ್ಕಳನ್ನು ಬಳಸಿಕೊಂಡಿರುವಂತಹ ಪ್ರಕರಣಗಳು ಆಗಾಗ್ಗೆ ಬೆಳಕಿಗೆ ಬಂದಿವೆ. ಹೀಗೆ ಸಿಲುಕಿರುವ ಮಕ್ಕಳನ್ನು ರಕ್ಷಿಸುವುದು ಮತ್ತು ಅವರನ್ನು ಪುನರ್ವಸತಿಗೊಳಿಸುವ ಯತ್ನಗಳು ನಡೆದಿವೆ.

ದಕ್ಷಿಣ ಭಾರತದ ರಾಜ್ಯಗಳ ಬಾಲಕಾರ್ಮಿಕರ ಸಂಖ್ಯೆಯನ್ನು ಇಲ್ಲಿ ನೀಡಲಾಗಿದೆ (ಜನಗಣತಿ 2011)

| ರಾಜ್ಯಗಳು | 5–9 ವರ್ಷ | 9–14 ವರ್ಷ | ಒಟ್ಟು |
|---|---|---|---|
| ಕರ್ನಾಟಕ | 49,753 | 1,99,679 | 2,49,432 |
| ಆಂಧ್ರಪ್ರದೇಶ* | 75,659 | 3,29,192 | 4,04,851 |
| ಕೇರಳ | 7,605 | 14,152 | 21,757 |
| ತಮಿಳುನಾಡು | 38,130 | 1,13,307 | 1,51,437 |
| ಪುದುಚೇರಿ | 464 | 957 | 1,421 |

* **ಅವಿಭಜಿತ ಆಂಧ್ರಪ್ರದೇಶ**

ದಕ್ಷಿಣ ಭಾರತದ ರಾಜ್ಯಗಳಲ್ಲಿ ಅವಿಭಜಿತ ಆಂಧ್ರಪ್ರದೇಶವನ್ನು ಹೊರತುಪಡಿಸಿದರೆ ಕರ್ನಾಟಕದಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಬಾಲಕಾರ್ಮಿಕರಿದ್ದಾರೆ. 15–18 ವರ್ಷದೊಳಗಿನ ಮಕ್ಕಳನ್ನೂ ಈ ಪಟ್ಟಿಗೆ ಸೇರಿಸಿದರೆ ಈ ಸಂಖ್ಯೆ ಇನ್ನೂ ಹೆಚ್ಚಾಗುತ್ತದೆ. ಈ ಗುರಿಯ ಪ್ರಕಾರ ರಾಜ್ಯವನ್ನು 2025ರೊಳಗೆ ಬಾಲಕಾರ್ಮಿಕ ಮುಕ್ತ ರಾಜ್ಯವನ್ನಾಗಿ ಮಾಡಬೇಕಾದರೆ ಹಲವಾರು ಇಲಾಖೆಗಳು, ಸ್ವಯಂಸೇವಾಸಂಸ್ಥೆಗಳು ಮತ್ತು ನಾಗರೀಕ ಸಮುದಾಯ ಒಟ್ಟಾಗಿ ಕಾರ್ಯನಿರ್ವಹಿಸುವ ಅವಶ್ಯಕತೆಯಿದೆ.



### ನೀವು ಮಾಡಬಹುದಾದದ್ದು

- ಸ್ಥಳೀಯ ಉದ್ದಿಮೆಗಳನ್ನು ಉತ್ತೇಜಿಸಿ ಮತ್ತು ಸೃಜಿಸಲು ನೆರವಾಗಿ.
- ಯಾವುದೇ ಕಾರಣಕ್ಕೂ ದುಡಿಮೆಗಾಗಿ ಮಕ್ಕಳನ್ನು ಶೋಷಿಸಬೇಡಿ ಮತ್ತು ಯಾವುದೇ ವಲಯಗಳಲ್ಲಿ ಮಕ್ಕಳು ದುಡಿಯುತ್ತಿರುವುದು ಕಂಡುಬಂದಲ್ಲಿ ಸಂಬಂಧಪಟ್ಟವರಿಗೆ ದೂರು ನೀಡಿ. ಅಥವಾ ಚೈಲ್ಡ್‌ಲೈನ್ 1098ಗೆ ಕರೆಮಾಡಿ
- ದುಡಿಯುತ್ತಿರುವ ಎಲ್ಲ ವಯಸ್ಕರಿಗೆ ದುಡಿಮೆಗೆ ತಕ್ಕ ವೇತನ ದೊರೆಯುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳಿ.
- ಮಕ್ಕಳು ಕಾಣೆಯಾದಲ್ಲಿ ಅದು ಮಕ್ಕಳ ಸಾಗಣೆಯಾಗಿರುವ ಸಾಧ್ಯತೆಯಿರುವುದರಿಂದ ಕೂಡಲೇ ದೂರು ನೀಡಿ.
- ಸ್ಥಳೀಯ ಮಟ್ಟದಲ್ಲಿರುವ ಮಕ್ಕಳ ರಕ್ಷಣಾ ಸಮಿತಿಗಳೊಡನೆ ಮಕ್ಕಳ ರಕ್ಷಣೆಯ ಕುರಿತು ತೆಗೆದುಕೊಳ್ಳಬಹುದಾದ ಮುನ್ನೆಚ್ಚರಿಕೆಗಳ ಬಗ್ಗೆ ಚರ್ಚಿಸಿ ಅವುಗಳನ್ನು ಜಾರಿಗೆ ತರಲು ನೆರವಾಗಿ.
- ಮಕ್ಕಳ ಕಲ್ಯಾಣ ಸಮಿತಿ, ಜಿಲ್ಲಾ ಮಕ್ಕಳ ಸಂರಕ್ಷಣಾ ಸಮಿತಿ ಮತ್ತು ಚೈಲ್ಡ್‌ಲೈನ್ ಸಂಪರ್ಕಿಸಿ ಮಕ್ಕಳ ರಕ್ಷಣೆ ಕುರಿತು ಪ್ರಚಾರ, ತರಬೇತಿ ಮೊದಲಾದವುಗಳನ್ನು ಸ್ಥಳೀಯ ಸಮುದಾಯಗಳಲ್ಲಿ ಏರ್ಪಡಿಸಿ.
- ಅಂಕವಿಕಲ ವ್ಯಕ್ತಿಗಳಿಗೆ ಸ್ವಂತ ಉದ್ದಿಮೆ ಮಾಡಲು ಅಥವಾ ಉದ್ಯೋಗ ದೊರಕಿಸಲು ಬೇಕಾದ ನೆರವು ನೀಡಿ.

### ಸವಾಲುಗಳು



- ಬಾಲಕಾರ್ಮಿಕ ಪದ್ಧತಿ, ಮಕ್ಕಳ ಶೋಷಣೆ, ಮಕ್ಕಳ ಸಾಗಣೆ ಇವುಗಳ ವ್ಯಾಪ್ತಿ ಅಗಾಧವಾಗಿರುವುದರಿಂದ ಇವುಗಳ ನಿವಾರಣೆಗೆ ಅನೇಕ ಇಲಾಖೆಗಳು, ಸ್ವಯಂಸೇವಾ ಸಂಸ್ಥೆಗಳು, ಸಮುದಾಯ ಒಟ್ಟುಗೂಡಿ ಶ್ರಮಿಸಬೇಕಾಗುತ್ತದೆ. ಇವರೆಲ್ಲರನ್ನು ಒಟ್ಟುಗೂಡಿಸಿ ಕ್ರಿಯಾಯೋಜನೆಯನ್ನು ರೂಪಿಸುವುದೇ ಬಹು ದೊಡ್ಡ ಸವಾಲು.
- ಪ್ರಕೃತಿ ವಿಕೋಪದಿಂದಾಗುವ ಹಾನಿಯನ್ನು ತಡೆಯಲು ಸಾಧ್ಯವಿಲ್ಲದಿದ್ದರೂ ಸಹ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ತುಂಬಾ ಹಣ ಮತ್ತು ಸಮಯವನ್ನು ಬೇಡುವ ಅಗಾಧವಾದ ಕಾರ್ಯ.

| ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಸುಸ್ಥಿರ ಅಭಿವೃದ್ಧಿ ಗುರಿ 8 ಅರ್ಥ ಮಾಡಿಕೊಳ್ಳಲು ಓದಬೇಕಿರುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989ರ ಪರಿಚ್ಛೇದಗಳು | | | |
|---|---|---|---|
| **ಪರಿಚ್ಛೇದ ಸಂಖ್ಯೆ** | **ಪರಿಚ್ಛೇದದ ಶೀರ್ಷಿಕೆ** | **ಪರಿಚ್ಛೇದ ಸಂಖ್ಯೆ** | **ಪರಿಚ್ಛೇದದ ಶೀರ್ಷಿಕೆ** |
| 1 | ಮಕ್ಕಳೆಂದರೆ 18 ವರ್ಷದೊಳಗಿನವರು | 2 | ಮಕ್ಕಳ ನಡುವೆ ತಾರತಮ್ಯ/ಭೇದಭಾವ ಇರಬಾರದು/ಮಾಡಬಾರದು |
| 4 | ಮಕ್ಕಳ ಹಕ್ಕುಗಳ ಜಾರಿಗೆ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು | 15 | ಮಕ್ಕಳಿಗೂ ಸಂಘಟಿತರಾಗಿರುವ ಹಕ್ಕಿದೆ |
| 18 | ಮಕ್ಕಳ ಆರೈಕೆ, ಲಾಲನೆ ಪಾಲನೆಯ ರಕ್ಷಣೆ ಮಾಡುವ ಜವಾಬ್ದಾರಿ ಪೋಷಕರದ್ದು | 19 | ಮಕ್ಕಳನ್ನು ದುರುಪಯೋಗ ಮತ್ತು ನಿರ್ಲಕ್ಷ್ಯದ ವಿರುದ್ಧ ರಕ್ಷಿಸಬೇಕು |
| 23 | ಅಂಗವಿಕಲತೆಯಿರುವ ಮಕ್ಕಳಿಗೆ ರಕ್ಷಣೆ ನೀಡಬೇಕು | 24 | ಎಲ್ಲ ಮಕ್ಕಳಿಗೆ ಮೂಲ ಸೇವೆಗಳನ್ನು ಒದಗಿಸಲೇಬೇಕು. |
| 28 | ಎಲ್ಲ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕು ಇದೆ | 29 | ಎಲ್ಲ ಮಕ್ಕಳಿಗೆ ತಾರತಮ್ಯವಿಲ್ಲದೆ ಶಿಕ್ಷಣ ಪಡೆಯುವ ಹಕ್ಕು ಇದೆ. |
| 32 | ಮಕ್ಕಳ ಮೇಲೆ ಆರ್ಥಿಕ ಶೋಷಣೆ ನಿಲ್ಲಬೇಕು. ಮಕ್ಕಳನ್ನು ದುಡಿಯಲು ನೇಮಿಸಬಾರದು, ನೇಮಿಸಿಕೊಳ್ಳಬಾರದು | 34 | ಮಕ್ಕಳ ಮೇಲೆ ಲೈಂಗಿಕ ಶೋಷಣೆ / ದಾಳಿ ಆಗದಂತೆ ಎಲ್ಲೆಡೆ ರಕ್ಷಿಸಬೇಕು |
| 35 | ಮಕ್ಕಳ ಮಾರಾಟ ಮಾಡುವುದು ಅಥವಾ ಅಕ್ರಮ ಬಂಧನದಲ್ಲಿಡುವುದರ ವಿರುದ್ಧ ರಕ್ಷಣೆ | 36 | ಮಕ್ಕಳನ್ನು ಯಾವುದೇ ರೀತಿಯ ಶೋಷಣೆಗಳ ವಿರುದ್ಧ ರಕ್ಷಿಸುವುದು ಸರ್ಕಾರ ಮತ್ತು ಸಮಾಜದ ಜವಾಬ್ದಾರಿ |
| 37 | ಯಾವುದೇ ಮಗುವಿಗೆ ಎಂತಹದೇ ಸಂದರ್ಭದಲ್ಲೂ ಚಿತ್ರಹಿಂಸೆ, ಮರಣದಂಡನೆ ನೀಡಬಾರದು | 38 | ಯುದ್ಧ, ಸಶಸ್ತ್ರ ಸಂಘರ್ಷಗಳಾದಲ್ಲಿ ಮಕ್ಕಳಿಗೆ ಆದ್ಯತೆಯಿಂದ ರಕ್ಷಣೆ ನೀಡಬೇಕು |
| 39 | ಕಾನೂನಿನೊಡನೆ ಸಂಘರ್ಷದಲ್ಲಿದ್ದ ಮಕ್ಕಳಿಗೆ ಪುನರ್ವಸತಿಯ ಹಕ್ಕು ಇದೆ | | |

## ಭಾರತ/ ರಾಜ್ಯ ಸರ್ಕಾರದ ಕ್ರಮಗಳು


| ಉಸ್ತುವಾರಿ ಸಚಿವಾಲಯ | ಕೇಂದ್ರ/ರಾಜ್ಯ ಸರ್ಕಾರದ ಯೋಜನೆಗಳು | ಸಂಬಂಧಿತ ಕ್ರಮಗಳು | ಇತರ ಸಂಬಂಧಿತ ಸಚಿವಾಲಯಗಳು/ ಇಲಾಖೆಗಳು |
|---|---|---|---|
| ಕಾರ್ಮಿಕ ಮತ್ತು ಉದ್ಯೋಗ ಇಲಾಖೆ | 1. ರಾಷ್ಟ್ರೀಯ ಸೇವಾ ಯೋಜನೆ<br>2. ಕೌಶಲ್ಯ ಅಭಿವೃದ್ಧಿ ಯೋಜನೆ<br>3. ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ | 1. ದೀನ ದಯಾಳು ಉಪಾಧ್ಯಾಯ ಅಂತ್ಯೋದಯ ಯೋಜನೆ<br>2. ರಾಷ್ಟ್ರೀಯ ನಗರಾಭಿವೃದ್ಧಿ ಯೋಜನೆ | • ಕಾರ್ಮಿಕ ಮತ್ತು ಉದ್ಯೋಗ ಇಲಾಖೆ<br>• ಆರ್ಥಿಕ<br>• ವಿಜ್ಞಾನ ಮತ್ತು ತಂತ್ರಜ್ಞಾನ<br>• ಮಾನವ ಸಂಪನ್ಮೂಲ<br>• ಯೋಜನೆ ಮತ್ತು ಸಾಂಖ್ಯಿಕ<br>• ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ<br>• ಯುವಜನ ಸೇವೆ ಮತ್ತು ಕ್ರೀಡೆ<br>• ಪ್ರವಾಸೋಧ್ಯಮ, ಜವಳಿ |

9 INDUSTRY, INNOVATION AND INFRASTRUCTURE

# ಗುರಿ 9

## ಉದ್ಯಮ, ಆವಿಷ್ಕಾರ ಮತ್ತು ಮೂಲಸೌಕರ್ಯ

### ಸದೃಢ ಮೂಲಸೌಕರ್ಯಗಳನ್ನು ನಿರ್ಮಿಸಿ, ಅಂತರ್ಗತವೂ, ಸುಸ್ಥಿರವೂ ಆದ ಕೈಗಾರಿಕೆಗಳನ್ನು ಮತ್ತು ಆವಿಷ್ಕಾರಗಳನ್ನು ಉತ್ತೇಜಿಸಿ

| | ಲಕ್ಷ್ಯಗಳು | | ಸೂಚಕಗಳು |
|---|---|---|---|
| 9.1. | ಎಲ್ಲರಿಗೂ ಸಮಾನ ಮತ್ತು ಕೈಗೆಟುಕಬಲ್ಲ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಆರ್ಥಿಕ ಅಭಿವೃದ್ಧಿ ಮತ್ತು ಮಾನವ ಒಳಿತಿಗೆ ನೆರವು ನೀಡುವ ಪ್ರಾಂತೀಯ ಮತ್ತು ಗಡಿಗಳಾಚೆಯ ಮೂಲಸೌಕರ್ಯಗಳೂ ಸೇರಿದಂತೆ ಗುಣಮಟ್ಟದ, ವಿಶ್ವಾಸಾರ್ಹ, ಸುಸ್ಥಿರ ಮತ್ತು ಸದೃಢ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಿ | 9.1.1. | ಸರ್ವಋತು ರಸ್ತೆಗೆ 2 ಕಿ.ಮಿ. ಒಳಗೆ ವಾಸಿಸುತ್ತಿರುವ ಗ್ರಾಮೀಣ ಜನಸಂಖ್ಯೆಯ ಪ್ರಮಾಣ  |
| | | 9.1.2. | ಸಾರಿಗೆ ವಿಧದ ಆಧಾರದ ಮೇಲೆ ಪ್ರಯಾಣಿಕರ ಮತ್ತು ಸರಕು ಪರಿಮಾಣ |
| 9.2 | ಸಮನ್ವಯ ಮತ್ತು ಸುಸ್ಥಿರ ಕೈಗಾರಿಕೀಕರಣವನ್ನು ಉತ್ತೇಜಿಸಿ ಮತ್ತು 2030ರೊಳಗೆ, ರಾಷ್ಟ್ರೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ ಉದ್ಯೋಗ ಮತ್ತು ಒಟ್ಟು ದೇಶೀಯ ಉತ್ಪನ್ನದಲ್ಲಿ ಕೈಗಾರಿಕೆಗಳ ಪಾಲನ್ನು ಗಣನೀಯವಾಗಿ ಹೆಚ್ಚಿಸಿ ಮತ್ತು ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಇದರ ಪಾಲನ್ನು ದ್ವಿಗುಣಗೊಳಿಸಿ | 9.2.1. | ನಿವ್ವಳ ಆಂತರಿಕ ಉತ್ಪನ್ನ ಮತ್ತು ತಲಾದಾಯದ ಪ್ರಮಾಣಕ್ಕೆ ಉತ್ಪಾದನಾ ಮೌಲ್ಯ |
| | | 9.2.2. | ಒಟ್ಟು ಉದ್ಯೋಗಗಳ ಪ್ರಮಾಣಕ್ಕೆ ಉತ್ಪಾದನಾ ಉದ್ಯೋಗಗಳು ಇರುವುದು |
| 9.3 | ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಇತರೆ ಉದ್ದಿಮೆಗಳಿಗೆ, ಅದರಲ್ಲೂ ನಿರ್ದಿಷ್ಟವಾಗಿ ಅಭಿವೃದ್ಧಿಶೀಲ ದೇಶಗಳಲ್ಲಿ ಆರ್ಥಿಕ ಸೇವೆಗಳು, ಕೈಗೆಟುಕಬಲ್ಲ ಸಾಲ ಸೌಲಭ್ಯಗಳ ಲಭ್ಯತೆಯನ್ನೂ ಒಳಗೊಂಡು, ಸಮಗ್ರ ಮೌಲ್ಯವರ್ಧನೆ ಸರಪಣಿ ಮತ್ತು ಮಾರುಕಟ್ಟೆಗಳಿಗೆ ಅವುಗಳ ಸೇರ್ಪಡೆಯನ್ನು ಹೆಚ್ಚಿಸಿ | 9.3.1. | ಕೈಗಾರಿಕೆಗಳ ಒಟ್ಟು ಮೌಲ್ಯವರ್ಧನೆಯಲ್ಲಿ ಸಣ್ಣ ಕೈಗಾರಿಕೆಗಳ ಪ್ರಮಾಣ |
| | | 9.3.2. | ಸಾಲ ಅಥವಾ ತೀರುವಳಿಯನ್ನು ಹೊಂದಿರುವ ಸಣ್ಣ ಕೈಗಾರಿಕೆಗಳ ಪ್ರಮಾಣ. |

| | | | |
|---|---|---|---|
| 9.4 | 2030ರೊಳಗೆ, ಪ್ರತಿಯೊಂದು ದೇಶವೂ, ಅವುಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಸಂಪನ್ಮೂಲ ಬಳಕೆಯ ಸಾಮರ್ಥ್ಯವನ್ನು ಹೆಚ್ಚಿಸುವುದು ಮತ್ತು ಸ್ವಚ್ಛ ಮತ್ತು ಪಾರಿಸಾರಿಕವಾಗಿ ಉನ್ನತ ತಂತ್ರಜ್ಞಾನವನ್ನು ಮತ್ತು ಕೈಗಾರಿಕಾ ಪ್ರಕ್ರಿಯೆಗಳ ಮೂಲಕ ಸುಸ್ಥಿರತೆಗಾಗಿ ಮೂಲಸೌಲಭ್ಯಗಳನ್ನು ಉನ್ನತೀಕರಿಸುವುದು ಮತ್ತು ಕೈಗಾರಿಕೆಗಳನ್ನು ಮರು ಸುಧಾರಣೆ ಮಾಡಿ | 9.4.1. | ಮೌಲ್ಯವರ್ಧಕದ ಪ್ರತಿ ಘಟಕಕ್ಕೆ ಇಂಗಾಲ ಡೈಆಕ್ಸೈಡ್ ಹೊರಸೂಸುವಿಕೆ |
| 9.5 | 2030ರೊಳಗೆ, ಆವಿಷ್ಕಾರಗಳನ್ನು ಉತ್ತೇಜಿಸಿ ಮತ್ತು ಪ್ರತಿ 10 ಲಕ್ಷ ಜನರಿಗೆ ಸಂಶೋಧನೆ ಮತ್ತು ಅಭಿವೃದ್ಧಿ ಉದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸಿ ಮತ್ತು ಸರ್ಕಾರಿ ಮತ್ತು ಖಾಸಗಿ ಸಂಶೋಧನೆ ಮತ್ತು ಅಭಿವೃದ್ಧಿ ಮೇಲಿನ ಹೂಡಿಕೆಯನ್ನು ಹೆಚ್ಚಿಸುವುದರ ಮೂಲಕ ಎಲ್ಲಾ ದೇಶಗಳಲ್ಲಿ, ಅದರಲ್ಲೂ ವಿಶೇಷವಾಗಿ ಅಭಿವೃದ್ಧಿಶೀಲ ದೇಶಗಳಲ್ಲಿ ಕೈಗಾರಿಕಾ ವಲಯಗಳ ವೈಜ್ಞಾನಿಕ ಸಂಶೋಧನೆ ಮತ್ತು ತಾಂತ್ರಿಕ ಸಾಮರ್ಥ್ಯಗಳನ್ನು ಉನ್ನತೀಕರಣಗೊಳಿಸಿ | 9.5.1. | ನಿವ್ವಳ ಆಂತರಿಕ ಉತ್ಪನ್ನದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯ ವೆಚ್ಚದ ಪ್ರಮಾಣ |
| | | 9.5.2. | ಪ್ರತಿ ಮಿಲಿಯನ್ ನಿವಾಸಿಗಳಿಗೆ ಇರುವ ಸಂಶೋಧಕರು (ಪೂರ್ಣಾವಧಿಗೆ ಸಮಾನ ರೂಪದಲ್ಲಿ) |
| 9.ಎ | ಆಫ್ರಿಕಾದ ದೇಶಗಳಿಗೆ, ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳಿಗೆ, ಭೂಆವೃತ್ತ ದೇಶಗಳಿಗೆ ಮತ್ತು ಅಭಿವೃದ್ಧಿಶೀಲ ಸಣ್ಣ ದ್ವೀಪ ದೇಶಗಳಿಗೆ ಹೆಚ್ಚಿನ ಆರ್ಥಿಕ, ತಂತ್ರಜ್ಞಾನ ಮತ್ತು ತಾಂತ್ರಿಕ ನೆರವನ್ನು ನೀಡುವ ಮೂಲಕ ಹಾಗೂ ಅಭಿವೃದ್ಧಿಶೀಲ ದೇಶಗಳಿಗೆ ಸುಸ್ಥಿರ ಮತ್ತು ಸದೃಢ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವಲ್ಲಿ ನೆರವು ನೀಡಿ | 9.ಎ.1. | ಮೂಲಸೌಕರ್ಯಗಳಿಗೆ ಒಟ್ಟು ಅಧಿಕೃತ ಅಂತಾರಾಷ್ಟ್ರೀಯ ನೆರವು (ಅಧಿಕೃತ ಅಭಿವೃದ್ಧಿ ನೆರವು + ಇತರೆ ಅಧಿಕೃತ ಮೂಲಗಳಿಂದ) |
| 9.ಬಿ | ಔದ್ಯೋಗಿಕ ವೈವಿಧ್ಯತೆ ಮತ್ತು ಉತ್ಪನ್ನಗಳ ಮೌಲ್ಯವರ್ಧನೆಗೆ ನೆರವಾಗುವ ನೀತಿಯಿರುವ ವಾತಾವರಣವನ್ನು ಖಾತ್ರಿಗೊಳಿಸುವುದೂ ಸೇರಿದಂತೆ ಅಭಿವೃದ್ಧಿಶೀಲ ದೇಶಗಳಲ್ಲಿ ಸ್ಥಳೀಯ ತಾಂತ್ರಿಕತೆಯ ಅಭಿವೃದ್ಧಿ, ಸಂಶೋಧನೆ ಮತ್ತು ಆವಿಷ್ಕಾರಗಳನ್ನು ಉತ್ತೇಜಿಸಿ | 9.ಬಿ.1. | ಒಟ್ಟು ಮೌಲ್ಯವರ್ಧನೆಗೆ ಮಧ್ಯಮ ಮತ್ತು ಅತ್ಯಾಧುನಿಕ ಕಾರ್ಖಾನೆಗಳ ಮೌಲ್ಯವರ್ಧಕದ ಪ್ರಮಾಣ |
| 9.ಸಿ | 2020ರೊಳಗೆ, ಮಾಹಿತಿ ಮತ್ತು ಸಂವಹನ ತಾಂತ್ರಿಕತೆಯ ಲಭ್ಯತೆಯನ್ನು ಗಣನೀಯವಾಗಿ ಹೆಚ್ಚಿಸಿ, ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳಿಗೆ ಸಾರ್ವತ್ರಿಕ ಹಾಗೂ ಕೈಗೆಟುಕಬಹುದಾದ ಅಂತರ್ಜಾಲ ಲಭ್ಯತೆಯನ್ನು ಒದಗಿಸಿ | 9.ಸಿ.1. | ತಂತ್ರಜ್ಞಾನವಾರು ಮೊಬೈಲ್ ನೆಟ್‌ವರ್ಕ್‌ನಲ್ಲಿ ತೊಡಗಬಹುದಾದ ಜನಸಂಖ್ಯೆಯ ಪ್ರಮಾಣ |

## ವಿವರಣೆ

ಕೈಗಾರಿಕೆಗಳು ಯಾವುದೇ ಪ್ರದೇಶದ ಆರ್ಥಿಕತೆಯನ್ನು ಸದೃಢಗೊಳಿಸುವಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತವೆ. ಇದರ ಜೊತೆಗೆ ಉದ್ಯೋಗಗಳ ಸೃಜನೆಯಾಗುವುದರಿಂದ ಬಡತನದ ನಿವಾರಣೆಗೂ ಸಹ ಕಾರಣವಾಗುತ್ತವೆ. ಆರ್ಥಿಕ ಅಭಿವೃದ್ಧಿ, ಉದ್ಯೋಗ ಸೃಷ್ಟಿ ಮತ್ತು ಸಾಮಾಜಿಕ ಸ್ಥಿರತೆಗೆ ಉತ್ಪಾದನೆಯೇ ಮೂಲ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸಣ್ಣ ಕೈಗಾರಿಕೆಗಳು ಹೆಚ್ಚಿದ್ದರೂ ಸಹ ಅವುಗಳಿಗೆ ನೀಡುತ್ತಿರುವ ಆರ್ಥಿಕ ನೆರವಿನ ಹಿನ್ನೆಲೆಯಲ್ಲಿ ಅವುಗಳ ಸುಸ್ಥಿರತೆ ಪ್ರಶ್ನಾರ್ಹ. ಹೊಸ ಆವಿಷ್ಕಾರಗಳು ಮತ್ತು ಹೊಸ ಸುಸ್ಥಿರ ಕೈಗಾರಿಕೆಗಳ ನಿರ್ಮಾಣಕ್ಕೆ ಸಂಶೋಧನೆ ಮತ್ತು ಅಭಿವೃದ್ಧಿಗೆ ಹೆಚ್ಚಿನ ಸಂಪನ್ಮೂಲಗಳನ್ನು ತೊಡಗಿಸುವುದು ಅವಶ್ಯವಾಗಿದೆ. ಆದರೆ ಜಾಗತಿಕವಾಗಿ ನೋಡಿದರೆ ಒಟ್ಟು ನಿವ್ವಳ ಆಂತರಿಕ ಉತ್ಪನ್ನಗಳ (GDP) ಕೇವಲ ಶೇ. 1.7ರಷ್ಟು ಮಾತ್ರ ಸಂಶೋಧನೆಗೆ ವ್ಯಯಿಸಲಾಗಿದೆ ಮತ್ತು ಭಾರತದಂತಹ ಅಭಿವೃದ್ಧಿಶೀಲ ದೇಶಗಳಲ್ಲಿ ಇದರ ಪ್ರಮಾಣ ಶೇ. 1.2.

ಸದೃಢ ಮೂಲಸೌಕರ್ಯಗಳನ್ನು ನಿರ್ಮಿಸುವುದೂ ಸಹ ಈ ಗುರಿಯ ಉದ್ದೇಶವಾಗಿದೆ. ಆದರೆ ನಮ್ಮ ದೇಶದಲ್ಲಿ ಯಾವುದೇ ಮೂಲಸೌಲಭ್ಯಗಳನ್ನು ಹೊಂದಿಲ್ಲದ (ರಸ್ತೆ, ಸಾರಿಗೆ, ನೀರು, ವಿದ್ಯುತ್, ಶಾಲೆ, ಆರೋಗ್ಯ ಕೇಂದ್ರ ಇತ್ಯಾದಿ) ಹಲವಾರು ಗ್ರಾಮಗಳಿವೆ ಮತ್ತು ರಾಜ್ಯದ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವೇನಲ್ಲ.

ಈ ಗುರಿಯ ಮೂಲ ಉದ್ದೇಶ ಸುಸ್ಥಿರ ಕೈಗಾರಿಕೆಗಳನ್ನು ಉತ್ತೇಜಿಸುವುದಾಗಿದೆ. ಅಂದರೆ, ಕೈಗಾರಿಕೆಯಿಂದ ಅದು ಇರುವ ಪ್ರದೇಶದ ಗಾಳಿ, ನೀರು, ಪರಿಸರ ಹಾನಿಯಾಗದಿರುವಂತೆ ಎಚ್ಚರಿಕೆ ವಹಿಸುವುದು. ಸದ್ಯದ ಪರಿಸ್ಥಿತಿಯಲ್ಲಿ ಅತಿಯಾದ ಗಣಿಗಾರಿಕೆ ಮತ್ತು ಕೈಗಾರಿಕೀಕರಣದಿಂದ ಪರಿಸರ ಹಾನಿ ಮತ್ತು ಅದರಿಂದ ಸಮುದಾಯಗಳ ಮೇಲೆ, ಕೃಷಿ ಉತ್ಪಾದನೆಯ ಮೇಲೆ ನೇರವಾದ ಋಣಾತ್ಮಕ ಪರಿಣಾಮವಾಗುತ್ತಿದೆ. ಅದರ ನೇರ ಪರಿಣಾಮ ಹೆಚ್ಚಾಗಿ ಆಗುವುದು ಮಕ್ಕಳ ಸದ್ಯದ ಬದುಕು ಮತ್ತು ಭವಿಷ್ಯದ ಮೇಲೆ. ಹಾಗಾದಲ್ಲಿ ಅದು ಸುಸ್ಥಿರ ಕೈಗಾರಿಕೆ ಎನಿಸುವುದಿಲ್ಲ. ಹಾಗಾಗಿ ಇವೆಲ್ಲವನ್ನೂ ಸಹ ಗಮನದಲ್ಲಿಟ್ಟುಕೊಂಡು ಕೈಗಾರಿಕೆಗಳಿಗಾಗಿ ಹೊಸ ಆವಿಷ್ಕಾರಗಳನ್ನು ಶೋಧಿಸಬೇಕಿದೆ.

ಇತ್ತೀಚಿನ ವರ್ಷಗಳಲ್ಲಿ ದೇಶದ ಎಲ್ಲಾ ರಾಜ್ಯಗಳೂ ಸಹ ತಮ್ಮ ರಾಜ್ಯದಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವ ಸಲುವಾಗಿ ಹೂಡಿಕೆದಾರರನ್ನು ಸೆಳೆಯಲು ಪೈಪೋಟಿ ನಡೆಸಿವೆ. ಅದಕ್ಕಾಗಿ ವಿಶೇಷ ಆರ್ಥಿಕ ವಲಯಗಳನ್ನು ಗುರುತಿಸಿ ಭೂಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆಯೂ ಸಹ ನಡೆಯುತ್ತಿದೆ. ಈ ರೀತಿಯ ಭೂಸ್ವಾಧೀನತೆಯಿಂದ ಕೃಷಿ ಭೂಮಿಯ ಪ್ರಮಾಣ ಕಡಿಮೆಯಾಗುತ್ತಿದೆ ಎಂಬುದು ಅನೇಕರ ಅಭಿಪ್ರಾಯ. ಜೊತೆಗೆ ಈ ಬೃಹತ್ ಕೈಗಾರಿಕೆಗಳ ಹೂಡಿಕೆದಾರರಿಗೆ ಭೂಮಿಯ ಜೊತೆಗೆ ಆ ಕೈಗಾರಿಕೆಗಳಿಗೆ ಬೇಕಾಗುವ ನೀರು, ವಿದ್ಯುತ್ ಹಾಗು ಮತ್ತಿತರೆ ಸೌಲಭ್ಯಗಳನ್ನು ಒದಗಿಸುವ ಆಶ್ವಾಸನೆಯನ್ನೂ ಸಹ ನೀಡಲಾಗುತ್ತಿದೆ. ಆದರೆ ಅಷ್ಟೆಲ್ಲಾ ಪ್ರಮಾಣದ ನೀರು ಮತ್ತು ವಿದ್ಯುತ್ ನಮ್ಮಲ್ಲಿ ಲಭ್ಯವಿದೆಯೇ ಎಂಬುದು ದೊಡ್ಡ ಪ್ರಶ್ನೆ. ಹಾಗಾಗಿ ಇವೆಲ್ಲವನ್ನೂ ಸಹ ಗಮನದಲ್ಲಿಟ್ಟುಕೊಂಡು ಈ ಗುರಿಯನ್ನು ಸಾಧಿಸುವ ಪ್ರಯತ್ನ ಮಾಡಬೇಕಿದೆ.

ಮಾಹಿತಿ ಮತ್ತು ತಂತ್ರಜ್ಞಾನ ಉದ್ದಿಮೆಯಲ್ಲಿ ಭಾರತ ಇಡೀ ವಿಶ್ವದ ಗಮನ ಸೆಳೆದಿದೆ ಮತ್ತು ಕರ್ನಾಟಕವೂ ಇದರ ಮುಂಚೂಣಿ ರಾಜ್ಯಗಳಲ್ಲಿ ಒಂದಾಗಿದೆ. ಈ ಉದ್ದಿಮೆಯನ್ನೂ ಸಹ ಪರಿಸರ ಸ್ನೇಹಿಯನ್ನಾಗಿಸುವ ಅವಶ್ಯಕತೆಯಿದೆ. ಏಕೆಂದರೆ ಪ್ರಸ್ತುತ ಉತ್ಪತ್ತಿಯಾಗುತ್ತಿರುವ ಎಲ್ಲಾ ರೀತಿಯ ತ್ಯಾಜ್ಯಗಳಲ್ಲಿ ಇ–ತ್ಯಾಜ್ಯದ ಪ್ರಮಾಣ ಸಾಕಷ್ಟಿದೆ.

## ನೀವು ಮಾಡಬಹುದಾದದ್ದು

- ದೇಶದ ಪ್ರತಿಯೊಬ್ಬರಿಗೂ ಮೂಲಸೌಕರ್ಯವನ್ನು ಹೊಂದುವ ಹಕ್ಕು ಇರುವುದರಿಂದ, ನಿಮ್ಮ ಗ್ರಾಮ/ನಗರ ಪ್ರದೇಶಗಳು ಇಂತಹ ಮೂಲಸೌಲಭ್ಯಗಳಿಂದ ವಂಚಿತವಾಗಿದ್ದಲ್ಲಿ ಸಂಬಂಧಪಟ್ಟವರ ಗಮನಕ್ಕೆ ತನ್ನಿ.
- ನಿಮ್ಮ ಪ್ರದೇಶದ ಸುತ್ತಮುತ್ತಲಿನಲ್ಲಿ ಕೈಗಾರಿಕೆಗಳಿಂದ ಪರಿಸರಕ್ಕೆ ಹಾನಿಯಾಗುತ್ತಿದ್ದಲ್ಲಿ ಸಂಬಂಧಪಟ್ಟವರಿಗೆ ದೂರು ನೀಡಿ
- ಸುಸ್ಥಿರ ಮತ್ತು ಪರಿಸರ ಸ್ನೇಹಿ ಉದ್ದಿಮೆಗಳನ್ನು ಪ್ರೋತ್ಸಾಹಿಸಿ.



**ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಸುಸ್ಥಿರ ಅಭಿವೃದ್ಧಿ ಗುರಿ 9 ಅರ್ಥ ಮಾಡಿಕೊಳ್ಳಲು ಓದಬೇಕಿರುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989ರ ಪರಿಚ್ಛೇದಗಳು**

| ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ | ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ |
|---|---|---|---|
| 2 | ಮಕ್ಕಳ ನಡುವೆ ತಾರತಮ್ಯ/ಭೇದಭಾವ ಇರಬಾರದು/ಮಾಡಬಾರದು | 4 | ಮಕ್ಕಳ ಹಕ್ಕುಗಳ ಜಾರಿಗೆ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು |
| 13 | ಮಕ್ಕಳಿಗೆ ವಿವಿಧ ಮೂಲಗಳಿಂದ ಮಾಹಿತಿ ಹೊಂದುವ ಸ್ವಾತಂತ್ರ್ಯ | 17 | ಮಕ್ಕಳಿಗೆ ಸೂಕ್ತವಾದ ಮಾಹಿತಿ ನೀಡುವ ಜವಾಬ್ದಾರಿ ಮಾಧ್ಯಮಗಳಿಗಿದೆ. |
| 28 | ಎಲ್ಲ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕು ಇದೆ | 29 | ಎಲ್ಲ ಮಕ್ಕಳಿಗೆ ತಾರತಮ್ಯವಿಲ್ಲದೆ ಶಿಕ್ಷಣ ಪಡೆಯುವ ಹಕ್ಕು ಇದೆ. |

सत्यमेव जयते

ಕರ್ನಾಟಕ ಸರ್ಕಾರ

## ಭಾರತ/ ರಾಜ್ಯ ಸರ್ಕಾರದ ಕ್ರಮಗಳು


| ಉಸ್ತುವಾರಿ ಸಚಿವಾಲಯ | ಕೇಂದ್ರ/ರಾಜ್ಯ ಸರ್ಕಾರದ ಯೋಜನೆಗಳು | ಸಂಬಂಧಿತ ಕ್ರಮಗಳು | ಇತರ ಸಂಬಂಧಿತ ಸಚಿವಾಲಯಗಳು/ ಇಲಾಖೆಗಳು |
|---|---|---|---|
| ವಾಣಿಜ್ಯ ಮತ್ತು ಕೈಗಾರಿಕೆ | 1. ಗಡಿ ಪ್ರದೇಶ ಅಭಿವೃದ್ಧಿ ಯೋಜನೆ<br>2. ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ಯೋಜನೆ<br>3. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ | 1. ಪಂಡಿತ್ ದೀನ ದಯಾಳು ಉಪಾಧ್ಯಾಯ ಶ್ರಮಮೇವ ಜಯತೆ ಕಾರ್ಯಕ್ರಮ<br>2. ಮೇಕ್ ಇನ್ ಇಂಡಿಯಾ<br>3. ಸ್ಟಾರ್ಟ್ ಅಪ್ ಇಂಡಿಯಾ<br>4. ಎಫ್.ಡಿ.ಐ. (ವಿದೇಶಿ ನೇರ ಬಂಡವಾಳ ಹೂಡಿಕೆ) ನೀತಿ | • ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳು<br>• ರೈಲ್ವೆ<br>• ನಾಗರೀಕ ವಿಮಾನಯಾನ<br>• ಆರ್ಥಿಕ<br>• ವಿಜ್ಞಾನ ಮತ್ತು ತಂತ್ರಜ್ಞಾನ<br>• ಮಾನವ ಸಂಪನ್ಮೂಲ ಅಭಿವೃದ್ಧಿ<br>• ದೂರಸಂಪರ್ಕ |



# ಗುರಿ 10

## ಅಸಮಾನತೆಗಳ ಇಳಿಕೆ

### ದೇಶದೊಳಗೆ ಮತ್ತು ದೇಶಗಳ ನಡುವೆ ಅಸಮಾನತೆಯನ್ನು ಇಳಿಸಿ

| | ಲಕ್ಷ್ಯಗಳು | | ಸೂಚಕಗಳು |
|---|---|---|---|
| 10.1 | 2030ರೊಳಗೆ, ಜನಸಮುದಾಯಗಳ ಕೆಳಸ್ತರದಲ್ಲಿರುವ ಶೇಕಡಾ 40ರಷ್ಟು ಜನರ ಆದಾಯ ಹೆಚ್ಚಳವನ್ನು ಹಂತಹಂತವಾಗಿ ಆಯಾ ದೇಶಗಳ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಸಾಧಿಸಿ ಸುಸ್ಥಿರಗೊಳಿಸಿ | 10.1.1. | ಗೃಹಕೃತ್ಯದ ವೆಚ್ಚದಲ್ಲಿ ಹೆಚ್ಚಳದ ದರ ಅಥವಾ ಕೆಳಗಿನ 40% ಜನಸಂಖ್ಯೆಯ ಮತ್ತು ಒಟ್ಟು ಜನಸಂಖ್ಯೆಯ ಜನರಲ್ಲಿ ತಲಾವಾರು ಆದಾಯ |
| 10.2 | 2030ರೊಳಗೆ, ವಯಸ್ಸು, ಲಿಂಗ, ಅಂಗವಿಕಲತೆ, ಬುಡಕಟ್ಟು, ಜನಾಂಗ, ಮೂಲ, ಧರ್ಮ ಅಥವಾ ಆರ್ಥಿಕ ಅಥವಾ ಇನ್ನಿತರ ಯಾವುದನ್ನೂ ಪರಿಗಣಿಸದೆ ಎಲ್ಲರನ್ನೂ ಸಶಕ್ತಗೊಳಿಸಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮನ್ವಯತೆಯನ್ನು ಉತ್ತೇಜಿಸಿ | 10.2.1. | ವಯೋಮಾನ, ಲಿಂಗ ಮತ್ತು ಅಂಗವಿಕಲತೆಯಿರುವ ವ್ಯಕ್ತಿಗಳವಾರು ಶೇ. 50 (ರಾಷ್ಟ್ರೀಯ) ಸರಾಸರಿ ಆದಾಯಕ್ಕಿಂತ ಕಡಿಮೆಯಲ್ಲಿ ಜೀವಿಸುತ್ತಿರುವ ಜನಸಂಖ್ಯೆಯ ಪ್ರಮಾಣ  |
| 10.3 | ತಾರತಮ್ಯಗೊಳಿಸುವ ಕಾನೂನುಗಳು, ನೀತಿಗಳು ಮತ್ತು ಆಚರಣೆಗಳನ್ನು ನಿರ್ಮೂಲನೆಗೊಳಿಸಿ ಮತ್ತು ಈ ನಿಟ್ಟಿನಲ್ಲಿ ಸೂಕ್ತ ಶಾಸನ, ನೀತಿಗಳು ಮತ್ತು ಕ್ರಮಗಳನ್ನು ಉತ್ತೇಜಿಸುವುದೂ ಸೇರಿದಂತೆ ಎಲ್ಲರಿಗೂ ಸಮಾನ ಅವಕಾಶಗಳನ್ನೊದಗಿಸಿ, ಫಲಿತಾಂಶದ ಅಸಮಾನತೆಯನ್ನು ಕಡಿಮೆಗೊಳಿಸುವುದನ್ನು ಖಾತ್ರಿಗೊಳಿಸಿ | 10.3.1. | ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಕಾಯ್ದೆ ಅಡಿಯ ತಾರತಮ್ಯ ನಿಷೇಧದ ಹಿನ್ನೆಲೆಯಲ್ಲಿ ಕಳೆದ 12 ತಿಂಗಳಲ್ಲಿ ವ್ಯಕ್ತಿಗತವಾಗಿ ತಾರತಮ್ಯವನ್ನು ಅನುಭವಿಸಿದ ಅಥವಾ ಕಿರುಕುಳಕ್ಕೆ ಒಳಪಟ್ಟಿದ್ದನ್ನು ವರದಿ ಮಾಡಿದ ಜನಸಂಖ್ಯೆ ಪ್ರಮಾಣ.  |
| 10.4 | ಹಂತಹಂತವಾಗಿ ಹೆಚ್ಚಿನ ಸಮಾನತೆಯನ್ನು ಸಾಧಿಸಲು, ನೀತಿಗಳನ್ನು, ಅದರಲ್ಲೂ ವಿಶೇಷವಾಗಿ ಆರ್ಥಿಕ, ವೇತನ ಮತ್ತು ಸಾಮಾಜಿಕ ರಕ್ಷಣಾ ನೀತಿಗಳನ್ನು ಅಳವಡಿಸಿಕೊಳ್ಳಿ | 10.4.1. | ವೇತನ ಮತ್ತು ಸಾಮಾಜಿಕ ರಕ್ಷಣೆಯ ವರ್ಗಾವಣೆಯೂ ಸೇರಿದಂತೆ ನಿವ್ವಳ ಆಂತರಿಕ ಉತ್ಪನ್ನದಲ್ಲಿ ಕಾರ್ಮಿಕರ ಪಾಲು |

| | | | |
|---|---|---|---|
| 10.5 | ಜಾಗತಿಕ ಹಣಕಾಸು ಮಾರುಕಟ್ಟೆಗಳ ಮತ್ತು ಸಂಸ್ಥೆಗಳ ನಿಯಂತ್ರಣ ಮತ್ತು ಉಸ್ತುವಾರಿಯನ್ನು ಸುಧಾರಿಸಿ, ಇಂತಹ ನಿಯಂತ್ರಣಗಳ ಜಾರಿಯನ್ನು ಸದೃಢಗೊಳಿಸಿ | 10.5.1. | ಆರ್ಥಿಕ ಸುಸ್ಥಿತಿಯ ಸೂಚಕಗಳು |
| 10.6 | ಹೆಚ್ಚು ಪರಿಣಾಮಕಾರಿ, ನಂಬಲರ್ಹ, ಜವಾಬ್ದಾರಿಯುತ ಮತ್ತು ಕಾನೂನುಬದ್ಧ ಸಂಸ್ಥೆಗಳನ್ನು ಸೃಜಿಸುವ ಸಲುವಾಗಿ ಜಾಗತಿಕ ಅಂತಾರಾಷ್ಟ್ರೀಯ ಆರ್ಥಿಕ ಮತ್ತು ಹಣಕಾಸು ಸಂಸ್ಥೆಗಳಲ್ಲಿ ನಿರ್ಧಾರ ತೆಗೆದುಕೊಳ್ಳುವಲ್ಲಿ ಅಭಿವೃದ್ಧಿಶೀಲ ದೇಶಗಳಿಗೆ ವಿಸ್ತೃತ ಪ್ರಾತಿನಿಧ್ಯ ಮತ್ತು ಅಭಿಪ್ರಾಯಗಳನ್ನು ಖಾತ್ರಿಗೊಳಿಸಿ | 10.6.1. | ಅಂತಾರಾಷ್ಟ್ರೀಯ ಸಂಸ್ಥೆಗಳಿಗಿರುವ ಸದಸ್ಯರು ಮತ್ತು ಮತದಾನದ ಹಕ್ಕನ್ನು ಹೊಂದಿರುವ ಅಭಿವೃದ್ಧಿಶೀಲ ದೇಶಗಳ ಪ್ರಮಾಣ |
| 10.7 | ಯೋಜಿತ ಮತ್ತು ಉತ್ತಮ ನಿರ್ವಹಣೆಯ ವಲಸೆ ನೀತಿಯ ಮೂಲಕವೂ ಸೇರಿದಂತೆ ಕ್ರಮಬದ್ಧವಾದ, ಸುರಕ್ಷಿತ, ನಿಯಮಿತ ಮತ್ತು ಜವಾಬ್ದಾರಿಯುತ ವಲಸೆ ಮತ್ತು ಜನರ ಸ್ಥಳಾಂತರವನ್ನು ಸುಗಮಗೊಳಿಸಿ | 10.7.1. | ವಾರ್ಷಿಕ ಆದಾಯ ಗಳಿಕೆಯ ದೇಶದ ಗುರಿಯಲ್ಲಿ ನೌಕರರು ಭರಿಸುವ ನೇಮಕಾತಿ ವೆಚ್ಚದ ಪ್ರಮಾಣ |
| | | 10.7.2. | ಉತ್ತಮವಾಗಿ ನಿರ್ವಹಿಸಲ್ಪಡುವ ವಲಸೆ ನೀತಿಯನ್ನು ಜಾರಿಗೊಳಿಸಿರುವ ದೇಶಗಳ ಸಂಖ್ಯೆ |
| 10.ಎ | ವಿಶ್ವ ವ್ಯಾಪಾರ ಸಂಘಟಣೆಯ ಒಪ್ಪಂದಗಳಿಗನುಗುಣವಾಗಿ ಅಭಿವೃದ್ಧಿಶೀಲ ದೇಶಗಳಿಗೆ, ಅದರಲ್ಲೂ ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳಿಗೆ ವಿಶೇಷ ಮತ್ತು ಸಾಂದರ್ಭಿಕ ಪರಿಗಣನೆ ತತ್ತ್ವವನ್ನು ಜಾರಿಗೊಳಿಸಿ | 10.ಎ.1. | ಕಡಿಮೆ ಅಭಿವೃದ್ಧಿ ಹೊಂದಿರುವ ದೇಶಗಳಿಂದಾಗುವ ಆಮದಿಗೆ ಅನ್ವಯವಾಗುವ ತೆರಿಗೆ ಮತ್ತು ಶೂನ್ಯ ತೆರಿಗೆಯಿಂದ ಅಭಿವೃದ್ಧಿಶೀಲ ದೇಶಗಳಿಂದಾಗುವ ಆಮದಿನ ಪ್ರಮಾಣ |
| 10.ಬಿ | ತಮ್ಮ ರಾಷ್ಟ್ರೀಯ ಯೋಜನೆಗಳು ಮತ್ತು ಕಾರ್ಯಕ್ರಮಗಳಿಗೆ ತಕ್ಕಂತೆ ಹೆಚ್ಚು ಅಗತ್ಯವಿರುವ ದೇಶಗಳಲ್ಲಿ, ಅದರಲ್ಲೂ ವಿಶೇಷವಾಗಿ ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳು, ಆಫ್ರಿಕಾ ದೇಶಗಳು, ಅಭಿವೃದ್ಧಿಶೀಲ ಸಣ್ಣ ದ್ವೀಪ ದೇಶಗಳು ಮತ್ತು ಅಭಿವೃದ್ಧಿಶೀಲ ಭೂಆವೃತ್ತ ದೇಶಗಳಿಗೆ ವಿದೇಶಿ ನೇರ ಬಂಡವಾಳ ಹೂಡಿಕೆಯೂ ಸೇರಿದಂತೆ ಅಧಿಕೃತವಾದ ಅಭಿವೃದ್ಧಿ ನೆರವು ಮತ್ತು ಆರ್ಥಿಕ ಹರಿವುಗಳನ್ನು ಉತ್ತೇಜಿಸಿ | 10.ಬಿ.1. | ಪಡೆಯುವ ಮತ್ತು ನೀಡುವ ದೇಶಗಳಿಂದ ಅಭಿವೃದ್ಧಿಗಾಗಿ ಹರಿದು ಬರುವ ಒಟ್ಟು ಸಂಪನ್ಮೂಲಗಳು ಮತ್ತು ಬರುವ ವಿಧ (ಉದಾ: ಅಧಿಕೃತ ಅಭಿವೃದ್ಧಿ ನೆರವು, ವಿದೇಶಿ ನೇರ ಹೂಡಿಕೆ ಮತ್ತು ಇತರೆ ವಿಧ) |
| 10.ಸಿ | 2030ರೊಳಗೆ, ವಲಸೆ ಹಣ ರವಾನೆಗಳ ವ್ಯವಹಾರ ವೆಚ್ಚಗಳನ್ನು ಶೇಕಡಾ 3ರಷ್ಟು ಕಡಿಮೆ ಮಾಡುವುದು ಮತ್ತು ಶೇಕಡಾ 5ಕ್ಕಿಂತ ಹೆಚ್ಚಿನ ವೆಚ್ಚದ ಪಾವತಿಯ ದಾರಿಗಳನ್ನು ನಿರ್ಮೂಲನೆಗೊಳಿಸಿ | 10.ಸಿ.1. | ರವಾನೆಯ ಒಟ್ಟು ಮೊತ್ತದಲ್ಲಿ ರವಾನೆ ವೆಚ್ಚದ ಪ್ರಮಾಣ |

## ವಿವರಣೆ

ವಯಸ್ಸು, ಲಿಂಗ, ಅಂಗವಿಕಲತೆ, ಬುಡಕಟ್ಟು, ಜನಾಂಗ, ಮೂಲ, ಧರ್ಮ ಅಥವಾ ಆರ್ಥಿಕ ಪರಿಸ್ಥಿತಿ ಅಥವಾ ಇನ್ನಾವುದನ್ನೂ ಪರಿಗಣಿಸದೆ ಎಲ್ಲರಿಗೂ ಸಮಾನ ಆರ್ಥಿಕ ಸ್ಥಿರತೆಯನ್ನು ಆಯಾ ದೇಶಗಳೊಳಗೇ ಒದಗಿಸುವುದು ಈ ಗುರಿಯ ಉದ್ದೇಶ. ಬಹುತೇಕ ಎಲ್ಲಾ ದೇಶಗಳಲ್ಲೂ ವರಮಾನವು ಶ್ರಮದ ಆಧಾರದ ಮೇಲೆ ಪರಿಗಣಿತವಾಗದೆ ಬಂಡವಾಳದ ಮೇಲೆ ಆಧಾರವಾಗಿರುವುದೇ ಬಹು ಮುಖ್ಯ ಕಾರಣವಾಗಿದೆ. ಜಾಗತಿಕ ನಿವ್ವಳ ಆಂತರಿಕ ಉತ್ಪನ್ನದಲ್ಲಿ ಕಾರ್ಮಿಕ ವರ್ಗದ ಪಾಲು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಬರುತ್ತಿದೆ. ದೇಶಗಳ ಒಳಗೆ ಮತ್ತು ದೇಶಗಳ ನಡುವೆ ಆರ್ಥಿಕ ನೆರವೂ ಸೇರಿದಂತೆ ಎಲ್ಲಾ ಸಂಪನ್ಮೂಲಗಳ ಸಮಾನ ಹಂಚಿಕೆಯಾದಾಗ ಮಾತ್ರ ಈ ಅಸಮಾನತೆಯನ್ನು ನಿವಾರಿಸಲು ಸಾಧ್ಯ.

ದೇಶದಲ್ಲಿ ಅಸಮಾನತೆ ಅಥವಾ ತಾರತಮ್ಯವನ್ನು ನಿವಾರಿಸಲು ಅನೇಕ ಕಾರ್ಯಕ್ರಮಗಳು, ಯೋಜನೆಗಳು, ಕಾನೂನುಗಳು ಜಾರಿಯಲ್ಲಿದ್ದರೂ ಅವುಗಳನ್ನು ಸಾಮಾಜಿಕ ಅಸಮಾನತೆಯ ಅಥವಾ ಮಾನವ ಹಕ್ಕುಗಳ ಹಿನ್ನೆಲೆಯಲ್ಲೇ ಹೆಚ್ಚು ಪರಿಗಣಿಸಲಾಗಿದೆ. ಆದರೆ ಪ್ರಸ್ತುತ ಇವುಗಳನ್ನು ನಾವು ಆರ್ಥಿಕ ಅಸಮಾನತೆಯನ್ನು ನಿವಾರಿಸುವ ದೃಷ್ಟಿಕೋನದಿಂದಲೂ ನೋಡುವ ಅವಶ್ಯಕತೆಯಿದೆ.

ಸಹಸ್ರಮಾನದ ಅಭಿವೃದ್ಧಿ ಗುರಿಗಳನ್ನು ಸಂಪೂರ್ಣವಾಗಿ ಸಾಧಿಸಬೇಕಾದರೆ ಜಗತ್ತಿನ ಎಲ್ಲಾ ಮನುಷ್ಯರಿಗೂ ಸಮಾನ ಅವಕಾಶ, ಸೇವೆಗಳು ಮತ್ತು ಉತ್ತಮ ಜೀವನವನ್ನು ನಡೆಸಲು ಬೇಕಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಲೇಬೇಕು. ಅಂದರೆ ಎಲ್ಲರಿಗೂ ಗೌರವಯುತವಾದ ಜೀವನವನ್ನು ಖಾತ್ರಿಪಡಿಸಲೇಬೇಕು. ಉದಾಹರಣೆಗೆ, ಈ ಮುಂದಿನ ವಾಸ್ತವಗಳನ್ನು ಗಮನಿಸಿ: ಜಗತ್ತಿನಲ್ಲಿ ಪ್ರತಿ ವರ್ಷ ಸುಮಾರು 7000 ಕೋಟಿ 5 ವರ್ಷದೊಳಗಿನ ಮಕ್ಕಳು ತಡೆಗಟ್ಟಬಹುದಾದ ಕಾಯಿಲೆಗಳಿಂದ ಮರಣ ಹೊಂದುತ್ತಿದ್ದಾರೆ. ಹೆರಿಗೆ ಸಮಯದಲ್ಲಿ ಮರಣ ಪ್ರಮಾಣ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದಲ್ಲಿ ತೀರಾ ಹೆಚ್ಚಿದೆ. ಕರ್ನಾಟಕವೂ ಸೇರಿದಂತೆ ಭಾರತದಲ್ಲಿ ಶಿಶು ಮರಣ, ತಾಯಂದಿರ ಮರಣ, ಬಾಲ್ಯವಿವಾಹ ಇವೇ ಮೊದಲಾದವು ಹೆಚ್ಚಿರುವುದು ಹಿಂದುಳಿದ ಜಾತಿ, ವರ್ಗ, ಪಂಗಡ ಮತ್ತು ಅಲ್ಪಸಂಖ್ಯಾತರ ಬಡಸಮುದಾಯಗಳಲ್ಲಿ. ಇದಕ್ಕೆ ಮುಖ್ಯ ಕಾರಣ ಶಿಕ್ಷಣ ಮತ್ತು ಅರ್ಥಿಕತೆಯ ಅಸಮಾನ ಹಂಚಿಕೆ ಮತ್ತು ತಾರತಮ್ಯ. ಮೂಲಭೂತ ಸೇವೆ ಸೌಲಭ್ಯಗಳು ಸಮಪ್ರಮಾಣದಲ್ಲಿ ಮತ್ತು ಆವಶ್ಯಕತೆ ಹೆಚ್ಚಿರುವ ಪ್ರದೇಶಗಳಲ್ಲಿ ತೊಡಗಿಸಿಲ್ಲದಿರುವುದೂ ಮುಖ್ಯ ಕಾರಣ. ಭಾರತವನ್ನೂ ಒಳಗೊಂಡು ಬಹುತೇಕ ಅಭಿವೃದ್ಧಿ ಶೀಲ ದೇಶಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಆರ್ಥಿಕ ಅಸಮಾನತೆ ಹೆಚ್ಚಾಗುತ್ತಿದೆ. ಜಾಗತಿಕ ಅಸಮಾನತೆಯು ವಿಶ್ವದ ಎಲ್ಲರ ಮೇಲೆಯೂ ಪರಿಣಾಮ ಬೀರುತ್ತದೆ ಮತ್ತು ಅಭಿವೃದ್ಧಿಗೆ ಅಡ್ಡಿಯನ್ನುಂಟು ಮಾಡುತ್ತದೆ. ಈ ನಿಟ್ಟಿನಲ್ಲಿ ಎಲ್ಲರನ್ನೂ ಒಳಗೊಳ್ಳುವ ರಾಜಕೀಯ, ಆರ್ಥಿಕ, ಸಾಮಾಜಿಕ ನೀತಿಗಳನ್ನು ರೂಪಿಸಿ ಜಾರಿಗೊಳಿಸಬೇಕಾದ ಅವಶ್ಯಕತೆಯಿದೆ. ಜೊತೆಗೆ ಆರೋಗ್ಯ, ಶಿಕ್ಷಣ, ಸಾಮಾಜಿಕ ರಕ್ಷಣೆಗೆ ಹೆಚ್ಚಿನ ಸಂಪನ್ಮೂಲಗಳನ್ನು ತೊಡಗಿಸಬೇಕಿದೆ ಮತ್ತು ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸಬೇಕಿದೆ. ಇಲ್ಲೆಲ್ಲಾ ಸಮಾನತೆ ಎನ್ನುವುದಕ್ಕಿಂತಾ ಎಲ್ಲೆಲ್ಲಿ ಸೇವೆ, ಸೌಲಭ್ಯ, ಮಾಹಿತಿ, ಮತ್ತಿತರ ಆವಶ್ಯಕತೆಗಳು ತುರ್ತಾಗಿ ಮತ್ತು ನಿರಂತರವಾಗಿ ಬೇಕಿದೆಯೋ ಅಂತಹ ಕಡೆ ಆದ್ಯತೆಯಿಂದ ನೀಡುವುದೇ ಅಭಿವೃದ್ಧಿ ಮೌಲ್ಯವಾಗಬೇಕಿದೆ.

## ನೀವು ಮಾಡಬಹುದಾದದ್ದು

- ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಇರುವ ಸರ್ಕಾರದ ಯೋಜನೆಗಳು ಅಥವಾ ಕಾರ್ಯಕ್ರಮಗಳನ್ನು ಕುರಿತು ತಳ ಸಮುದಾಯಗಳಲ್ಲಿ ವ್ಯಾಪಕ ಪ್ರಚಾರ ಮಾಡಿ.
- ಈ ಯೋಜನೆ, ಕಾರ್ಯಕ್ರಮ, ನೆರವು ಇತ್ಯಾದಿ ನಿಜಕ್ಕೂ ಜನಸಮುದಾಯಕ್ಕೆ ತಲುಪುತ್ತಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಿ.
- ಪ್ರತಿ ವರ್ಷ ಇಂತಹ ಯೋಜನೆ, ಕಾರ್ಯಕ್ರಮಗಳಿಗಾಗಿ ಸರ್ಕಾರ ಎಷ್ಟು ಹಣವನ್ನು ಮೀಸಲಿಟ್ಟಿದೆ ಮತ್ತು ಅದಕ್ಕೆ ಅರ್ಹರಾದ ವ್ಯಕ್ತಿಗಳ ಆಯ್ಕೆ ಹೇಗೆ ನಡೆಯುತ್ತಿದೆ ಎಂಬುದನ್ನು ಕುರಿತು ಅನುಸರಣೆ ನಡೆಸಿ. ಅದೇ ರೀತಿ ಪ್ರತಿ ವರ್ಷ ಇಂತಹ ಸೇವೆಗಳಿಗೆ ಅರ್ಹರಾದ ವ್ಯಕ್ತಿಗಳ ಸಂಖ್ಯೆಯಲ್ಲಿ ಹೆಚ್ಚಳ ಅಥವಾ ಇಳಿಕೆ ಆಗಿರುವುದೋ ಇಲ್ಲವೋ ಗಮನಿಸಿ ಆ ಕುರಿತು ವರದಿ ತಯಾರಿಸಿ ಸಂಬಂಧಿಸಿದವರ ಬಳಿ ವಕೀಲಿಗಾಗಿ ಬಳಸಿ.
- ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಅವರಿಗಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿ ಮತ್ತು ಅವರು ಅವುಗಳನ್ನು ಪಡೆದುಕೊಳ್ಳಲು ನೆರವಾಗಿ.
- ಸೇವೆಗಳನ್ನು ಒದಗಿಸುವಲ್ಲಿ ಜಾತಿ, ಧರ್ಮ, ಲಿಂಗ, ಪಂಗಡ, ವಿಕಲತೆ ಮೊದಲಾದ ಯಾವುದೇ ಕಾರಣದಿಂದ ತಾರತಮ್ಯ ನಡೆಯುತ್ತಿದ್ದಲ್ಲಿ ಸಂಬಂಧಪಟ್ಟವರಿಗೆ ದೂರು ನೀಡಿ.
- ವಲಸೆ ಹೋಗುವ ಅಥವಾ ಬರುವ ಕುಟುಂಬಗಳನ್ನು ಸಾಧ್ಯವಾದಷ್ಟೂ ಅನುಸರಣೆ ಮಾಡಿ.

## ಸವಾಲುಗಳು

- ಭಾರತದಂತಹ ದೇಶದಲ್ಲಿ ತಾರತಮ್ಯವೆಂಬುದು ಜನರ ಜೀವನದಲ್ಲಿ ಗುಪ್ತಗಾಮಿನಿಯಾಗಿ ಸೇರಿಹೋಗಿದೆ. ಅದರ ಪರಿಣಾಮ ಬಾಲ್ಯದಿಂದಲೇ ಹಲವರು ತಾರತಮ್ಯಕ್ಕೆ ಒಳಗಾಗುತ್ತಿದ್ದರೂ, ಅದು ಬಹಳ ಸ್ವಾಭಾವಿಕವೆಂದೇ ತಿಳಿದು ಬೆಳೆದಿರುತ್ತಾರೆ. ತಾರತಮ್ಯ ಕೂಡದು ಎಂಬುದನ್ನು ಎಲ್ಲರಿಗೂ ಬಾಲ್ಯದಿಂದಲೇ ತಿಳಿಸುವ ಯತ್ನಗಳು ಅಷ್ಟು ಯಶಸ್ವಿಯಾಗಿ ನಡೆದಿಲ್ಲ. ತಾರತಮ್ಯ ನಿವಾರಣೆಗೆ ನಿರಂತರ ಮತ್ತು ಸಂಘಟಿತ ಪ್ರಯತ್ನವಾಗಬೇಕು.
- ಬಹುತೇಕ ತಾರತಮ್ಯಗಳು ಧರ್ಮ ಮತ್ತು ಜಾತಿ ಆಧಾರಿತವಾಗಿರುವುದರಿಂದ ಇವುಗಳ ನಿವಾರಣೆಗೆ ಪ್ರಬಲ ರಾಜಕೀಯ ಇಚ್ಛಾಶಕ್ತಿ ಬೇಕಾಗುತ್ತದೆ. ಹಾಗಾಗಲು ದೀರ್ಘಕಾಲಿಕವೂ ಮತ್ತು ಪ್ರಬಲವೂ ಅದ ಜನಾಂದೋಲನದ ಅವಶ್ಯಕತೆಯಿದೆ.

| ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಸುಸ್ಥಿರ ಅಭಿವೃದ್ಧಿ ಗುರಿ 10 ಅರ್ಥ ಮಾಡಿಕೊಳ್ಳಲು ಓದಬೇಕಿರುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989ರ ಪರಿಚ್ಛೇದಗಳು | | | |
|---|---|---|---|
| **ಪರಿಚ್ಛೇದ ಸಂಖ್ಯೆ** | **ಪರಿಚ್ಛೇದದ ಶೀರ್ಷಿಕೆ** | **ಪರಿಚ್ಛೇದ ಸಂಖ್ಯೆ** | **ಪರಿಚ್ಛೇದದ ಶೀರ್ಷಿಕೆ** |
| 2 | ಮಕ್ಕಳ ನಡುವೆ ತಾರತಮ್ಯ/ಭೇದಭಾವ ಇರಬಾರದು/ಮಾಡಬಾರದು | 4 | ಮಕ್ಕಳ ಹಕ್ಕುಗಳ ಜಾರಿಗೆ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು |
| 8 | ಮಕ್ಕಳ ವ್ಯಕ್ತಿತ್ವಕ್ಕೆ ಎಂತಹದೇ ಸನ್ನಿವೇಶದಲ್ಲಿ ಧಕ್ಕೆ ಬರಬಾರದು | 9 | ಮಕ್ಕಳ ರಕ್ಷಣೆಯಲ್ಲಿ ಪೋಷಕರ ಪಾತ್ರ ಪ್ರಮುಖವಾಗಿ ಇದೆ. |
| 10 | ಮಕ್ಕಳಿಗೆ ತಮ್ಮ ತಮ್ಮ ಪೋಷಕರೊಂದಿಗೆ ಇರುವ ಹಕ್ಕು ಇದೆ | 11 | ಯಾವುದೇ ಮಗುವನ್ನು ಕಾನೂನಿಗೆ ವಿರುದ್ಧವಾಗಿ ಸ್ಥಳಾಂತರ / ಸಾಗಣೆ ಮಾಡಬಾರದು |
| 12 | ಮಕ್ಕಳಿಗೆ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ ಇದೆ | 13 | ಮಕ್ಕಳಿಗೆ ವಿವಿಧ ಮೂಲಗಳಿಂದ ಮಾಹಿತಿ ಹೊಂದುವ ಸ್ವಾತಂತ್ರ್ಯ |
| 17 | ಮಕ್ಕಳಿಗೆ ಸೂಕ್ತವಾದ ಮಾಹಿತಿ ನೀಡುವ ಜವಾಬ್ದಾರಿ ಮಾಧ್ಯಮಗಳಿಗಿದೆ. | 22 | ನಿರಾಶ್ರಿತರಾದ ಮಕ್ಕಳಿಗೆ ಆದ್ಯತೆಯಿಂದ ರಕ್ಷಣೆ ನೀಡಬೇಕು |
| 23 | ಅಂಗವಿಕಲತೆಯಿರುವ ಮಕ್ಕಳಿಗೆ ರಕ್ಷಣೆ ನೀಡಬೇಕು | 26 | ಎಲ್ಲ ಮಕ್ಕಳಿಗೆ ಸಾಮಾಜಿಕ ಭದ್ರತೆ ನೀಡಲೇಬೇಕು |
| 27 | ಎಲ್ಲ ಮಕ್ಕಳಿಗೆ ಸೂಕ್ತ ಜೀವನ ಮಟ್ಟ ದೊರೆಯಬೇಕು | 30 | ಅಲ್ಪಸಂಖ್ಯಾತ ವರ್ಗ / ಧರ್ಮ / ಜಾತಿಗಳ ಎಲ್ಲ ಮಕ್ಕಳಿಗೆ ಎಲ್ಲ ಹಕ್ಕುಗಳು ಇದೆ |

## ಭಾರತ/ ರಾಜ್ಯ ಸರ್ಕಾರದ ಕ್ರಮಗಳು



| ಉಸ್ತುವಾರಿ ಸಚಿವಾಲಯ | ಕೇಂದ್ರ/ರಾಜ್ಯ ಸರ್ಕಾರದ ಯೋಜನೆಗಳು | ಸಂಬಂಧಿತ ಕ್ರಮಗಳು | ಇತರ ಸಂಬಂಧಿತ ಸಚಿವಾಲಯಗಳು/ ಇಲಾಖೆಗಳು |
|---|---|---|---|
| ಸಾಮಾಜಿಕ ನ್ಯಾಯ ಮತ್ತು ಸಶಕ್ತತೆ | 1. ಅಲ್ಪಸಂಖ್ಯಾತರಿಗೆ ವಿವಿಧ ವಲಯಗಳ ಅಭಿವೃದ್ಧಿ ಯೋಜನೆ<br>2. ಹಿಂದುಳಿದ ಪ್ರದೇಶಗಳ ನಿಧಿ<br>3. ಪರಿಶಿಷ್ಟ ಜಾತಿಗಳ ಅಭಿವೃದ್ಧಿಗಾಗಿ ಯೋಜನೆ<br>4. ಇತರೆ ಅಲ್ಪಸಂಖ್ಯಾತರ ಮತ್ತು ಬುಡಕಟ್ಟು ಜನಾಂಗದವರ ಅಭಿವೃದ್ಧಿ ಯೋಜನೆ<br>5. ಆರ್ಥಿಕವಾಗಿ ಹಿಂದುಳಿದವರ ಅಭಿವೃದ್ಧಿಗಾಗಿ ಯೋಜನೆ | 1. ಈಶಾನ್ಯ ರಾಜ್ಯ ಮತ್ತು ಸಿಕ್ಕಿಂ ರಾಜ್ಯಗಳಿಗೆ ಕೇಂದ್ರ ನಿಧಿಯಿಂದ ನೆರವು<br>2. ಜಮ್ಮು ಮತ್ತು ಕಾಶ್ಮೀರದ ಯುವ ಜನತೆಗೆ ಉಡಾನ್ ಯೋಜನೆ<br>3. ಮುದ್ರಾ ಯೋಜನೆ<br>4. (ಅಡುಗೆ ಅನಿಲ ಸಹಾಯಧನ) ಬಿಟ್ಟು ಕೊಡಿ ಅಭಿಯಾನ | • ಸಾಮಾಜಿಕ ನ್ಯಾಯ ಮತ್ತು ಸಶಕ್ತತೆ<br>• ಕಾನೂನು ಮತ್ತು ನ್ಯಾಯ<br>• ಆರ್ಥಿಕ<br>• ಸಾಗರೋತ್ತರ ಭಾರತೀಯ ವ್ಯವಹಾರ |




11 SUSTAINABLE CITIES AND COMMUNITIES

# ಗುರಿ 11

## ಸುಸ್ಥಿರ ನಗರಗಳು ಮತ್ತು ಸಮುದಾಯಗಳು

### ನಗರಗಳನ್ನು ಮತ್ತು ಜನವಸತಿ ಪ್ರದೇಶಗಳನ್ನು ಸಮನ್ವಯ, ಸುರಕ್ಷಿತ, ಸದೃಢ ಮತ್ತು ಸುಸ್ಥಿರಗೊಳಿಸಿ

| | ಲಕ್ಷ್ಯಗಳು | | ಸೂಚಕಗಳು |
|---|---|---|---|
| 11.1 | 2030ರೊಳಗೆ, ಎಲ್ಲರಿಗೂ ಸಾಕಷ್ಟು, ಸುರಕ್ಷಿತ ಮತ್ತು ಕೈಗೆಟಕುವ ವಸತಿ ಮತ್ತು ಮೂಲ ಸೌಲಭ್ಯಗಳ ಲಭ್ಯತೆಯನ್ನು ಖಾತ್ರಿಪಡಿಸಿ ಮತ್ತು ಕೊಳೇಗೇರಿಗಳನ್ನು ಮೇಲ್ದರ್ಜೆಗೇರಿಸಿ | 11.1.1. | ಕೊಳೇಗೇರಿಗಳಲ್ಲಿ ವಾಸಿಸುತ್ತಿರುವ, ಅನೌಪಚಾರಿಕ ವಸಾಹತುಗಳಲ್ಲಿ ಅಥವಾ ಅಸಮರ್ಪಕ ಮನೆಗಳಲ್ಲಿ ಜೀವಿಸುತ್ತಿರುವ ನಗರ ಜನಸಂಖ್ಯೆಯ ಪ್ರಮಾಣ  |
| 11.2 | 2030ರೊಳಗೆ, ಅಸಹಾಯಕ ಪರಿಸ್ಥಿತಿಯಲ್ಲಿರುವವರು, ಮಹಿಳೆಯರು, ಮಕ್ಕಳು, ಅಂಗವಿಕಲರು ಮತ್ತು ವಯೋವೃದ್ಧರಿಗೆ ವಿಶೇಷ ಗಮನ ನೀಡುವುದೂ ಸೇರಿದಂತೆ ಮುಖ್ಯವಾಗಿ ಸಾರ್ವಜನಿಕ ಸಾರಿಗೆಯನ್ನು ವಿಸ್ತರಿಸಿ, ಆ ಮೂಲಕ ಎಲ್ಲರಿಗೂ ಸುರಕ್ಷಿತ, ಕೈಗೆಟಗುವ, ಲಭ್ಯತೆಯುಳ್ಳ ಮತ್ತು ಸುಸ್ಥಿರ ಸಾರಿಗೆ ವ್ಯವಸ್ಥೆಯನ್ನು ಒದಗಿಸಿ, ರಸ್ತೆ ಸುರಕ್ಷತೆಯನ್ನು ಸುಧಾರಿಸಿ | 11.2.1. | ಲಿಂಗ, ವಯಸ್ಸು ಮತ್ತು ವಿಕಲಚೇತನ ವ್ಯಕ್ತಿಗಳಾವಾರು ಸಾರ್ವಜನಿಕ ಸಾರಿಗೆ ಅನುಕೂಲಕರ ಲಭ್ಯತೆಯನ್ನು ಹೊಂದಿರುವ ಜನಸಂಖ್ಯೆಯ ಪ್ರಮಾಣ  |
| 11.3 | 2030ರೊಳಗೆ, ಎಲ್ಲಾ ದೇಶಗಳಲ್ಲೂ ಸಮನ್ವಯ ಮತ್ತು ಸುಸ್ಥಿರ ನಗರೀಕರಣವನ್ನು ಮತ್ತು ಭಾಗವಹಿಸುವ ಸಾಮರ್ಥ್ಯ, ಸಮಗ್ರ ಮತ್ತು ಸುಸ್ಥಿರ ಮಾನವ ವಸಾಹತು ಯೋಜನೆ ಮತ್ತು ನಿರ್ವಹಣೆಯನ್ನು ಹೆಚ್ಚಿಸಿ | 11.3.2. | ನಗರಗಳಲ್ಲಿ ನಿರಂತರವಾಗಿ ಮತ್ತು ಪ್ರಜಾಸತ್ತೀಯವಾಗಿ ಕಾರ್ಯನಿರ್ವಹಿಸುವ ನಗರ ಯೋಜನೆ ಮತ್ತು ನಿರ್ವಹಣೆಯಲ್ಲಿ ನಾಗರೀಕ ಸಮಾಜದ ಭಾಗವಹಿಸುವಿಕೆಯ ಸ್ವರೂಪದ ಪ್ರಮಾಣ |
| 11.4 | ವಿಶ್ವದ ಸಾಂಸ್ಕೃತಿಕ ಮತ್ತು ನೈಸರ್ಗಿಕ ತಾಣಗಳ ರಕ್ಷಣೆ ಮತ್ತು ಸಂರಕ್ಷಣೆಯ ಪ್ರಯತ್ನಗಳನ್ನು ಬಲಪಡಿಸಿ | 11.4.1. | ಪರಂಪರಾಗತ ತಾಣಗಳವಾರು (ಸಾಂಸ್ಕೃತಿಕ, ನೈಸರ್ಗಿಕ, ಮಿಶ್ರ ಮತ್ತು ವಿಶ್ವ ಪರಂಪರಾ ಕೇಂದ್ರದಿಂದ ಅನುಮೋದಿಸಲ್ಪಟ್ಟ), ಸರ್ಕಾರದ ಹಂತ (ರಾಷ್ಟ್ರೀಯ, ಪ್ರಾಂತೀಯ, ಸ್ಥಳೀಯ/ ಪುರಸಭೆ), ವೆಚ್ಚದ ವಿಧ (ನಿರ್ವಹಣಾ ವೆಚ್ಚ/ಹೂಡಿಕೆ) ಮತ್ತು ಖಾಸಗಿ ನೆರವಿನ ವಿಧ (ವಸ್ತುಗಳ ಕೊಡುಗೆ, ಖಾಸಗಿ ಲಾಭರಹಿತ ವಲಯ ಮತ್ತು ಪ್ರಾಯೋಜಕತೆ) ಆಧಾರದ ಮೇಲೆ ಎಲ್ಲಾ ಸಾಂಸ್ಕೃತಿಕ ಮತ್ತು ನೈಸರ್ಗಿಕ ಪರಂಪರಾಗತ ತಾಣಗಳ ಕಾಪಿಡಲು, ರಕ್ಷಣೆ ಮತ್ತು ಸಂರಕ್ಷಣೆಗಾಗಿ ಒಟ್ಟು ವೆಚ್ಚ ಮಾಡುವ (ಸರ್ಕಾರ ಮತ್ತು ಖಾಸಗಿ) ತಲಾವಾರು ವೆಚ್ಚ |

| | | | |
|---|---|---|---|
| 11.5 | 2030ರೊಳಗೆ, ಬಡವರನ್ನು ಮತ್ತು ಅಸಹಾಯಕ ಸ್ಥಿತಿಯಲ್ಲಿರುವ ಜನರನ್ನು ರಕ್ಷಿಸುವುದಕ್ಕೆ ಆದ್ಯತೆಯನ್ನಿರಿಸಿಕೊಂಡು ಜಾಗತಿಕ ನಿವ್ವಳ ಆಂತರಿಕ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಜಲ ಸಂಬಂಧಿ ವಿಕೋಪಗಳೂ ಸೇರಿದಂತೆ ಎಲ್ಲ ರೀತಿಯ ವಿಪತ್ತುಗಳಿಂದ ಉಂಟಾಗುವ ಆರ್ಥಿಕ ಕೊರತೆಯಿಂದ ಬಳಲುವ ಜನರ ಮತ್ತು ಮರಣ ಹೊಂದುವ ಜನರ ಸಂಖ್ಯೆಯನ್ನು ಗಣನೀಯವಾಗಿ ಇಳಿಸಿ | 11.5.1. | ಪ್ರತಿ ಒಂದು ಲಕ್ಷ ಜನಸಂಖ್ಯೆಗೆ ಮರಣ ಹೊಂದುವ, ಕಾಣೆಯಾಗುವ ಮತ್ತು ವಿಕೋಪಗಳಿಂದ ತೊಂದರೆಗೊಳಗಾಗುವ ಜನರ ಸಂಖ್ಯೆ  |
| | | 11.5.2. | ನಿರ್ಣಾಯಕ ಮೂಲಸೌಲಭ್ಯಗಳು ಮತ್ತು ಮೂಲಸೇವೆಗಳಿಗಾದ ತೊಂದರೆಗಳು ಸೇರಿದಂತೆ ಜಾಗತಿಕ ನಿವ್ವಳ ಆಂತರಿಕ ಉತ್ಪನ್ನಗಳಿಗೆ ಸಂಬಂಧಿಸಿದಂತೆ ವಿಕೋಪದಿಂದಾಗುವ ನೇರ ಆರ್ಥಿಕ ಹಾನಿ |
| 11.6 | 2030ರೊಳಗೆ, ಗಾಳಿಯ ಗುಣಮಟ್ಟ ಮತ್ತು ನಗರ ಹಾಗು ಇತರೆ ತ್ಯಾಜ್ಯ ನಿರ್ವಹಣೆಗೆ ವಿಶೇಷ ಗಮನ ನೀಡುವುದೂ ಸೇರಿದಂತೆ ನಗರಗಳ ತಲಾನಿವಾಸಿ ಪರಿಸರ ದುಷ್ಪರಿಣಾಮಗಳನ್ನು ಕಡಿಮೆಗೊಳಿಸಿ | 11.6.1. | ನಿಯಮಿತವಾಗಿ ಸಂಗ್ರಹಿಸುವ ನಗರ ಘನ ತ್ಯಾಜ್ಯ ಮತ್ತು ಒಟ್ಟು ಉತ್ಪತ್ತಿಯಾಗುವ ನಗರ ಘನ ತ್ಯಾಜ್ಯದಲ್ಲಿ ಅಂತಿಮವಾಗಿ ವಿಸರ್ಜಿಸಿದ ತ್ಯಾಜ್ಯದ ನಗರಾವಾರು ಪ್ರಮಾಣ |
| | | 11.6.2. | ನಗರಗಳ ವಾಯುವಲಯದಲ್ಲಿ (ಜನಸಂಖ್ಯೆಗೆ ಅನುಸಾರವಾಗಿ) ಧೂಳಿನ ಕಣಗಳ (ಉದಾ.ಪಿ.ಎಂ.2.5 ಮತ್ತು ಪಿ.ಎಂ.10) ಪ್ರಮಾಣದ ವಾರ್ಷಿಕ ಮೀನ್ ಮಟ್ಟ |
| 11.7 | 2030ರೊಳಗೆ, ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳು, ಹಿರಿಯ ನಾಗರೀಕರು ಮತ್ತು ಅಂಗವಿಕಲ ವ್ಯಕ್ತಿಗಳೂ ಸೇರಿದಂತೆ ಎಲ್ಲರಿಗೂ ಸುರಕ್ಷಿತ, ಸಮನ್ವಯ ಮತ್ತು ಪ್ರವೇಶ–ಸಾಧ್ಯ ಉದ್ಯಾನವನ ಮತ್ತು ಸಾರ್ವಜನಿಕ ಸ್ಥಳಗಳ ಸಾರ್ವತ್ರಿಕ ಲಭ್ಯತೆಯನ್ನು ಒದಗಿಸಿ | 11.7.1. | ಲಿಂಗ, ವಯಸ್ಸು ಮತ್ತು ಅಂಗವಿಕಲತೆಯಿರುವ ವ್ಯಕ್ತಿಗಳಾವಾರು ನಗರ ಪ್ರದೇಶದಲ್ಲಿ ಎಲ್ಲಾ ಸಾರ್ವಜನಿಕರ ಮುಕ್ತ ಬಳಕೆಗಾಗಿ ನಿರ್ಮಿಸಿರುವ ಪ್ರದೇಶಗಳ ಸರಾಸರಿ ಪಾಲು.  |
| | | 11.7.2. | ಲಿಂಗ, ವಯಸ್ಸು, ಅಂಗವಿಕಲತೆಯ ವಿಧಕ್ಕನುಗುಣವಾಗಿ ಕಳೆದ 12 ತಿಂಗಳಲ್ಲಿ ದೈಹಿಕ ಮತ್ತು ಲೈಂಗಿಕ ಶೋಷಣೆಗೆ ಗುರಿಯಾದ ಜನರ ಸಂಖ್ಯೆ  |
| 11.ಎ | ರಾಷ್ಟ್ರೀಯ ಮತ್ತು ಪ್ರಾದೇಶಿಕ ಅಭಿವೃದ್ಧಿ ಯೋಜನೆಗಳನ್ನು ಸದೃಢಗೊಳಿಸುವ ಮೂಲಕ ನಗರ, ಅರೆ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಆರ್ಥಿಕ, ಸಾಮಾಜಿಕ ಮತ್ತು ಪರಿಸರದ ಕೊಂಡಿಗಳಿಗೆ ಧನಾತ್ಮಕ ನೆರವು ನೀಡಿ | 11.ಎ.1. | ಜನಸಂಖ್ಯಾ ಹೆಚ್ಚಳ ಮತ್ತು ಸಂಪನ್ಮೂಲಗಳ ಅವಶ್ಯಕತೆಗಳನ್ನು ಸೇರಿಸಿಕೊಂಡು ನಗರ ಮತ್ತು ಪ್ರಾಂತೀಯ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸುವ ನಗರಗಳಲ್ಲಿ ಜೀವಿಸುತ್ತಿರುವ ಜನಸಂಖ್ಯೆಯ ನಗರಗಳ ವಿಸ್ತಾರಾವಾರು ಪ್ರಮಾಣ. |

| | | | |
|---|---|---|---|
| 11.ಬಿ | 2020ರೊಳಗೆ, ವಾತಾವರಣ ಬದಲಾವಣೆಗೆ ಹೊಂದಿಕೊಳ್ಳುವ, ವಿಕೋಪಗಳನ್ನೆದುರಿಸುವ ಸಾಮರ್ಥ್ಯವನ್ನು ಹೆಚ್ಚಿಸಲು ಸಂಪನ್ಮೂಲ ದಕ್ಷತೆ, ಹಾನಿ ತಗ್ಗಿಸುವ ಕ್ರಮಗಳನ್ನು ಅಳವಡಿಸಿಕೊಂಡು, ಸಮನ್ವಯತೆಯೆಡೆಗೆ ಸಮಗ್ರ ನೀತಿಗಳು ಮತ್ತು ಯೋಜನೆಗಳನ್ನು ಅಳವಡಿಸಿಕೊಂಡು ಜಾರಿಗೊಳಿಸುತ್ತಿರುವ ನಗರ ಮತ್ತು ಮಾನವ ವಸಾಹತುಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಿ, ಮತ್ತು ಎಲ್ಲಾ ಹಂತಗಳಲ್ಲೂ ವಿಕೋಪಗಳ ತೊಂದರೆಯನ್ನು ತಗ್ಗಿಸುವ ಸಾಂಡೈ ಚೌಕಟ್ಟು 2015–30ರ ಅನುಸಾರವಾಗಿ ವಿಕೋಪ ಸಂದರ್ಭಗಳಲ್ಲಿ ಸ್ಥಿರತೆ ಮತ್ತು ಅಭಿವೃದ್ಧಿ ಜಾರಿಯನ್ನು ಕಾರ್ಯಗತಗೊಳಿಸಿ | 11.ಬಿ.1. | ವಿಕೋಪ ತೊಂದರೆಯನ್ನು ತಗ್ಗಿಸುವ ಸಾಂಡೈ ಚೌಕಟ್ಟು 2015–30ಕ್ಕೆ ಅನುಗುಣವಾಗಿ ವಿಕೋಪ ತೊಂದರೆ ತಗ್ಗಿಸುವ ತಂತ್ರಗಳನ್ನು ಅಳವಡಿಸಿಕೊಂಡು ಜಾರಿಗೊಳಿಸುತ್ತಿರುವ ಸ್ಥಳೀಯ ಸರ್ಕಾರಗಳ ಪ್ರಮಾಣ |
| | | 11.ಬಿ.2 | ರಾಷ್ಟ್ರೀಯ ಮತ್ತು ಸ್ಥಳೀಯ ವಿಕೋಪ ತೊಂದರೆ ತಗ್ಗಿಸುವ ತಂತ್ರಗಳನ್ನು ಅಳವಡಿಸಿಕೊಂಡಿರುವ ದೇಶಗಳ ಸಂಖ್ಯೆ |
| 11.ಸಿ | ಆರ್ಥಿಕ ಮತ್ತು ತಂತ್ರಜ್ಞಾನದ ನೆರವೂ ಸೇರಿದಂತೆ, ಕನಿಷ್ಠ ಅಭಿವೃದ್ಧಿಹೊಂದಿದ ದೇಶಗಳಿಗೆ ಸ್ಥಳೀಯ ಸಾಮಗ್ರಿಗಳನ್ನು ಬಳಸಿ ಸುಸ್ಥಿರ ಮತ್ತು ಸದೃಢ ಕಟ್ಟಡಗಳನ್ನು ಕಟ್ಟಲು ನೆರವು ನೀಡಿ | 11.ಸಿ.1. | ಸ್ಥಳೀಯ ಸಾಮಗ್ರಿಗಳನ್ನು ಬಳಸಿಕೊಂಡು ಸುಸ್ಥಿರ, ಸದೃಢ ಮತ್ತು ಸಮರ್ಥ ಸಂಪನ್ಮೂಲದ ಕಟ್ಟಡಗಳ ನಿರ್ಮಾಣ ಮತ್ತು ಮರುಮಾರ್ಪಾಡಿಗಾಗಿ ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳಿಗೆ ನಿಗದಿಪಡಿಸಿರುವ ಆರ್ಥಿಕ ನೆರವಿನ ಪ್ರಮಾಣ |

**ವಿವರಣೆ**

ಇತ್ತೀಚಿನ ದಶಕಗಳಲ್ಲಿ ಕೈಗಾರಿಕೀಕರಣ ಮತ್ತು ಉದ್ದಿಮೆಗಳ ಮೇಲಿನ ಪ್ರಾಮುಖ್ಯತೆಯಿಂದಾಗಿ ನಗರ ಪ್ರದೇಶಗಳ ಜನಸಂಖ್ಯೆ ಹೆಚ್ಚಾಗುತ್ತಲೇ ಇದೆ. ಹಲವಾರು ಕಾರಣಗಳಿಂದ ಜನ ಗ್ರಾಮೀಣ ಪ್ರದೇಶದಿಂದ ನಗರಕ್ಕೆ ವಲಸೆ ಬರುತ್ತಲೇ ಇದ್ದಾರೆ ಇವುಗಳಲ್ಲಿ ಬಹು ಮುಖ್ಯವಾದ ಕಾರಣ ಗ್ರಾಮೀಣ ಪ್ರದೇಶದಲ್ಲಿ ಕಡಿಮೆಯಾಗುತ್ತಿರುವ ಉದ್ಯೋಗದ ಅವಕಾಶಗಳು. 2001ರ ಜನಗಣತಿಯಂತೆ ಶೇ. 34ರಷ್ಟಿದ್ದ ನಗರ ಪ್ರದೇಶದ ಜನಸಂಖ್ಯೆ 2011ರ ಜನಗಣತಿಯಲ್ಲಿ ಶೇ. 39ಕ್ಕೆ ತಲುಪಿದೆ ಹಾಗೂ ಮುಂಬರುವ ವರ್ಷಗಳಲ್ಲಿ ಇನ್ನೂ ಹೆಚ್ಚಾಗುವ ಸೂಚನೆಗಳಿವೆ. ಒಂದು ಅಂದಾಜಿನ ಪ್ರಕಾರ 2030ರೊಳಗೆ ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ ಶೇ. 60ರಷ್ಟು ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುತ್ತಾರೆ. ಅಂದರೆ ಈ ಅತಿವೇಗದ ನಗರೀಕರಣದಿಂದ ನಗರಗಳಲ್ಲಿ ಈಗಿರುವುದಕ್ಕಿಂತ ಹೆಚ್ಚು ಜನದಟ್ಟಣೆ, ವಸತಿ ಮತ್ತು ನೀರಿನ ಸಮಸ್ಯೆ, ಕೊಳೆಗೇರಿಗಳ ಸಂಖ್ಯೆಯಲ್ಲಿ ಅಗಾಧವಾಗಿ ಹೆಚ್ಚಳವಾಗುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಹೀಗೆಯೇ ಮುಂದುವರೆದರೆ ನಗರಗಳು ಸಮಸ್ಯೆಗಳ, ಮಾಲಿನ್ಯದ ಆಗರಗಳಾಗುತ್ತವೆ.

ಪ್ರಪಂಚದ ಒಟ್ಟು ಭೂಪ್ರದೇಶದ ಶೇ. 3ರಷ್ಟು ಭೂಭಾಗದಲ್ಲಿ ನಗರಗಳಿದ್ದರೂ ಸಹ ಅವುಗಳು ವಿಶ್ವದ ಶೇ. 75ರಷ್ಟು ಇಂಧನ ಬಳಕೆ ಮತ್ತು ಇಂಗಾಲದ ಹೊರಹೊಮ್ಮುವಿಕೆಗೆ ಕಾರಣವಾಗಿವೆ. ಮುಂಬರುವ ವರ್ಷಗಳಲ್ಲಿ ಪರಿಸ್ಥಿತಿ ಇನ್ನಷ್ಟು ಕಠಿಣವಾಗಲಿದೆ. ಇದು ಕೇವಲ ನಗರ ಪ್ರದೇಶಗಳ ಸಮಸ್ಯೆ ಎಂದು ಸುಮ್ಮನಿರುವ ಹಾಗಿಲ್ಲ. ಏಕೆಂದರೆ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ರೀತಿಯಲ್ಲಿ ಈ ಪರಿಣಾಮಗಳ ಬಿಸಿ ತಟ್ಟುತ್ತದೆ. ಅದರಲ್ಲೂ ಈ ಪರಿಣಾಮಗಳು ಮಕ್ಕಳ ಮೇಲೆ ಹೆಚ್ಚಾಗುತ್ತವೆ. ಪ್ರಸ್ತುತ ನಗರ ಪ್ರದೇಶದಲ್ಲಿರುವ ಮಾಲಿನ್ಯ, ಶುದ್ಧ ನೀರಿನ ಕೊರತೆ, ಪರಿಸರ ಹಾನಿ ಇವುಗಳನ್ನು ತಡೆಗಟ್ಟುವುದರ ಜೊತೆಗೆ ಮುಂಬರುವ ವರ್ಷಗಳಲ್ಲಿ ಪರಿಸರಕ್ಕೆ ಧಕ್ಕೆಯಾಗದಂತೆ ನಗರಗಳನ್ನು ವಿಸ್ತರಿಸುವುದರ ಜೊತೆಗೆ ಅವುಗಳನ್ನು ಸದೃಢ ಮತ್ತು ಸುಸ್ಥಿರಗೊಳಿಸುವ ಅವಶ್ಯಕತೆಯಿದೆ.

ನಗರೀಕರಣ ಹೆಚ್ಚಿದಂತೆಲ್ಲಾ ಜನರ ಮೂಲ ಆವಶ್ಯಕತೆಗಳಾದ ನೀರು, ಶೌಚ ವ್ಯವಸ್ಥೆ, ವಿದ್ಯುತ್ ಸರಬರಾಜು, ಸಾಗಣೆ, ಆರೋಗ್ಯ, ಆಹಾರ ಸರಬರಾಜು, ವಸತಿ ಹೀಗೆ ಬೇಡಿಕೆಗಳ ಪಟ್ಟಿ ದೊಡ್ಡದಾಗುತ್ತಾ ಹೋಗುತ್ತದೆ. ಇದರೊಂದಿಗೆ ತಳಕು ಹಾಕಿಕೊಂಡು ಬರುವ ರೋಗರುಜಿನಗಳು, ಆಪರಾಧಿಕ ಪ್ರವೃತ್ತಿ, ಅನೈತಿಕ ವ್ಯವಹಾರಗಳು, ಒತ್ತಡಗಳನ್ನು ನಿಭಾಯಿಸಲು ವ್ಯವಸ್ಥೆ ಕಷ್ಟಪಡಬೇಕಾಗುತ್ತದೆ.

ದಕ್ಷಿಣ ಭಾರತದ ರಾಜ್ಯಗಳಲ್ಲಿರುವ ನಗರ ಜನಸಂಖ್ಯೆಯ ಶೇಕಡಾವಾರು ಪ್ರಮಾಣವನ್ನು ಇಲ್ಲಿ ನೀಡಲಾಗಿದೆ (ಮೂಲ: ಜನಗಣತಿ 2011)

| ರಾಜ್ಯಗಳು | ಗ್ರಾಮೀಣ | ನಗರ |
|---|---|---|
| ಕರ್ನಾಟಕ | 61.43 | 38.57 |
| ಆಂಧ್ರಪ್ರದೇಶ* | 66.51 | 33.49 |
| ಕೇರಳ | 52.28 | 47.72 |
| ತಮಿಳುನಾಡು | 51.55 | 48.45 |
| ಪುದುಚೇರಿ | 31.69 | 68.3 |
| ಭಾರತ | 68.84 | 31.16 |

*** ಅವಿಭಜಿತ ಆಂಧ್ರಪ್ರದೇಶ**

ಕರ್ನಾಟಕವೂ ಸೇರಿದಂತೆ ದಕ್ಷಿಣ ಭಾರತದ ಎಲ್ಲಾ ರಾಜ್ಯಗಳಲ್ಲೂ ನಗರ ಪ್ರದೇಶಗಳ ಜನಸಂಖ್ಯೆ ಹೆಚ್ಚಾಗುತ್ತಲೇ ಇದೆ. ಇದು ಇನ್ನೂ ಹೆಚ್ಚಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಏಕೆಂದರೆ ಬಹಳಷ್ಟು ಜನರಿಗೆ ತಮ್ಮ ಬಡತನ ನಿವಾರಣೆಗೆ, ಆರೋಗ್ಯ ಮತ್ತು ಶಿಕ್ಷಣದ ವ್ಯವಸ್ಥೆಗಳನ್ನು ಕಂಡುಕೊಳ್ಳಲು ನಗರಗಳೇ ಅಂತಿಮ ಗಮ್ಯ ಸ್ಥಳಗಳಾಗಿವೆ.

### ನೀವು ಮಾಡಬಹುದಾದ್ದು

- ನಗರಾಭಿವೃದ್ಧಿ ಯೋಜನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಸಲಹೆಗಳನ್ನು ನೀಡಿ.
- ತ್ಯಾಜ್ಯವನ್ನು ನಿರ್ದಿಷ್ಟಪಡಿಸಿದ ವಿಧಾನದಲ್ಲೇ ವಿಲೇವಾರಿ ಮಾಡಿ.
- ಸಂಚಾರದಟ್ಟಣೆ ಮತ್ತು ವಾಯುಮಾಲಿನ್ಯವನ್ನು ತಡೆಯಲು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಳಸಿ.
- ನಗರೀಕರಣವನ್ನು ತಡೆಯಲು ಗ್ರಾಮೀಣ ಪ್ರದೇಶಗಳ ಉದ್ದಿಮೆಗಳಿಗೆ ಹೆಚ್ಚು ಪ್ರೋತ್ಸಾಹ ನೀಡಿ.

### ಸವಾಲುಗಳು

- ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ನಗರಗಳನ್ನು ವಿಸ್ತರಿಸುವುದು ಮೂಲ ಸೌಲಭ್ಯಗಳನ್ನು ಒದಗಿಸುವುದು ತೀರಾ ಕಷ್ಟಕರವಾದ ಕಾರ್ಯ.
- ಸ್ಥಳೀಯ ಮಟ್ಟದಲ್ಲಿ ಎಲ್ಲರಿಗೂ ಗೌರವಯುತವಾದ ಉದ್ಯೋಗಗಳನ್ನು ದೊರಕಿಸಿಕೊಡುವುದು ಸವಾಲಿನ ಕೆಲಸ.

**ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಸುಸ್ಥಿರ ಅಭಿವೃದ್ಧಿ ಗುರಿ 11 ಅರ್ಥ ಮಾಡಿಕೊಳ್ಳಲು ಓದಬೇಕಿರುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989ರ ಪರಿಚ್ಛೇದಗಳು**

| ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ | ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ |
|---|---|---|---|
| 1 | ಮಕ್ಕಳೆಂದರೆ 18 ವರ್ಷದೊಳಗಿನವರು | 2 | ಮಕ್ಕಳ ನಡುವೆ ತಾರತಮ್ಯ/ಭೇದಭಾವ ಇರಬಾರದು/ಮಾಡಬಾರದು |
| 4 | ಮಕ್ಕಳ ಹಕ್ಕುಗಳ ಜಾರಿಗೆ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು | 6 | ಎಲ್ಲ ಮಕ್ಕಳಿಗೆ ಜೀವಿಸುವ ಹಕ್ಕು ಇದೆ |
| 12 | ಮಕ್ಕಳಿಗೆ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ ಇದೆ | 13 | ಮಕ್ಕಳಿಗೆ ವಿವಿಧ ಮೂಲಗಳಿಂದ ಮಾಹಿತಿ ಹೊಂದುವ ಸ್ವಾತಂತ್ರ್ಯ |
| 15 | ಮಕ್ಕಳಿಗೂ ಸಂಘಟಿತರಾಗಿರುವ ಹಕ್ಕಿದೆ | 16 | ಮಕ್ಕಳ ಖಾಸಗೀ ಬದುಕಿನ ಮೇಲೆ ಯಾರೂ ದಾಳಿ ಮಾಡುವಂತಿಲ್ಲ |
| 17 | ಮಕ್ಕಳಿಗೆ ಸೂಕ್ತವಾದ ಮಾಹಿತಿ ನೀಡುವ ಜವಾಬ್ದಾರಿ ಮಾಧ್ಯಮಗಳಿಗಿದೆ. | 19 | ಮಕ್ಕಳನ್ನು ದುರುಪಯೋಗ ಮತ್ತು ನಿರ್ಲಕ್ಷ್ಯದ ವಿರುದ್ಧ ರಕ್ಷಿಸಬೇಕು |
| 22 | ನಿರಾಶ್ರಿತರಾದ ಮಕ್ಕಳಿಗೆ ಆದ್ಯತೆಯಿಂದ ರಕ್ಷಣೆ ನೀಡಬೇಕು | 23 | ಅಂಗವಿಕಲತೆಯಿರುವ ಮಕ್ಕಳಿಗೆ ರಕ್ಷಣೆ ನೀಡಬೇಕು |

| | | | |
|---|---|---|---|
| 24 | ಎಲ್ಲ ಮಕ್ಕಳಿಗೆ ಮೂಲ ಸೇವೆಗಳನ್ನು ಒದಗಿಸಲೇಬೇಕು. | 27 | ಎಲ್ಲ ಮಕ್ಕಳಿಗೆ ಸೂಕ್ತ ಜೀವನ ಮಟ್ಟ ದೊರೆಯಬೇಕು |
| 28 | ಎಲ್ಲ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕು ಇದೆ | 29 | ಎಲ್ಲ ಮಕ್ಕಳಿಗೆ ತಾರತಮ್ಯವಿಲ್ಲದೆ ಶಿಕ್ಷಣ ಪಡೆಯುವ ಹಕ್ಕು ಇದೆ. |
| 30 | ಅಲ್ಪಸಂಖ್ಯಾತ ವರ್ಗ / ಧರ್ಮ / ಜಾತಿಗಳ ಎಲ್ಲ ಮಕ್ಕಳಿಗೆ ಎಲ್ಲ ಹಕ್ಕುಗಳು ಇದೆ | 31 | ಎಲ್ಲ ಮಕ್ಕಳಿಗೆ ವಿಶ್ರಾಂತಿ ಪಡೆಯುವ ಮತ್ತು ಮನೋರಂಜನೆ ಹೊಂದುವ ಹಕ್ಕು ಇದೆ |
| 33 | ಮಾದಕ ವಸ್ತುಗಳಿಗೆ ಬಲಿಯಾಗುವುದರ ವಿರುದ್ಧ ಮಕ್ಕಳನ್ನು ರಕ್ಷಿಸಬೇಕು. | 34 | ಮಕ್ಕಳ ಮೇಲೆ ಲೈಂಗಿಕ ಶೋಷಣೆ / ದಾಳಿ ಆಗದಂತೆ ಎಲ್ಲೆಡೆ ರಕ್ಷಿಸಬೇಕು |
| 35 | ಮಕ್ಕಳ ಮಾರಾಟ ಮಾಡುವುದು ಅಥವಾ ಅಕ್ರಮ ಬಂಧನದಲ್ಲಿಡುವುದರ ವಿರುದ್ಧ ರಕ್ಷಣೆ | 36 | ಮಕ್ಕಳನ್ನು ಯಾವುದೇ ರೀತಿಯ ಶೋಷಣೆಗಳ ವಿರುದ್ಧ ರಕ್ಷಿಸುವುದು ಸರ್ಕಾರ ಮತ್ತು ಸಮಾಜದ ಜವಾಬ್ದಾರಿ |
| 37 | ಯಾವುದೇ ಮಗುವಿಗೆ ಎಂತಹದೇ ಸಂದರ್ಭದಲ್ಲೂ ಚಿತ್ರಹಿಂಸೆ, ಮರಣದಂಡನೆ ನೀಡಬಾರದು | | |

**ಭಾರತ/ ರಾಜ್ಯ ಸರ್ಕಾರದ ಕ್ರಮಗಳು**

| ಉಸ್ತುವಾರಿ ಸಚಿವಾಲಯ | ಕೇಂದ್ರ/ರಾಜ್ಯ ಸರ್ಕಾರದ ಯೋಜನೆಗಳು | ಸಂಬಂಧಿತ ಕ್ರಮಗಳು | ಇತರ ಸಂಬಂಧಿತ ಸಚಿವಾಲಯಗಳು/ ಇಲಾಖೆಗಳು |
|---|---|---|---|
| ನಗರಾಭಿವೃದ್ಧಿ | 1. ರಾಜೀವ ಆವಾಸ್ ಯೋಜನೆ<br>2. ಇಂದಿರಾ ಆವಾಸ್ ಯೋಜನೆ<br>3. ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆ<br>4. ವಿಕಲಾಂಗ ವ್ಯಕ್ತಿಗಳಿಗೆ ರಾಷ್ಟ್ರೀಯ ಯೋಜನೆ<br>5. ಜವಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಯೋಜನೆ | 1. ಸ್ಮಾರ್ಟ್ ನಗರ ಯೋಜನೆ<br>2. ಪ್ರಧಾನ ಮಂತ್ರಿ ಆವಾಸ್ ಯೋಜನೆ<br>3. ಪಾರಂಪರಿಕ ನಗರ ಅಭಿವೃದ್ಧಿ | • ನಗರಾಭಿವೃದ್ಧಿ<br>• ವಸತಿ<br>• ಆರ್ಥಿಕ<br>• ಕಂದಾಯ<br>• ರಸ್ತೆ ಸಾರಿಗೆ ಮತ್ತು ಹೆದ್ದಾರಿ<br>• ರೈಲ್ವೆ<br>• ವಿದೇಶಾಂಗ ವ್ಯವಹಾರ |

**ಟಿಪ್ಪಣಿ**


12 RESPONSIBLE CONSUMPTION AND PRODUCTION

# ಗುರಿ 12

## ಸುಸ್ಥಿರ ಬಳಕೆ ಮತ್ತು ಉತ್ಪಾದನೆ

### ಸುಸ್ಥಿರ ಬಳಕೆ ಮತ್ತು ಉತ್ಪಾದನಾ ವಿನ್ಯಾಸಗಳನ್ನು ಖಾತ್ರಿಗೊಳಿಸಿ

| | ಲಕ್ಷ್ಯಗಳು | | ಸೂಚಕಗಳು |
|---|---|---|---|
| 12.1 | ಸುಸ್ಥಿರ ಬಳಕೆ ಮತ್ತು ಉತ್ಪಾದನೆ ಮಾದರಿಯ 10 ವರ್ಷಗಳ ಕಾರ್ಯಕ್ರಮಗಳ ಚೌಕಟ್ಟನ್ನು ಜಾರಿಗೊಳಿಸಲು ಎಲ್ಲಾ ದೇಶಗಳು ಕ್ರಮ ಕೈಗೊಳ್ಳಬೇಕು ಮತ್ತು ಇದಕ್ಕಾಗಿ ಅಭಿವೃದ್ಧಿ ಮತ್ತು ಅಭಿವೃದ್ಧಿಶೀಲ ದೇಶಗಳ ಸಾಮರ್ಥ್ಯವನ್ನು ಗಣನೆಗೆ ತಗೆದುಕೊಂಡು, ಅಭಿವೃದ್ಧಿಶೀಲ ದೇಶಗಳು ಇದರ ಮುಂಚೂಣಿ ವಹಿಸಲಿ | 12.1.1 | ಸುಸ್ಥಿರ ಬಳಕೆ ಮತ್ತು ಉತ್ಪಾದನಾ ರಾಷ್ಟ್ರೀಯ ಕ್ರಿಯಾ ಯೋಜನೆಯನ್ನು ಅಥವಾ ಸುಸ್ಥಿರ ಬಳಕೆ ಮತ್ತು ಉತ್ಪಾದನೆಯನ್ನು ಮುಖ್ಯವಾಹಿನಿಗಾಗಿ ಆದ್ಯತೆ ಅಥವಾ ರಾಷ್ಟ್ರೀಯ ನೀತಿಗಳಲ್ಲಿನ ಲಕ್ಷ್ಯವನ್ನಾಗಿ ಹೊಂದಿರುವ ದೇಶಗಳ ಸಂಖ್ಯೆ |
| 12.2 | 2030ರೊಳಗೆ, ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆ ಮತ್ತು ಪರಿಣಾಮಕಾರಿ ಬಳಕೆಯನ್ನು ಸಾಧಿಸಿ | 12.2.1. | ವಸ್ತುಗಳ ಬಳಕೆ, ತಲಾವಾರು ವಸ್ತುಗಳ ಬಳಕೆ ಮತ್ತು ನಿವ್ವಳ ಆಂತರಿಕ ಉತ್ಪನ್ನಗಳಾವಾರು ವಸ್ತುಗಳ ಬಳಕೆ |
| | | 12.2.2. | ಆಂತರಿಕ ವಸ್ತುಗಳ ಬಳಕೆ, ಆಂತರಿಕ ವಸ್ತುಗಳ ತಲಾವಾರು ಬಳಕೆ ಮತ್ತು ನಿವ್ವಳ ಆಂತರಿಕ ಉತ್ಪನ್ನವಾರು ಅಂತರಿಕ ವಸ್ತುಗಳ ಬಳಕೆ |
| 12.3 | 2030ರೊಳಗೆ, ಮಾರುಕಟ್ಟೆ ಮತ್ತು ಬಳಕೆದಾರದ ಹಂತದಲ್ಲಿ ಜಾಗತಿಕವಾಗಿ ವ್ಯರ್ಥವಾಗುವ ತಲಾ ಆಹಾರ ಪದಾರ್ಥಗಳ ಪ್ರಮಾಣವನ್ನು ಅರ್ಧಕ್ಕಿಳಿಸಿ ಮತ್ತು ಸುಗ್ಗಿ ನಂತರದ ನಷ್ಟಗಳೂ ಸೇರಿದಂತೆ ಉತ್ಪಾದನೆ ಮತ್ತು ಸಾಗಣೆಗಳಲ್ಲಿರುವ ಆಹಾರ ನಷ್ಟವನ್ನು ಕಡಿಮೆಗೊಳಿಸಿ | 12.3.1. | ಆಹಾರ ವ್ಯರ್ಥತೆಯ ಜಾಗತಿಕ ಸೂಚ್ಯಾಂಕ  |

| | | | |
|---|---|---|---|
| 12.4 | 2020ರೊಳಗೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಮ್ಮತಿಸಿರುವ ಚೌಕಟ್ಟುಗಳಿಗೆ ಅನುಗುಣವಾಗಿ ರಾಸಾಯನಿಕಗಳು ಮತ್ತು ಎಲ್ಲಾ ತ್ಯಾಜ್ಯಗಳನ್ನು ಅವುಗಳ ಎಲ್ಲಾ ರೂಪಗಳು ಮತ್ತು ಹಂತಗಳಲ್ಲಿ ಪರಿಸರಕ್ಕೆ ಪೂರಕವಾಗಿ ನಿರ್ವಹಿಸುವುದನ್ನು ಸಾಧಿಸಿ ಮತ್ತು ಮಾನವ ಆರೋಗ್ಯ ಮತ್ತು ಪರಿಸರದ ಮೇಲೆ ದುಷ್ಪರಿಣಾಮಗಳನ್ನು ಕಡಿಮೆಗೊಳಿಸಲು ಅವು ಗಾಳಿ, ನೀರು ಮತ್ತು ಮಣ್ಣಿನೊಡನೆ ಬೆರೆಯುವುದನ್ನು ಗಣನೀಯವಾಗಿ ಕಡಿಮೆಗೊಳಿಸಿ | 12.4.1. | ಪ್ರತಿಯೊಂದು ಸೂಕ್ತ ಒಪ್ಪಂದಗಳಿಗೂ ಅವಶ್ಯವಿರುವ ಬದ್ಧತೆಗಳು ಮತ್ತು ಮಾಹಿತಿ ಪ್ರಸಾರದ ಜವಾಬ್ದಾರಿಗಳನ್ನು ಪೂರೈಸುವ ಸಲುವಾಗಿ ಅಪಾಯಕಾರಿ ತ್ಯಾಜ್ಯ ಮತ್ತು ಇತರೆ ರಾಸಾಯನಿಕಗಳ ಮೇಲಿನ ಅಂತಾರಾಷ್ಟ್ರೀಯ, ಬಹುಆಯಾಮದ ಪರಿಸರ ಒಪ್ಪಂದಗಳಿಗೆ ಒಪ್ಪಿಕೊಂಡ ದೇಶಗಳ ಸಂಖ್ಯೆ |
| | | 12.4.2. | ತಲಾವಾರು ಉತ್ಪಾದನೆಯಾಗುವ ಅಪಾಯಕಾರಿ ತ್ಯಾಜ್ಯ ಮತ್ತು ಸಂಸ್ಕರಣಾ ವಿಧವಾರು ಸಂಸ್ಕರಣೆಯಾಗುವ ಅಪಾಯಕಾರಿ ತ್ಯಾಜ್ಯದ ಪ್ರಮಾಣ. |
| 12.5 | 2030ರೊಳಗೆ, ತ್ಯಾಜ್ಯ ಉತ್ಪಾದನೆಯನ್ನು ಕಡಿತಗೊಳಿಸಿ, ತಡೆದು, ಸಂಸ್ಕರಿಸಿ ಮತ್ತು ಮರುಬಳಕೆ ಮೂಲಕ ಗಣನೀಯವಾಗಿ ಕಡಿಮೆಗೊಳಿಸಿ | 12.5.1. | ರಾಷ್ಟ್ರೀಯ ಮರುಬಳಕೆಯ ದರ ಮತ್ತು ಟನ್ನುಗಳ ಲೆಕ್ಕದಲ್ಲಿ ಮರುಬಳಕೆಯಾಗುವ ವಸ್ತುಗಳು |
| 12.6 | ಉದ್ದಿಮೆಗಳಿಗೆ, ಅದರಲ್ಲೂ ವಿಶೇಷವಾಗಿ ದೊಡ್ಡ ಮತ್ತು ಜಾಗತಿಕ ಉದ್ದಿಮೆಗಳಿಗೆ ಸುಸ್ಥಿರ ಅಭ್ಯಾಸಗಳನ್ನು ಮತ್ತು ಸಮಗ್ರ ಸುಸ್ಥಿರ ಮಾಹಿತಿಯನ್ನು ಅವರ ವರದಿ ಮಾಡುವ ಆವರ್ತಗಳಲ್ಲಿ ಅಳವಡಿಸಿಕೊಳ್ಳಲು ಉತ್ತೇಜನ ನೀಡಿ | 12.6.1. | ಸುಸ್ಥಿರ ವರದಿಗಳನ್ನು ಪ್ರಕಟಿಸುವ ಕಂಪನಿಗಳ ಸಂಖ್ಯೆ |
| 12.7 | ರಾಷ್ಟ್ರೀಯ ನೀತಿಗಳು ಮತ್ತು ಆದ್ಯತೆಗಳಿಗೆ ಅನುಸಾರವಾಗಿ, ಸುಸ್ಥಿರವಾದ ಸಾರ್ವಜನಿಕ ಖರೀದಿ ಅಭ್ಯಾಸಗಳನ್ನು ಉತ್ತೇಜಿಸಿ | 12.7.1. | ಸುಸ್ಥಿರ ಸಾರ್ವಜನಿಕ ಖರೀದಿ ನೀತಿ ಮತ್ತು ಕ್ರಿಯಾ ಯೋಜನೆಯನ್ನು ಜಾರಿಗೊಳಿಸುತ್ತಿರುವ ದೇಶಗಳ ಸಂಖ್ಯೆ |
| 12.8 | 2030ರೊಳಗೆ, ವಿವಿಧೆಡೆಯಿರುವ ಜನರೆಲ್ಲರಿಗೆ ಸುಸ್ಥಿರ ಅಭಿವೃದ್ಧಿ ಮತ್ತು ಪ್ರಕೃತಿಯೊಡನೆ ಸಹಬಾಳ್ವೆಯ ಜೀವನಶೈಲಿ ಕುರಿತು ಸೂಕ್ತವಾದ ಮಾಹಿತಿ ಮತ್ತು ಜಾಗೃತಿ ಮೂಡಿಸುವುದನ್ನು ಖಾತ್ರಿಪಡಿಸಿ | 12.8.1. | (1) ನಾಗರೀಕ ಪೌರತ್ವದ ಶಿಕ್ಷಣ (2) ಸುಸ್ಥಿರ ಅಭಿವೃದ್ಧಿಗಾಗಿ ಶಿಕ್ಷಣವನ್ನು (ವಾತಾವರಣ ಬದಲಾವಣೆ ಶಿಕ್ಷಣವೂ ಸೇರಿದಂತೆ)<br>(ಎ) ರಾಷ್ಟ್ರೀಯ ಶಿಕ್ಷಣ ನೀತಿ;<br>(ಬಿ) ಶಿಕ್ಷಣ ಪಠ್ಯ;<br>(ಸಿ) ಶಿಕ್ಷಕರ ಶಿಕ್ಷಣ; ಮತ್ತು<br>(ಡಿ) ವಿದ್ಯಾರ್ಥಿ ಮೌಲ್ಯಮಾಪನಗಳನ್ನು ಮುಖ್ಯವಾಹಿನಿಗೊಳಿಸಲಾದ ಮಟ್ಟ  |
| 12.ಎ | ಬಳಕೆ ಮತ್ತು ಉತ್ಪಾದನೆಗಳ ಸುಸ್ಥಿರ ವಿನ್ಯಾಸಗಳ ಕಡೆಗೆ ಮುಂದಡಿಯಿಡಲು ಅಭಿವೃದ್ಧಿಶೀಲ ದೇಶಗಳಿಗೆ ಅವರ ವೈಜ್ಞಾನಿಕ ಮತ್ತು ತಾಂತ್ರಿಕ ಸಾಮರ್ಥ್ಯವನ್ನು ಸದೃಢಗೊಳಿಸಲು ನೆರವು ನೀಡಿ | 12.ಎ.1. | ಸುಸ್ಥಿರ ಬಳಕೆ ಮತ್ತು ಉತ್ಪಾದನೆಗಾಗಿ ಹಾಗು ಪರಿಸರ ಸ್ನೇಹಿ ತಾಂತ್ರಿಕತೆಗಾಗಿ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಅಭಿವೃದ್ಧಿಶೀಲ ದೇಶಗಳಿಗೆ ನೀಡುವ ನೆರವಿನ ಮೊತ್ತ |
| 12.ಬಿ | ಉದ್ಯೋಗಗಳನ್ನು ಸೃಷ್ಟಿಸಬಲ್ಲ ಮತ್ತು ಸ್ಥಳೀಯ ಸಂಸ್ಕೃತಿ ಮತ್ತು ಉತ್ಪನ್ನಗಳನ್ನು ಉತ್ತೇಜಿಸುವ ಸುಸ್ಥಿರ ಪ್ರವಾಸೋದ್ಯಮದಿಂದಾಗುವ ಸುಸ್ಥಿರ ಅಭಿವೃದ್ಧಿ ಪರಿಣಾಮಗಳ ಮೇಲ್ವಿಚಾರಣೆಗೆ ಸಾಧನಗಳನ್ನು ಅಭಿವೃದ್ಧಿಪಡಿಸಿ ಕಾರ್ಯಗತಗೊಳಿಸಿ | 12.ಬಿ.1. | ಒಪ್ಪಿದ ಉಸ್ತುವಾರಿ ಮತ್ತು ಮೌಲ್ಯಮಾಪನ ಸಾಧನಗಳ ಸಹಿತ ಸುಸ್ಥಿರ ಪ್ರವಾಸೋದ್ಯಮ ತಂತ್ರಗಳು ಅಥವಾ ನೀತಿಗಳು ಮತ್ತು ಜಾರಿಗೊಳಿಸಿದ ಕ್ರಿಯಾ ಯೋಜನೆಗಳ ಸಂಖ್ಯೆ |

| | | | |
|---|---|---|---|
| 12.ಸಿ | ರಾಷ್ಟ್ರೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ, ವ್ಯರ್ಥವಾದ ಬಳಕೆಯನ್ನು ಪ್ರೋತ್ಸಾಹಿಸುವಂತಾಗಿರುವ ಜೀವ್ಯವಶೇಷ-ಇಂಧನದ (ಪೆಟ್ರೋಲ್/ಡೀಸಲ್ ಇತ್ಯಾದಿ) ಮೇಲೆ ನೀಡುವ ಸಹಾಯಧನ ಮತ್ತು ಅದರಿಂದ ಮಾರುಕಟ್ಟೆಯ ಮೇಲಾಗುವ ದುಷ್ಪರಿಣಾಮಗಳನ್ನು ಕುರಿತು ಮರುವಿಮರ್ಷೆ ಮಾಡಿ, ಪರಿಸರದ ಮೇಲಾಗುತ್ತಿರುವ ಪರಿಣಾಮಗಳು ಮತ್ತು ಅಭಿವೃದ್ಧಿಶೀಲ ದೇಶಗಳ ಪರಿಸ್ಥಿತಿ ಮತ್ತು ಆವಶ್ಯಕತೆಗಳನ್ನು ಸಂಪೂರ್ಣವಾಗಿ ಗಣನೆಗೆ ತೆಗೆದುಕೊಂಡು, ಆಯಾ ದೇಶಗಳ ಅಭಿವೃದ್ಧಿಯ ಮೇಲೆ ಆಗಬಹುದಾದ ಪ್ರತಿಕೂಲ ಪರಿಣಾಮಗಳನ್ನು ಕಡಿಮೆ ಮಾಡುತ್ತಾ, ಬಡ ಜನರು ಮತ್ತು ತೊಂದರೆಗೆ ಒಳಗಾಗಬಹುದಾದ ಸಮುದಾಯಗಳನ್ನು ರಕ್ಷಿಸುವ ನಿಟ್ಟಿನಲ್ಲಿ, ತೆರಿಗೆಗಳ ಪುನಾರಚನೆಯೂ ಸೇರಿದಂತೆ, ಎಲ್ಲೆಲ್ಲಿ ಸಹಾಯಧನ ಪದ್ಧತಿಯಿದೆಯೋ ಅಲ್ಲೆಲ್ಲಾ ಹಂತಹಂತವಾಗಿ ಸಹಾಯಧನವನ್ನು ತೆಗೆದು ತರ್ಕಬದ್ಧಗೊಳಿಸಿ | 12.ಸಿ.1. | ನಿವ್ವಳ ಆಂತರಿಕ ಉತ್ಪನ್ನ (ಉತ್ಪಾದನೆ ಮತ್ತು ಬಳಕೆ)ದ ಪ್ರತಿ ಘಟಕಕ್ಕೆ ಜೀವ್ಯವಶೇಷ ಇಂಧನದ ಸಹಾಯಧನದ ಮೊತ್ತ ಮತ್ತು ಜೀವ್ಯವಶೇಷ ಇಂಧನದ ಮೇಲಿನ ಒಟ್ಟು ರಾಷ್ಟ್ರೀಯ ವೆಚ್ಚದ ಪ್ರಮಾಣ |

**ವಿವರಣೆ**

ಕಡಿಮೆ ಸಂಪನ್ಮೂಲಗಳನ್ನು ಬಳಸಿ ಹೆಚ್ಚು ಉತ್ಪಾದನೆಯನ್ನು ಮಾಡುವುದು ಈ ಗುರಿಯ ಮುಖ್ಯ ಉದ್ದೇಶ. ಅಂದರೆ ಕಡಿಮೆ ಪರಿಸರ ಹಾನಿ, ಭೂಅವನತಿ ಇವೇ ಮೊದಲಾದವುಗಳನ್ನು ಕಡಿಮೆಗೊಳಿಸುತ್ತಾ ಉತ್ತಮ ಗುಣಮಟ್ಟದ ಜೀವನವನ್ನು ರೂಪಿಸುವುದಾಗಿದೆ. ಪ್ರಸ್ತುತ ವಿಶ್ವದಲ್ಲಿ ಉತ್ಪಾದನೆಯಾಗುವ ಮೂರನೇ ಒಂದರಷ್ಟು ಆಹಾರ ಧಾನ್ಯಗಳು ಉಗ್ರಾಣದಲ್ಲಿ ಮುಗ್ಗಲು ಹಿಡಿಯುತ್ತವೆ ಮತ್ತು ಸಾಗಣೆಯಲ್ಲಿ ಹಾಗು ಕೃಷಿ ಭೂಮಿಯಲ್ಲಿ ವ್ಯರ್ಥವಾಗಿ ಹೋಗುತ್ತವೆ. ಇದಕ್ಕೆ ಮುಖ್ಯ ಕಾರಣ ಉತ್ಪಾದಕನಿಂದ ಹಿಡಿದು ಅಂತಿಮ ಗ್ರಾಹಕನವರೆಗಿನ ಕಂದರ ಅಥವಾ ಸಂವಹನದ ಕೊರತೆ ಹಾಗು ಉತ್ಪಾದನೆ ಮತ್ತು ಬಳಕೆ ಪ್ರಮಾಣದಲ್ಲಿರುವ ಅಗಾಧ ವ್ಯತ್ಯಾಸ. ಇದರಲ್ಲಿ ಮುಖ್ಯವಾಗಿ ನಾವು ಗಮನಿಸಬೇಕಿರುವುದು ಮಾನವನ ಅತಿ ಮುಖ್ಯ ಮೂಲಭೂತ ಅವಶ್ಯಕತೆಗಳಾದ ಆಹಾರ, ನೀರು ಮತ್ತು ಇಂಧನಗಳ ಸುಸ್ಥಿರ ಬಳಕೆ ಮತ್ತು ಉತ್ಪಾದನೆ.

2050ರ ಹೊತ್ತಿಗೆ ವಿಶ್ವದ ಜನಸಂಖ್ಯೆ 9.6 ಬಿಲಿಯನ್/ಶತಕೋಟಿ ಮುಟ್ಟುವ ನಿರೀಕ್ಷೆ ಇದೆ (ಭಾರತ ಜನಸಂಖ್ಯೆ ಸುಮಾರು 160 ಕೋಟಿ ಆಸುಪಾಸು ಆಗಬಹುದು) ಮತ್ತು ಅದೇ ಸಮಯಕ್ಕೆ ಬಹುತೇಕ ಬಡ ವರ್ಗದ ಜನತೆ ಮಧ್ಯಮ ವರ್ಗಕ್ಕೆ ಬಂದಿರುತ್ತಾರೆ. ಇದು ಒಳ್ಳೆಯದೇ ಆದರೂ ಸಹ ಅಷ್ಟೂ ಪ್ರಮಾಣದ ಜನರ ನಿರೀಕ್ಷೆಗಳು ಮತ್ತು ಆವಶ್ಯಕತೆಗಳು ಹೆಚ್ಚಾಗುತ್ತವೆ. ಹೀಗಾಗಿ ನಾವು ಇದೇ ರೀತಿಯ ಜೀವನಶೈಲಿಯನ್ನು ಮುಂದುವರೆಸಿದರೆ ಈಗಾಗಲೇ ಒತ್ತಡದಲ್ಲಿರುವ ನಮ್ಮ ಸಂಪನ್ಮೂಲಗಳ ಮೇಲೆ ಇನ್ನೂ ಹೆಚ್ಚು ಒತ್ತಡ ಬೀಳುತ್ತದೆ. ಹಾಗಾಗಿ ನಾವು ಸುಸ್ಥಿರ ಬಳಕೆ ಮತ್ತು ಉತ್ಪಾದನೆಗಳ ವಿಧಾನಗಳನ್ನು ಅಳವಡಿಸಿಕೊಳ್ಳದಿದ್ದಲ್ಲಿ ಪರಿಸರ ಮತ್ತು ನೈಸರ್ಗಿಕ ಸಂಪನ್ಮೂಲಗಳ ಮೇಲೆ ಅಗಾಧವಾದ ಹೊಡೆತ ಬೀಳುತ್ತದೆ.

ಪ್ರಸ್ತುತ ನಾವು ಅತಿ ಹೆಚ್ಚು ಪ್ರಮಾಣದಲ್ಲಿ ನೀರು ಮತ್ತು ಆಹಾರವನ್ನು ವ್ಯರ್ಥ ಮಾಡುತ್ತಿದ್ದೇವೆ, ಅನಾವಶ್ಯಕವಾಗಿ ಇಂಧನವನ್ನು ಅದರಲ್ಲೂ ಮುಖ್ಯವಾಗಿ ವಿದ್ಯುಚ್ಛಕ್ತಿಯನ್ನು ಬಳಸುತ್ತಿದ್ದೇವೆ. ಪರಿಸರವು ನೈಸರ್ಗಿಕವಾಗಿ ನೀರನ್ನು ಶುದ್ಧೀಕರಿಸಬಹುದಾದ ವೇಗಕ್ಕಿಂತ ಹೆಚ್ಚು ವೇಗವಾಗಿ ನೀರನ್ನು ಕಲುಷಿತಗೊಳಿಸುತ್ತಿದ್ದೇವೆ. ಇವೆಲ್ಲಕ್ಕೂ ಕಡಿವಾಣ ಹಾಕುವ ಅವಶ್ಯಕತೆಯಿದೆ. ಉದಾಹರಣೆಗೆ ವಿಶ್ವದಲ್ಲಿ ಉತ್ಪಾದನೆಯಾಗುವ ಒಟ್ಟು ವಿದ್ಯುತ್ತಿನಲ್ಲಿ ಶೇ. 29ರಷ್ಟು ಗೃಹಬಳಕೆಗೆ ಉಪಯೋಗಿಸಲಾಗುತ್ತಿದೆ ಮತ್ತು ಇವುಗಳಿಂದ ಹೊರಸೂಸುವ ಇಂಗಾಲದ ಡೈಆಕ್ಸೈಡ್ ಪ್ರಮಾಣ ವಿಶ್ವದ ಒಟ್ಟು ಪ್ರಮಾಣದ ಶೇ. 21ರಷ್ಟು. ಇದಕ್ಕೆ ಪರಿಹಾರವೆಂದರೆ ಎಲ್ಲರೂ ಕಡಿಮೆ ವಿದ್ಯುಚ್ಛಕ್ತಿಯಿಂದ ಉರಿಯುವ ವಿದ್ಯುದ್ದೀಪಗಳನ್ನು ಬಳಸುವುದು. ಇದು ಕೇವಲ ಉದಾಹರಣೆ ಮಾತ್ರ. ಇಂತಹ ಅನೇಕ ಪರಿಹಾರೋಪಾಯಗಳನ್ನು ನಾವು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಂಡರೆ ಮಾತ್ರ ನಮ್ಮ ಸಂಪನ್ಮೂಲಗಳನ್ನು ಸಂರಕ್ಷಿಸಿಕೊಳ್ಳಬಹುದು. ಸರ್ಕಾರ ನವೀಕರಿಸಬಹುದಾದ ಇಂಧನಗಳಿಗೆ ಪ್ರೋತ್ಸಾಹ ನೀಡುತ್ತಿದ್ದರೂ ಸಹ ಅದು ಹೆಚ್ಚೇನು ಜನರನ್ನು ತಲುಪಿಲ್ಲ. ಕೇವಲ ಜಲಶಕ್ತಿ ಮತ್ತು ಕಲ್ಲಿದ್ದಿಲಿನಲ್ಲಿ ಮಾತ್ರವಲ್ಲದೆ ಸೌರಶಕ್ತಿ, ಪವನ ಶಕ್ತಿಯಿಂದ ವಿದ್ಯುತ್ತನ್ನು ತಯಾರಿಸುತ್ತಿದ್ದರೂ ಉತ್ಪಾದನೆಗಿಂತ ಬೇಡಿಕೆಯೇ ಹೆಚ್ಚಿದೆ.

ಇದು ಕೇವಲ ಸರ್ಕಾರದ ನೀತಿ, ನಿಯಮಗಳಿಂದ ಸಾಧ್ಯವಾಗುವಂತಹುದಲ್ಲ. ಇದರಲ್ಲಿ ಪ್ರತಿಯೊಬ್ಬರ ಪಾತ್ರವೂ ಇದೆ. ಅದರಲ್ಲೂ ಮುಖ್ಯವಾಗಿ ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿರುವ ದೊಡ್ಡ ಕೈಗಾರಿಕೆಗಳ ಪಾತ್ರ ಬಹಳವಿದೆ.

ಈ ಎಲ್ಲೆಡೆಯಿರುವ ದೊಡ್ಡ ಚರ್ಚೆ, ವಿವಿಧ ಅಭಿವೃದ್ಧಿ ಕೆಲಸಗಳು ಮತ್ತು ಜನಪ್ರಿಯ ಕಾರ್ಯಕ್ರಮಗಳಿಗೆ ನೀಡುತ್ತಿರುವ 'ಸಹಾಯಧನ'ಗಳನ್ನು ಹಿಂತೆಗೆಯಬೇಕೆಂಭ ವಿಚಾರ. ಸಹಾಯಧನ ಬೇಕಿರುವ ಅಥವಾ ಆವಶ್ಯವಿರುವ ಕ್ಷೇತ್ರಗಳನ್ನು ಕುರಿತು ಮರುಚಿಂತನೆ ಮುಕ್ತವಾಗಿ ಆಗಬೇಕಿದೆ.



**ನೀವು ಮಾಡಬಹುದಾದದ್ದು**

- ಅನಾವಶ್ಯಕವಾಗಿ ಆಹಾರ ಮತ್ತು ನೀರನ್ನು ವ್ಯರ್ಥ ಮಾಡಬೇಡಿ.
- ಕಡಿಮೆ ವಿದ್ಯುಚ್ಛಕ್ತಿಯನ್ನು ಬಯಸುವ ವಿದ್ಯುದ್ದೀಪಗಳನ್ನು ಬಳಸಿ ಮತ್ತು ಸಾಧ್ಯವಾದಲ್ಲೆಲ್ಲಾ ಸೌರಶಕ್ತಿಯ ವಿದ್ಯುತ್ ಬಳಕೆಯನ್ನು ಹೆಚ್ಚುಮಾಡಿ.
- ಪರಿಸರಕ್ಕೆ ಅತ್ಯಂತ ಹಾನಿಕಾರಕವಾದ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿ.
- ಮರುಬಳಕೆಯ ವಸ್ತುಗಳನ್ನು ಉತ್ತೇಜಿಸಿ (ಸದ್ಯಕ್ಕೆ ಈ ವಸ್ತುಗಳ ದುಬಾರಿಯೆನಿಸಿದರೂ ಸಹ ಗ್ರಾಹಕರ ಸಂಖ್ಯೆ ಹಚ್ಚಾದಂತೆ ಉತ್ಪಾದನೆಯೂ ಹೆಚ್ಚಾಗಿ ಕಡಿಮೆ ದರಕ್ಕೆ ದೊರಕುತ್ತದೆ).
- ಕಡಿಮೆ ಸಂಪನ್ಮೂಲಗಳನ್ನು ಬಳಸಿ ಹೆಚ್ಚು ಉತ್ಪಾದನೆ ಮಾಡುವ ವಿಧಾನಗಳನ್ನು ಪ್ರೋತ್ಸಾಹಿಸಿ ಮತ್ತು ಪ್ರಚುರಪಡಿಸಿ.
- ಸಾಧ್ಯವಿದ್ದಷ್ಟೂ ಸುಸ್ಥಿರ ಮಾದರಿಯಲ್ಲಿ ಉತ್ಪಾದಿಸಿದ ವಸ್ತುಗಳನ್ನು ಖರೀದಿಸಿ.

**ಸವಾಲುಗಳು**



- ವ್ಯಕ್ತಿಗತವಾಗಿ ನಾವು ಸುಸ್ಥಿರ ಬಳಕೆಯನ್ನು ಮಾಡಬಹುದಾದರೂ ಸಹ ಎಲ್ಲಾ ಕ್ಷೇತ್ರಗಳ ಉತ್ಪಾದನೆಗಳಿಗೆ ಮಿತಿಯನ್ನು ಹೇರುವುದು ಕಷ್ಟ.
- ಬಳಕೆ ಮತ್ತು ಉತ್ಪಾದನೆಯ ಪ್ರಮಾಣಗಳನ್ನು ವ್ಯಾಖ್ಯಾನಿಸುವುದು ಅತಿ ದೊಡ್ಡ ಸವಾಲು
- ಈ ಎಲ್ಲಾ ಗುರಿಗಳನ್ನು ಸಾರ್ವತ್ರಿಕವಾಗಿ ಸಾಧಿಸಬೇಕಿರುವುದರಿಂದ ಹಿಂದುಳಿದ ಪ್ರದೇಶಗಳಲ್ಲಿ ಇದರ ಸಾಧನೆ ಮಾಡುವುದು ತೀರಾ ಕಷ್ಟ.

**ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಸುಸ್ಥಿರ ಅಭಿವೃದ್ಧಿ ಗುರಿ 12 ಅರ್ಥ ಮಾಡಿಕೊಳ್ಳಲು ಓದಬೇಕಿರುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989ರ ಪರಿಚ್ಛೇದಗಳು**

| ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ | ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ |
|---|---|---|---|
| 13 | ಮಕ್ಕಳಿಗೆ ವಿವಿಧ ಮೂಲಗಳಿಂದ ಮಾಹಿತಿ ಹೊಂದುವ ಸ್ವಾತಂತ್ರ್ಯ | 17 | ಮಕ್ಕಳಿಗೆ ಸೂಕ್ತವಾದ ಮಾಹಿತಿ ನೀಡುವ ಜವಾಬ್ದಾರಿ ಮಾಧ್ಯಮಗಳಿಗಿದೆ. |
| 24 | ಎಲ್ಲ ಮಕ್ಕಳಿಗೆ ಮೂಲ ಸೇವೆಗಳನ್ನು ಒದಗಿಸಲೇಬೇಕು. | 29 | ಎಲ್ಲ ಮಕ್ಕಳಿಗೆ ತಾರತಮ್ಯವಿಲ್ಲದೆ ಶಿಕ್ಷಣ ಪಡೆಯುವ ಹಕ್ಕು ಇದೆ. |
| 28 | ಎಲ್ಲ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕು ಇದೆ | | |


**ಭಾರತ/ ರಾಜ್ಯ ಸರ್ಕಾರದ ಕ್ರಮಗಳು**

| ಉಸ್ತುವಾರಿ ಸಚಿವಾಲಯ | ಕೇಂದ್ರ/ರಾಜ್ಯ ಸರ್ಕಾರದ ಯೋಜನೆಗಳು | ಸಂಬಂಧಿತ ಕ್ರಮಗಳು | ಇತರ ಸಂಬಂಧಿತ ಸಚಿವಾಲಯಗಳು/ ಇಲಾಖೆಗಳು |
|---|---|---|---|
| ಅರಣ್ಯ ಮತ್ತು ಪರಿಸರ ಇಲಾಖೆ | | 1. ಜೀವಾವಶೇಷ ಇಂಧನದ ನೀತಿ<br>2. ರಾಷ್ಟ್ರೀಯ ಸ್ವಚ್ಛ ಭಾರತ ನಿಧಿ<br>3. ರಾಷ್ಟ್ರೀಯ ಸ್ವಚ್ಛ ಇಂಧನ ನಿಧಿ<br>4. ನವೀಕರಿಸಬಹುದಾದ ಇಂಧನಕ್ಕೆ ಉತ್ತೇಜನ | • ಅರಣ್ಯ ಮತ್ತು ಪರಿಸರ ಇಲಾಖೆ<br>• ನಗರಾಭಿವೃದ್ಧಿ<br>• ಗ್ರಾಮೀಣಾಭಿವೃದ್ಧಿ<br>• ಆರ್ಥಿಕ<br>• ರಾಸಾಯನಿಕ ಮತ್ತು ರಸಗೊಬ್ಬರ<br>• ಆಹಾರ ಮತ್ತು ನಾಗರೀಕ ಸರಬರಾಜು<br>• ವಿಜ್ಞಾನ ಮತ್ತು ತಂತ್ರಜ್ಞಾನ<br>• ಪ್ರವಾಸೋದ್ಯಮ<br>• ವಾರ್ತಾ ಮತ್ತು ಪ್ರಚಾರ<br>• ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ |

# ಗುರಿ 13

## ಹವಾಮಾನ ಕ್ರಮ

### ಹವಾಮಾನ ಬದಲಾವಣೆ ಮತ್ತು ಅದರ ಪರಿಣಾಮಗಳನ್ನು ತಡೆಯಲು ತುರ್ತು ಕ್ರಮಗಳನ್ನು ತೆಗೆದುಕೊಳ್ಳಿ

| | ಲಕ್ಷ್ಯಗಳು | | ಸೂಚಕಗಳು |
|---|---|---|---|
| 13.1. | ಎಲ್ಲಾ ದೇಶಗಳೂ ಹವಾಮಾನ ಸಂಬಂಧಿತ ಅಪಾಯಗಳು ಮತ್ತು ನೈಸರ್ಗಿಕ ವಿಕೋಪಗಳನ್ನು ತಡೆದುಕೊಳ್ಳುವ ಮತ್ತು ಸದೃಢತೆಯ ಸಾಮರ್ಥ್ಯಗಳನ್ನು ಬಲಪಡಿಸಿ | 13.1.1. | ರಾಷ್ಟ್ರೀಯ ಮತ್ತು ಸ್ಥಳೀಯ ವಿಕೋಪ ತೊಂದರೆಗಳನ್ನು ತಗ್ಗಿಸುವ ತಂತ್ರಗಳನ್ನು ಹೊಂದಿರುವ ದೇಶಗಳ ಸಂಖ್ಯೆ |
| | | 13.1.2. | ಪ್ರತಿ ಒಂದು ಲಕ್ಷ ಜನಸಂಖ್ಯೆಗೆ ಮರಣ ಹೊಂದುವ, ಕಾಣೆಯಾಗುವ ಮತ್ತು ವಿಕೋಪಗಳಿಂದ ತೊಂದರೆಗೊಳಗಾಗುವ ಜನರ ಸಂಖ್ಯೆ  |
| 13.2 | ಹವಾಮಾನ ಬದಲಾವಣೆಯ ಕ್ರಮಗಳನ್ನು ರಾಷ್ಟ್ರೀಯ ನೀತಿ, ಕಾರ್ಯತಂತ್ರ ಮತ್ತು ಯೋಜನೆಗಳಲ್ಲಿ ಅಳವಡಿಸಿ | 13.2.1. | ವಾತಾವರಣದ ದುಷ್ಪರಿಣಾಮೀ ಬದಲಾವಣೆಗಳನ್ನು ಎದುರಿಸಲು ಮತ್ತು ಅದಕ್ಕೆ ಹೊಂದಿಕೊಳ್ಳುತ್ತಲೇ, ಅದರಿಂದಾಗುವ ಪರಿಣಾಮಗಳನ್ನು ತಡೆದುಕೊಳ್ಳುವ ಮತ್ತು ಹಸಿರು ಮನೆ ಪರಿಣಾಮ ಹೆಚ್ಚಿಸುವ ಅನಿಲಗಳ ಹೊರಸೂಸುವಿಕೆಯನ್ನು ತಗ್ಗಿಸುವಂತಹ ಹಾಗೂ ಆಹಾರೋತ್ಪಾದನೆಗೆ ತೊಂದರೆಯುಂಟು ಮಾಡದಂತಹ ಅಭಿವೃದ್ಧಿ ತಂತ್ರಜ್ಞಾನವನ್ನು ಬಳಸುವಂತಹ ಸಮಗ್ರ ನೀತಿ/ಕಾರ್ಯವಿಧಾನ/ಯೋಜನೆಯನ್ನು (ರಾಷ್ಟ್ರೀಯ ಕಾರ್ಯತಂತ್ರದ ಅಳವಡಿಕೆ, ರಾಷ್ಟ್ರೀಯ ಮಟ್ಟದಲ್ಲಿ ಅದಕ್ಕಾಗಿ ಹಣಕಾಸಿನ ಹೂಡಿಕೆ, ರಾಷ್ಟ್ರೀಯವಾಗಿ ನಡೆಸಿರುವ ಪ್ರಚಾರ ಮತ್ತು ಎರಡು ವರ್ಷಕ್ಕೊಮ್ಮೆ ವರದಿ ಮಾಡುವುದೂ ಸೇರಿ) ಹೊಂದಿರುವ ಮತ್ತು ಅದನ್ನು ಜಾರಿಗೆ ತರಲು ಮುಂದಾಗಿ ಆ ಕುರಿತು ಪ್ರಚಾರ ಮಾಡಿರುವ ದೇಶಗಳ ಸಂಖ್ಯೆ |
| 13.3 | ಹವಾಮಾನ ಬದಲಾವಣೆಯಿಂದಾಗುವ ಹಾನಿ ತಗ್ಗಿಸುವ, ತಡೆದುಕೊಳ್ಳುವ, ದುಷ್ಪರಿಣಾಮಗಳನ್ನು ಕಡಿಮೆಗೊಳಿಸುವ ಮತ್ತು ಮುನ್ಸೂಚನೆ ಕುರಿತು ವ್ಯಕ್ತಿಗತ ಮತ್ತು ಸಾಂಸ್ಥಿಕ ಸಾಮರ್ಥ್ಯವನ್ನು ಶಿಕ್ಷಣ ಹಾಗೂ ಜಾಗೃತಿಯನ್ನು ಮೂಡಿಸುವುದರ ಮೂಲಕ ಹೆಚ್ಚಿಸಿ | 13.3.1. | ಸಮಗ್ರ ತೊಂದರೆ ತಗ್ಗಿಸುವ ತಂತ್ರ, ಅಳವಡಿಕೆ, ಪರಿಣಾಮ ಕಡಿತ ಮತ್ತು ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ಪಠ್ಯಕ್ರಮದಲ್ಲಿ ಮುನ್ನೆಚ್ಚರಿಕೆಗಳನ್ನು ಒಳಗೊಂಡ ದೇಶಗಳ ಸಂಖ್ಯೆ  |

| | | | |
|---|---|---|---|
| 13.ಎ | ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಪರಿಸ್ಥಿತಿಯಲ್ಲಿ ಹಾನಿ ತಗ್ಗಿಸುವ ಅರ್ಥಪೂರ್ಣವಾದ ಕ್ರಮಗಳ ಅಗತ್ಯಗಳನ್ನು ಪೂರೈಸಲು, ಅಭಿವೃದ್ಧಿ ಹೊಂದಿದ ದೇಶಗಳು ವಿಶ್ವಸಂಸ್ಥೆಯ ವಾತಾವರಣ ಬದಲಾವಣೆ ಕುರಿತು ಚೌಕಟ್ಟಿನ ಒಡಂಬಡಿಕೆಗೆ ಬದ್ಧವಾಗಿ, 2020ರೊಳಗೆ ತಮ್ಮೆಲ್ಲಾ ಮೂಲಗಳಿಂದ ವಾರ್ಷಿಕ 100 ಬಿಲಿಯ (10,000 ಕೋಟಿ) ಡಾಲರುಗಳನ್ನು ಜಂಟಿಯಾಗಿ ಒಟ್ಟುಗೂಡಿಸುವ ಬದ್ಧತೆಯನ್ನು ಜಾರಿಗೊಳಿಸಿ, ಹಸಿರು ವಾತಾವರಣ ನಿಧಿಯ ಬಂಡವಾಳ ಹೂಡಿಕೆಯ ನಿರ್ವಹಣೆಯಲ್ಲಿ ಪಾರದರ್ಶಕತೆಯಿದ್ದು ಆದಷ್ಟು ಬೇಗ ಸಂಪೂರ್ಣವಾಗಿ ಅನುಷ್ಠಾನಗೊಳಿಸಿ | 13.ಎ.1. | 100 ಬಿಲಿಯ (10,000 ಕೋಟಿ) ಡಾಲರುಗಳನ್ನು ಗುರಿಯಾಗಿಟ್ಟುಕೊಂಡು 2020ರ ನಂತರ ಪ್ರತಿ ವರ್ಷ ಅಮೇರಿಕನ್ ಡಾಲರುಗಳಲ್ಲಿ ಸಂಗ್ರಹಿಸುವ ಮೊತ್ತ |
| 13.ಬಿ | ಮಹಿಳೆಯರು, ಯುವಜನಾಂಗ ಮತ್ತು ಸ್ಥಳೀಯ ಹಾಗು ಮೂಲೆಗೊತ್ತರಿಸಲ್ಪಟ್ಟ ಸಮುದಾಯಗಳಿಗೆ ಆದ್ಯತೆ ನೀಡುವುದೂ ಸೇರಿ, ಹವಾಮಾನ ಬದಲಾವಣೆಗೆ ಸಂಬಂಧಿಸಿದಂತೆ ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳು ಮತ್ತು ಅಭಿವೃದ್ಧಿಶೀಲ ದ್ವೀಪ ದೇಶಗಳಲ್ಲಿ ಪರಿಣಾಮಕಾರಿ ಯೋಜನೆ ಮತ್ತು ನಿರ್ವಹಣೆಯ ಸಾಮರ್ಥ್ಯವನ್ನು ಹೆಚ್ಚಿಸಲು ವಿಧಿವಿಧಾನಗಳನ್ನು ಉತ್ತೇಜಿಸಿ | 13.ಬಿ.1. | ಮಹಿಳೆಯರು ಯುವಜನಾಂಗ ಮತ್ತು ಸ್ಥಳೀಯ ಹಾಗು ಮೂಲೆಗೊತ್ತಲ್ಪಟ್ಟ ಗುಂಪುಗಳಿಗೆ ಆದ್ಯತೆ ನೀಡುವುದನ್ನು ಒಳಗೊಂಡಂತೆ ವಾತಾವರಣ ಬದಲಾವಣೆ ಸಂಬಂಧಿತ ಪರಿಣಾಮಕಾರಿ ಯೋಜನೆ ಮತ್ತು ನಿರ್ವಹಣೆಗಾಗಿ ಆರ್ಥಿಕ, ತಾಂತ್ರಿಕತೆ ಮತ್ತು ಸಾಮರ್ಥ್ಯವರ್ಧನೆಯೂ ಸೇರಿದಂತೆ ವಿಶೇಷ ನೆರವು ಪಡೆಯುವ ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳು ಮತ್ತು ಸಣ್ಣ ದ್ವೀಪ ದೇಶಗಳ ಸಂಖ್ಯೆ ಮತ್ತು ನೆರವಿನ ಮೊತ್ತ |

**ವಿವರಣೆ**

ಹವಾಮಾನ ಬದಲಾವಣೆ ಇಂದು ಪ್ರತಿಯೊಂದು ದೇಶವನ್ನೂ ಕಾಡುತ್ತಿರುವ ಸಮಸ್ಯೆಯಾಗಿದೆ. ಇದರಿಂದ ಜನರ ಜೀವನ ದುಸ್ತರವಾಗುವುದರ ಜೊತೆಗೆ ಆರ್ಥಿಕತೆಯನ್ನು ದುರ್ಬಲಗೊಳಿಸುತ್ತಿದೆ. ಎಲ್ಲಾ ದೇಶಗಳೂ ಸಹ ಒಂದಲ್ಲ ಒಂದು ಹವಾಮಾನ ವೈಪರೀತ್ಯಗಳನ್ನು ಎದುರಿಸಿವೆ, ಅಂದರೆ ಅತಿಯಾದ ಮಳೆ, ಗಾಳಿ, ಬಿಸಿಲು ಮತ್ತು ಸಮುದ್ರ ಮಟ್ಟದಲ್ಲಿ ಏರಿಕೆ ಇತ್ಯಾದಿ. ಈ ವೈಪರೀತ್ಯಗಳಿಂದ ತೊಂದರೆಗೊಳಗಾಗುವವರು ಮಕ್ಕಳು ಅದರಲ್ಲೂ ತೀರಾ ಹಿಂದುಳಿದ ಮತ್ತು ಬಡ ಕುಟುಂಬಗಳ ಮಕ್ಕಳು.

ಹವಾಮಾನ ವೈಪರೀತ್ಯವು ಕೇವಲ ದೇಶ ದೇಶಗಳ ಗಡಿಯೊಳಗಿನ ಸಮಸ್ಯೆಯಲ್ಲ ಬದಲಾಗಿ ಇದು ಜಾಗತಿಕ ಸಮಸ್ಯೆ. ಹಾಗಾಗಿ ಇದನ್ನು ಜಾಗತಿಕ ಮಟ್ಟದಲ್ಲಿಯೇ ಪರಿಹಾರಗಳನ್ನು ಹುಡುಕಿಕೊಳ್ಳಬೇಕು. ಹವಾಮಾನ ವೈಪರೀತ್ಯಗಳನ್ನು ತಡೆಯುವ ಸಲುವಾಗಿ ಎಲ್ಲಾ ದೇಶಗಳು ಪ್ಯಾರೀಸ್ ಒಪ್ಪಂದವನ್ನು ಡಿಸೆಂಬರ್ 2015ರಲ್ಲಿ ಮಾಡಿಕೊಂಡು ಜಾಗತಿಕ ತಾಪಮಾನದ ಪ್ರಮಾಣವನ್ನು ಕನಿಷ್ಠ 2 ಡಿಗ್ರಿ ಸೆಲ್ಸಿಯಸ್‌ನಷ್ಟು ಇಳಿಸುವ ನಿರ್ಧಾರ ಮಾಡಿದ್ದಾರೆ. ಇದರ ಜೊತೆಗೆ ಉದ್ದಿಮೆದಾರರು ಮತ್ತು ಹೂಡಿಕೆದಾರರು ಸಹ ತಾಪಮಾನವನ್ನು ಇಳಿಸುವ ನಿರ್ಧಾರಕ್ಕೆ ಬದ್ಧರಾಗಿರುವುದಾಗಿ ತಿಳಿಸಿದ್ದಾರೆ. ಏಕೆಂದರೆ ತಾಪಮಾನದಲ್ಲಿ 1 ಡಿಗ್ರಿ ಸೆಲ್ಸಿಯಸ್ ಏರಿಕೆಯಾದರೆ ಧಾನ್ಯಗಳ ಉತ್ಪಾದನೆಯ ಪ್ರಮಾಣ ಶೇ. 5ರಷ್ಟು ಕಡಿಮೆಯಾಗಿ ಆಹಾರ ಉತ್ಪಾದನೆಯ ಮೇಲೆ ಅಗಾಧವಾದ ಪರಿಣಾಮವನ್ನು ಬೀರುತ್ತದೆ. ಏರುತ್ತಿರುವ ತಾಪಮಾನದಿಂದ ಕಳೆದ ಎರಡು ದಶಕಗಳಲ್ಲಿ ಸಾಗರಮಟ್ಟ 19 ಸೆ.ಮಿ.ನಷ್ಟು ಏರಿದೆ ಮತ್ತು ಇಂಗಾಲದ ಡೈಆಕ್ಸೈಡ್ ಹೊರಹೊಮ್ಮುವಿಕೆಯ ಪ್ರಮಾಣ ಶೇ. 50ರಷ್ಟು ಹೆಚ್ಚಾಗಿದೆ. ಹಾಗಾಗಿ ಪಾರೀಸ್ ಒಪ್ಪಂದವು ಸುಸ್ಥಿರ ಅಭಿವೃದ್ಧಿಯ ಈ ಗುರಿಯನ್ನು ತಲುಪಲು ಬಹಳಷ್ಟು ಸಹಾಯಕವಾಗಿದೆ.

ಆದರೆ 2017ರ ಮಧ್ಯದಲ್ಲಿ ಕೇಳಿಬರುತ್ತಿರುವ ಸುದ್ದಿ ಯು.ಎಸ್.ಎ.ದ ಅಧ್ಯಕ್ಷ ಟ್ರಂಪ್ ತಾವು ಪ್ಯಾರೀಸ್ ಒಪ್ಪಂದದಿಂದ ಹಿಂದೆ ಸರಿದಿದ್ದಾರೆ ಎಂಬುದು. ಇದು ಕಳವಳಕಾರಿ ಬೆಳವಣಿಗೆ.

### ನೀವು ಮಾಡಬಹುದಾದದ್ದು

- ವಾತಾವರಣ ಬದಲಾವಣೆ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಿ ಮತ್ತು ಪ್ರಚುರಪಡಿಸಿ.
- ವಾತಾವರಣ ಬದಲಾವಣೆ ಕುರಿತಾದ ಪರಿಣಾಮಗಳನ್ನು ನಿಮ್ಮ ನೆರೆಹೊರೆಯವರಿಗೆ ಮನವರಿಕೆ ಮಾಡಿಕೊಡಿ.

### ಸವಾಲುಗಳು

- ವಾತಾವರಣ ಬದಲಾವಣೆಯ ಪರಿಣಾಮ ಇಡೀ ಜಗತ್ತಿಗೆ ಆಗುವುದರಿಂದ ಸ್ಥಳೀಯವಾಗಿ ಇವುಗಳನ್ನು ತಡೆಗಟ್ಟುವುದು ಕಷ್ಟ ಎಂದೇ ಅನೇಕರ ವಾದ.
- ವ್ಯಕ್ತಿಗತವಾಗಿ ತಾವೇಕೆ ಮಾಡಬೇಕು ಎಂದು ಪ್ರಶ್ನಿಸಿ ವಿರೋಧಿಸುವವರೇ ಹೆಚ್ಚಿನ ಜನರಿದ್ದಾರೆ.

**ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಸುಸ್ಥಿರ ಅಭಿವೃದ್ಧಿ ಗುರಿ 13 ಅರ್ಥ ಮಾಡಿಕೊಳ್ಳಲು ಓದಬೇಕಿರುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989ರ ಪರಿಚ್ಛೇದಗಳು**

| ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ | ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ |
|---|---|---|---|
| 4 | ಮಕ್ಕಳ ಹಕ್ಕುಗಳ ಜಾರಿಗೆ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು | 6 | ಎಲ್ಲ ಮಕ್ಕಳಿಗೆ ಜೀವಿಸುವ ಹಕ್ಕು ಇದೆ |
| 12 | ಮಕ್ಕಳಿಗೆ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ ಇದೆ | 13 | ಮಕ್ಕಳಿಗೆ ವಿವಿಧ ಮೂಲಗಳಿಂದ ಮಾಹಿತಿ ಹೊಂದುವ ಸ್ವಾತಂತ್ರ್ಯ |
| 15 | ಮಕ್ಕಳಿಗೂ ಸಂಘಟಿತರಾಗಿರುವ ಹಕ್ಕಿದೆ | 17 | ಮಕ್ಕಳಿಗೆ ಸೂಕ್ತವಾದ ಮಾಹಿತಿ ನೀಡುವ ಜವಾಬ್ದಾರಿ ಮಾಧ್ಯಮಗಳಿಗಿದೆ. |
| 23 | ಅಂಗವಿಕಲತೆಯಿರುವ ಮಕ್ಕಳಿಗೆ ರಕ್ಷಣೆ ನೀಡಬೇಕು | 29 | ಎಲ್ಲ ಮಕ್ಕಳಿಗೆ ತಾರತಮ್ಯವಿಲ್ಲದೆ ಶಿಕ್ಷಣ ಪಡೆಯುವ ಹಕ್ಕು ಇದೆ. |
| 30 | ಅಲ್ಪಸಂಖ್ಯಾತ ವರ್ಗ / ಧರ್ಮ / ಜಾತಿಗಳ ಎಲ್ಲ ಮಕ್ಕಳಿಗೆ ಎಲ್ಲ ಹಕ್ಕುಗಳು ಇದೆ | | |

सत्यमेव जयते

ಕರ್ನಾಟಕ ಸರ್ಕಾರ

### ಭಾರತ/ ರಾಜ್ಯ ಸರ್ಕಾರದ ಕ್ರಮಗಳು

| ಉಸ್ತುವಾರಿ ಸಚಿವಾಲಯ | ಕೇಂದ್ರ/ರಾಜ್ಯ ಸರ್ಕಾರದ ಯೋಜನೆಗಳು | ಸಂಬಂಧಿತ ಕ್ರಮಗಳು | ಇತರ ಸಂಬಂಧಿತ ಸಚಿವಾಲಯಗಳು/ ಇಲಾಖೆಗಳು |
|---|---|---|---|
| ಅರಣ್ಯ ಮತ್ತು ಪರಿಸರ ಸಚಿವಾಲಯ | 1. ಹವಾಮಾನ ಬದಲಾವಣೆಗೆ ರಾಷ್ಟ್ರೀಯ ಕ್ರಿಯಾ ಯೋಜನೆ<br>2. ಹಸಿರು ಭಾರತಕ್ಕಾಗಿ ರಾಷ್ಟ್ರೀಯ ಯೋಜನೆ<br>3. ಇಂಧನ ಸಾಮರ್ಥ್ಯವನ್ನು ಹೆಚ್ಚಿಸಲು ರಾಷ್ಟ್ರೀಯ ಯೋಜನೆ<br>4. ರಾಷ್ಟ್ರೀಯ ಜಲ ಯೋಜನೆ<br>5. ಸುಸ್ಥಿರ ವಸತಿಗಾಗಿ ರಾಷ್ಟ್ರೀಯ ಯೋಜನೆ<br>6. ಸುಸ್ಥಿರ ಕೃಷಿಗಾಗಿ ರಾಷ್ಟ್ರೀಯ ಯೋಜನೆ | | • ಅರಣ್ಯ ಮತ್ತು ಪರಿಸರ ಸಚಿವಾಲಯ<br>• ಮಾಹಿತಿ ಮತ್ತು ಪ್ರಚಾರ<br>• ಒಳಾಡಳಿತ |

14 LIFE BELOW WATER

# ಗುರಿ 14

## ಜಲದಡಿಯ ಜೀವರಾಶಿ

### ಸುಸ್ಥಿರ ಅಭಿವೃದ್ಧಿಗಾಗಿ ಮಹಾಸಾಗರಗಳು, ಸಮುದ್ರಗಳು ಮತ್ತು ಸಾಗರ ಸಂಪನ್ಮೂಲಗಳನ್ನು ಉಳಿಸಿ ಮತ್ತು ಸುಸ್ಥಿರವಾಗಿ ಬಳಸಿ

| | ಲಕ್ಷ್ಯಗಳು | | ಸೂಚಕಗಳು |
|---|---|---|---|
| 4.1. | 2025ರೊಳಗೆ, ಸಾಗರಕ್ಕೆ ತ್ಯಾಜ್ಯ ಸುರಿಯುವ ಭೂಪ್ರದೇಶದ ಎಲ್ಲ ಚಟುವಟಿಕೆಗಳು ಮತ್ತು ಜೀವ ಪೋಷಕ ಮಾಲಿನ್ಯವನ್ನು ತಡೆದು, ಸಾಗರ ಕಲ್ಮಷಗೊಳ್ಳುವಿಕೆಯನ್ನು ಗಮನಾರ್ಹವಾಗಿ ಕಡಿಮೆಗೊಳಿಸಿ | 14.1.1. | ಕರಾವಳಿ ಪ್ರದೇಶದ ಅತಿ ಫಲವತ್ತತೆ/ಪೋಷಕಾಂಶ ಮತ್ತು ತೇಲುವ ಪ್ಲಾಸ್ಟಿಕ್ ತ್ಯಾಜ್ಯದ ಸಾಂದ್ರತೆಯ ಸೂಚ್ಯಾಂಕ |
| 14.2. | 2020ರೊಳಗೆ, ಆರೋಗ್ಯಕರ ಮತ್ತು ಉತ್ಪಾದನಾ ಸಾಗರಗಳನ್ನು ಸಾಧಿಸುವ ಸಲುವಾಗಿ, ಅವುಗಳ ಸದೃಢತೆಯನ್ನು ಹೆಚ್ಚಿಸುವ ಮತ್ತು ಅವುಗಳ ಮರುಸ್ಥಾಪನೆಗೆ ಕ್ರಮಗಳನ್ನು ತೆಗೆದುಕೊಳ್ಳುವುದೂ ಸೇರಿದಂತೆ ಗಣನೀಯವಾದ ದುಷ್ಪರಿಣಾಮಗಳನ್ನು ತಡೆಗಟ್ಟಲು, ಸಾಗರ ಮತ್ತು ಸಾಗರ ತೀರ ಪರಿಸರ ವ್ಯವಸ್ಥೆಗಳನ್ನು ಸುಸ್ಥಿರವಾಗಿ ನಿರ್ವಹಿಸಿ ರಕ್ಷಿಸಿ | 14.2.1. | ಪರಿಸರ ಆಧಾರಿತ ವಿಧಾನಗಳನ್ನು ಬಳಸಿ ನಿರ್ವಹಿಸಲ್ಪಡುತ್ತಿರುವ ರಾಷ್ಟ್ರೀಯ ವಿಶೇಷ ಆರ್ಥಿಕ ವಲಯಗಳ ಪ್ರಮಾಣ |
| 14.3. | ಎಲ್ಲಾ ಹಂತಗಳಲ್ಲೂ ವೈಜ್ಞಾನಿಕ ಸಹಕಾರವನ್ನು ಹೆಚ್ಚಿಸುವುದರ ಮೂಲಕವೂ ಸೇರಿದಂತೆ ಸಾಗರದ ಆಮ್ಲೀಕರಣದ ಪ್ರಭಾವವನ್ನು ಕಡಿಮೆಗೊಳಿಸಿ ನಿವಾರಿಸಿ | 14.3.1. | ಒಪ್ಪಿಗೆಗೆ ಅನುಸಾರವಾಗಿ ಪ್ರಾತಿನಿಧಿಕ ಮಾದರಿ ಸ್ಥಳಗಳಲ್ಲಿ ಅಳೆಯಲಾದ ಸರಾಸರಿ ಸಾಗರ ಆಮ್ಲತೆ (ಪಿ.ಹೆಚ್.) |

| | | | |
|---|---|---|---|
| 14.4. | 2020ರೊಳಗೆ, ಸಾಗರೋತ್ಪನ್ನಗಳ ಕೊಯ್ಲು ಮತ್ತು ಅತಿಯಾದ ಮೀನುಗಾರಿಕೆ, ಕಾನೂನು ಬಾಹಿರ, ವರದಿಯಾಗದ ಮತ್ತು ಅನಿಯಂತ್ರಿತ ಮೀನುಗಾರಿಕೆ ಹಾಗೂ ವಿನಾಶಕಾರಿ ಮೀನುಗಾರಿಕೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿ, ಸಾಗರ ಜೀವಿಗಳ ಜೈವಿಕ ಗುಣಲಕ್ಷಣಗಳ ಪ್ರಕಾರ, ಮೀನು ಇಳುವರಿಯನ್ನು ಗರಿಷ್ಠ ಮಟ್ಟದ ಸುಸ್ಥಿರ ಉತ್ಪಾದನೆಯ ಮಟ್ಟಕ್ಕೆ ಎಷ್ಟು ಸಾಧ್ಯವೋ ಅಷ್ಟು ಶೀಘ್ರವಾಗಿ ಹೆಚ್ಚಿಸಬಲ್ಲ ವೈಜ್ಞಾನಿಕ ಆಧಾರಿತ ನಿರ್ವಹಣೆ ಯೋಜನೆಗಳನ್ನು ಜಾರಿಗೆ ತನ್ನಿ | 14.4.1. | ಜೈವಿಕ ಸುಸ್ಥಿರತೆಯ ಹಂತದೊಳಗಿರುವ ಮೀನು ದಾಸ್ತಾನಿನ ಪ್ರಮಾಣ |
| 14.5. | 2020ರೊಳಗೆ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕಾನೂನಿಗನುಗುಣವಾಗಿ ಮತ್ತು ಲಭ್ಯವಿರುವ ಉತ್ತಮ ವೈಜ್ಞಾನಿಕ ಮಾಹಿತಿ ಆಧಾರದ ಮೇಲೆ ಕನಿಷ್ಠ ಶೇ.10ರಷ್ಟು ಕರಾವಳಿ ಮತ್ತು ತೀರ ಪ್ರದೇಶಗಳನ್ನು ಕಾಪಾಡಿಕೊಳ್ಳಿ | 14.5.1. | ಕರಾವಳಿ ಪ್ರದೇಶಗಳಿಗೆ ಸಂಬಂಧಪಟ್ಟಂತೆ ರಕ್ಷಿತ ಪ್ರದೇಶದ ವ್ಯಾಪ್ತಿ |
| 14.6. | 2020ರೊಳಗೆ, ಸಾಮರ್ಥ್ಯ ಮೀರಿದ ಮತ್ತು ಅತಿಯಾದ ಮೀನುಗಾರಿಕೆಗೆ ಉತ್ತೇಜನ ನೀಡುವ ಕೆಲವು ಸಹಾಯಧನವನ್ನು ನಿಷೇಧಿಸಿ ಮತ್ತು ಕಾನೂನು ಬಾಹಿರ, ವರದಿಯಾಗದ ಮತ್ತು ಅನಿಯಂತ್ರಿತ ಮೀನುಗಾರಿಕೆ ಉತ್ತೇಜಿಸುವ ಸಹಾಯಧನವನ್ನು ಕೊನೆಗಾಣಿಸಿ, ಇಂತಹ ಹೊಸ ಸಹಾಯಧನ ಪರಿಚಯಿಸದೆ, ಅಭಿವೃದ್ಧಿ ಹೊಂದುತ್ತಿರುವ ಮತ್ತು ಕನಿಷ್ಠ ಅಭಿವೃದ್ಧಿ ಹೊಂದಿರುವ ದೇಶಗಳಿಗೆ ಸೂಕ್ತ ಮತ್ತು ಪರಿಣಾಮಕಾರಿ ವಿಶೇಷ ಹಾಗೂ ಸಾಂದರ್ಭಿಕ ಪರಿಗಣನೆ ತತ್ತ್ವಗಳು ವಿಶ್ವ ವ್ಯಾಪಾರ ಸಂಸ್ಥೆಯ ಮೀನುಗಾರಿಕೆ ಸಹಾಯಧನ ಮಾತುಕತೆಗಳಿಗೆ ಅನುಗುಣವಾಗಿರಲಿ | 14.6.1. | ಕಾನೂನುಬಾಹಿರ, ವರದಿಯಾಗದ ಮತ್ತು ಅನಿಯಂತ್ರಿತ ಮೀನುಗಾರಿಕೆಯನ್ನು ಗುರಿಯಾಗಿಟ್ಟುಕೊಂಡು ಅಂತಾರಾಷ್ಟ್ರೀಯ ಸಾಧನಗಳನ್ನು ಜಾರಿಮಾಡುವಲ್ಲಿನ ಮಟ್ಟದಲ್ಲಿ ದೇಶಾವಾರು ಪ್ರಗತಿ |
| 14.7. | 2030ರೊಳಗೆ, ಮೀನುಗಾರಿಕೆಯ ಸುಸ್ಥಿರ ನಿರ್ವಹಣೆ, ಜಲಚರ ಸಾಕಣೆ ಮತ್ತು ಪ್ರವಾಸೋದ್ಯಮವೂ ಸೇರಿದಂತೆ ಸಾಗರ ಸಂಪನ್ಮೂಲಗಳ ಸುಸ್ಥಿರ ಬಳಕೆಯ ಮೂಲಕ ಅಭಿವೃದ್ಧಿಶೀಲ ಸಣ್ಣ ದ್ವೀಪ ದೇಶಗಳ ಮತ್ತು ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳ ಆರ್ಥಿಕಾಭಿವೃದ್ಧಿಯನ್ನು ಹೆಚ್ಚಿಸಿ | 14.7.1. | ಅಭಿವೃದ್ಧಿಶೀಲ ಸಣ್ಣ ದ್ವೀಪ ದೇಶಗಳಲ್ಲಿ, ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಮತ್ತು ಎಲ್ಲಾ ದೇಶಗಳಲ್ಲಿ ಸುಸ್ಥಿರ ಮೀನುಗಾರಿಕೆಯ ನಿವ್ವಳ ಆಂತರಿಕ ಉತ್ಪನ್ನಗಳ ಶೇಕಡಾವಾರು ಪ್ರಮಾಣ. |

| | | | |
|---|---|---|---|
| 14.8 | ಸಾಗರಗಳ ಆರೋಗ್ಯ ಸುಧಾರಿಸಲು ಮತ್ತು ಅಭಿವೃದ್ಧಿಶೀಲ ದೇಶಗಳ, ನಿರ್ದಿಷ್ಟವಾಗಿ ಅಭಿವೃದ್ಧಿಶೀಲ ಸಣ್ಣ ದ್ವೀಪ ದೇಶಗಳ ಪ್ರಗತಿಗಾಗಿ ಸಾಗರ ಜೀವಿ ವೈವಿಧ್ಯತೆಯ ಕೊಡುಗೆಗಳನ್ನು ಹೆಚ್ಚಿಸಲು, ವೈಜ್ಞಾನಿಕ ಜ್ಞಾನಾಭಿವೃದ್ಧಿ, ಮತ್ತು ಸಂಶೋಧನಾ ಸಾಮರ್ಥ್ಯವನ್ನು ಹೆಚ್ಚಿಸಿ, ಸಾಗರ ತಂತ್ರಜ್ಞಾನ ವರ್ಗಾವಣೆ ಕುರಿತು ಅಂತರ–ಸರ್ಕಾರಿ ಸಾಗರ ವಿಜ್ಞಾನ ಆಯೋಗದ ಮಾನದಂಡ ಹಾಗೂ ಮಾರ್ಗಸೂಚಿಗಳನ್ನು ಪರಿಗಣಿಸಿ ಸಾಗರ ತಂತ್ರಜ್ಞಾನವನ್ನು ವರ್ಗಾಯಿಸಿ | 14.8.1. | ಒಟ್ಟು ಸಂಶೋಧನೆಗೆ ಮೀಸಲಿಟ್ಟ ಹಣದಲ್ಲಿ ಸಾಗರ ತಂತ್ರಜ್ಞಾನ ಕ್ಷೇತ್ರದ ಸಂಶೋಧನೆಗೆ ಮೀಸಲಿಟ್ಟ ಹಣದ ಪ್ರಮಾಣ |
| 14.ಬಿ | ಸಣ್ಣ ಪ್ರಮಾಣದ ಮೀನುಗಾರರಿಗೆ ಸಾಗರ ಸಂಪನ್ಮೂಲ ಮತ್ತು ಮಾರುಕಟ್ಟೆಗಳ ಲಭ್ಯತೆಯನ್ನು ಒದಗಿಸಿ | 14.ಬಿ.1. | ಸಣ್ಣ ಪ್ರಮಾಣದ ಮೀನುಗಾರಿಕೆಯ ಹಕ್ಕಿನ ಲಭ್ಯತೆಯನ್ನು ರಕ್ಷಿಸುವ ಮತ್ತು ಗುರುತಿಸುವ ಕಾನೂನು/ನಿಯಂತ್ರಣ/ನೀತಿ/ ಸಾಂಸ್ಥಿಕ ಚೌಕಟ್ಟನ್ನು ಜಾರಿಗೊಳಿಸುವ ಮಟ್ಟದಲ್ಲಿ ದೇಶಾವಾರು ಪ್ರಗತಿ |
| 14.ಸಿ | "ನಾವು ಅಪೇಕ್ಷಿಸುವ ಭವಿಷ್ಯ"ದ 158ನೇ ಪಂಕ್ತಿಯಲ್ಲಿ ಸ್ಮರಿಸಿರುವಂತೆ, ಸಾಗರಗಳು ಮತ್ತು ಅವುಗಳ ಸಂಪನ್ಮೂಲಗಳನ್ನು ಉಳಿಸಿ, ಸುಸ್ಥಿರ ಬಳಕೆ ಮಾಡುವ ಕುರಿತು ಕಾನೂನು ಚೌಕಟ್ಟನ್ನು ಒದಗಿಸುವ ವಿಶ್ವಸಂಸ್ಥೆಯ ಸಮುದ್ರ ಕಾನೂನು ಕುರಿತು ಒಡಂಬಡಿಕೆಯಲ್ಲಿ ಉಲ್ಲೇಖಿಸಿರುವಂತೆ, ಅಂತಾರಾಷ್ಟ್ರೀಯ ಕಾನೂನನ್ನು ಕಾರ್ಯಗತಗೊಳಿಸುವ ಮೂಲಕ ಸಾಗರಗಳು ಮತ್ತು ಅವುಗಳ ಸಂಪನ್ಮೂಲಗಳ ಸಂರಕ್ಷಣೆಯನ್ನೂ ಸುಸ್ಥಿರತೆಯನ್ನೂ ಹೆಚ್ಚಿಸಿ | 14.ಸಿ.1. | ಸಾಗರಗಳು ಮತ್ತು ಅವುಗಳ ಸಂಪನ್ಮೂಲಗಳನ್ನು ಕಾಪಿಡಲು ಮತ್ತು ಸುಸ್ಥಿರ ಬಳಕೆಗಾಗಿರುವ ವಿಶ್ವಸಂಸ್ಥೆಯ ಸಮುದ್ರ ಕಾನೂನು ಕುರಿತು ಒಡಂಬಡಿಕೆಯಲ್ಲಿ ಉಲ್ಲೇಖಿಸಿರುವಂತೆ ಅಂತಾರಾಷ್ಟ್ರೀಯ ಕಾನೂನನ್ನು ಜಾರಿಗೊಳಿಸುವ ಸಲುವಾಗಿ ಸಾಗರ ಸಂಬಂಧಿತ ಸಾಧನಗಳನ್ನು ಸಮ್ಮತಿಸಿದ, ಒಪ್ಪಿದ ಮತ್ತು ಕಾನೂನು, ನೀತಿ ಮತ್ತು ಸಾಂಸ್ಥಿಕ ಚೌಕಟ್ಟಿನಲ್ಲಿ ಪ್ರಗತಿ ಸಾಧಿಸಿದ ದೇಶಗಳ ಸಂಖ್ಯೆ |

**ವಿವರಣೆ**

ಮಹಾಸಾಗರಗಳು ಸುಸ್ಥಿರ ಅಭಿವೃದ್ಧಿಯಲ್ಲಿ ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಏಕೆಂದರೆ ನಮಗೆಲ್ಲಾ ತಿಳಿದಿರುವಂತೆ ಭೂಮಿಯ 3/4ರಷ್ಟು ಭಾಗ ನೀರಿನಿಂದ ಕೂಡಿದೆ ಮತ್ತು ಅದರಲ್ಲಿ ಮಹಾಸಾಗರಗಳ ನೀರಿನ ಪ್ರಮಾಣ ಶೇ. 97ರಷ್ಟು. ಜಾಗತಿಕ ಒಟ್ಟು ನಿವ್ವಳ ಆಂತರಿಕ ಉತ್ಪನ್ನಗಳಲ್ಲಿ ಸಾಗರೋತ್ಪನ್ನಗಳ ಪಾಲು ಶೇ. 5ರಷ್ಟಿದೆ. ಮಾನವ ಕೃತ್ಯಗಳಿಂದ ಉತ್ಪತ್ತಿಯಾಗುವ ಒಟ್ಟು ಇಂಗಾಲದ ಡೈಆಕ್ಸೈಡ್‌ನ ಶೇ. 30ರಷ್ಟನ್ನು ಕರಗಿಸಿಕೊಳ್ಳುವುದರ ಮೂಲಕ ಜಾಗತಿಕ ತಾಪಮಾನ ಹೆಚ್ಚಳವನ್ನು ನಿಯಂತ್ರಿಸುತ್ತಿದೆ.

ಸಾಗರಗಳು ಅತ್ಯಂತ ಮುಖ್ಯವಾದ ನೈಸರ್ಗಿಕ ಸಂಪನ್ಮೂಲಗಳಾದ ಆಹಾರ, ಔಷಧ, ಜೈವಿಕ ಇಂಧನ ಇವೇ ಮೊದಲಾದವುಗಳನ್ನು ಒಳಗೊಂಡಿದೆ. ಆದರೆ ಸಾಗರಗಳಲ್ಲಿ ತ್ಯಾಜ್ಯಾವಶೇಷಗಳ ಮಟ್ಟ ಹೆಚ್ಚುತ್ತಿರುವುದು ನಿಸರ್ಗಕ್ಕೆ ಮತ್ತು ಆರ್ಥಿಕತೆಗೆ ಬಿದ್ದ ಬಹು ದೊಡ್ಡ ಹೊಡೆತವಾಗಿದೆ. ಸಾಗರಗಳಲ್ಲಿ ದೊರೆಯುವ ಹವಳದಂತಹ ಅತ್ಯಮೂಲ್ಯ ವಸ್ತುಗಳ ಪ್ರಮಾಣ ಶೇ. 20ರಷ್ಟು ಕಡಿಮೆಯಾಗಿದೆ.

ಭಾರತದಲ್ಲಿ 6,300 ಕೋಟಿ ಜನರು ಕರಾವಳಿ ಪ್ರದೇಶದಲ್ಲಿ ಜೀವಿಸುತ್ತಿದ್ದಾರೆ ಮತ್ತು ಇವರಲ್ಲಿ ಬಹುತೇಕರು ಜೀವನೋಪಾಯ ಸಮುದ್ರ ಉತ್ಪನ್ನಗಳಿಂದ ನಡೆಯುತ್ತದೆ. ಮೀನು ಉತ್ಪಾದನೆಯಲ್ಲಿ ಭಾರತವು ವಿಶ್ವದಲ್ಲೇ 2ನೇ ಸ್ಥಾನವನ್ನು ಪಡೆದಿದೆ. ಆದರೆ ಇತ್ತೀಚಿನ ದಿನಗಳಲ್ಲಿ ವಿನಾಶಕಾರಿ ಮೀನುಗಾರಿಕೆಯಿಂದ ಸಾಗರದ ಜೈವಿಕ ವೈವಿಧ್ಯತೆಯ ಮೇಲೆ ಪರಿಣಾಮ ಬೀರುತ್ತಿದೆ. ದಕ್ಷಿಣ ಭಾರತದಲ್ಲಿ ತೆಲಂಗಾಣ ರಾಜ್ಯವನ್ನು  ಹೊರತುಪಡಿಸಿ ಬೇರೆಲ್ಲಾ ರಾಜ್ಯಗಳಲ್ಲೂ ಕರಾವಳಿ ಪ್ರದೇಶಗಳಿವೆ.

ವಿಶ್ವದಲ್ಲಿ 300 ಕೋಟಿಗಿಂತಲೂ ಹೆಚ್ಚು ಜನರು ತಮ್ಮ ಜೀವನಕ್ಕಾಗಿ ಸಾಗರಗಳನ್ನು ಅವಲಂಬಿಸಿದ್ದಾರೆ. ಆದರೆ ಇದು ಕೇವಲ 3 ಬಿಲಿಯನ್ ಜನರಿಗೆ ಮಾತ್ರ ಸಂಬಂಧಿಸಿದ್ದು ಎಂದು ತಾತ್ಸಾರ ಮಾಡುವಂತಿಲ್ಲ. ಏಕೆಂದರೆ ಮಳೆ ನೀರು, ಉಸಿರಾಡುವ ಆಮ್ಲಜನಕ, ಕುಡಿಯುವ ನೀರು, ಹವಾಮಾನ ಇವೆಲ್ಲವನ್ನೂ ಒದಗಿಸುವಲ್ಲಿ ಮತ್ತು ನಿಯಂತ್ರಿಸುವಲ್ಲಿ ಸಾಗರಗಳು ಬಹು ಮುಖ್ಯವಾದ ಪಾತ್ರವನ್ನು

ವಹಿಸುತ್ತವೆ. ಜೊತೆಗೆ ಜಗತ್ತಿನ ಒಟ್ಟು ವ್ಯಾಪಾರ ಮತ್ತು ಸಾಗಣೆಯಲ್ಲಿ ಜಲಸಾರಿಗೆಯು ಬಹು ಮುಖ್ಯ ಪಾತ್ರವಹಿಸುತ್ತದೆ. ಯಾವುದೇ ಕರಾವಳಿ ಪ್ರದೇಶಗಳು ಪ್ರವಾಸೋದ್ಯಮ ಕೇಂದ್ರವಾಗಿರುವುದರಿಂದ ಆ ಪ್ರದೇಶಗಳ ಆರ್ಥಿಕ ಸ್ಥಿತಿಯು ಸುಧಾರಿಸುತ್ತದೆ. ಹಾಗಾಗಿ ಇಂತಹ ಅತಿ ಮುಖ್ಯವಾದ ಸಂಪನ್ಮೂಲವನ್ನು ನಾವು ಸುಸ್ಥಿರವಾಗಿ ನಿರ್ವಹಣೆ ಮಾಡಲೇಬೇಕು, ಅಂತಾರಾಷ್ಟ್ರೀಯ ಸಹಕಾರದಿಂದ ಮಾತ್ರ ಇದು ಸಾಧ್ಯವಾಗುತ್ತದೆ.

ದೇಶದಲ್ಲಿ ಹಲವಾರು ನದಿಗಳು ಮುಖ್ಯವಾಗಿ ಗಂಗಾ, ಯಮುನಾ ಇವೇ ಮೊದಲಾದವುಗಳು ಕಲುಷಿತಗೊಂಡು ಜನಜೀವನದ ಮೇಲೆ ಪರಿಣಾಮ ಬೀರುವುದನ್ನು ನಾವು ಇಂದಿಗೂ ನೋಡುತ್ತಿದ್ದೇವೆ. ಈ ನದಿಗಳು ಹಿಮಾಲಯದ ತಪ್ಪಲುಗಳಿಂದ ಹೊರಟು ಸದಾ ಹರಿವನ್ನು ಹೊಂದಿದ್ದು, ಜೀವನದಿಗಳೆಂದೇ ಗುರುತಿಸಲಾಗುತ್ತಿದೆ. ಗಂಗಾ ಮತ್ತು ಯಮುನಾ ನದಿಗಳಿಗೆ 'ಮಾನವ ಸ್ಥಾನಮಾನ'ವನ್ನು ನೀಡಲಾಗಿದೆ. (ಮಾರ್ಚ್ 2017). ದಕ್ಷಿಣ ಭಾರತದ ಬಹುತೇಕ ನದಿಗಳು ದಟ್ಟ ಕಾಡುಗಳಲ್ಲಿ ಹುಟ್ಟಿ ಬರುತ್ತಿವೆ. ಆದರೆ, ಬೇಸಿಗೆಯ ಸಮಯದಲ್ಲಿ ನದಿಗಳ ಹರಿವು ಕ್ಷೀಣಿಸಿ ಹಾಹಾಕಾರ ಎದ್ದು ರಾಜ್ಯ ರಾಜ್ಯಗಳ ನಡುವೆ ಮತ್ತು ರಾಜ್ಯಗಳ ಒಳಗೇ ವೈಷಮ್ಯಕ್ಕೆ ಕಾರಣವಾಗುತ್ತಿದೆ. ಇದಕ್ಕೆ ಕಾರಣ, ಒಂದೆಡೆ ಕಾಡುಗಳನ್ನು ವಿವಿಧ ಕಾರಣಗಳಿಗಾಗಿ ಸವರುತ್ತಿರುವುದರಿಂದ ನೀರಿನ ಹರಿವು ಕಡಿಮೆಯಾಗುತ್ತಿದೆಯಾದರೂ, ಕೃಷಿ, ನಗರಗಳ ಜನರ ಮತ್ತು ಕೈಗಾರಿಕೆಗಳಲ್ಲಿ ನೀರಿಗೆ ಬೇಡಿಕೆ ಹೆಚ್ಚುತ್ತಿರುವುದು ವಾಸ್ತವ. ನಮ್ಮಲ್ಲಿರುವ ನೀರಿನ ಆವಾರಗಳ ನಿರ್ವಹಣೆಯನ್ನು ನಮ್ಮ ಸಮುದಾಯಗಳು ಮರೆತಿರುವುದು ಮತ್ತು ಅವುಗಳನ್ನು ನಿರ್ಲಕ್ಷಿಸಿರುವುದರಿಂದ ಮಳೆಯ ನೀರನ್ನು ಹಿಡಿದಿಡಲು ಸೋತಿದ್ದೇವೆ. ಜೊತೆಗೆ ನಗರಗಳ ತ್ಯಾಜ್ಯ, ಕೃಷಿ ಮತ್ತು ಕೈಗಾರಿಕೆಗಳ ತ್ಯಾಜ್ಯ ಕೆರೆ, ಕುಂಟೆ, ಸರೋವರಗಳನ್ನಷ್ಟೇ ಅಲ್ಲದೆ ಅಂತರ್ಜಲವನ್ನು ಸೇರುತ್ತಿರುವುದರಿಂದ ನೀರು ವಿಷವಾಗುತ್ತಿದೆ.

**ನೀವು ಮಾಡಬಹುದಾದದ್ದು**

- ಸಾಗರ ತೀರಗಳನ್ನು ಕಲುಷಿತಗೊಳಿಸಬೇಡಿ ಅದರಲ್ಲೂ ಪ್ಲಾಸ್ಟಿಕ್ ಮುಂತಾದ ವಸ್ತುಗಳನ್ನು ಸಮುದ್ರದಲ್ಲಿ ಎಸೆಯಬೇಡಿ.
- ಅಂತರ್ಜಲವನ್ನು ಕೆಡಿಸುವ ಮತ್ತು ವಿಷವಾಗಿಸುವ ಯಾವುದೇ ಪ್ರಕ್ರಿಯೆಯನ್ನು ವಿರೋಧಿಸಿ ನಿಲ್ಲಿಸಿ.
- ನೀರಿನ ಆವಾರಗಳನ್ನು (ಬಾವಿ, ಕುಂಟೆ, ಕೆರೆ, ಸರೋವರಗಳು) ಶುದ್ಧವಾಗಿಡುವುದು ಮತ್ತು ಅವುಗಳಿಂದ ಕಾಲಕಾಲಕ್ಕೆ ಹೂಳು ತೆಗೆಸುವ ಕ್ರಿಯೆಗಳನ್ನು ಸಾಮೂಹಿಕವಾಗಿ ಮಾಡುವುದು.
- ನದಿ ಪಾತ್ರಗಳಿಂದ ಮರಳು ಎತ್ತುವುದು ಕೂಡಾ ನದಿಗಳ ನೀರು ಬಸಿದು ಹೋಗಲು ಒಂದು ಮುಖ್ಯ ಕಾರಣವಾಗಿರುವುದರಿಂದ ಅತಿಯಾಗಿ ಮರಳು ಎತ್ತುವ ಪ್ರಕ್ರಿಯೆಗಳನ್ನು ತಡೆಗಟ್ಟಿ.
- ಕಡಿಮೆ ಇಂಧನ ಬಯಸುವ ತಾಂತ್ರಿಕತೆಯನ್ನು ಬಳಸಿ ಇದರಿಂದ ಸಮುದ್ರದ ಮಟ್ಟ ಹೆಚ್ಚಳವಾಗುವುದು (ಧೃವ ಪ್ರದೇಶಗಳ ಮಂಜು ಕರಗಿ ಸಮುದ್ರದ ಮಟ್ಟ ಏರುವುದು) ಕಡಿಮೆಯಾಗುತ್ತದೆ.

**ಸವಾಲುಗಳು**

- ರಾಜ್ಯದಲ್ಲಿ ಕರಾವಳಿ ತೀರ ಕೆಲವು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿರುವುದರಿಂದ ಇದು ಸೀಮಿತ ಜನರ ಪ್ರಯತ್ನ.
- ಪ್ರಸ್ತುತ ಮರಳುಗಾರಿಕೆ ಅತಿ ದೊಡ್ಡ ದಂಧೆಯಾದ್ದರಿಂದ ಇದನ್ನು ತಡೆಯಲು ಸಾಕಷ್ಟು ಸಂಘಟಿತ ಶ್ರಮದ ಅವಶ್ಯಕತೆಯಿದೆ.

**ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಸುಸ್ಥಿರ ಅಭಿವೃದ್ಧಿ ಗುರಿ 14 ಅರ್ಥ ಮಾಡಿಕೊಳ್ಳಲು ಓದಬೇಕಿರುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989ರ ಪರಿಚ್ಛೇದಗಳು**

| ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ | ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ |
|---|---|---|---|
| 4 | ಮಕ್ಕಳ ಹಕ್ಕುಗಳ ಜಾರಿಗೆ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು | 13 | ಮಕ್ಕಳಿಗೆ ವಿವಿಧ ಮೂಲಗಳಿಂದ ಮಾಹಿತಿ ಹೊಂದುವ ಸ್ವಾತಂತ್ರ್ಯ |
| 17 | ಮಕ್ಕಳಿಗೆ ಸೂಕ್ತವಾದ ಮಾಹಿತಿ ನೀಡುವ ಜವಾಬ್ದಾರಿ ಮಾಧ್ಯಮಗಳಿಗಿದೆ. | 24 | ಎಲ್ಲ ಮಕ್ಕಳಿಗೆ ಮೂಲ ಸೇವೆಗಳನ್ನು ಒದಗಿಸಲೇಬೇಕು. |
| 28 | ಎಲ್ಲ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕು ಇದೆ | 29 | ಎಲ್ಲ ಮಕ್ಕಳಿಗೆ ತಾರತಮ್ಯವಿಲ್ಲದೆ ಶಿಕ್ಷಣ ಪಡೆಯುವ ಹಕ್ಕು ಇದೆ. |

## ಭಾರತ/ ರಾಜ್ಯ ಸರ್ಕಾರದ ಕ್ರಮಗಳು

| ಉಸ್ತುವಾರಿ ಸಚಿವಾಲಯ | ಕೇಂದ್ರ/ರಾಜ್ಯ ಸರ್ಕಾರದ ಯೋಜನೆಗಳು | ಸಂಬಂಧಿತ ಕ್ರಮಗಳು | ಇತರ ಸಂಬಂಧಿತ ಸಚಿವಾಲಯಗಳು/ ಇಲಾಖೆಗಳು |
|---|---|---|---|
| ಭೂವಿಜ್ಞಾನ | ನೈಸರ್ಗಿಕ ಸಂಪನ್ಮೂಲಗಳು ಮತ್ತು ಪರಿಸರ ವ್ಯವಸ್ಥೆಯನ್ನು ಕಾಪಾಡಿಕೊಳ್ಳುವುದು | 1. ಜಲ ಪರಿಸರ ವ್ಯವಸ್ಥೆಯನ್ನು ಕಾಪಾಡಲು ರಾಷ್ಟ್ರೀಯ ಯೋಜನೆ<br>2. ಸಗಮಾಲಾ ಯೋಜನೆ (ನೀಲಿ ಕ್ರಾಂತಿ) | • ಭೂ ವಿಜ್ಞಾನ<br>• ಅರಣ್ಯ ಮತ್ತು ಪರಿಸರ<br>• ಪಶು ಸಂಗೋಪನೆ<br>• ಹೈನು ಮತ್ತು ಮೀನುಗಾರಿಕೆ<br>• ವಿಜ್ಞಾನ ಮತ್ತು ತಂತ್ರಜ್ಞಾನ |



15 LIFE ON LAND

# ಗುರಿ 15

## ಭೂಮಿ ಮೇಲಿನ ಜೀವಜಾಲ

**ಭೌಗೋಳಿಕ ಪರಿಸರ ವ್ಯವಸ್ಥೆಯನ್ನು ರಕ್ಷಿಸಿ, ಮರುಸ್ಥಾಪಿಸಿ ಮತ್ತು ಸುಸ್ಥಿರವಾಗಿ ಬಳಸಿ, ಅರಣ್ಯಗಳ ಸುಸ್ಥಿರ ನಿರ್ವಹಣೆ, ಮರುಭೂಮೀಕರಣವನ್ನು ನಿಲ್ಲಿಸಿ ಮತ್ತು ಭೂಮಿ ಹಾಳುಗೆಡುವುದನ್ನು ತಡೆದು ಮರುಸ್ಥಾಪಿಸಿ ಹಾಗು ಜೈವಿಕ ವೈವಿಧ್ಯತೆಯ ನಷ್ಟವನ್ನು ತಡೆಯಿರಿ**

| | ಲಕ್ಷ್ಯಗಳು | | ಸೂಚಕಗಳು |
|---|---|---|---|
| 15.1 | 2020ರೊಳಗೆ, ಅಂತಾರಾಷ್ಟ್ರೀಯ ಒಪ್ಪಂದಗಳ ನಿಯಮಗಳಿಗನುಸಾರವಾಗಿ ವಿಶೇಷವಾಗಿ ಅರಣ್ಯ, ತೇವಭೂಮಿ, ಪರ್ವತಗಳು ಮತ್ತು ಒಣಭೂಮಿಯೂ ಸೇರಿದಂತೆ ಭೂಮಿಯ ಮೇಲಿನ ಮತ್ತು ಒಳನಾಡುಗಳಲ್ಲಿನ ಶುದ್ಧನೀರಿನ ಪರಿಸರ ವ್ಯವಸ್ಥೆಗಳು ಮತ್ತು ಅದರ ಬಳಕೆ ಸೇವೆಗಳನ್ನು ಉಳಿಸುವುದು, ಮರುಸ್ಥಾಪಿಸುವುದು ಮತ್ತು ಸುಸ್ಥಿರ ಬಳಕೆಯನ್ನು ಖಾತ್ರಿಗೊಳಿಸಿ | 15.1.1. | ಒಟ್ಟು ಭೂಪ್ರದೇಶದಲ್ಲಿ ಅರಣ್ಯ ಪ್ರದೇಶದ ಪ್ರಮಾಣ |
| 15.2 | 2020ರೊಳಗೆ ಎಲ್ಲಾ ವಿಧದ ಅರಣ್ಯಗಳ ಸುಸ್ಥಿರ ನಿರ್ವಹಣೆಯ ಜಾರಿಯನ್ನು ಉತ್ತೇಜಿಸಿ, ಅರಣ್ಯ ನಾಶವನ್ನು ನಿಲ್ಲಿಸಿ, ನಾಶವಾದ ಅರಣ್ಯವನ್ನು ಮರುಸ್ಥಾಪಿಸುವುದು ಮತ್ತು ಜಾಗತಿಕವಾಗಿ ಅರಣ್ಯೀಕರಣ ಮತ್ತು ಅರಣ್ಯಗಳನ್ನು ಬೆಳೆಸುವುದನ್ನು ಗಣನೀಯವಾಗಿ ಹೆಚ್ಚಿಸಿ | 15.1.2. | ರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿರುವ ಭೂಮಂಡಲ ಮತ್ತು ಸಿಹಿನೀರಿನ ಜೀವವೈವಿಧ್ಯದ ಪ್ರದೇಶಗಳ ಜೀವವೈವಿಧ್ಯವಾರು ಪ್ರಮಾಣ |
| 15.3 | 2030ರೊಳಗೆ, ಮರುಭೂಮೀಕರಣವನ್ನು ತಡೆದು, ಬರ, ನೆರೆಯಲ್ಲದೆ ಮರುಭೂಮೀಕರಣದಿಂದ ಹಾಳಾದ ಭೂಮಿ ಮತ್ತು ಮಣ್ಣನ್ನು ಮರುಸ್ಥಾಪಿಸಿ, ಭೂಅವನತಿಯಿಲ್ಲದ ಜಗತ್ತನ್ನು ಸಾಧಿಸಲು ಶ್ರಮಿಸಿ | 15.3.1. | ಒಟ್ಟು ಭೂಪ್ರದೇಶದಲ್ಲಿ ಹಾಳಾದ ಭೂಮಿಯ ಪ್ರಮಾಣ |
| 15.4 | 2030ರೊಳಗೆ, ಸುಸ್ಥಿರ ಅಭಿವೃದ್ಧಿಗೆ ಅವಶ್ಯಕವಾದ ಅನುಕೂಲಗಳನ್ನು ಪಡೆಯಲು ಪರ್ವತಗಳ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ಅದರ ಜೈವಿಕ ವೈವಿಧ್ಯತೆಯೂ ಸೇರಿದಂತೆ ಪರ್ವತಗಳ ಪರಿಸರ ವ್ಯವಸ್ಥೆಯನ್ನು ರಕ್ಷಿಸುವುದನ್ನು ಖಾತ್ರಿಪಡಿಸಿ | 15.4.1. | ಪರ್ವತಗಳ ಜೈವಿಕ ವೈವಿಧ್ಯತೆಗಾಗಿ ರಕ್ಷಿಸಲ್ಪಟ್ಟಿರುವ ಮುಖ್ಯ ತಾಣಗಳ ವ್ಯಾಪ್ತಿ |
| | | 15.4.2. | ಪರ್ವತ ಹಸಿರು ಹೊದಿಕೆ ಸೂಚ್ಯಾಂಕ |

| | | | |
|---|---|---|---|
| 15.5 | ನೈಸರ್ಗಿಕ ಆವಾಸಸ್ಥಾನಗಳ ನಾಶವನ್ನು ತಗ್ಗಿಸಲು ತುರ್ತು ಮತ್ತು ಕಠಿಣ ಕ್ರಮಗಳನ್ನು ಕೈಗೊಂಡು, ಜೈವಿಕ ವೈವಿಧ್ಯತೆಯ ನಷ್ಟವನ್ನು ನಿಲ್ಲಿಸಿ, ಮತ್ತು 2020ರೊಳಗೆ ಅವಸಾನದಂಚಿನ ಅಪಾಯದಲ್ಲಿರುವ ಜೀವಿಗಳನ್ನು ಸಂರಕ್ಷಿಸಿ ಅವುಗಳ ನಾಶವನ್ನು ತಡೆಯಿರಿ | 15.5.1. | ಕೆಂಪು ಪಟ್ಟಿ ಸೂಚ್ಯಾಂಕ |
| 15.6 | ಜೈವಿಕ ಸಂಪನ್ಮೂಲಗಳ ಬಳಕೆಯಿಂದಾಗುವ ಲಾಭದ ಸೂಕ್ತ ಮತ್ತು ನ್ಯಾಯಸಮ್ಮತ ಹಂಚಿಕೆಯನ್ನು ಉತ್ತೇಜಿಸಿ ಮತ್ತು ಅಂತಾರಾಷ್ಟ್ರೀಯ ಒಪ್ಪಂದದಂತೆ ಇಂತಹ ಸಂಪನ್ಮೂಲಗಳ ಸೂಕ್ತ ಲಭ್ಯತೆಯನ್ನು ಉತ್ತೇಜಿಸಿ | 15.6.1. | ಲಾಭಗಳ ಸಮಾನ ಹಂಚಿಕೆಯನ್ನು ಖಾತ್ರಿಪಡಿಸಲು ಶಾಸನಾತ್ಮಕ, ಆಡಳಿತಾತ್ಮಕ ಮತ್ತು ನೀತಿ ಚೌಕಟ್ಟನ್ನು ಅಳವಡಿಸಿಕೊಂಡಿರುವ ದೇಶಗಳ ಸಂಖ್ಯೆ |
| 15.7 | ಸಂರಕ್ಷಿತ ಪ್ರಾಣಿ ಮತ್ತು ಸಸ್ಯ ಸಂಕುಲಗಳ ಕಳ್ಳಬೇಟೆ ಮತ್ತು ಕಳ್ಳಸಾಗಣೆಯನ್ನು ತಡೆಯಲು ತುರ್ತು ಕ್ರಮಗಳನ್ನು ಕೈಗೊಂಡು, ವನ್ಯಜೀವಿ ಉತ್ಪನ್ನಗಳ ಅಕ್ರಮ ಬೇಡಿಕೆ ಮತ್ತು ಪೂರೈಕೆಯನ್ನು ತಡೆಯಿರಿ | 15.7.1. | ವ್ಯಾಪಾರಕ್ಕಾಗಿ ವನ್ಯಜೀವಿಗಳ ಕಳ್ಳಬೇಟೆ ಮತ್ತು ಕಳ್ಳಸಾಗಣೆಯ ಪ್ರಮಾಣ |
| 15.8 | 2030ರೊಳಗೆ, ಭೂಮಿ ಮತ್ತು ಜಲ ಪರಿಸರ ವ್ಯವಸ್ಥೆಯ ಮೇಲೆ ಅನ್ಯ ಜೀವಿಗಳ ಪ್ರವೇಶ ಮತ್ತು ಅವುಗಳ ಆಕ್ರಮಣದಿಂದಾಗುವ ಪರಿಣಾಮಗಳನ್ನು ಗಣನೀಯವಾಗಿ ತಗ್ಗಿಸಲು ಕ್ರಮಗಳನ್ನು ಪರಿಚಯಿಸಿ ಮತ್ತು ಅಂತಹ ಜೀವಿಗಳನ್ನು ಆದ್ಯತೆಯ ಮೇರೆಗೆ ನಿಯಂತ್ರಿಸಿ ಅಥವಾ ನಿರ್ಮೂಲನೆಗೊಳಿಸಿ | 15.8.1. | ಅನ್ಯಜೀವಿಗಳ ಆಕ್ರಮಣವನ್ನು ತಡೆಯುವ ಅಥವಾ ನಿಯಂತ್ರಿಸುವ ಸಲುವಾಗಿ ಸಾಕಷ್ಟು ಪ್ರಮಾಣದಲ್ಲಿ ಸೂಕ್ತ ರಾಷ್ಟ್ರೀಯ ನೀತಿ ಮತ್ತು ಸಾಕಷ್ಟು ಸಂಪನ್ಮೂಲಗಳನ್ನು ಅಳವಡಿಸಿಕೊಂಡಿರುವ ದೇಶಗಳ ಪ್ರಮಾಣ |
| 15.9 | 2020ರೊಳಗೆ, ರಾಷ್ಟ್ರೀಯ ಮತ್ತು ಸ್ಥಳೀಯ ಯೋಜನೆಗಳಲ್ಲಿ, ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ, ಬಡತನ ನಿರ್ಮೂಲನಾ ಕಾರ್ಯತಂತ್ರಗಳಲ್ಲಿ ಮತ್ತು ಲೆಕ್ಕಪತ್ರಗಳಲ್ಲಿ ಪರಿಸರ ವ್ಯವಸ್ಥೆ ಮತ್ತು ಜೈವಿಕ ವೈವಿಧ್ಯತೆಯ ಮೌಲ್ಯಗಳನ್ನು ಏಕೀಕರಿಸಿ | 15.9.1. | ಜೈವಿಕ ವೈವಿಧ್ಯತೆಯ ತಂತ್ರ ಯೋಜನೆ 2011–2030ರ ಐಚಿ(AICHI) ಜೈವಿಕ ವೈವಿಧ್ಯತೆಯ ಲಕ್ಷ್ಯ 2ರ ಅನುಸಾರವಾಗಿ ನಿಗದಿಪಡಿಸಿದ ರಾಷ್ಟ್ರೀಯ ಲಕ್ಷ್ಯಗಳ ಪ್ರಗತಿ |
| 15.ಎ | ಜೈವಿಕ ವೈವಿಧ್ಯತೆ ಮತ್ತು ಪರಿಸರ ವ್ಯವಸ್ಥೆಯ ಸುಸ್ಥಿರ ಬಳಕೆ ಮತ್ತು ರಕ್ಷಣೆಗೆ ಎಲ್ಲಾ ಮೂಲಗಳಿಂದ ಆರ್ಥಿಕ ಸಂಪನ್ಮೂಲಗಳ ಕ್ರೋಢೀಕರಣವನ್ನು ಗಣನೀಯವಾಗಿ ಹೆಚ್ಚಿಸಿ | 15.ಎ.1. | ಜೈವಿಕ ವೈವಿಧ್ಯತೆ ಮತ್ತು ಪರಿಸರ ವ್ಯವಸ್ಥೆಯ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆಗಿರುವ ಅಧಿಕೃತ ಅಭಿವೃದ್ಧಿ ನೆರವು ಮತ್ತು ಸಾರ್ವಜನಿಕ ವೆಚ್ಚ |
| 15.ಬಿ | ಅರಣ್ಯ ಸಂರಕ್ಷಣೆ ಮತ್ತು ಮರುಅರಣ್ಯೀಕರಣ ಹಾಗೂ ಅರಣ್ಯ ನಿರ್ವಹಣೆಯೂ ಸೇರಿದಂತೆ ಅಭಿವೃದ್ಧಿಶೀಲ ದೇಶಗಳು ಮುಂದುವರೆಯಲು ಹಾಗು ಸುಸ್ಥಿರ ಅರಣ್ಯ ನಿರ್ವಹಣೆಗಾಗಿ ಸಾಕಷ್ಟು ಆರ್ಥಿಕ ನೆರವನ್ನು ನೀಡಿ ಪ್ರೋತ್ಸಾಹಿಸಲು ಎಲ್ಲಾ ಹಂತಗಳಲ್ಲೂ ಎಲ್ಲಾ ಮೂಲಗಳಿಂದ ಗಣನೀಯವಾದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ | 15.ಬಿ.1. | ಜೈವಿಕ ವೈವಿಧ್ಯತೆ ಮತ್ತು ಪರಿಸರ ವ್ಯವಸ್ಥೆಯ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆಗಿರುವ ಅಧಿಕೃತ ಅಭಿವೃದ್ಧಿ ನೆರವು ಮತ್ತು ಸಾರ್ವಜನಿಕ ವೆಚ್ಚ |
| 15.ಸಿ | ಸ್ಥಳೀಯ ಸಮುದಾಯಗಳು ಸುಸ್ಥಿರ ಜೀವನೋಪಾಯ ಅವಕಾಶಗಳನ್ನು ಅನುಸರಿಸಲು ಸಾಮರ್ಥ್ಯ ಹೆಚ್ಚಿಸುವುದನ್ನೂ ಒಳಗೊಂಡು, ರಕ್ಷಿತ ಜೀವಿಗಳ ಕಳ್ಳಬೇಟೆ ಮತ್ತು ಕಳ್ಳಸಾಗಾಣಿಕೆಯನ್ನು ತಡೆಗಟ್ಟುವ ಪ್ರಯತ್ನಗಳಿಗೆ ಜಾಗತಿಕ ನೆರವನ್ನು ಹೆಚ್ಚಿಸಿ | 15.ಸಿ.1. | ವ್ಯಾಪಾರಕ್ಕಾಗಿ ವನ್ಯಜೀವಿಗಳ ಕಳ್ಳಬೇಟೆ ಮತ್ತು ಕಳ್ಳಸಾಗಣೆಯ ಪ್ರಮಾಣ |

## ವಿವರಣೆ

ಭೂಮಿಯ ಒಟ್ಟು ವಿಸ್ತೀರ್ಣದಲ್ಲಿ ಶೇ. 30ರಷ್ಟು ಅರಣ್ಯ ಪ್ರದೇಶವಿದೆ. ವಾತಾವರಣ ಬದಲಾವಣೆಯಲ್ಲಿ ಅರಣ್ಯವು ಬಹು ಮುಖ್ಯ ಪಾತ್ರ ವಹಿಸುತ್ತದೆ. ಆದರೂ ಸಹ ಅನೇಕ ಕಾರಣಗಳಿಂದ ವರ್ಷದಿಂದ ವರ್ಷಕ್ಕೆ ಅರಣ್ಯ ನಾಶವಾಗುತ್ತಲೇ ಇದೆ. ವಿಶ್ವದಲ್ಲಿ ಪ್ರತಿ ವರ್ಷ 1,300 ಕೋಟಿ ಹೆಕ್ಟೇರಿನಷ್ಟು ಅರಣ್ಯ ನಾಶವಾಗುತ್ತಿದೆ ಎಂದು ಅಂದಾಜಿಸಲಾಗಿದೆ. ಇದರಿಂದಾಗಿ ಒಣಭೂಮಿ ಪ್ರದೇಶ ಹೆಚ್ಚಾಗಿ ಅವು ಮರುಭೂಮಿಗಳಾಗಿ ಪರಿವರ್ತನೆಯಾಗುತ್ತಿವೆ. ಅರಣ್ಯನಾಶ ಮತ್ತು ಮರುಭೂಮೀಕರಣಕ್ಕೆ ವಾತಾವರಣದ ಬದಲಾವಣೆ ಮತ್ತು ಮಾನವನ ಚಟುವಟಿಕೆಗಳೇ ಮುಖ್ಯ ಕಾರಣ. ಅರಣ್ಯ ನಾಶದ ಜೊತೆಗೆ ಹಲವಾರು ಕಾರಣಗಳಿಗಾಗಿ ವನ್ಯ ಜೀವಿಗಳನ್ನು ಕೊಲ್ಲುವುದು ಮತ್ತು ಕಳ್ಳಸಾಗಣೆ ಮಾಡುವುದು ಅವ್ಯಾಹತವಾಗಿ ನಡೆಯುತ್ತಲೇ ಬಂದಿದೆ.

ಭೂಮಿಯ ಮೇಲೆ ಅಸ್ತಿತ್ವದಲ್ಲಿರುವ ಪ್ರಾಣಿಗಳು, ಸಸ್ಯಸಂಕುಲ ಮತ್ತು ಕೀಟಗಳಲ್ಲಿ ಶೇ. 80ರಷ್ಟು ಅರಣ್ಯದಲ್ಲಿವೆ. ಅರಣ್ಯ ನಾಶ ಇವುಗಳ ಅಸ್ತಿತ್ವದ ಮೇಲೂ ಪರಿಣಾಮ ಬೀರುತ್ತಿದೆ ಮತ್ತು ಅರಣ್ಯವನ್ನೇ ನಂಬಿಕೊಂಡು ಬದುಕುತ್ತಿರುವ 1,600 ಕೋಟಿ ಜನರ ಬದುಕಿನ ಮೇಲೂ ಪರಿಣಾಮ ಬೀರುತ್ತಿದೆ.

ಅರಣ್ಯವು ಕೇವಲ ಸಸ್ಯ, ಪ್ರಾಣಿ, ಪಕ್ಷಿಗಳ ವಾಸಸ್ಥಾನವಾಗಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಈಗಲೂ ಜನ ತಮ್ಮ ರೋಗಗಳ ಚಿಕಿತ್ಸೆಗೆ ಬಳಸುತ್ತಿರುವ ಸಾವಿರಾರು ಔಷಧ ಸಸ್ಯಗಳ ತವರು ಅರಣ್ಯ. ನಾವು ಕುಡಿಯುವ ನೀರು, ತಿನ್ನುವ ಆಹಾರ, ಉಸಿರಾಡುವ ಗಾಳಿ ಇವೆಲ್ಲವುಗಳ ಮೇಲೂ ಅರಣ್ಯವು ಪರಿಣಾಮವನ್ನು ಬೀರುತ್ತದೆ. ಅರಣ್ಯಗಳ ನಿರ್ವಹಣೆಯನ್ನು ಸುಸ್ಥಿರಗೊಳಿಸಿದರೆ ಅದು ನಮ್ಮ ಜೀವನದ ಸುಸ್ಥಿರತೆಗೆ ಕಾರಣವಾಗುತ್ತದೆ. ಜೊತೆಗೆ ಅರಣ್ಯಗಳು ಹಲವಾರು ಆಧ್ಯಾತ್ಮಿಕ, ಧಾರ್ಮಿಕ ಮತ್ತು ಸಾಂಪ್ರದಾಯಿಕ ತತ್ತ್ವಗಳಿಗೆ ಮೂಲವಾಗಿವೆ.

ದಕ್ಷಿಣ ಭಾರತದ ವಿವಿಧ ರಾಜ್ಯಗಳಲ್ಲಿ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಅರಣ್ಯ ಪ್ರದೇಶದ ಶೇಕಡಾವಾರು ಪ್ರಮಾಣವನ್ನು ಇಲ್ಲಿ ನೀಡಲಾಗಿದೆ (ಮೂಲ: ಅರಣ್ಯ ಸಮೀಕ್ಷೆ, 2013)

| ರಾಜ್ಯಗಳು | ಒಟ್ಟು ಪ್ರದೇಶದ ಶೇ. |
|---|---|
| ಕರ್ನಾಟಕ | 18.84 |
| ಆಂಧ್ರಪ್ರದೇಶ | 16.77 |
| ಕೇರಳ | 46.12 |
| ತಮಿಳುನಾಡು | 18.33 |
| ಪುದುಚೇರಿ | 10.43 |
| ಭಾರತ | 21.23 |

ಭಾರತದ ಅರಣ್ಯ ನೀತಿಯು ಒಟ್ಟು ಪ್ರದೇಶದ ಮೂರನೇ ಒಂದು ಭಾಗ ಅರಣ್ಯ ಮತ್ತು ಮರಗಳಿಂದ ಕೂಡಿರಬೇಕೆಂದು ಹೇಳುತ್ತದೆ. ಆದರೆ ದಕ್ಷಿಣ ಭಾರತದ ಯಾವುದೇ ರಾಜ್ಯಗಳಲ್ಲೂ ಈ ಪ್ರಮಾಣದ ಅರಣ್ಯ ಪ್ರದೇಶವಿಲ್ಲ.

ಅರಣ್ಯ ಸಮೀಕ್ಷೆ 2015ರ ವರದಿಯ ಪ್ರಕಾರ ಕಳೆದ ವರ್ಷಗಳಲ್ಲಿ ಭಾರತದಲ್ಲಿ ಸುಮಾರು 2,510 ಚ.ಕಿಮಿ. ದಟ್ಟ ಅರಣ್ಯ ಮತ್ತು ಸಾಧಾರಣ ದಟ್ಟ ಅರಣ್ಯವನ್ನು ಸವರಿ ಹಾಕಲಾಗಿದೆ ಮತ್ತು 2,254 ಚ.ಕಿ.ಮೀ. ಸಾಧಾರಣ ದಟ್ಟ ಅರಣ್ಯ ಪ್ರದೇಶವನ್ನು ಅರಣ್ಯೇತರ ಪ್ರದೇಶವನ್ನಾಗಿ ಮಾರ್ಪಡಿಸಲಾಗಿದೆ. ದೇಶದ ಒಟ್ಟು ಅರಣ್ಯ ಪ್ರದೇಶದಲ್ಲಿ ಸುಮಾರು 19 ಲಕ್ಷ ಹೆಕ್ಟೇರಿನಷ್ಟು ಅರಣ್ಯವನ್ನು ಅತಿಕ್ರಮಿಸಲಾಗಿದೆ. ಈ ರೀತಿ ಹೆಚ್ಚು ಅರಣ್ಯ ನಾಶವಾದ ರಾಜ್ಯಗಳಲ್ಲಿ ದಕ್ಷಿಣ ಭಾರತದ ಕರ್ನಾಟಕ, ತೆಲಂಗಾಣ ಮತ್ತು ಕೇರಳ ರಾಜ್ಯಗಳೂ ಸಹ ಸೇರಿವೆ. ಹೀಗಾಗಿ ದಕ್ಷಿಣ ಭಾರತದ ಕರ್ನಾಟಕ ತೆಲಂಗಣಾ ಮತ್ತು ಆಂಧ್ರಪ್ರದೇಶಗಳ ಬಹುತೇಕ ಪ್ರದೇಶಗಳು ಮರುಭೂಮಿಯಾಗುತ್ತಿರುವ ಕುರಿತು ಉಪಗ್ರಹ ಚಿತ್ರದ ಆಧಾರದ ಸಮೀಕ್ಷೆಗಳು ನಮ್ಮೆದುರು ಇರುವ ಅಪಾಯವನ್ನು ಕುರಿತು ಎಚ್ಚರಿಸುತ್ತಿವೆ.


## ನೀವು ಮಾಡಬಹುದಾದದ್ದು

- ಅರಣ್ಯ ನಾಶವನ್ನು ತಡೆಯಿರಿ ಮತ್ತು ಅವಶ್ಯಕತೆ ಇರುವಷ್ಟು ಮಾತ್ರ ಅರಣ್ಯ ಉತ್ಪನ್ನಗಳನ್ನು ಬಳಸಿ
- ನಿಮ್ಮ ಗ್ರಾಮದಲ್ಲಿ ಅರಣ್ಯ ಸಮಿತಿಗಳಿದ್ದಲ್ಲಿ ಅವುಗಳೊಡನೆ ಕೈಜೋಡಿಸಿ ಅರಣ್ಯವನ್ನು ಉಳಿಸಲು ಮತ್ತು ಬೆಳೆಸಲು ಪ್ರಯತ್ನಿಸಿ.
- ಶಾಲೆ, ಕಾಲೇಜು ವಿದ್ಯಾರ್ಥಿಗಳು, ಸಂಘಸಂಸ್ಥೆಗಳ ಸದಸ್ಯರು ಸೇರಿ ಕಾಲಕಾಲಕ್ಕೆ ಸಸಿ ನೆಡುವ ಮತ್ತು ಗಿಡಗಳನ್ನು ಪೋಷಿಸುವ ಕೆಲಸಗಳನ್ನು ಕೈಗೊಳ್ಳಿ.
- ಕಳ್ಳತನದಲ್ಲಿ ಅರಣ್ಯ ಉತ್ಪನ್ನಗಳನ್ನು ಒಯ್ಯುವ ಮತ್ತು ಮರ ಕಡಿಯುವವರನ್ನು ತಡೆಯಲು ಕಾನೂನು ಪಾಲಕರಿಗೆ ಸುದ್ದಿ ನೀಡಿ.

| **ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಸುಸ್ಥಿರ ಅಭಿವೃದ್ಧಿ ಗುರಿ 15 ಅರ್ಥ ಮಾಡಿಕೊಳ್ಳಲು ಓದಬೇಕಿರುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989ರ ಪರಿಚ್ಛೇದಗಳು** | | | |
|---|---|---|---|
| **ಪರಿಚ್ಛೇದ ಸಂಖ್ಯೆ** | **ಪರಿಚ್ಛೇದದ ಶೀರ್ಷಿಕೆ** | **ಪರಿಚ್ಛೇದ ಸಂಖ್ಯೆ** | **ಪರಿಚ್ಛೇದದ ಶೀರ್ಷಿಕೆ** |
| 2 | ಮಕ್ಕಳ ನಡುವೆ ತಾರತಮ್ಯ/ಭೇದಭಾವ ಇರಬಾರದು/ ಮಾಡಬಾರದು | 4 | ಮಕ್ಕಳ ಹಕ್ಕುಗಳ ಜಾರಿಗೆ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು |
| 13 | ಮಕ್ಕಳಿಗೆ ವಿವಿಧ ಮೂಲಗಳಿಂದ ಮಾಹಿತಿ ಹೊಂದುವ ಸ್ವಾತಂತ್ರ್ಯ | 28 | ಎಲ್ಲ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕು ಇದೆ |
| 29 | ಎಲ್ಲ ಮಕ್ಕಳಿಗೆ ತಾರತಮ್ಯವಿಲ್ಲದೆ ಶಿಕ್ಷಣ ಪಡೆಯುವ ಹಕ್ಕು ಇದೆ. | | |

## ಭಾರತ/ ರಾಜ್ಯ ಸರ್ಕಾರದ ಕ್ರಮಗಳು

| **ಉಸ್ತುವಾರಿ ಸಚಿವಾಲಯ** | **ಕೇಂದ್ರ/ರಾಜ್ಯ ಸರ್ಕಾರದ ಯೋಜನೆಗಳು** | **ಸಂಬಂಧಿತ ಕ್ರಮಗಳು** | **ಇತರ ಸಂಬಂಧಿತ ಸಚಿವಾಲಯಗಳು/ ಇಲಾಖೆಗಳು** |
|---|---|---|---|
| ಅರಣ್ಯ ಮತ್ತು ಪರಿಸರ | 1. ಹಸಿರು ಭಾರತಕ್ಕಾಗಿ ರಾಷ್ಟ್ರೀಯ ಯೋಜನೆ<br>2. ವನ್ಯ ಜೀವಿ ವಸತಿಯ ಸಮಗ್ರ ಅಭಿವೃದ್ಧಿ<br>3. ಪ್ರಾಜೆಕ್ಟ್ ಟೈಗರ್<br>4. ಪ್ರಾಜೆಕ್ಟ್ ಎಲಿಫೆಂಟ್<br>5. ರಾಷ್ಟ್ರೀಯ ಪರಿಸರ ನೀತಿ 2006<br>6. ರಾಷ್ಟ್ರೀಯ ಕೃಷಿ–ಅರಣ್ಯ ನೀತಿ 2014<br>7. ಮರುಭೂಮೀಕರಣವನ್ನು ತಡೆಯಲು ರಾಷ್ಟ್ರೀಯ ಕ್ರಿಯಾ ಕಾರ್ಯಕ್ರಮ | | • ಅರಣ್ಯ ಮತ್ತು ಪರಿಸರ<br>• ಬುಡಕಟ್ಟು ವ್ಯವಹಾರ<br>• ಕೃಷಿ ಮತ್ತು ಸಹಕಾರ<br>• ಭೂ ಸಂಪನ್ಮೂಲಗಳು<br>• ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್<br>• ಆರ್ಥಿಕ |





16 PEACE, JUSTICE AND STRONG INSTITUTIONS


# ಗುರಿ 16

## ಶಾಂತಿ, ನ್ಯಾಯ ಮತ್ತು ದೃಢ ಸಂಸ್ಥೆಗಳು

**ಸುಸ್ಥಿರ ಅಭಿವೃದ್ಧಿಗಾಗಿ ಶಾಂತಿಯುತ ಮತ್ತು ಸಮನ್ವಯ ಸಮಾಜಗಳನ್ನು ಉತ್ತೇಜಿಸಿ, ಎಲ್ಲರಿಗೂ ನ್ಯಾಯದ ಲಭ್ಯತೆಯನ್ನು ಒದಗಿಸಿ, ಎಲ್ಲಾ ಹಂತಗಳಲ್ಲೂ ಪರಿಣಾಮಕಾರಿ, ಉತ್ತರದಾಯಿತ್ವ ಮತ್ತು ಸಮನ್ವಯತೆಯಿರುವ ಸಂಸ್ಥೆಗಳನ್ನು ನಿರ್ಮಿಸಿ**

| | ಲಕ್ಷ್ಯಗಳು | | ಸೂಚಕಗಳು |
|---|---|---|---|
| 16.1 | ಎಲ್ಲಾ ರೀತಿಯ ದೌರ್ಜನ್ಯ ಮತ್ತು ಅದಕ್ಕೆ ಸಂಬಂಧಿಸಿದ ಮರಣ ಪ್ರಮಾಣವನ್ನು ಎಲ್ಲೆಡೆಯಲ್ಲಿಯೂ ಗಣನೀಯವಾಗಿ ಕಡಿಮೆಗೊಳಿಸಿ | 16.1.1. | ಲಿಂಗ ಮತ್ತು ವಯಸ್ಸುಗಳನ್ನು ಅನುಸರಿಸಿ, ಪ್ರತಿ 1 ಲಕ್ಷ ಜನಸಂಖ್ಯೆಯಲ್ಲಿ ಉದ್ದೇಶಪೂರ್ವಕ ನರಹತ್ಯೆಗೆ ಗುರಿಯಾದ ಜನರ ಸಂಖ್ಯೆ. |
| | | 16.1.2. | ಲಿಂಗ, ವಯಸ್ಸು ಮತ್ತು ಕಾರಣಗಳನ್ನು ಅನುಸರಿಸಿ, ಪ್ರತಿ 1 ಲಕ್ಷ ಜನಸಂಖ್ಯೆಯಲ್ಲಿ ಸಂಘರ್ಷಗಳಿಂದಾಗಿ ಸಾವಿಗೀಡಾಗುವ ಜನರ ಸಂಖ್ಯೆ. |
| | | 16.1.3. | ಕಳೆದ 12 ತಿಂಗಳಲ್ಲಿ ದೈಹಿಕ, ಮಾನಸಿಕ ಅಥವಾ ಲೈಂಗಿಕ ಹಿಂಸೆಗೆ ಒಳಗಾದ ಜನಸಂಖ್ಯೆಯ ಪ್ರಮಾಣ |
| 16.2 | ಮಕ್ಕಳ ದುರುಪಯೋಗ, ಶೋಷಣೆ, ಕಳ್ಳಸಾಗಣೆ ಮತ್ತು ಎಲ್ಲಾ ವಿಧವಾದ ದೌರ್ಜನ್ಯ ಮತ್ತು ಹಿಂಸೆಯನ್ನು ಕೊನೆಗಾಣಿಸಿ | 16.2.1. | 1 ರಿಂದ 17 ವರ್ಷದ ಮಕ್ಕಳು ಕಳೆದ 12 ತಿಂಗಳಲ್ಲಿ ತಮ್ಮ ಪೋಷಣೆ ಮಾಡುವ ಜವಾಬುದಾರಿಯಿರುವವರಿಂದ ಯಾವುದೇ ರೀತಿಯ ದೈಹಿಕ ಶಿಕ್ಷೆ ಮತ್ತು / ಮಾನಸಿಕ ಆಕ್ರಮಣ/ ಕ್ಷೋಭೆ ಅನುಭವಿಸಿದ ಪ್ರಮಾಣ |
| | | 16.2.2. | ಲಿಂಗ, ವಯಸ್ಸು ಮತ್ತು ಅವರು ಅನುಭವಿಸಿದ ಶೋಷಣೆಯ ರೀತಿಯಂತೆ, ಪ್ರತಿ 1 ಲಕ್ಷ ಜನಸಂಖ್ಯೆಯಲ್ಲಿ ಮಾನವ ಕಳ್ಳಸಾಗಾಣಿಕೆಗೆ ಗುರಿಯಾದ ಜನ ಸಂಖ್ಯೆ |
| | | 16.2.3. | 18–29 ವರ್ಷದೊಳಗಿನ ಯುವಜನ (ಹೆಣ್ಣು ಮತ್ತು ಗಂಡು) ತಮ್ಮ 18ನೇ ವಯಸ್ಸು ತಲುಪುವುದರೊಳಗೆ ಲೈಂಗಿಕ ಹಿಂಸೆ/ಶೋಷಣೆಗೆ ಗುರಿಯಾದ ಪ್ರಮಾಣ |

| | | | |
|---|---|---|---|
| 16.3 | ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ನ್ಯಾಯ ಪರಿಪಾಲನೆಯನ್ನು ಉತ್ತೇಜಿಸಿ ಮತ್ತು ಎಲ್ಲರಿಗೂ ನ್ಯಾಯದ ಲಭ್ಯತೆಯು ಸಮಾನವಾಗಿರುವುದನ್ನು ಖಾತ್ರಿಪಡಿಸಿ | 16.3.1. | ಕಳೆದ 12 ತಿಂಗಳಲ್ಲಿ ಹಿಂಸೆ/ಶೋಷಣೆಗೆ ಒಳಗಾದ ಜನರು, ತಾವು ಎದುರಿಸಿದ ತೊಂದರೆಗಳನ್ನು ಕುರಿತು ಸಕ್ಷಮ ಅಧಿಕಾರಿಗಳಿಗೆ ಅಥವಾ ಇತರ ಅಧಿಕೃತವಾಗಿ ಮಾನ್ಯತೆ ಪಡೆದಿರುವ ಸಂಘರ್ಷ ಪರಿಹಾರ ವ್ಯವಸ್ಥೆಗಳಿಗೆ ವರದಿ ಮಾಡಿರುವ ಪ್ರಮಾಣ  |
| | | 16.3.2. | ಬಂಧೀಖಾನೆಗಳಲ್ಲಿರಿಸಲಾಗಿರುವ ಒಟ್ಟು ಜನರಲ್ಲಿ ಯಾವುದೇ ತೀರ್ಪು ಬಾರದೆ ಇನ್ನೂ ಬಂಧನದಲ್ಲಿರುವ ಜನರ ಪ್ರಮಾಣ |
| 16.4 | 2030ರೊಳಗೆ, ಕಾನೂನುಬಾಹಿರ ಹಣಕಾಸು ಮತ್ತು ಶಸ್ತ್ರಾಸ್ತ್ರಗಳ ಸಾಗಣೆಯನ್ನು ಗಣನೀಯವಾಗಿ ಕಡಿಮೆಗೊಳಿಸಿ, ಕಳವಾದ ಆಸ್ತಿಗಳನ್ನು ಹಿಂಪಡೆಯುವ ಮತ್ತು ಮುಟ್ಟುಗೋಲು ಹಾಕಿಕೊಳ್ಳುವುದನ್ನು ಬಲಪಡಿಸಿ, ಎಲ್ಲಾ ವಿಧವಾದ ಸಾಂಘಿಕ ಅಪರಾಧಗಳನ್ನು ತಡೆಯಿರಿ | 16.4.1. | ದೇಶದೊಳಕ್ಕೆ ಮತ್ತು ಹೊರಕ್ಕೆ ಕಳ್ಳಸಾಗಣೆಯಾಗಿರುವ ಒಟ್ಟು ಹಣಕಾಸಿನ ಮೊತ್ತ (ಅಮೇರಿಕನ್ ಡಾಲರ್‌ಗಳಲ್ಲಿ) |
| | | 16.4.2. | ಅಂತಾರಾಷ್ಟ್ರೀಯ ಮಟ್ಟಗಳಂತೆ ಮತ್ತು ಕಾನೂನಿನಂತೆ, ಗುರುತಿಸಿ ವಶಪಡಿಸಿಕೊಂಡು ದಾಖಲಿಸಲಾಗಿರುವ ಸಣ್ಣ ಶಸ್ತ್ರಗಳು ಮತ್ತು ಹಗುರ ಶಸ್ತ್ರಾಸ್ತ್ರಗಳು |
| 16.5 | ಎಲ್ಲಾ ವಿಧವಾದ ಭ್ರಷ್ಟಾಚಾರ ಮತ್ತು ಲಂಚವನ್ನು ಗಣನೀಯವಾಗಿ ಕಡಿಮೆಗೊಳಿಸಿ | 16.5.1. | ಕಳೆದ 12 ತಿಂಗಳಲ್ಲಿ, ಒಮ್ಮೆಯಾದರೂ ಸಾರ್ವಜನಿಕ/ಸರ್ಕಾರದ ಅಧಿಕಾರಿಗಳಿಗೆ ಲಂಚ ಕೊಟ್ಟಿರುವ ಅಥವಾ ಲಂಚಕ್ಕಾಗಿ ಸರ್ಕಾರದ ಅಧಿಕಾರಿಯಿಂದ ಬೇಡಿಕೆ ಎದುರಿಸಿರುವ ಜನರ ಪ್ರಮಾಣ  |
| | | 16.5.2. | ಕಳೆದ 12 ತಿಂಗಳಲ್ಲಿ, ಒಮ್ಮೆಯಾದರೂ ಸಾರ್ವಜನಿಕ/ಸರ್ಕಾರದ ಅಧಿಕಾರಿಗಳಿಗೆ ಲಂಚ ಕೊಟ್ಟಿರುವ ಅಥವಾ ಲಂಚಕ್ಕಾಗಿ ಸರ್ಕಾರದ ಅಧಿಕಾರಿಯಿಂದ ಬೇಡಿಕೆ ಎದುರಿಸಿರುವ ಉದ್ದಿಮೆಗಳು/ವ್ಯವಹಾರಗಳನ್ನು ನಡೆಸುವ ಸಂಸ್ಥೆಗಳ ಪ್ರಮಾಣ  |
| 16.6 | ಎಲ್ಲಾ ಹಂತಗಳಲ್ಲೂ ಪರಿಣಾಮಕಾರಿಯಾದ, ಉತ್ತರದಾಯಿತ್ವವಿರುವ ಮತ್ತು ಪಾರದರ್ಶಕ ಸಂಸ್ಥೆಗಳನ್ನು ಅಭಿವೃದ್ಧಿಪಡಿಸಿ | 16.6.1. | ಮೂಲ ಆಯವ್ಯಯ ಅನುಮೋದನೆಯಂತೆ, ಪ್ರತಿ ವಿಭಾಗದಡಿ ಸರ್ಕಾರದ ಖರ್ಚಿನ ಪ್ರಮಾಣ. (ಅಥವಾ ಆಯವ್ಯಯದ ಸಂಕೇತಗಳು ಅಥವಾ ಅದರಂತೆ)  |
| | | 16.6.2. | ಸಾರ್ವಜನಿಕ/ಸರ್ಕಾರಿ ಸೇವೆಗಳನ್ನು ಕುರಿತು ತಮ್ಮ ತೃಪ್ತಿಯನ್ನು ವ್ಯಕ್ತಪಡಿಸಿರುವ ಜನಸಂಖ್ಯೆಯ ಪ್ರಮಾಣ  |

| | | | |
|---|---|---|---|
| 16.7 | ಎಲ್ಲಾ ಹಂತಗಳ ತೀರ್ಮಾನಗಳಲ್ಲಿ ಪ್ರತಿಕ್ರಿಯಾಶೀಲ, ಎಲ್ಲರನ್ನು ಒಳಗೊಂಡ, ಭಾಗವಹಿಸುವಿಕೆ ಮತ್ತು ಪ್ರಾತಿನಿಧಿತ್ವವನ್ನು ಖಾತ್ರಿಗೊಳಿಸಿ | 16.7.1. | ಸಾರ್ವಜನಿಕ/ಸರ್ಕಾರಿ ಸಂಸ್ಥೆಗಳಲ್ಲಿ (ರಾಷ್ಟ್ರೀಯ ಮತ್ತು ಸ್ಥಳೀಯ ಜನಪ್ರತಿನಿಧಿಗಳು, ಸರ್ಕಾರಿ ಸೇವೆ ಮತ್ತು ನ್ಯಾಯಾಂಗ) ರಾಷ್ಟ್ರೀಯ ಮಟ್ಟದಲ್ಲಿ ಹರಡಿರುವಂತೆ, (ಲಿಂಗ, ವಯಸ್ಸು, ಅಂಗವಿಕಲತೆಯೊಂದಿಗಿರುವ ಜನ ಮತ್ತು ವಿವಿಧ ಜನರ ಗುಂಪುಗಳಿಗೆ) ಜನರ ಪ್ರಮಾಣ |
| | | 16.7.2. | ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆ ಎಲ್ಲರನ್ನೂ ಒಳಗೊಂಡಿದೆ ಮತ್ತು ಪ್ರತಿಕ್ರಿಯಾಶೀಲವಾಗಿದೆ ಎಂದು ನಂಬುವ (ಲಿಂಗ, ವಯಸ್ಸು, ಅಂಗವಿಕಲತೆ ಮತ್ತು ಜನರ ಗುಂಪುಗಳಂತೆ) ಒಟ್ಟೂ ಜನಸಂಖ್ಯೆಯಲ್ಲಿ ಜನರ ಪ್ರಮಾಣ |
| 16.8 | ಜಾಗತಿಕ ಆಡಳಿತಾತ್ಮಕ ಸಂಸ್ಥೆಗಳಲ್ಲಿ ಅಭಿವೃದ್ಧಿಶೀಲ ದೇಶಗಳ ಭಾಗವಹಿಸುವಿಕೆಯನ್ನು ವಿಸ್ತರಿಸಿ ಬಲಗೊಳಿಸಿ | 16.8.1. | ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ಮತ ಚಲಾಯಿಸುವ ಅಧಿಕಾರ ಹೊಂದಿರುವ ಅಭಿವೃದ್ಧಿ ಶೀಲ ದೇಶಗಳ ಸದಸ್ಯರ ಪ್ರಮಾಣ |
| 16.9 | 2030ರೊಳಗೆ, ಎಲ್ಲರಿಗೂ ಜನನ ನೋಂದಣಿಯೂ ಸೇರಿದಂತೆ ಕಾನೂನು ಅಸ್ಮಿತೆಯನ್ನು ಒದಗಿಸಿ | 16.9.1. | 5 ವರ್ಷದೊಳಗಿನ ಮಕ್ಕಳ ಜನ್ಮವನ್ನು ನಾಗರಿಕ ಆಡಳಿತ / ಸಂಸ್ಥೆಯಲ್ಲಿ ದಾಖಲಿಸಿರುವ ಮಕ್ಕಳ ಪ್ರಮಾಣ  |
| 16.10 | ರಾಷ್ಟ್ರೀಯ ಶಾಸನ ಮತ್ತು ಅಂತಾರಾಷ್ಟ್ರೀಯ ಒಪ್ಪಂದಗಳಿಗೆ ಅನುಗುಣವಾಗಿ, ಸಾರ್ವಜನಿಕವಾಗಿ ಮಾಹಿತಿ ಲಭ್ಯತೆ ಮತ್ತು ಮೂಲಭೂತ ಸ್ವಾತಂತ್ರ್ಯಗಳನ್ನು ರಕ್ಷಿಸುವುದನ್ನು ಖಾತ್ರಿಗೊಳಿಸಿ | 16.10.1. | ಕಳೆದ 12 ತಿಂಗಳಲ್ಲಿ ಅಧಿಕೃತವಾಗಿ ಪರಿಶೀಲಿಸಲ್ಪಟ್ಟ, ಪತ್ರಕರ್ತರು, ಮಾಧ್ಯಮಗಳಿಗೆ ಸಂಬಂಧಿಸಿದ ಜನರು, ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಮತ್ತು ಮಾನವ ಹಕ್ಕುಗಳ ಕಾರ್ಯಕರ್ತರ ಕೊಲೆ, ಅಪಹರಣ, ಬಲವಂತದ ಕಣ್ಮರೆ, ನಿರಂಕುಶ ಬಂಧನ ಮತ್ತು ಹಿಂಸೆಯ ಪ್ರಕರಣಗಳ ಸಂಖ್ಯೆ |
| | | 16.10.2. | ಸರ್ಕಾರದ ಮಾಹಿತಿಯನ್ನು ಸಾರ್ವಜನಿಕರಿಗೆ ಸಿಗುವಂತೆ ಸಾಂವಿಧಾನಿಕ ಶಾಸನಬದ್ಧಗೊಳಿಸಲು ಮತ್ತು / ಅಥವಾ ನೀತಿಯ ಮೂಲಕ ಖಾತರಿಗೊಳಿಸಿ ಜಾರಿಗೊಳಿಸಿರುವ ದೇಶಗಳ ಸಂಖ್ಯೆ |
| 16.ಎ | ದೌರ್ಜನ್ಯ ಮತ್ತು ಭಯೋತ್ಪಾದನೆ ಹಾಗೂ ಅಪರಾಧಗಳನ್ನು ತಡೆಯಲು ಎಲ್ಲಾ ಹಂತಗಳಲ್ಲಿ, ಅದರಲ್ಲೂ ಅಭಿವೃದ್ಧಿಶೀಲ ದೇಶಗಳಲ್ಲಿ ಸಾಮರ್ಥ್ಯ ವರ್ಧನೆಗಾಗಿ ಅಂತಾರಾಷ್ಟ್ರೀಯ ಸಹಕಾರವೂ ಒಳಗೊಂಡಂತೆ ಸಂಬಂಧಿತ ರಾಷ್ಟ್ರೀಯ ಸಂಸ್ಥೆಗಳನ್ನು ಸದೃಢಗೊಳಿಸಿ | 16.ಎ.1. | ಪ್ಯಾರಿಸ್ ತತ್ತ್ವದ ಅನುಸರಣೆಯಂತೆ, ರಾಷ್ಟ್ರೀಯ ಸ್ವತಂತ್ರ ಮಾನವ ಹಕ್ಕುಗಳ ಸಂಸ್ಥೆಗಳು ಇರುವ ದೇಶಗಳ ಸಂಖ್ಯೆ |
| 16.ಬಿ | ಸುಸ್ಥಿರ ಅಭಿವೃದ್ಧಿಗಾಗಿ ತಾರತಮ್ಯ ರಹಿತ ಕಾನೂನುಗಳು ಮತ್ತು ನೀತಿಗಳನ್ನು ಉತ್ತೇಜಿಸಿ ಮತ್ತು ಜಾರಿಗೊಳಿಸಿ | 16.ಬಿ.1. | ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಕಾನೂನಿನಂತೆ ಯಾವುದನ್ನು ತಾರತಮ್ಯವೆಂದು ನಿಷೇಧಿಸಲಾಗಿದೆಯೋ ಅಂತಹ ತಾರತಮ್ಯವನ್ನು ಎದುರಿಸಿ ಕಿರುಕುಳಕ್ಕೆ ಗುರಿಯಾಗಿರುವವೆಂದು ಕಳೆದ 12 ತಿಂಗಳಲ್ಲಿ ವೈಯಕ್ತಿಕವಾಗಿ ಭಾವಿಸಿ ವರದಿ ಮಾಡಿರುವ ಜನರ ಪ್ರಮಾಣ  |

## ವಿವರಣೆ

ಸುಸ್ಥಿರ ಅಭಿವೃದ್ಧಿಗಾಗಿ ಶಾಂತಿಯುತ ಮತ್ತು ಸಮನ್ವಯ ಸಮಾಜಗಳನ್ನು ನಿರ್ಮಿಸುವುದು ಈ ಗುರಿಯ ಉದ್ದೇಶವಾಗಿದೆ. ಪ್ರಸ್ತುತ ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಆಂತರಿಕ ಸಂಘರ್ಷ, ಯುದ್ಧ, ಜನಾಂಗೀಯ ದ್ವೇಷ ಇವೇ ಮೊದಲಾದುವುಗಳಿವೆ. ಇವುಗಳ ನೇರ ಪರಿಣಾಮ ಹೆಚ್ಚಾಗಿ ಮಕ್ಕಳ ಮೇಲಾಗುತ್ತದೆ. 2011ರ ಯುನಿಸೆಫ್ ವರದಿಯ ಪ್ರಕಾರ ಸಂಘರ್ಷಪೀಡಿತ ದೇಶಗಳಲ್ಲಿ ಪ್ರಾಥಮಿಕ ಹಂತದ ಶಾಲೆಯನ್ನು ತೊರೆಯುವ ಮಕ್ಕಳ ಪ್ರಮಾಣ ಶೇ. 50ರಷ್ಟಿತ್ತು. ಜೊತೆಗೆ ಪ್ರತಿಯೊಂದು ದೇಶದಲ್ಲೂ ಭ್ರಷ್ಟಾಚಾರ, ಕಳ್ಳತನ, ದರೋಡೆ, ತೆರಿಗೆ ವಂಚನೆಗಳಂತಹ ಪ್ರಕರಣಗಳು ಇದ್ದೇ ಇವೆ. ಅನೇಕ ಕಾರಣಗಳಿಗಾಗಿ ಮಕ್ಕಳನ್ನು ಸಾಗಣೆ ಮಾಡಲಾಗುತ್ತಲೇ ಇದೆ. ಸಂಘರ್ಷದಿಂದಾಗಿ ಹಿಂಸೆ, ಅತ್ಯಾಚಾರದಂಥಹ ಪ್ರಕರಣಗಳು ಹೆಚ್ಚಾಗುತ್ತವೆ. ಹಾಗಾಗಿ ಎಲ್ಲರನ್ನೂ ಒಳಗೊಂಡ ಶಾಂತಿಯುತ ಸಮಾಜವನ್ನು ನಿರ್ಮಾಣ ಮಾಡುವ ಅವಶ್ಯಕತೆಯಿದೆ. ಜಗತ್ತಿನಲ್ಲಿರುವ ಪ್ರತಿಯೊಬ್ಬರ (ಜಾತಿ, ಧರ್ಮ, ಲಿಂಗ, ಗಡಿ, ವರ್ಣ, ಅಂಗವಿಕಲತೆ, ಆರ್ಥಿಕ ಸ್ಥಿತಿ ಇತ್ಯಾದಿಗಳನ್ನು ಪರಿಗಣಿಸದೆ) ಮನದಲ್ಲೂ ಭಯಮುಕ್ತತೆಯನ್ನು ನಿರ್ಮಾಣ ಮಾಡಲೇಬೇಕಿದೆ.

ಕುಟುಂಬಗಳಿಗೆ ಮತ್ತು ಸಮುದಾಯಗಳಿಗೆ ಸಮಾನವಾಗಿ ಮೂಲ ಸೇವೆಗಳನ್ನು ಒದಗಿಸಲು ಎಲ್ಲಾ ಹಂತಗಳಲ್ಲಿಯೂ ಉತ್ತರದಾಯಿತ್ವ ಸಂಸ್ಥೆಗಳು ಅಸ್ತಿತ್ವದಲ್ಲಿರಬೇಕು ಮತ್ತು ಸಮುದಾಯದ ಎಲ್ಲರಿಗೂ ತಮಗೆ ಸಂಬಂಧಿಸಿದ ವಿಚಾರಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ತಿಳಿಸುವ ವ್ಯವಸ್ಥೆ ಜಾರಿಯಲ್ಲಿರಬೇಕು.

ಈ ಗುರಿಯನ್ನು ಸಾಧಿಸಲು ಎಲ್ಲರನ್ನು ಒಳಗೊಂಡಂತೆ ಉತ್ತಮ ಶಿಕ್ಷಣ, ಆರೋಗ್ಯ, ಸೂಕ್ತ ಆರ್ಥಿಕ ನೀತಿಗಳು, ಪರಿಸರ ರಕ್ಷಣೆ ಮಾಡಬಲ್ಲಂತಹ ಸಂಸ್ಥೆಗಳನ್ನು ರೂಪಿಸುವುದು ಬಹಳ ಮುಖ್ಯ. ಶಾಂತಿ, ನ್ಯಾಯ ಮತ್ತು ಸಮನ್ವಯತೆಯನ್ನು ಸಾಧಿಸಲು ಸರ್ಕಾರ ಮತ್ತು ನಾಗರೀಕ ಸಮುದಾಯಗಳು ಒಟ್ಟಾಗಿ ಜೊತೆಗೂಡಿ ಹಿಂಸೆಯನ್ನು ಕಡಿಮೆಗೊಳಿಸಿ, ಭ್ರಷ್ಟಾಚಾರವನ್ನು ನಿಯಂತ್ರಿಸಿ, ನ್ಯಾಯವ್ಯವಸ್ಥೆಯನ್ನು ಸುಧಾರಿಸುವ ಕೆಲಸವನ್ನು ಮಾಡಲೇಬೇಕಿದೆ.

ಎಲ್ಲರಿಗೂ ಸಮಾನವಾದ ನ್ಯಾಯದ ಲಭ್ಯತೆ ಇಲ್ಲದಿದ್ದಲ್ಲಿ ಸಂಘರ್ಷಗಳು ಪರಿಹಾರವಾಗದೇ ಜನರು ಇನ್ನೂ ಅಭದ್ರತೆಯಿಂದ ಬದುಕುವ ವ್ಯವಸ್ಥೆ ಹೆಚ್ಚಾಗುವುದರ ಜೊತೆಗೆ ಮಾನವ ಹಕ್ಕುಗಳ ಉಲ್ಲಂಘನೆಗಳು ಹೆಚ್ಚಾಗುತ್ತವೆ.

ಭ್ರಷ್ಟಾಚಾರ ತಡೆಗಟ್ಟಲು ಮತ್ತು ಭ್ರಷ್ಟಾಚಾರಿಗಳನ್ನು ಕಂಡುಹಿಡಿಯಲು ಪ್ರಕರಣ ಹೂಡಿ ಶಿಕ್ಷಿಸಲು ಸರ್ಕಾರ ಲೋಕಾಯುಕ್ತ ಇತ್ಯಾದಿ ವ್ಯವಸ್ಥೆ ಮಾಡಿದೆ. ಜನರ ಮೇಲಾಗುವ ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ವಿಚಾರಣೆ ಮಾಡಿ ನ್ಯಾಯ ಒದಗಿಸಲು ಸ್ವತಂತ್ರವೂ ಶಾಸನ ಬದ್ಧವೂ ಆದ 'ಮಾನವ ಹಕ್ಕುಗಳ ಆಯೋಗ', 'ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ', 'ಮಹಿಳಾ ಆಯೋಗ', 'ಹಿಂದುಳಿದ ಜನ ಜಾತಿಗಳ ಆಯೋಗ', 'ಅಲ್ಪ ಸಂಖ್ಯಾತರ ಆಯೋಗ', 'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಆಯೋಗ' ಇತ್ಯಾದಿಗಳನ್ನು ರಚಿಸಲಾಗಿದೆ. ಎಲ್ಲೋ ಕೆಲವು ಆಯೋಗಗಳು ಮಾತ್ರ ಗಟ್ಟಿಯಾಗಿ, ಚುರುಕಾಗಿ ಕೆಲಸ ಮಾಡಿದರೆ, ಇನ್ನುಳಿದವು ಸರ್ಕಾರವನ್ನು ಓಲೈಸುವಂತೆ ಕೆಲಸ ಮಾಡುವುದು ದುರದೃಷ್ಟಕರ.

## ನೀವು ಮಾಡಬಹುದಾದದ್ದು

- ದೌರ್ಜನ್ಯದಿಂದಾಗುವ ಪರಿಣಾಮಗಳ ಕುರಿತು ಸಮುದಾಯಕ್ಕೆ ಮಾಹಿತಿ ನೀಡಿ. ಎಲ್ಲರೂ ಶಾಂತಿಯಿಂದ ಬದುಕುವ ವಾತಾವರಣವನ್ನು ನಿರ್ಮಾಣ ಮಾಡಲು ಎಲ್ಲಾ ಪ್ರಯತ್ನಗಳನ್ನು ಮಾಡಿ.
- ಯಾವುದೇ ಕಾರಣಕ್ಕೂ ಲಂಚ ಕೊಡಬೇಡಿ ಮತ್ತು ಪಡೆಯಬೇಡಿ.
- ಯಾವುದೇ ಆಮಿಷಕ್ಕೆ ಒಳಗಾಗದಂತೆ ಎಲ್ಲರಿಗೂ ಸಮಾನ ಹಾಗು ಉತ್ತಮ ಸೇವೆಯನ್ನು ಸಲ್ಲಿಸುವ ಉಮೇದುದಾರರಿಗೆ ನಿಮ್ಮ ಮತವನ್ನು ನೀಡಿ ಮತ್ತು ಅವರನ್ನು ಉತ್ತರದಾಯಿಯನ್ನಾಗಿ ಮಾಡಿ
- ನಿಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕನ್ನು ಚಲಾಯಿಸಿ ನಿಮ್ಮ ಜನಪ್ರತಿನಿಧಿಗಳಿಗೆ ಸಮುದಾಯದ ಒಳಿತಿಗಾಗಿ ನಿಮ್ಮ ಅನಿಸಿಕೆಗಳನ್ನು ಮುಕ್ತವಾಗಿ ತಿಳಿಸಿ.
- ಜಾತಿ, ಧರ್ಮ, ವರ್ಣ, ಲಿಂಗ ಹೀಗೆ ಯಾವುದೇ ತಾರತಮ್ಯ ಮಾಡದೇ ಎಲ್ಲರನ್ನೂ ಸಮಾನ ರೀತಿಯಲ್ಲಿ ಗೌರವಿಸಿ ಮತ್ತು ಎಲ್ಲರಿಗೂ ಸಮಾನ ಅವಕಾಶಗಳನ್ನು ರೂಪಿಸಿ.
- ರಾಷ್ಟ್ರೀಯ ಮತ್ತು ರಾಜ್ಯ ಮಕ್ಕಳ ಹಕ್ಕಗಳ ರಕ್ಷಣಾ ಆಯೋಗದ ಬಗ್ಗೆ ತಿಳಿದುಕೊಂಡು ಎಲ್ಲರಿಗೂ ತಿಳಿಸಿ.
- ಮಕ್ಕಳ ಮೇಲೆ ಅನ್ಯಾಯವಾಗುತ್ತಿರುವುದು ಅರಿವಿಗೆ ಬಂದರೆ ಚೈಲ್ಡ್‌ಲೈನ್ 1098ಗೆ ಕರೆ ಮಾಡಿ ತಿಳಿಸಿ.

## ಸವಾಲುಗಳು


- ಜನಾಂಗೀಯ ಘರ್ಷಣೆ, ಕೋಮುಗಲಭೆ ಇವೇ ಮೊದಲಾದವುಗಳು ತೀರಾ ಹಿಂದಿನಿಂದಲೂ ಚಾಲ್ತಿಯಲ್ಲಿರುವುದರಿಂದ ಅವುಗಳ ನಿವಾರಣೆಗೆ ಸತತ ಪ್ರಯತ್ನ ಮತ್ತು ಸಾಕಷ್ಟು ಸಮಯ ಹಿಡಿಯುತ್ತದೆ.
- ನ್ಯಾಯಾಲಯಗಳಲ್ಲಿ ನ್ಯಾಯ ಪ್ರಕ್ರಿಯೆ ವಿಳಂಬವಾದರೂ ಸಹ ನ್ಯಾಯಾಂಗ ವ್ಯವಸ್ಥೆಯ ವಿರುದ್ಧ ಜನಾಭಿಪ್ರಾಯ ರೂಪಿಸುವುದು ಅಪರಾಧವಾಗುವ ಸಂಭವ.
- ಭ್ರಷ್ಟಾಚಾರದ ವಿರುದ್ಧ ರಾಜಕೀಯ ಇಚ್ಛಾಶಕ್ತಿಯನ್ನು ರೂಪಿಸುವುದು ಸವಾಲು.

**ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಸುಸ್ಥಿರ ಅಭಿವೃದ್ಧಿ ಗುರಿ 16 ಅರ್ಥ ಮಾಡಿಕೊಳ್ಳಲು ಓದಬೇಕಿರುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989ರ ಪರಿಚ್ಛೇದಗಳು**

| ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ | ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ |
|---|---|---|---|
| 1 | ಮಕ್ಕಳೆಂದರೆ 18 ವರ್ಷದೊಳಗಿನವರು | 2 | ಮಕ್ಕಳ ನಡುವೆ ತಾರತಮ್ಯ/ಭೇದಭಾವ ಇರಬಾರದು/ಮಾಡಬಾರದು |
| 4 | ಮಕ್ಕಳ ಹಕ್ಕುಗಳ ಜಾರಿಗೆ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು | 6 | ಎಲ್ಲ ಮಕ್ಕಳಿಗೆ ಜೀವಿಸುವ ಹಕ್ಕು ಇದೆ |
| 7 | ಎಲ್ಲ ಮಕ್ಕಳಿಗೆ ಹೆಸರಿರಬೇಕು ಮತ್ತು ನಾಗರೀಕತೆ/ ರಾಷ್ಟ್ರೀಯತೆ ದೊರಕಲೇಬೇಕು | 8 | ಮಕ್ಕಳ ವ್ಯಕ್ತಿತ್ವಕ್ಕೆ ಎಂತಹದೇ ಸನ್ನಿವೇಶದಲ್ಲಿ ಧಕ್ಕೆ ಬರಬಾರದು |
| 9 | ಮಕ್ಕಳ ರಕ್ಷಣೆಯಲ್ಲಿ ಪೋಷಕರ ಪಾತ್ರ ಪ್ರಮುಖವಾಗಿ ಇದೆ. | 10 | ಮಕ್ಕಳಿಗೆ ತಮ್ಮ ತಮ್ಮ ಪೋಷಕರೊಂದಿಗೆ ಇರುವ ಹಕ್ಕು ಇದೆ |
| 12 | ಮಕ್ಕಳಿಗೆ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ ಇದೆ | 13 | ಮಕ್ಕಳಿಗೆ ವಿವಿಧ ಮೂಲಗಳಿಂದ ಮಾಹಿತಿ ಹೊಂದುವ ಸ್ವಾತಂತ್ರ್ಯ |
| 14 | ಮಕ್ಕಳಿಗೆ ತಮಗೆ ಒಪ್ಪುವ ಧರ್ಮವನ್ನು ಪಾಲಿಸುವ ತಮ್ಮ ಆತ್ಮಸಾಕ್ಷಿಯಂತೆ ನಡೆದುಕೊಳ್ಳುವ ಸ್ವಾತಂತ್ರ್ಯವಿದೆ | 15 | ಮಕ್ಕಳಿಗೂ ಸಂಘಟಿತರಾಗಿರುವ ಹಕ್ಕಿದೆ |
| 16 | ಮಕ್ಕಳ ಖಾಸಗೀ ಬದುಕಿನ ಮೇಲೆ ಯಾರೂ ದಾಳಿ ಮಾಡುವಂತಿಲ್ಲ | 17 | ಮಕ್ಕಳಿಗೆ ಸೂಕ್ತವಾದ ಮಾಹಿತಿ ನೀಡುವ ಜವಾಬ್ದಾರಿ ಮಾಧ್ಯಮಗಳಿಗಿದೆ. |
| 19 | ಮಕ್ಕಳನ್ನು ದುರುಪಯೋಗ ಮತ್ತು ನಿರ್ಲಕ್ಷ್ಯದ ವಿರುದ್ಧ ರಕ್ಷಿಸಬೇಕು | 21 | ಅನಾಥ ಮಕ್ಕಳನ್ನು ದತ್ತು ನೀಡುವ ಮೂಲಕ ಕೌಟುಂಬಿಕ ಹಕ್ಕು ಖಾತರಿಗೊಳಿಸಬೇಕು |
| 23 | ಅಂಗವಿಕಲತೆಯಿರುವ ಮಕ್ಕಳಿಗೆ ರಕ್ಷಣೆ ನೀಡಬೇಕು | 24 | ಎಲ್ಲ ಮಕ್ಕಳಿಗೆ ಮೂಲ ಸೇವೆಗಳನ್ನು ಒದಗಿಸಲೇಬೇಕು. |
| 29 | ಎಲ್ಲ ಮಕ್ಕಳಿಗೆ ತಾರತಮ್ಯವಿಲ್ಲದೆ ಶಿಕ್ಷಣ ಪಡೆಯುವ ಹಕ್ಕು ಇದೆ. | 30 | ಅಲ್ಪಸಂಖ್ಯಾತ ವರ್ಗ / ಧರ್ಮ / ಜಾತಿಗಳ ಎಲ್ಲ ಮಕ್ಕಳಿಗೆ ಎಲ್ಲ ಹಕ್ಕುಗಳು ಇದೆ |
| 31 | ಎಲ್ಲ ಮಕ್ಕಳಿಗೆ ವಿಶ್ರಾಂತಿ ಪಡೆಯುವ ಮತ್ತು ಮನೋರಂಜನೆ ಹೊಂದುವ ಹಕ್ಕು ಇದೆ | 32 | ಮಕ್ಕಳ ಮೇಲೆ ಆರ್ಥಿಕ ಶೋಷಣೆ ನಿಲ್ಲಬೇಕು. ಮಕ್ಕಳನ್ನು ದುಡಿಯಲು ನೇಮಿಸಬಾರದು, ನೇಮಿಸಿಕೊಳ್ಳಬಾರದು |
| 33 | ಮಾದಕ ವಸ್ತುಗಳಿಗೆ ಬಲಿಯಾಗುವುದರ ವಿರುದ್ಧ ಮಕ್ಕಳನ್ನು ರಕ್ಷಿಸಬೇಕು. | 34 | ಮಕ್ಕಳ ಮೇಲೆ ಲೈಂಗಿಕ ಶೋಷಣೆ / ದಾಳಿ ಆಗದಂತೆ ಎಲ್ಲೆಡೆ ರಕ್ಷಿಸಬೇಕು |
| 35 | ಮಕ್ಕಳ ಮಾರಾಟ ಮಾಡುವುದು ಅಥವಾ ಅಕ್ರಮ ಬಂಧನದಲ್ಲಿಡುವುದರ ವಿರುದ್ಧ ರಕ್ಷಣೆ | 36 | ಮಕ್ಕಳನ್ನು ಯಾವುದೇ ರೀತಿಯ ಶೋಷಣೆಗಳ ವಿರುದ್ಧ ರಕ್ಷಿಸುವುದು ಸರ್ಕಾರ ಮತ್ತು ಸಮಾಜದ ಜವಾಬ್ದಾರಿ |
| 37 | ಯಾವುದೇ ಮಗುವಿಗೆ ಎಂತಹದೇ ಸಂದರ್ಭದಲ್ಲೂ ಚಿತ್ರಹಿಂಸೆ, ಮರಣದಂಡನೆ ನೀಡಬಾರದು | 38 | ಯುದ್ಧ, ಸಶಸ್ತ್ರ ಸಂಘರ್ಷಗಳಾದಲ್ಲಿ ಮಕ್ಕಳಿಗೆ ಆದ್ಯತೆಯಿಂದ ರಕ್ಷಣೆ ನೀಡಬೇಕು |
| 39 | ಕಾನೂನಿನೊಡನೆ ಸಂಘರ್ಷದಲ್ಲಿದ್ದ ಮಕ್ಕಳಿಗೆ ಪುನರ್ವಸತಿಯ ಹಕ್ಕು ಇದೆ | 40 | ಮಕ್ಕಳಿಗೆ ನ್ಯಾಯ ಒದಗಿಸುವ ವ್ಯವಸ್ಥೆ ಇರಲೇಬೇಕು |
| 42 | ಮಕ್ಕಳ ಹಕ್ಕುಗಳನ್ನು ಕುರಿತು ಸರ್ಕಾರ ವಿಸ್ತೃತವಾದ ಪ್ರಚಾರ ಮಾಡಿ ಎಲ್ಲರಿಗೂ ಈ ಕುರಿತು ಮಾಹಿತಿ, ಅರಿವು ಮೂಡಿಸಬೇಕು. | | |

## ಭಾರತ/ ರಾಜ್ಯ ಸರ್ಕಾರದ ಕ್ರಮಗಳು

| ಉಸ್ತುವಾರಿ ಸಚಿವಾಲಯ | ಕೇಂದ್ರ/ರಾಜ್ಯ ಸರ್ಕಾರದ ಯೋಜನೆಗಳು | ಸಂಬಂಧಿತ ಕ್ರಮಗಳು | ಇತರ ಸಂಬಂಧಿತ ಸಚಿವಾಲಯಗಳು/ ಇಲಾಖೆಗಳು |
|---|---|---|---|
| ಒಳಾಡಳಿತ | 1. ಪಂಚಾಯತ್ ಯುವ ಕ್ರೀಡೆ ಮತ್ತು ಆಟ ಅಭಿಯಾನ<br>2. ಗ್ರಾಮ ನ್ಯಾಯಾಲಯವೂ ಸೇರಿದಂತೆ ನ್ಯಾಯಾಂಗಕ್ಕೆ ಮೂಲ ಸೌಲಭ್ಯ ಅಭಿವೃದ್ಧಿ<br>3. ಸಮಗ್ರ ಮಕ್ಕಳ ರಕ್ಷಣಾ ಯೋಜನೆ | 1. ಡಿಜಿಟಲ್ ಇಂಡಿಯಾ<br>2. ಪ್ರಗತಿ ವೇದಿಕೆ<br>3. ಮಾಹಿತಿ ಹಕ್ಕು ಕಾಯ್ದೆ<br>4. ಮಹಿಳಾ ಆಯೋಗ<br>5. ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ<br>6. ಮಾನವ ಹಕ್ಕುಗಳ ಆಯೋಗ | • ಒಳಾಡಳಿತ<br>• ಕಾನೂನು ಮತ್ತು ನ್ಯಾಯ<br>• ಪಂಚಾಯತ್ ರಾಜ್ಯ ಮತ್ತು ಗ್ರಾಮೀಣಾಭಿವೃದ್ಧಿ<br>• ವ್ಯಕ್ತಿಗತ, ಸಾರ್ವಜನಿಕ ಅಹವಾಲು ಮತ್ತು ಪಿಂಚಣಿ<br>• ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ |





17 PARTNERSHIPS FOR THE GOALS

# ಗುರಿ 17

## ಗುರಿಗಳಿಗಾಗಿ ಸಹಭಾಗಿತ್ವ

### ಸುಸ್ಥಿರ ಅಭಿವೃದ್ಧಿಗಾಗಿ ಜಾರಿ ಸಾಧನಗಳನ್ನು ಬಲಪಡಿಸಿ ಮತ್ತು ಜಾಗತಿಕ ಸಹಭಾಗಿತ್ವವನ್ನು ಪುನಶ್ಚೇತನಗೊಳಿಸಿ

| | ಲಕ್ಷ್ಯಗಳು | | ಸೂಚಕಗಳು |
|---|---|---|---|
| 17.1 | ಅಂತಾರಾಷ್ಟ್ರೀಯ ಬೆಂಬಲದ ಮೂಲಕವೂ ಅಭಿವೃದ್ಧಿಶೀಲ ದೇಶಗಳ ದೇಶೀಯ ಸಂಪನ್ಮೂಲಗಳನ್ನು ಮತ್ತು ತೆರಿಗೆ ಮತ್ತಿತರ ಆದಾಯ ಮೂಲಗಳ ಸಂಗ್ರಹ ಸಾಮರ್ಥ್ಯವನ್ನು ಹೆಚ್ಚಿಸಿ | 17.1.1. | ಜಿ.ಡಿ.ಪಿ.ಗೆ ಪ್ರಮಾಣವಾಗಿ, ಮೂಲದಲ್ಲಿ ಸರ್ಕಾರದ ಒಟ್ಟೂ ಆದಾಯ |
| | | 17.1.2. | ದೇಶೀಯ ತೆರಿಗೆ ಹಣದಿಂದ ದೇಶೀಯ ಆಯವ್ಯಯ (ಬಜೆಟ್)ಕ್ಕೆ ಹಣಕಾಸನ್ನು ಒದಗಿಸುವ ಪ್ರಮಾಣ |
| 17.2 | ತಮ್ಮ ಒಟ್ಟು ರಾಷ್ಟ್ರೀಯ ಆದಾಯದ ಶೇ.0.7ನ್ನು ಅಭಿವೃದ್ಧಿಶೀಲ ದೇಶಗಳಿಗೆ ಹಾಗೂ ಕನಿಷ್ಠ ಅಭಿವೃದ್ಧಿ ಹೊಂದಿರುವ ದೇಶಗಳಿಗೆ ಶೇ.0.15 – 0.20ರಷ್ಟು ನೀಡಲು ಬದ್ಧವಾಗಿರುವ ಅಧಿಕೃತ ಅಭಿವೃದ್ಧಿ ನೆರವು (ಒ.ಡಿ.ಎ/ಜಿ.ಎನ್.ಐ) ಗುರಿಗಳನ್ನೂ ಒಳಗೊಂಡು, ಅಭಿವೃದ್ಧಿ ಹೊಂದಿದ ದೇಶಗಳು ತಾವು ಅಭಿವೃದ್ಧಿಗಾಗಿ ನೀಡುವ ನೆರವನ್ನು ಸಂಪೂರ್ಣವಾಗಿ ಪೂರೈಸಬೇಕು; ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳಿಗೆ ನೀಡುವ ಅಧಿಕೃತ ಅಭಿವೃದ್ಧಿ ನೆರವಿನ ಪ್ರಮಾಣದ ಗುರಿಗಳನ್ನು ಕನಿಷ್ಠ ಪಕ್ಷ ಶೇ.0.20ಕ್ಕೆ ನಿಗದಿಪಡಿಸಲು ಪ್ರೋತ್ಸಾಹಿಸಲಾಗಿದೆ | 17.2.1. | ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿಗಾಗಿ ಸಂಸ್ಥೆ [Organization for Economic Cooperation and Development (OECD)] ನೀಡುವ ಅಭಿವೃದ್ಧಿ ಸಹಾಯ ಸಮಿತಿಗೆ ದೇಣಿಗೆ ನೀಡುವವರ ಒಟ್ಟು ರಾಷ್ಟ್ರೀಯ ಆದಾಯ [GNIಕ್ಕೆ ಪ್ರಮಾಣವಾಗಿ, ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳಿಗೆ ನೀಡುವ ಒಟ್ಟು ಅಧಿಕೃತ ಅಭಿವೃದ್ಧಿ ಸಹಾಯ, ಮೊತ್ತ. |
| 17.3 | ಅಭಿವೃದ್ಧಿಶೀಲ ದೇಶಗಳಿಗೆ ಹೆಚ್ಚುವರಿ ಹಣಕಾಸಿಗಾಗಿ ವಿವಿಧ ಮೂಲಗಳಿಂದ ಸಂಪನ್ಮೂಲಗಳನ್ನು ಕ್ರೂಢೀಕರಿಸಿ | 17.3.1. | ದೇಶೀ ಆಯವ್ಯಯದಲ್ಲಿ ದಕ್ಷಿಣ– ದಕ್ಷಿಣ ಸಹಕಾರಕ್ಕೆ ಪ್ರಮಾಣವಾಗಿ ವಿದೇಶಿ ನೇರ ಹೂಡಿಕೆ [Foreign Direct Investments (FDI)] ಮತ್ತು ಅಧಿಕೃತ ಅಭಿವೃದ್ಧಿ ಸಹಾಯ. |
| | | 17.3.2. | ಒಟ್ಟು ಜಿ.ಡಿ.ಪಿಗೆ ಪ್ರಮಾಣವಾಗಿ (ಯು.ಎಸ್.ಎ ಡಾಲರ್‌ಗಳಲ್ಲಿ) ಪಾವತಿಯ ಪ್ರಮಾಣ |

| | | | |
|---|---|---|---|
| 17.4 | ಅಭಿವೃದ್ಧಿಶೀಲ ದೇಶಗಳಿಗೆ ದೀರ್ಘಾವಧಿಯಲ್ಲಿ ಸೂಕ್ತವಾದ ಋಣ/ಸಾಲ ಹಣಕಾಸು, ಸಾಲ ಪರಿಹಾರ ಮತ್ತು ಸಾಲ ಮರುವ್ಯವಸ್ಥೆಯನ್ನು ಮಾಡಿಕೊಂಡು ಸುಸ್ಥಿರತೆಯನ್ನು ಹೊಂದುವ ಗುರಿಯಿಂದ ಸಮನ್ವಯ ನೀತಿಗಳ ಮೂಲಕ ಸಹಾಯ ಮಾಡಿ ಮತ್ತು ಅತ್ಯಂತ ಗರಿಷ್ಠ ಪ್ರಮಾಣದ ಬಾಹ್ಯ ಸಾಲಬಾಧೆಯಲ್ಲಿರುವ ಬಡ ದೇಶಗಳಿಗೆ ಋಣ ಪರಿಹಾರ ಸಹಾಯ ಒದಗಿಸಿ | 17.4.1. | ಸಾಲ ಹಿಂತಿರುಗಿಸುವಿಕೆಗಾಗಿ ಸರಕು ಮತ್ತು ಸೇವೆಗಳ ರಫ್ತು ಪ್ರಮಾಣ |
| 17.5 | ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳಿಗಾಗಿ ಬಂಡವಾಳ ಹೆಚ್ಚಿಸುವ ಪದ್ಧತಿಗಳನ್ನು ಅಳವಡಿಸಿಕೊಂಡು ಕಾರ್ಯಗತಗೊಳಿಸಿ | 17.5.1. | ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಬಂಡವಾಳ ಹೂಡಿಕೆಯನ್ನು ಹೆಚ್ಚಿಸುವ ದಿಶೆಯಲ್ಲಿ ಕ್ರಮ ಕೈಗೊಂಡು ಅನುಷ್ಠಾನಗೊಳಿಸುವ ದೇಶಗಳ ಸಂಖ್ಯೆ |
| | **ತಂತ್ರಜ್ಞಾನ** | | |
| 17.6 | ನಿರ್ದಿಷ್ಟವಾಗಿ ವಿಶ್ವಸಂಸ್ಥೆಯ ಮಟ್ಟದಲ್ಲಿ ಹಾಗೂ ಜಾಗತಿಕ ತಂತ್ರಜ್ಞಾನ ಸುಗಮ ವ್ಯವಸ್ಥೆಗಳು ಮತ್ತು ಅಸ್ತಿತ್ವದಲ್ಲಿರುವ ವ್ಯವಸ್ಥೆಗಳಲ್ಲಿರುವ ಹೊಂದಾಣಿಕೆಗಳನ್ನೂ ಒಳಗೊಂಡು ವಿಜ್ಞಾನ, ತಂತ್ರಜ್ಞಾನ ಹಾಗೂ ಆವಿಷ್ಕಾರಗಳ ಲಭ್ಯತೆ ಮತ್ತು ಪರಸ್ಪರ ಸಮ್ಮತ ನಿಬಂಧನೆಗಳಿಗನುಗುಣವಾಗಿ ಜ್ಞಾನದ ಹಂಚಿಕೆಯನ್ನು ವೃದ್ಧಿಸಲು ಉತ್ತರ–ದಕ್ಷಿಣ, ದಕ್ಷಿಣ–ದಕ್ಷಿಣ ಮತ್ತು ತ್ರಿಕೋಣ ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ಸಹಕಾರವನ್ನು ಹೆಚ್ಚಿಸಿ | 17.6.1. | ಸಹಕಾರ ವಿಧಾನದಲ್ಲಿ, ದೇಶ ದೇಶಗಳ ನಡುವೆ ಆಗುವ ವಿಜ್ಞಾನ ಮತ್ತು / ತಂತ್ರಜ್ಞಾನ ಸಹಕಾರದ ಕಾರ್ಯಕ್ರಮಗಳ ಸಂಖ್ಯೆ |
| | | 17.6.2. | ಪ್ರತಿ 100 ನಿವಾಸಿಗಳಲ್ಲಿ ವೇಗಕ್ಕೆ ಅನುಸಾರವಾಗಿ ಎಷ್ಟು ಮಂದಿಗೆ ಸ್ಥಿರ ಅಂತರ್ಜಾಲ ಬ್ರಾಡ್‌ಬ್ರಾಂಡ್ ಚಂದಾ ಹೊಂದಿರುವುದು. |
| 17.7 | ಪರಸ್ಪರ ಸಮ್ಮತವಾದ ಅನುಕೂಲಕರ ನಿಯಮಗಳು, ರಿಯಾಯಿತಿಗಳು ಮತ್ತು ಆದ್ಯತೆಗಳ ನಿಯಮಗಳಿಗೆ ಅನುಸಾರ ಅಭಿವೃದ್ಧಿಶೀಲ ದೇಶಗಳಿಗೆ ಪರಿಸರಕ್ಕೆ ಪೂರಕವಾದ ತಂತ್ರಜ್ಞಾನಗಳ ಅಭಿವೃದ್ಧಿ, ವರ್ಗಾವಣೆ, ಪ್ರಸರಣೆ ಮತ್ತು ವಿತರಣೆಯನ್ನು ಪ್ರೋತ್ಸಾಹಿಸಿ | 17.7.1. | ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಪರಿಸರಕ್ಕೆ ಪೂರಕವಾದ ತಂತ್ರಜ್ಞಾನದ ಅಭಿವೃದ್ಧಿ, ವರ್ಗಾವಣೆ, ಪ್ರಸರಣೆ ಮತ್ತು ಹರಡುವಿಕೆಗೆ ನೀಡಲಾಗುವ ಒಪ್ಪಿತವಾದ ಧನ ಸಹಾಯದ ಮೊತ್ತ. |
| 17.8 | 2017ರೊಳಗೆ, ಕನಿಷ್ಠ ಅಭಿವೃದ್ಧಿಗೊಂಡ ದೇಶಗಳಲ್ಲಿ ತಂತ್ರಜ್ಞಾನ ಭಂಡಾರ ಮತ್ತು ವಿಜ್ಞಾನ, ತಂತ್ರಜ್ಞಾನ ಹಾಗೂ ಆವಿಷ್ಕಾರ ಸಾಮರ್ಥ್ಯ ವೃದ್ಧಿ ವ್ಯವಸ್ಥೆಯನ್ನು, ನಿರ್ದಿಷ್ಟವಾಗಿ ಮಾಹಿತಿ ಹಾಗೂ ಸಂವಹನ ತಂತ್ರಜ್ಞಾನ ಬಳಕೆ ಹೆಚ್ಚಿಸುವುದನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಿ | 17.8.1. | ಅಂತರ್ಜಾಲವನ್ನು ಉಪಯೋಗಿಸುತ್ತಿರುವ ಜನರ ಪ್ರಮಾಣ |

| | | | |
|---|---|---|---|
| | **ಸಾಮರ್ಥ್ಯ ನಿರ್ಮಾಣ** | | |
| 17.9 | ಸುಸ್ಥಿರ ಅಭಿವೃದ್ಧಿಯ ಎಲ್ಲ ಗುರಿಗಳನ್ನು ಜಾರಿಗೊಳಿಸಲು ಅಭಿವೃದ್ಧಿಶೀಲ ದೇಶಗಳ ರಾಷ್ಟ್ರೀಯ ಯೋಜನೆಗಳನ್ನು ಬೆಂಬಲಿಸಲು ನೆರವಾಗಲು, ಪರಿಣಾಮಕಾರಿ ಹಾಗೂ ಉದ್ದೇಶಿತ ಸಾಮರ್ಥ್ಯ ನಿರ್ಮಾಣಕ್ಕಾಗಿ, ಉತ್ತರ–ದಕ್ಷಿಣ, ದಕ್ಷಿಣ–ದಕ್ಷಿಣ ಮತ್ತು ತ್ರಿಕೋನ ಸಹಕಾರವೂ ಸೇರಿದಂತೆ ಅಂತಾರಾಷ್ಟ್ರೀಯ ಬೆಂಬಲವನ್ನು ಹೆಚ್ಚಿಸಿ | 17.9.1. | ಅಭಿವೃದ್ಧಿಶೀಲ ದೇಶಗಳಿಗೆ ಒದಗಿಸಲು (ಉತ್ತರ–ದಕ್ಷಿಣ, ದಕ್ಷಿಣ–ದಕ್ಷಿಣ ಮತ್ತು ತ್ರಿಕೋನ ಸಹಕಾರಗಳನ್ನೂ ಒಳಗೊಂಡು) ಬದ್ಧವಾಗಿರುವ ಆರ್ಥಿಕ ಮತ್ತು ತಾಂತ್ರಿಕ ಸಹಾಯದ ಒಟ್ಟು ಡಾಲರ್‌ಗಳ ಮೊತ್ತ. |
| | **ವಾಣಿಜ್ಯ** | | |
| 17.10 | ದೋಹಾ ಅಭಿವೃದ್ಧಿ ಕಾರ್ಯಸೂಚಿಯ ಸಮಾಲೋಚನೆಯ ತೀರ್ಮಾನಗಳನ್ನೂ ಒಳಗೊಂಡು, ಸಾರ್ವತ್ರಿಕ, ನಿಯಮಾಧಾರಿತ, ಮುಕ್ತ, ಪಕ್ಷಪಾತರಹಿತ ಮತ್ತು ನ್ಯಾಯಸಮ್ಮತ ಬಹುಪಕ್ಷೀಯ ವಾಣಿಜ್ಯ ವ್ಯವಸ್ಥೆಯನ್ನು ವಿಶ್ವ ವ್ಯಾಪಾರ ಸಂಸ್ಥೆಯಡಿ ಉತ್ತೇಜಿಸಿ | 17.10.1 | ಜಾಗತಿಕವಾದ ಸರಾಸರಿ ಬೆಲೆ ನಿಗದಿ |
| 17.11 | 2020ರೊಳಗೆ, ಜಾಗತಿಕ ರಫ್ತಿನಲ್ಲಿ, ನಿರ್ದಿಷ್ಟವಾಗಿ ಕನಿಷ್ಠ ಅಭಿವೃದ್ಧಿಹೊಂದಿದ ದೇಶಗಳ ಪಾಲನ್ನು ದ್ವಿಗುಣಗೊಳಿಸುವ ದೃಷ್ಟಿಯಿಟ್ಟುಕೊಂಡು, ಅಭಿವೃದ್ಧಿಶೀಲ ದೇಶಗಳ ರಫ್ತು ಸಾಮರ್ಥ್ಯವನ್ನು ಹೆಚ್ಚಿಸಿ | 17.11.1. | ಜಾಗತಿಕ ರಫ್ತಿನಲ್ಲಿ ಅಭಿವೃದ್ಧಿ ಹೊಂದಿದ ದೇಶಗಳು ಮತ್ತು ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳ ಪಾಲು |
| 17.12 | ವಿಶ್ವ ವ್ಯಾಪಾರ ಸಂಸ್ಥೆಯ ನಿರ್ಣಯಗಳಿಗೆ ನಿಷ್ಠವಾಗಿ, ಎಲ್ಲ ಕನಿಷ್ಠ ಅಭಿವೃದ್ಧಿಗೊಂಡ ದೇಶಗಳಿಂದ ಆಮದುಗಳಿಗೆ ಅನ್ವಯಿಸುವಂತೆ ಕರಮುಕ್ತ ಮತ್ತು ನಿಯತಾಂಶ–ಮುಕ್ತ ಮಾರುಕಟ್ಟೆಯ ಲಭ್ಯತೆಯನ್ನು ಶಾಶ್ವತವಾಗಿ ಪಡೆಯುವಂತಹ ಮೂಲದ ಬಗೆಗಿನ ಆದ್ಯತೆಯ ನಿಯಮಗಳನ್ನು ಪಾರದರ್ಶಕ ಮತ್ತು ಸರಳವಾಗಿರುವುದನ್ನು ಖಚಿತಪಡಿಸಿಕೊಂಡು ಸಕಾಲಿಕವಾಗಿ ಜಾರಿಗೊಳಿಸಿ | 17.12.1 | ಅಭಿವೃದ್ಧಿಶೀಲ ದೇಶಗಳು, ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳು ಮತ್ತು ಚಿಕ್ಕ ದ್ವೀಪ ದೇಶಗಳು ಎದುರಿಸುವ ಸರಾಸರಿ ಬೆಲೆ. |
| | **ವ್ಯವಸ್ಥೆ–ಸಂಬಂಧಿ ವಿಚಾರಗಳು**<br>**ನೀತಿ ಮತ್ತು ಸಾಂಸ್ಥಿಕ ಸುಸಂಬದ್ಧತೆ** | | |
| 17.13 | ನೀತಿ ಸಮನ್ವಯತೆ ಮತ್ತು ಸುಸಂಬದ್ಧ ನೀತಿಯನ್ನೂ ಒಳಗೊಂಡು, ಜಾಗತಿಕ ಬೃಹತ್–ಆರ್ಥಿಕ ಸ್ಥಿರತೆಯನ್ನು ಹೆಚ್ಚಿಸಿ | 17.13.1. | ಬೃಹತ್ ಆರ್ಥಿಕತೆಯ ಡ್ಯಾಶ್‌ಬೋರ್ಡ್ |
| 17.14 | ಸುಸ್ಥಿರ ಅಭಿವೃದ್ಧಿಗಾಗಿ ನೀತಿ ಸುಸಂಬದ್ಧತೆಯನ್ನು ಹೆಚ್ಚಿಸಿ | 17.14.1. | ಸುಸ್ಥಿರ ಅಭಿವೃದ್ಧಿಗೆ ಅನುಗುಣವಾಗಿ ನೀತಿ ನಿರ್ಧರಣೆಗಾಗಿ ವಿಧಿವಿಧಾನಗಳನ್ನು ಜಾರಿ ಮಾಡಿರುವ ದೇಶಗಳ ಸಂಖ್ಯೆ |

| | | | |
|---|---|---|---|
| 17.15 | ಬಡತನ ನಿರ್ಮೂಲನೆ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ನೀತಿ ಸ್ಥಾಪನೆ ಮತ್ತು ಜಾರಿಗೊಳಿಸಲು ಪ್ರತಿ ದೇಶದ ನೀತಿಯ ಅವಕಾಶ ಮತ್ತು ನಾಯಕತ್ವವನ್ನು ಗೌರವಿಸಿ | 17.15.1. | ಅಭಿವೃದ್ಧಿ ಸಹಕಾರವನ್ನು ನೀಡುವವರು ಎಷ್ಟರ ಮಟ್ಟಿಗೆ ದೇಶೀಯ ಸ್ವಾಮ್ಯವನ್ನು ಹೊಂದಿರುವ ಫಲಿತಾಂಶ ಅಳೆಯುವ ಚೌಕಟ್ಟುಗಳು ಮತ್ತು ಯೋಜನಾ ಉಪಕರಣಗಳ ಬಳಕೆ |
| | **ಬಹು–ಹಕ್ಕುದಾರರ ಪಾಲುದಾರಿಕೆ** | | |
| 17.16 | ಎಲ್ಲಾ ದೇಶಗಳಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ, ಅಭಿವೃದ್ಧಿಶೀಲ ದೇಶಗಳಲ್ಲಿ ಸುಸ್ಥಿರ ಅಭಿವೃದ್ಧಿಯ ಗುರಿಗಳ ಸಾಧನೆಯಾಗಲು ಜ್ಞಾನ, ಪರಿಣತಿ, ತಂತ್ರಜ್ಞಾನ ಮತ್ತು ಆರ್ಥಿಕ ಸಂಪನ್ಮೂಲಗಳಿಂದ ಬೆಂಬಲಿಸಿ ಸಜ್ಜುಗೊಳಿಸುವ ಹಾಗೂ ಹಂಚಿಕೊಳ್ಳುವ ಬಹು–ಹಕ್ಕುದಾರರ ಪಾಲುದಾರಿಕೆಗಳಿಂದ ಪೂರಕವಾದ, ಸುಸ್ಥಿರ ಅಭಿವೃದ್ಧಿಗಾಗಿ ಜಾಗತಿಕ ಪಾಲುದಾರಿಕೆಯನ್ನು ಹೆಚ್ಚಿಸಿ | 17.16.1. | ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಬಹು ಮಧ್ಯಸ್ಥಗಾರರಿರುವ/ಹಕ್ಕುದಾರರಿರುವ ಅಭಿವೃದ್ಧಿಯನ್ನು ಬೆಂಬಲಿಸುವ ಪರಿಣಾಮಕಾರಿ ಉಸ್ತುವಾರಿ ಚೌಕಟ್ಟಿಗೆ ಅನುಗುಣವಾಗಿ ವರದಿ ಮಾಡುವ ದೇಶಗಳು |
| 7.17 | ಸಂಪನ್ಮೂಲ ಕ್ರೋಢೀಕರಣ ಕಾರ್ಯತಂತ್ರಗಳು ಮತ್ತು ಸಹಭಾಗಿತ್ವದ ಅನುಭವಗಳನ್ನು ಆಧರಿಸಿ, ಪರಿಣಾಮಕಾರಿ ಸರ್ಕಾರ, ಸರ್ಕಾರ–ಖಾಸಗಿ ಹಾಗೂ ನಾಗರಿಕ ಸಮಾಜದ ಸಹಭಾಗಿತ್ವವನ್ನು ಪ್ರೋತ್ಸಾಹಿಸಿ, ಬೆಳೆಸಿ | 17.17.1 | ಸರ್ಕಾರಿ ಮತ್ತು ಖಾಸಗಿ ಹಾಗೂ ನಾಗರಿಕ ಸಮಾಜದ ಪಾಲುದಾರಿಕೆಯಲ್ಲಿ ಬದ್ಧರಾಗಿರುವ ಒಟ್ಟು ಯು.ಎಸ್. ಡಾಲರ್ ಮೊತ್ತ |
| | **ದತ್ತಾಂಶಗಳು, ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ** | | |
| 17.18 | 2020ರೊಳಗೆ, ಅಭಿವೃದ್ಧಿ ಹೊಂದುತ್ತಿರುವ ದೇಶಗಳು, ಕನಿಷ್ಠ ಅಭಿವೃದ್ಧಿ ಹೊಂದಿರುವ ದೇಶಗಳು ಹಾಗೂ ಅಭಿವೃದ್ಧಿ ಹೊಂದುತ್ತಿರುವ ಸಣ್ಣ ದ್ವೀಪ ದೇಶಗಳನ್ನೂ ಒಳಗೊಂಡು ಆಯಾ ದೇಶಗಳ ಸನ್ನಿವೇಶಗಳಿಗೆ ಅನುಗುಣವಾಗಿ, ಆದಾಯ, ಲಿಂಗ, ವಯಸ್ಸು, ಜನಾಂಗ, ಬುಡಕಟ್ಟು, ವಲಸೆ ಪರಿಸ್ಥಿತಿ, ಅಂಗವಿಕಲತೆ, ಭೌಗೋಳಿಕ ಸ್ಥಳ ಹಾಗೂ ಇನ್ನಿತರ ಗುಣಲಕ್ಷಣಗಳನ್ನು ಕುರಿತು ಪ್ರತ್ಯೇಕವಾಗಿ ಕಲೆಹಾಕಿದ ಉತ್ತಮ ಗುಣಮಟ್ಟದ, ಸಕಾಲಿಕ ಮತ್ತು ನಂಬಲರ್ಹವಾದ ದತ್ತಾಂಶ ಲಭ್ಯತೆಯನ್ನು ಗಮನಾರ್ಹವಾಗಿ ಹೆಚ್ಚಿಸಲು ಸಾಮರ್ಥ್ಯವೃದ್ಧಿ ಬೆಂಬಲವನ್ನು ಹೆಚ್ಚಿಸಿ | 17.18.1. | ರಾಷ್ಟ್ರೀಯ ಮಟ್ಟದಲ್ಲಿ, ಅಧಿಕೃತ ಅಂಕಿ ಅಂಶಗಳ ಮೂಲಭೂತ ತತ್ತ್ವಗಳಿಗೆ ಅನುಗುಣವಾಗಿ, ಗುರಿಗಳಿಗೆ ಸೂಕ್ತವಾಗಿ ಸಂಪೂರ್ಣವಾಗಿ ವಿಂಗಡಿಸಿಟ್ಟ ಸುಸ್ಥಿರ ಅಭಿವೃದ್ಧಿ ಸೂಚಕಗಳ ಪ್ರಮಾಣ. |
| | | 17.18.2. | ಅಧಿಕೃತ ಅಂಕಿಅಂಶಗಳಿಗೆ ಮೂಲಭೂತ ತತ್ತ್ವಗಳಿಗೆ ಬದ್ಧವಾಗಿರುವಂತೆ, ರಾಷ್ಟ್ರೀಯ ಅಂಕಿಅಂಶ ಕಾನೂನು ಜಾರಿ ಹೊಂದಿರುವ ದೇಶಗಳ ಸಂಖ್ಯೆ |
| | | 17.18.3. | ದೇಶೀಯ ಮೂಲಧನದಿಂದಲೇ ಸಂಪೂರ್ಣವಾಗಿ ಸಹಾಯ ಹೊಂದಿರುವ ಮತ್ತು ಜಾರಿಯಲ್ಲಿರುವ ರಾಷ್ಟ್ರೀಯ ಅಂಕಿಅಂಶ ಯೋಜನೆ ಹೊಂದಿರುವ ದೇಶಗಳ ಸಂಖ್ಯೆ |
| 17.19 | 2030ರೊಳಗೆ, ಒಟ್ಟು ದೇಶೀಯ ಉತ್ಪನ್ನಕ್ಕೆ ಪೂರಕವಾಗಿರುವ ಮತ್ತು ಸದ್ಯ ಅಸ್ತಿತ್ವದಲ್ಲಿರುವ ಉಪಕ್ರಮಗಳನ್ನೇ ಆಧರಿಸಿ ಸುಸ್ಥಿರ ಅಭಿವೃದ್ಧಿಯ ಪ್ರಗತಿ ಮಾನದಂಡಗಳನ್ನು ನಿರ್ಮಿಸಿ, ಅಭಿವೃದ್ಧಿಶೀಲ ದೇಶಗಳ ಅಂಕಿಅಂಶಗಳ ಬಳಕೆ ಸಾಮರ್ಥ್ಯವನ್ನು ಬೆಂಬಲಿಸಿ | 17.19.1. | ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಅಂಕಿಅಂಶದ ಸಾಮರ್ಥ್ಯವನ್ನು ವೃದ್ಧಿಸಲು ಲಭ್ಯವಿರುವ ಸಂಪನ್ಮೂಲಗಳ ಡಾಲರ್ ಮೌಲ್ಯ |
| | | 17.19.2. | (ಎ) ಕಳೆದ 10 ವರ್ಷಗಳಲ್ಲಿ ಕನಿಷ್ಠ ಒಂದು ಬಾರಿ ಜನಗಣತಿ ಮತ್ತು ಮನೆಗಳ ಗಣತಿಯನ್ನು ಮಾಡಿರುವ ಮತ್ತು (ಬಿ) ಪ್ರತಿಶತ ಜನ್ಮ ದಾಖಲೆ ಮಾಡುವ ಮತ್ತು ಪ್ರತಿ ಶತ 80ರಷ್ಟು ಸಾವುಗಳ ದಾಖಲೆ ಮಾಡುವ ದೇಶಗಳ ಪ್ರಮಾಣ  |

### ವಿವರಣೆ

ಈ ಗುರಿಯು ಅಂತಾರಾಷ್ಟ್ರೀಯ ಸಂಬಂಧ, ಸಹಕಾರ ಮತ್ತು ಕೊಡು-ಕೊಳ್ಳುವಿಕೆಯನ್ನು ಕುರಿತಾಗಿ ಹೇಳುತ್ತದೆ. ಒಟ್ಟಾರೆ ಸುಸ್ಥಿರ ಅಭಿವೃದ್ಧಿಗೆ ಇವು ಅವಶ್ಯಕವೂ ಹೌದು. ದೇಶ ದೇಶಗಳ ನಡುವಿನ ಸಹಕಾರ, ವ್ಯವಹಾರ ಹೆಚ್ಚಾದಂತೆ ರಾಷ್ಟ್ರೀಯ ಆದಾಯವೂ ಹೆಚ್ಚಾಗಿ ಅದು ದೇಶದ ಅಭಿವೃದ್ಧಿಗೆ ಸಹಾಯಕವಾಗುತ್ತದೆ. ಸಂವಹನ ತಂತ್ರಜ್ಞಾನ ಹೆಚ್ಚುತ್ತಿರುವ ಪ್ರಸ್ತುತ ದಿನಗಳಲ್ಲಿ ಈ ರೀತಿಯ ಸಹಕಾರ ಮತ್ತು ವ್ಯವಹಾರ ಸುಲಲಿತವಾಗಿ ಸಾಗಲು ಅಷ್ಟೇನು ಕಷ್ಟವಾಗಲಾರದು.

### ನೀವು ಮಾಡಬಹುದಾದದ್ದು

- ರಾಷ್ಟ್ರ/ರಾಜ್ಯದ ಆಯವ್ಯಯದಲ್ಲಿ ಮಕ್ಕಳಿಗಾಗಿ ಮೀಸಲಿಡುವ ಹಣದ ಪ್ರಮಾಣ ಮತ್ತು ಬಳಕೆಯನ್ನು ಕಂಡುಕೊಳ್ಳುವುದು (ನಿಮ್ಮ ಪಂಚಾಯತ್ ವ್ಯಾಪ್ತಿಯಲ್ಲೂ ಇಂತಹ ಪ್ರಯತ್ನ ಮಾಡಬಹುದು)
- ಮಕ್ಕಳ ಬದುಕು, ಆರೋಗ್ಯ, ಪೌಷ್ಟಿಕತೆ, ಶಿಕ್ಷಣ, ರಕ್ಷಣೆ ಕುರಿತಾದ ಅಂಕಿಅಂಶಗಳನ್ನು (ಲಿಂಗ, ಆದಾಯ, ಜಾತಿ, ಧರ್ಮ ಇವೇ ವರ್ಗೀಕೃತವಾದ) ಕಾಲಕಾಲಕ್ಕೆ ಸಂಗ್ರಹಿಸಿ ಪರಿಶೀಲಿಸುವುದು;
- ಜನನ ಮತ್ತು ಮರಣಗಳನ್ನು ತಪ್ಪದೆ ನೋಂದಾಯಿಸುವುದನ್ನು ಉತ್ತೇಜಿಸಿ.

### ಸವಾಲುಗಳು

- ಈ ಗುರಿಯು ಬಹುತೇಕ ಸೂಚಕಗಳು ಅಂತಾರಾಷ್ಟ್ರೀಯ ಸಂಬಂಧ, ಸಹಕಾರ, ವ್ಯಾಪಾರಗಳ ಕುರಿತು ಹೇಳುವುದರಿಂದ ಅವುಗಳ ಅನುಸರಣೆ ತೀರಾ ಕಠಿಣ.
- ಕೆಲವು ವಿಚಾರಗಳಿಗೆ ವರ್ಗೀಕೃತ ಅಂಕಿಅಂಶಗಳನ್ನು ಕಂಡುಕೊಳ್ಳುವುದು ತುಸು ಕಷ್ಟ.

**ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಸುಸ್ಥಿರ ಅಭಿವೃದ್ಧಿ ಗುರಿ 17 ಅರ್ಥ ಮಾಡಿಕೊಳ್ಳಲು ಓದಬೇಕಿರುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ 1989ರ ಪರಿಚ್ಛೇದಗಳು**

| ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ | ಪರಿಚ್ಛೇದ ಸಂಖ್ಯೆ | ಪರಿಚ್ಛೇದದ ಶೀರ್ಷಿಕೆ |
|---|---|---|---|
| 1 | ಮಕ್ಕಳೆಂದರೆ 18 ವರ್ಷದೊಳಗಿನವರು | 2 | ಮಕ್ಕಳ ನಡುವೆ ತಾರತಮ್ಯ/ಭೇದಭಾವ ಇರಬಾರದು/ಮಾಡಬಾರದು |
| 3 | ಎಲ್ಲ ನಿರ್ಧಾರಗಳು ಮಕ್ಕಳ ಹಿತದೃಷ್ಟಿಯಿಂದಲೇ ಆಗಬೇಕು | 4 | ಮಕ್ಕಳ ಹಕ್ಕುಗಳ ಜಾರಿಗೆ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು |
| 5 | ಮಕ್ಕಳನ್ನು ಕುರಿತು ಪಾಲಕರಿಗೆ ಮತ್ತು ಪೋಷಕರಿಗೆ ಪ್ರಮುಖ ಜವಾಬ್ದಾರಿ ಇದೆ. | 6 | ಎಲ್ಲ ಮಕ್ಕಳಿಗೆ ಜೀವಿಸುವ ಹಕ್ಕು ಇದೆ |
| 7 | ಎಲ್ಲ ಮಕ್ಕಳಿಗೆ ಹೆಸರಿರಬೇಕು ಮತ್ತು ನಾಗರೀಕತೆ/ ರಾಷ್ಟ್ರೀಯತೆ ದೊರಕಲೇಬೇಕು | 8 | ಮಕ್ಕಳ ವ್ಯಕ್ತಿತ್ವಕ್ಕೆ ಎಂತಹದೇ ಸನ್ನಿವೇಶದಲ್ಲಿ ಧಕ್ಕೆ ಬರಬಾರದು |
| 9 | ಮಕ್ಕಳ ರಕ್ಷಣೆಯಲ್ಲಿ ಪೋಷಕರ ಪಾತ್ರ ಪ್ರಮುಖವಾಗಿ ಇದೆ. | 10 | ಮಕ್ಕಳಿಗೆ ತಮ್ಮ ತಮ್ಮ ಪೋಷಕರೊಂದಿಗೆ ಇರುವ ಹಕ್ಕು ಇದೆ |
| 11 | ಯಾವುದೇ ಮಗುವನ್ನು ಕಾನೂನಿಗೆ ವಿರುದ್ಧವಾಗಿ ಸ್ಥಳಾಂತರ / ಸಾಗಣೆ ಮಾಡಬಾರದು | 12 | ಮಕ್ಕಳಿಗೆ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ ಇದೆ |
| 13 | ಮಕ್ಕಳಿಗೆ ವಿವಿಧ ಮೂಲಗಳಿಂದ ಮಾಹಿತಿ ಹೊಂದುವ ಸ್ವಾತಂತ್ರ್ಯ | 14 | ಮಕ್ಕಳಿಗೆ ತಮಗೆ ಒಪ್ಪುವ ಧರ್ಮವನ್ನು ಪಾಲಿಸುವ ತಮ್ಮ ಆತ್ಮಸಾಕ್ಷಿಯಂತೆ ನಡೆದುಕೊಳ್ಳುವ ಸ್ವಾತಂತ್ರ್ಯವಿದೆ |
| 15 | ಮಕ್ಕಳಿಗೂ ಸಂಘಟಿತರಾಗಿರುವ ಹಕ್ಕಿದೆ | 16 | ಮಕ್ಕಳ ಖಾಸಗೀ ಬದುಕಿನ ಮೇಲೆ ಯಾರೂ ದಾಳಿ ಮಾಡುವಂತಿಲ್ಲ |

| | | | |
|---|---|---|---|
| 17 | ಮಕ್ಕಳಿಗೆ ಸೂಕ್ತವಾದ ಮಾಹಿತಿ ನೀಡುವ ಜವಾಬ್ದಾರಿ ಮಾಧ್ಯಮಗಳಿಗಿದೆ. | 18 | ಮಕ್ಕಳ ಆರೈಕೆ, ಲಾಲನೆ ಪಾಲನೆಯ ರಕ್ಷಣೆ ಮಾಡುವ ಜವಾಬ್ದಾರಿ ಪೋಷಕರದ್ದು |
| 19 | ಮಕ್ಕಳನ್ನು ದುರುಪಯೋಗ ಮತ್ತು ನಿರ್ಲಕ್ಷ್ಯದ ವಿರುದ್ಧ ರಕ್ಷಿಸಬೇಕು | 20 | ಕುಟುಂಬಗಳಿಂದ ದೂರವಾದ ಮಕ್ಕಳನ್ನು ರಕ್ಷಿಸಬೇಕು ಅವರಿಗೆ ಪರ್ಯಾಯ ವ್ಯವಸ್ಥೆ ಮಾಡಬೇಕು |
| 21 | ಅನಾಥ ಮಕ್ಕಳನ್ನು ದತ್ತು ನೀಡುವ ಮೂಲಕ ಕೌಟುಂಬಿಕ ಹಕ್ಕು ಖಾತರಿಗೊಳಿಸಬೇಕು | 22 | ನಿರಾಶ್ರಿತರಾದ ಮಕ್ಕಳಿಗೆ ಆದ್ಯತೆಯಿಂದ ರಕ್ಷಣೆ ನೀಡಬೇಕು |
| 23 | ಅಂಗವಿಕಲತೆಯಿರುವ ಮಕ್ಕಳಿಗೆ ರಕ್ಷಣೆ ನೀಡಬೇಕು | 24 | ಎಲ್ಲ ಮಕ್ಕಳಿಗೆ ಮೂಲ ಸೇವೆಗಳನ್ನು ಒದಗಿಸಲೇಬೇಕು. |
| 25 | ಮಕ್ಕಳನ್ನು ದತ್ತು ನೀಡಿದಾಗ ಅಥವಾ ಮಕ್ಕಳನ್ನು ಯಾರದಾದರೂ ರಕ್ಷಣೆಯಲ್ಲಿ ಇರಿಸಿದಾಗ ನಿಯಮಿತ ಅವಧಿಗಳಲ್ಲಿ ಅದನ್ನು ಪರಾಮರ್ಶಿಸುತ್ತಿರಬೇಕು | 26 | ಎಲ್ಲ ಮಕ್ಕಳಿಗೆ ಸಾಮಾಜಿಕ ಭದ್ರತೆ ನೀಡಲೇಬೇಕು |
| 27 | ಎಲ್ಲ ಮಕ್ಕಳಿಗೆ ಸೂಕ್ತ ಜೀವನ ಮಟ್ಟ ದೊರೆಯಬೇಕು | 28 | ಎಲ್ಲ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕು ಇದೆ |
| 29 | ಎಲ್ಲ ಮಕ್ಕಳಿಗೆ ತಾರತಮ್ಯವಿಲ್ಲದೆ ಶಿಕ್ಷಣ ಪಡೆಯುವ ಹಕ್ಕು ಇದೆ. | 30 | ಅಲ್ಪಸಂಖ್ಯಾತ ವರ್ಗ / ಧರ್ಮ / ಜಾತಿಗಳ ಎಲ್ಲ ಮಕ್ಕಳಿಗೆ ಎಲ್ಲ ಹಕ್ಕುಗಳು ಇದೆ |
| 31 | ಎಲ್ಲ ಮಕ್ಕಳಿಗೆ ವಿಶ್ರಾಂತಿ ಪಡೆಯುವ ಮತ್ತು ಮನೋರಂಜನೆ ಹೊಂದುವ ಹಕ್ಕು ಇದೆ | 32 | ಮಕ್ಕಳ ಮೇಲೆ ಆರ್ಥಿಕ ಶೋಷಣೆ ನಿಲ್ಲಬೇಕು. ಮಕ್ಕಳನ್ನು ದುಡಿಯಲು ನೇಮಿಸಬಾರದು, ನೇಮಿಸಿಕೊಳ್ಳಬಾರದು |
| 33 | ಮಾದಕ ವಸ್ತುಗಳಿಗೆ ಬಲಿಯಾಗುವುದರ ವಿರುದ್ಧ ಮಕ್ಕಳನ್ನು ರಕ್ಷಿಸಬೇಕು. | 34 | ಮಕ್ಕಳ ಮೇಲೆ ಲೈಂಗಿಕ ಶೋಷಣೆ / ದಾಳಿ ಆಗದಂತೆ ಎಲ್ಲೆಡೆ ರಕ್ಷಿಸಬೇಕು |
| 35 | ಮಕ್ಕಳ ಮಾರಾಟ ಮಾಡುವುದು ಅಥವಾ ಅಕ್ರಮ ಬಂಧನದಲ್ಲಿಡುವುದರ ವಿರುದ್ಧ ರಕ್ಷಣೆ | 36 | ಮಕ್ಕಳನ್ನು ಯಾವುದೇ ರೀತಿಯ ಶೋಷಣೆಗಳ ವಿರುದ್ಧ ರಕ್ಷಿಸುವುದು ಸರ್ಕಾರ ಮತ್ತು ಸಮಾಜದ ಜವಾಬ್ದಾರಿ |
| 37 | ಯಾವುದೇ ಮಗುವಿಗೆ ಎಂತಹದೇ ಸಂದರ್ಭದಲ್ಲೂ ಚಿತ್ರಹಿಂಸೆ, ಮರಣದಂಡನೆ ನೀಡಬಾರದು | 38 | ಯುದ್ಧ, ಸಶಸ್ತ್ರ ಸಂಘರ್ಷಗಳಾದಲ್ಲಿ ಮಕ್ಕಳಿಗೆ ಆದ್ಯತೆಯಿಂದ ರಕ್ಷಣೆ ನೀಡಬೇಕು |
| 39 | ಕಾನೂನಿನೊಡನೆ ಸಂಘರ್ಷದಲ್ಲಿದ್ದ ಮಕ್ಕಳಿಗೆ ಪುನರ್ವಸತಿಯ ಹಕ್ಕು ಇದೆ | 40 | ಮಕ್ಕಳಿಗೆ ನ್ಯಾಯ ಒದಗಿಸುವ ವ್ಯವಸ್ಥೆ ಇರಲೇಬೇಕು |
| 41 | ಮಕ್ಕಳ ವಿಚಾರಗಳಿಗೆ ಅತ್ಯಂತ ಉನ್ನತ ದರ್ಜೆಯ ಸಾರ್ವಭೌಮತೆಯನ್ನು ನೀಡಬೇಕು | 42 | ಮಕ್ಕಳ ಹಕ್ಕುಗಳನ್ನು ಕುರಿತು ಸರ್ಕಾರ ವಿಸ್ತೃತವಾದ ಪ್ರಚಾರ ಮಾಡಿ ಎಲ್ಲರಿಗೂ ಈ ಕುರಿತು ಮಾಹಿತಿ, ಅರಿವು ಮೂಡಿಸಬೇಕು. |

| ಉಸ್ತುವಾರಿ ಸಚಿವಾಲಯ | ಕೇಂದ್ರ/ರಾಜ್ಯ ಸರ್ಕಾರದ ಯೋಜನೆಗಳು | ಸಂಬಂಧಿತ ಕ್ರಮಗಳು | ಇತರ ಸಂಬಂಧಿತ ಸಚಿವಾಲಯಗಳು/ ಇಲಾಖೆಗಳು |
|---|---|---|---|
| ಆರ್ಥಿಕ | 1. ಸಾಂಖ್ಯಿಕ ಬಲವರ್ಧನೆಗೆ ನೆರವು | 1. ದಕ್ಷಿಣ–ದಕ್ಷಿಣ ಸಹಕಾರ<br>2. ಭಾರತ ಆಫ್ರಿಕ ಶೃಂಗಸಭೆ<br>3. ಶಾಂಘೈ ಸಹಕಾರ ಸಂಸ್ಥೆ<br>4. ಹೊಸ ಅಭಿವೃದ್ಧಿ ಬ್ಯಾಂಕ್<br>5. ಸಾರ್ಕ್ ಉಪಗ್ರಹ | • ಆರ್ಥಿಕ<br>• ವಿದೇಶಾಂಗ ವ್ಯವಹಾರ<br>• ಮಾಹಿತಿ ಮತ್ತು ಪ್ರಚಾರ<br>• ವಿಜ್ಞಾನ ಮತ್ತು ತಂತ್ರಜ್ಞಾನ<br>• ಅರಣ್ಯ ಮತ್ತು ಪರಿಸರ<br>• ದೂರಸಂಪರ್ಕ<br>• ವಾಣಿಜ್ಯ<br>• ಸಾಂಖ್ಯಿಕ ಮತ್ತು ಕಾರ್ಯಕ್ರಮ ಜಾರಿ |





# ನಾಟಕ



## ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಮಕ್ಕಳ ಹಕ್ಕುಗಳು

ರಚನೆ: ನಾಗಸಿಂಹ ಜಿ. ರಾವ್

ಕರ್ನಾಟಕದ ಹಿಂದುಳಿದ ಜಿಲ್ಲೆಯೊಂದರಲ್ಲಿನ ಅಂತರದಲ್ಲಿ ಅಡಗಿರುವ ಪುಟ್ಟ ಗ್ರಾಮದ ಹೆಸರು ಗುರೇನಹಳ್ಳಿ. ಗುರೇನಹಳ್ಳಿಯ ಪ್ರೌಢಶಾಲೆ ಮಕ್ಕಳೆಲ್ಲರು ತರಗತಿಯೊಂದರಲ್ಲಿ ಗಂಭೀರವಾಗಿ ಏನನ್ನೋ ಬರೆಯುತ್ತಿದ್ದಾರೆ. ಶಿಕ್ಷಕಿ ಎಲ್ಲರನ್ನು ಗಮನಿಸುತ್ತಾ ಓಡಾಡುತ್ತಿದ್ದಾರೆ, ತರಗತಿಯಲ್ಲಿ ಇರುವ ಎರಡು ಬೆಂಚುಗಳ ಮೇಲೆ ಗಂಡು ಮಕ್ಕಳು ಕುಳಿತಿದ್ದಾರೆ, ಹೆಣ್ಣು ಮಕ್ಕಳು ನೆಲದ ಮೇಲೆ ಕುಳಿತಿದ್ದಾರೆ, ತರಗತಿಯ ಗೋಡೆಗಳು ಅಲ್ಲಲ್ಲಿ ಕಿತ್ತುಹೋಗಿದೆ. ಸುಣ್ಣವಿಲ್ಲ–ಬಣ್ಣವಿಲ್ಲ ಗಾಂಧಿ, ನೆಹರು, ಸುಭಾಶ್‌ಚಂದ್ರರ ಹಳೆ ಫೋಟೊಗಳಿವೆ. ಒಟ್ಟಾರೆ ತರಗತಿಯನ್ನು ನೋಡಿದರೆ ಶಿಥಿಲಾವಸ್ಥೆಯಲ್ಲಿರುವ ಶಾಲೆಯ ಚಿತ್ರ ಕಣ್ಣಮುಂದೆ ಬರುತ್ತದೆ. ಎಂಟನೇ ತರಗತಿಯ 13 ವರುಷದ ಮಕ್ಕಳಾದರು ಹಲವು ಮಕ್ಕಳು 5, 6ನೇ ತರಗತಿಯ ಮಕ್ಕಳಂತೆ ಕಂಡುಬರುತ್ತಾರೆ. ಅಪೌಷ್ಟಿಕತೆ, ಬೆಳವಣಿಗೆ ಇಲ್ಲದ ತಾಯಿ ಭಾರತಿಯ ಮಕ್ಕಳು. ತರಗತಿಯಲ್ಲಿರುವ ಮಕ್ಕಳ ಸಂಖ್ಯೆ 8. ರಂಗದ ಮೇಲೆ ಬೆಳಕು ಪ್ರಕಾಶವಾಗುತ್ತಿರುವಂತೆಯೇ ಹಿನ್ನೆಲೆಯಲ್ಲಿ ಹಾಡು

**ಬಡತನದಲ್ಲಿ ಬೆಂದ ಮೊಟ್ಟೆಗಳು**
**ಹಸಿದು ಬಸಿದೇ ಚಿಗುರಿದ ಮೊಳಕೆಗಳು**
**ಅನಾರೋಗ್ಯದಲ್ಲಿ ಹುಸಿನಗೆ ಮುಖಗಳು**
**ಗುಣಮಟ್ಟದ ಶಿಕ್ಷಣ ಬೇಕೆಮಗೆ**
**ತತ್ತರಿಸಿದ ತಾರತಮ್ಯದ ಬದುಕು**
**ಕತ್ತರಿಸಿದ ಸೆಲೆ ಇಲ್ಲದ ಜೀವಜಲ**
**ಉಸಿರೆಲ್ಲಿ? ಎಲ್ಲಿ ಶಕ್ತಿಯ ಮೂಲ**
**ಆರ್ಥಿಕತೆಗೆ ಸ್ವಾವಲಂಬನೆಯ ಬಲ**
**ಹೊಸ ಹುಡುಕು ಆವಿಷ್ಕಾರ ಕಾರ್ಖಾನೆಗಳ ಕೂಗು**
**ಅಸಮಾನತೆಯ ಅಟ್ಟಹಾಸದ ನಗು**
**ಗೊಂದಲ ಗೋಜಲುಗಳ ವ್ಯವಸ್ಥಿತ ಆಗರ**
**ಎಲ್ಲಿದೆ ಶಾಂತಿ ಸಮೃದ್ಧಿಯ ಸುಸ್ಥಿರ ನಗರ**

<table>
<tr><td colspan="3">(ಹಾಡು ನಿಧಾನವಾಗಿ ಕೊನೆಗೊಳ್ಳುತ್ತಿರುವಂತೆ ಶಾಲೆಯ ಮುಖೋಪಾಧ್ಯಾಯರು ಪತ್ರವೊಂದನ್ನು ಕೈಯಲ್ಲಿ ಹಿಡಿದು ತರಗತಿಯನ್ನು ಪ್ರವೇಶ ಮಾಡುತ್ತಾರೆ)</td></tr>
<tr><td>ಮುಖ್ಯೋಪಾಧ್ಯಾಯರು:</td><td>:</td><td>ನಮಸ್ಕಾರ ಮೇಡಂ..... (ಮಕ್ಕಳೆಲ್ಲ ಎದ್ದುನಿಂತು ನಮಸ್ಕಾರ ಸರ್?) ಇರಲಿ ಕುಳಿತುಕೊಳ್ಳಿ ಮಕ್ಕಳಿಗೆಲ್ಲಾ ಏನೋ ಬರಿಯೋದಕ್ಕೆ ಕೊಟ್ಟಿದ್ದಿರಾ? Good..Good.., ನಿಶ್ಯಬ್ದವಾಗಿ ಶಿಸ್ತಿನಿಂದ ಒಂದು ಚೂರು ಶಬ್ದಮಾಡದೆ ಕೆಲಸ ಮಾಡುತ್ತಿದ್ದಾರೆ Fine ಇರಲಿ..ಇರಲಿ..</td></tr>
<tr><td>ಶಿಕ್ಷಕಿ:</td><td>:</td><td>ಪ್ರಜಾಪ್ರಭುತ್ವ ಮತ್ತು ಸಮಾನತೆ ಬಗ್ಗೆ ಪ್ರಬಂಧ ಬರೀತಾ ಇದ್ದಾರೆ ಸರ್.</td></tr>
<tr><td>ಮುಖ್ಯೋಪಾಧ್ಯಾಯರು:</td><td>:</td><td>Very Good…Very Good ಇರಲಿ ಇರಲಿ, ಮಕ್ಕಳೆ ನಿಮಗೆಲ್ಲಾ ಒಂದು ಸಿಹಿ ಸುದ್ದಿ, Good News ಹೇಳಕ್ಕೆ ಬಂದಿದ್ದೇನೆ.</td></tr>
<tr><td>ಮಕ್ಕಳು</td><td>:</td><td>ವಾವ್... (ಎಲ್ಲರೂ ಹೆಚ್.ಎಂ. ಕಡೆ ಮುಖ ಮಾಡುತ್ತಾರೆ)</td></tr>
</table>

| | | |
|---|---|---|
| **ಮುಖ್ಯೋಪಾಧ್ಯಾಯರು** | : | Good News, ಸಿಹಿ ಸುದ್ದಿ ಏನು ಅಂತ ನೀವೇ ಹೇಳಿ ನೋಡೋಣ? |
| **1 ವಿದ್ಯಾರ್ಥಿ** | : | ಸ್ಕೂಲಿಗೆ ಒಂದು ವಾರ ರಜೆ... |
| **ಮುಖ್ಯೋಪಾಧ್ಯಾಯರು** | : | ಲೇ ಚಕ್ಕರಣ್ಣಾ ನಿನಗೆ ಬೇರೆ ಯೋಚನೆನೇ ಇಲ್ವಾ? ಯಾವಾಗಲೂ ರಜೆ... ಯಾವಾಗಲೂ ನಿದ್ದೆ.. ನಾನು ಹೇಳ್ಳೋಕೆ ಬಂದಿರೋದು ರಜೆಯ ವಿಷಯ ಅಲ್ಲ.. ಅದು ನಿಮ್ಮ ಪ್ರತಿಭೆಗೆ ಸಂಬಂಧಪಟ್ಟಿರೋದು. |
| **2 ವಿದ್ಯಾರ್ಥಿ** | : | ಅಂದ್ರೇ ನಾವು ನಾಟಕ ಮಾಡಬೇಕಾ ಸರ್? |
| **3 ವಿದ್ಯಾರ್ಥಿ** | : | ಲೇ ಇಲ್ಲ ಕಣೋ ನಾವೆಲ್ಲ ಡ್ಯಾನ್ಸ್ ಮಾಡಬೇಕು. |
| **4 ವಿದ್ಯಾರ್ಥಿ** | : | ಚಿತ್ರ ಬರಿಯೋದು? |
| **ಮುಖ್ಯೋಪಾಧ್ಯಾಯರು** | : | ನಾನು ಸುಮ್ಮನೆ ಇದ್ರೆ ನಿಮ್ಮ ಚಿತ್ತ ಬೇರೆ ಕಡೇನೆ ಹೋಗುತ್ತೆ.... ನಾನೇ ಹೇಳ್ತಿನಿ... ಕೇಳಿ... ನನಗೆ ಬೆಂಗಳೂರಿನ ಮಕ್ಕಳ ಹಕ್ಕುಗಳ ನಿಗಾ ಕೇಂದ್ರದಿಂದ ಪತ್ರ ಬಂದಿದೆ. ಅದರ ಸಾರಾಂಶ ಏನಿದೆ ಅಂದ್ರೆ, ನಿಗಾ ಕೇಂದ್ರದವರು ರಾಜ್ಯದ ಆಯ್ದ ಗ್ರಾಮೀಣ ಶಾಲೆಗಳ ಮಕ್ಕಳಿಗೆ ಒಂದು ವಸ್ತುಪ್ರದರ್ಶನ ಏರ್ಪಡಿಸಿದ್ದಾರಂತೆ, ಅದು ಮಕ್ಕಳ ಹಕ್ಕುಗಳ ವಿಚಾರದ ಬಗ್ಗೆ ಪ್ರತಿ ಶಾಲೆಗಳಿಂದ ಒಂದೊಂದು ವಸ್ತುವನ್ನು ಮಕ್ಕಳ ಬದುಕು, ರಕ್ಷಣೆ, ಅಭಿವೃದ್ಧಿ, ಭಾಗವಹಿಸುವುದರ ಬಗ್ಗೆ ವಿಚಾರ ತಿಳಿಸೋ ವಸ್ತುವನ್ನು ತಯಾರು ಮಾಡಿ ವಸ್ತುಪ್ರದರ್ಶನದಲ್ಲಿ ಇಡುತ್ತಾರಂತೆ. ನಮ್ಮ ಶಾಲೆಯಲ್ಲಿ, ನಾವು ಮಕ್ಕಳ ಪ್ರಪಂಚದ ಒಂದು ಗ್ಲೋಬ್ ಅಂದ್ರೇ ಗೋಲಾಕಾರದ ಭೂಮಿನ ಮಕ್ಕಳೇ ಮಾಡಿಕೊಂಡು ಹೋಗಬೇಕು. ನಮ್ದು ಗ್ರಾಮೀಣ ಮಕ್ಕಳ ಶಾಲೆ ಆದ್ದರಿಂದ ವಿಶೇಷ ಅವಕಾಶ ಕೊಟ್ಟಿದ್ದಾರೆ, ವಸ್ತು ಪ್ರದರ್ಶನವನ್ನು ವಸ್ತುವನ್ನು ಮಕ್ಕಳೇ ಮಾಡಬೇಕು ಇದು ಅವರ ಕಂಡಿಷನ್. ಹಾಗಾದರೆ ನಿಮಗೆ ಗ್ಲೋಬ್ ಮಾಡ್ತೀವಿ ಅನ್ಸುತ್ತಾ? ನಮ್ಮ ಶಾಲೆ ಮಕ್ಕಳು ಈ ವಸ್ತು ಪ್ರದರ್ಶನಕ್ಕೆ ಬರ್ತಾರೆ ಅಂತ ಉತ್ತರ ಬರೀಲಾ? |
| **ಎಲ್ಲಾ ಮಕ್ಕಳು** | : | ಸಾರ್ ಮಾಡ್ತಿವಿ ಸಾರ್... ಎಗ್ಸಿಬಿಷನ್‌ಗೆ ಹೋಗ್ತಿವಿ ಸಾರ್.,.,, |
| **ಮುಖ್ಯೋಪಾಧ್ಯಾಯರು** | : | ಮಕ್ಕಳೇ ಇದು ನಮ್ಮ ಸ್ಕೂಲಿನ ಮರ್ಯಾದೆ ಪ್ರಶ್ನೆ. ಸ್ವಲ್ಪ ಕಷ್ಟ ಆಗಬಹುದೇನೋ ಅಂತಾ ಅನ್ಸುತ್ತೆ. |
| **ಶಾಲಿನಿ** | : | ನಾವೆಲ್ಲಾ ಒಟ್ಟಾಗಿ ಮಾಡ್ತೀವಿ ಸಾರ್.. ನಮ್ಮ ಶಾಲೆಯವರು ಬರ್ತಾರೆ ಅಂತ ಪತ್ರ ಬರುದ್ಬಿಡಿ ಸಾರ್... |
| **ಮುಖ್ಯೋಪಾಧ್ಯಾಯರು** | : | ಹೋ ಪುಟ್ಟಿ ನೋಡಮ್ಮ ಅದಷ್ಟು ಸುಲಭವಲ್ಲ, ರಾಜ್ಯಮಟ್ಟದ ಕಾರ್ಯಕ್ರಮ.. ಗ್ಲೋಬ್ ಮಾಡೋದನ್ನ ಅದಕ್ಕೆ ಬೇಕಾದ ಸಾಮಗ್ರಿಯನ್ನ ಪ್ಲಾನ್ ಮಾಡೋದು ಎಲ್ಲಾ ನೀವೇ ಮಾಡೋದು.. ಬೆಂಗಳೂರಿಗೆ ಹೋಗಿ ಅದನ್ನ ಎಕ್ಸ್‌ಪ್ಲೇನ್ ಮಾಡೋದು ನೀವೇ.. ಆಗುತ್ತಾ? ಯೋಚಿಸಿ.. |
| **ಪುಟ್ಟಿ** | : | ಸರ್ ಎಲ್ಲಾ ಗೆಳೆಯರು ಸೇರಿ ಮಾಡ್ತಿವಿ.. ಚನ್ನಾಗಿ ಮಾಡಿದ್ದೀವಿ ಅಂದರೆ ನಮ್ಮನ್ನ ಕಳಿಸಿ.. ಇಲ್ಲಾ ಅಂದ್ರೆ ಬೇಡ (ಬೇರೆಯವರಿಗೆ) ಅಲ್ವೇನ್ರೋ? |
| **ಎಲ್ಲಾ** | : | ಹೌದು ಹೌದು ಚನ್ನಾಗಿಲ್ದೇ ಇದ್ರೇ ಬೇಡ... |
| **ಮುಖ್ಯೋಪಾಧ್ಯಾಯರು** | : | ಹಾಗಾದ್ರೇ ಪುಟ್ಟಿ ನಿನ್ನದೇ ಜವಾಬ್ದಾರಿ.. ನೀನೇ ಎಲ್ಲರನ್ನು ಸೇರಿಸ್ಕೋ.. ಪ್ಲಾನ್ ಮಾಡು.. ಎರಡು ದಿನದಲ್ಲಿ ತಯಾರಿಸಿ ಆಮೇಲೆ ನಾನೇ ಪ್ಲಾನ್ ಮಾಡಿ ನಮ್ಮ ಮಕ್ಕಳು ಬರ್ತಾರೇ ಅಂತ ಹೇಳ್ತಿನಿ... ಏನ್ ಮೇಡಂ ನೀವೇನ್ ಹೇಳ್ತೀರಾ.. |
| **ಶಿಕ್ಷಕಿ** | : | ಹೌದು ಸಾರ್ ಮಕ್ಕಳೇ ಮಾಡ್ತಾರೆ ಅವರಿಗೊಂದು ಅವಕಾಶ.. ಚನ್ನಾಗಿದ್ರೆ ಅದ್ರಲ್ಲೇನಾದ್ರು ಅರ್ಥ ಇದ್ರೆ ಮಾತ್ರ ಕಳಿಸೋಣ... |
| **ಮುಖ್ಯೋಪಾಧ್ಯಾಯರು** | : | ಓಕೆ ಮಕ್ಳೇ ಪ್ರಪಂಚ ಮಾಡೋಕೆ ಆ ದೇವರಿಗೆ ವಾರ ಬೇಕಾಗಿತ್ತಂತೆ ಆದ್ರೆ ನಾನು ನಿಮಗೆ ಕೊಡ್ತಾಯಿರೋದು 2 ದಿನ.. ನಾಳೆ ನಾಡದ್ದು... ಶನಿವಾರ ನನಗೆ ತೋರಿಸಬೇಕು... ಓಕೆ.. |
| **ಎಲ್ಲಾ ಮಕ್ಕಳು** | : | ಓಕೆ.. ಸಾರ್.. ಓಕೆ.. |

ಹಾಡು

**ಕಟ್ಟಬೇಕು ನಾವು ಕಟ್ಟಬೇಕು**
**ವಿಶ್ವವ ಮುಟ್ಟಬೇಕು**
**ನಾವು ತಲುಪಬೇಕು ಲಕ್ಷವ**
**ಗುರಿಯ ಮುಂದಿನ ಓಟ**
**ಭವಿಷ್ಯವೇ ಮುಂದಿನ ಪಾಠ**
**ವಿಶ್ವ ಶಾಂತಿಯ ಸಂದೇಶ**
**ಇದುವೇ ಎಲ್ಲರ ಉದ್ದೇಶ**
**ಹಕ್ಕಿಗೆ ನ್ಯಾಯಕ್ಕೆ ಹೋರಾಟ**
**ಹಚ್ಚಲಿ ಹಣತೆ ಮೂಡಲಿ ಬೆಳಕು**
**ಘನತೆಯ ಶಿಕ್ಷಣ ಅರಳಲಿ ಬದುಕು**
**ಮಕ್ಕಳ ಸ್ನೇಹ ವಿಶ್ವದ ಕನಸು**
**ಹೊಂದಲಿ ಮನಸು**

(ಹಾಡು ಪ್ರಾರಂಭವಾದೊಡನೆ ಮಕ್ಕಳು ಗೋಲ/ವಿಶ್ವ/ಗ್ಲೋಬ್ ನಿರ್ಮಿಸಲು ಅನೇಕ ಸಾಮಗ್ರಿಗಳನ್ನು ತಂದು ರಂಗದ ಮೇಲೆ ಹಾಕತೊಡಗುತ್ತಾರೆ. ನಾಲ್ಕು ಜನ ಬಾಲಕಿಯರು, ನಾಲ್ಕು ಜನ ಬಾಲಕರು ಎಂಟು ಜನಕ್ಕೆ ಪುಟ್ಟಿಯೇ ನಾಯಕಿ.. ಅವಳ ಉಸ್ತುವಾರಿಯಲ್ಲಿ ಕೆಲಸ ಸಾಗುತ್ತದೆ.)

| | | |
|---|---|---|
| **ಪುಟ್ಟಿ** | : | ನೋಡ್ರಪ್ಪ ನೋಡ್ರವ್ವ ನಾವಿರೋದು ಎಂಟು ಜನ... ಅಂದ್ರೆ ನೂರೆಂಟು ಜನರ ಕೆಲಸ ಮಾಡಬೇಕು...ಸ್ಕೂಲಿಗೆ ಹೆಸರು ಹಳ್ಳಿಗೆ ಹೆಸರು ತರಬೇಕು.. ಗ್ಲೋಬ್ ಮಾಡೋಕೆ ಅವ್ರು ನಮಗೆ time ಕೊಟ್ಟಿದ್ದಾರೆ... ಆದ್ರೆ ಹೇಗೆ ಮಾಡೋದು? ಮೇರಿ ನಿನಗೇನಾದರೂ ಐಡಿಯಾ ಬರುತ್ತಾ? |
| **ಮೇರಿ** | : | ಅದು ನೋಡೆ ಪುಟ್ಟಿ.. ಅದೇನೋ ಬೆಂಡು ಇರುತ್ತಲ್ಲಾ.. ಥರ್ಮಕೋಲ್ ಅಂತಾರಲ್ಲ.. ಅದ್ರಲ್ಲೆ ಮಾಡೋಣ ಸುಲಭ.. |
| **ಅಲೀಂ** | : | ಬೇಡ.. ನಮಗೆ ಥರ್ಮಕೋಲ್ ಸಿಗೋದು ತುಂಬಾ ಕಷ್ಟಾನೇ.. ಇಲ್ಲೆಲ್ಲಿ ಸಿಗುತ್ತೆ. ಎಲ್ಲ ಸಿಟಿ ಮಕ್ಕಳಿಗೆ ಸುಲಭ. ನಮ್ಮನ್ಯಾರು ಸಿಟಿಗೆ ಕರ್ಕೊಂಡ್ಹೋಗಿ ಕೊಡಿಸ್ತಾರೆ. ಇಲ್ಲೆ ನಮ್ಮ ಸುತ್ತಮುತ್ತ ಏನು ಸಿಕ್ಕುತ್ತೋ ಅದ್ರಲ್ಲೇ ಮಾಡೋಣ.. |
| **ಬೀನಾ** | : | ಹೌದು ಹೌದು... ಅಲೀಂ ಹೇಳಿದ್ದು ನಿಜ. ಕಸದಿಂದ ರಸ.. ಬೇಡಾ ಅಂತ ಬಿಸಾಕಿರೋ ವಸ್ತುವಿಂದ ಮಾಡೋಣ. ಏನಂತೀಯ ದೇವ? |
| **ದೇವ** | : | ವಾವ್... ಒಳ್ಳೆ ಐಡಿಯಾ.. ಒಣಗಿರೋ ಎಲೆ.. ಹಳೆ ಪೇಪರ್ ಹಾಕಿ ಮಾಡೋಣ. |
| **ಬೀನಾ** | : | ಹೌದು ಸ್ವಲ್ಪ ಬಿದಿರು ಅಥವ ಒಣಹುಲ್ಲು ಬಳಸಬೇಕು. ಅಲ್ವಾ ಜಾನು? |
| **ಜಾನು** | : | ಒಣಹುಲ್ಲು ಹಳೇ ಪೇಪರ್, ಎಲೆ ಎಲ್ಲಾ ಸರಿಯಾಗಿ ಅಂಟಿಕೊಳ್ಳಲ್ಲ.. ಆದ್ರೂ, ನಾವು ಮಾಡ್ತಾ ಇರೋದು ದೊಡ್ಡ ಗೋಳ.. ಗ್ಲೋಬ್ ಮರಿಬೇಡಿ. |
| **ಮಂಜ** | : | ಅದೆಲ್ಲಾ ಏನೂ ಬೇಡಾ ಕಂಡ್ರೋ.. ಹಸಿರು ಪ್ಲಾಸ್ಟಿಕ್ ಬಿಂದಿಗೆ ತಗೊಂಡು ಅದರ ಕುತ್ತಿಗೆ ತನಕ ಕೊಯ್ದು.. ಆಮೇಲೆ ಆ ಭಾಗಾನಾ ಮುಚ್ಚುದ್ರೆ ಗುಂಡಗೆ ಇರುತ್ತೆ.. ಅದರ ಮೇಲೆ ಬಿಳಿ ಕಾಗದ ಅಂಟಿಸಿದ್ರೆ ಸಾಕು... |
| **ಪುಟ್ಟಿ** | : | ಅಷ್ಟೊಂದು ಮಾಡೋದು ಬೇಡ ಮಂಜ... ಸಿಂಪಲ್ಲಾಗಿ ಮಾಡೋಣ... ಊದಿದ್ರೆ ಉದ್ದವಾಗೋ ದೊಡ್ಡ ಬಲೂನೆ ಇದೆ ನನ್ನತ್ರ... ಅದನ್ನ ದಪ್ಪವಾಗಿ ಊದಿ ಅದರ ಮೇಲೆ ಕಾಗದ ಅಂಟಿಸಿದ್ರೆ ಅದು ಗುಂಡಗೆ ಗಟ್ಟಿಯಾಗುತ್ತೆ.. ಅದರ ಮೇಲೆ ವೈಟ್ ಹಾಳೆ ಅಂಟಿಸೋಣ.. ಓಕೆನಾ.? |
| **ಎಲ್ಲಾ** | : | ಓಕೆ.. ಫೈನ್... |
| **ಮಂಜ** | : | ಬಿಳಿ ಭೂಮಿ ಅದರ ಮೇಲೆ ಪಾರಿವಾಳ.. ಅದರ ಬಾಯಿಯಲ್ಲಿ ಹಸಿರೆಲೆ... |
| **ಬೀನಾ** | : | ಪರಿಸರ ರಕ್ಷಣೆ ಮಾಡಿ ಅಂತ ಬರಿಯೋಣ.. |
| **ದೇವಾ** | : | ಮಕ್ಕಳ ಹಕ್ಕುಗಳ ರಕ್ಷಣೆ... ಇದು ಅವರ ಭೂಮಿ ಅಂತ ಬರಿಯೋಣ... |
| **ಜಾನ್** | : | ಎಲ್ಲರಿಗೂ ಶಿಕ್ಷಣ ಬೇಕು.. ಶಿಕ್ಷಣವೇ ಶಕ್ತಿ ಅಂತ ಬರಿಯೋಣ... |
| **ಸಲೀಂ** | : | ಎರಡು ಕೈಗಳನ್ನು ಬರೆದು ಒಗ್ಗಟಿನಲ್ಲಿ ಬಲವಿದೆ ಇದು ಸಖತ್ತಾಗಿರುತ್ತೆ... |

| | | |
|---|---|---|
| **ಮೇರಿ** | : | ಏನು ಬೇಡಾ ಸಿಂಪಲ್ಲಾಗಿ "we love our world" ಅಂತಾ ಬರಿಯೋಣ.. ಎಲ್ಲರಿಗೂ ಅರ್ಥ ಆಗುತ್ತೆ. |
| **ಪುಟ್ಟಿ** | : | ಬರೆಯೋದಾಮೇಲೆ ನೋಡೋಣ. ನೀವೆಲ್ಲ ಹೇಳಿರೋದನ್ನ ನೀವೇ ತಯಾರು ಮಾಡಿ.. ಭೂಮಿನಾ ನಾನು ರೆಡಿ ಮಾಡ್ತಿನಿ ಆಮೇಲೆ ಅದನ್ನೆಲ್ಲ ಸರಿಯಾದ ಜಾಗದಲ್ಲಿ ಅಂಟಿಸೋಣ.. |
| **ಎಲ್ಲರು** | : | ವಾವ್.. ಪುಟ್ಟಿ ಅಂದ್ರೆ ಪುಟ್ಟಿ.. ಓಕೆನಾ.. |

ಎಲ್ಲಾ ಮಕ್ಕಳು ಗೋಳ ತಯಾರಿಸುವ ಕ್ರಿಯೆಯಲ್ಲಿ ತೊಡಗುತ್ತಾರೆ, ಮಕ್ಕಳು ಯೋಚಿಸುವ, ಚಿಂತಿಸುವ, ಆಲೋಚಿಸುವ, ನಟನೆಗೆ ಪೂರಕವಾಗಿ ಅಭಿವೃದ್ಧಿ ವಿಚಾರಗಳ ಕರಪತ್ರ, ಅಂಕಿ ಅಂಶಗಳು, ಬ್ಯಾನರುಗಳು, ಪೋಸ್ಟರ್‌ಗಳು ರಂಗದ ಮೇಲೆ ಓಡಾಡುತ್ತವೆ, ಶಿಕ್ಷಣ, ಶಿಶುಮರಣ, ಬಡತನ, ಪರಿಸರ, ವಾತಾವರಣ, ಪ್ರಾಣಿ ರಕ್ಷಣೆ, ಶಾಂತಿ, ಆಧುನಿಕತೆ, ಜಾಗತೀಕರಣ, ಸಂಪನ್ಮೂಲಗಳು, ನದಿ, ಭಾಷೆ, ರಾಜ್ಯ, ರಾಷ್ಟ್ರೀಯ, ಸ್ಥಳೀಯ ಸಮಸ್ಯೆಗಳು...ಇವುಗಳ ಹಿಂದೆ ಮುಂದೆ ಮಕ್ಕಳು ಓಡಾಡುತ್ತಾರೆ. ನಮಗಿದು ಬೇಕಾ ಎಂದು ಚಿಂತಿಸುತ್ತಾರೆ, ಗೊಂದಲ ಅವರ ಮುಖದಲ್ಲಿ.. ಬರೆಯಲು, ಚಿತ್ರಿಸಲು ಸಿದ್ದರಾಗುತ್ತಾರೆ, ಸಮಸ್ಯೆಯೊಂದು ಕಾಣುತ್ತದೆ ವಿಚಾರ ಬದಲಾಗುತ್ತದೆ, ಪುಟ್ಟಿಗೆ ಯಾವುದೇ ಸಮಸ್ಯೆ ಇಲ್ಲಾ.. ಆಕೆ ಈಗಾಗಲೆ ಸಿದ್ಧವಾಗಿರುವ ದೊಡ್ಡ ಬಲೂನಿಗೆ ಬಿಳಿ ಕಾಗದವನ್ನು ಅಂಟಿಸುವ ಕಾರ್ಯದಲ್ಲಿ ಮಗ್ನಳಾಗಿದ್ದಾಳೆ, ಆರಂಭದಲ್ಲಿ ಯಾವುದಾದರೊಂದು ಲಯಬದ್ದ ತಾಳದೊಂದಿಗೆ ಪ್ರಾರಂಭವಾಗುವ ಶೃತಿ ಮಕ್ಕಳಲ್ಲಿ ಗೊಂದಲ ಹೆಚ್ಚಾದಂತೆ ಹಾಡಾಗಿ ಬದಲಾಗುತ್ತದೆ...,

**ಯಾವುದು ನಮ್ಮ ಗುರಿ**
**ಏನದು ನಮ್ಮ ಉದ್ದೇಶ**
**ಯಾವುದು ಏನು ಸಂಪತ್ತು ಸಿರಿ**
**ಹೇಗೆ ಅಭಿವೃದ್ಧಿ ಎಲ್ಲಿದೆ ನಮ್ಮ ದೇಶ?**
**ಯಾವುದು ಅಗತ್ಯ ಯಾವುದು ಮುಖ್ಯ**
**ನೂರು ಗುರಿ ನೂರಾರು ಮಾರ್ಗ**
**ತೊಲಗಲಿ ಬಡತನ ಆರೋಗ್ಯ ಪ್ರಾಮುಖ್ಯ**
**ಶಿಕ್ಷಣ ಸಮಾನತೆಯ ದೇಶವದು ಸ್ವರ್ಗ**
**ಗೊತ್ತಿಲ್ಲ ನಮಗೆ ಗುರಿ ಇಲ್ಲ**
**ನಾಯಕತ್ವದ ಗುಣವಿಲ್ಲ ಅಭಿಪ್ರಾಯಕ್ಕೆ ಬೆಲೆ ಇಲ್ಲಾ**
**ಸೇವೆಯ ಮರೆಯಲಿ ಮುಸುಕಿನ ಬದುಕು**
**ಇಲ್ಲದ ಮಾಹಿತಿ ಎಲ್ಲಿದೆ ಹಕ್ಕು**

(ತಮ್ಮ ಚಟುವಟಿಕೆಗಳ ಸಹಾಯಕ್ಕಾಗಿ ಮಕ್ಕಳು ರಂಗದ ಹೊರಬಂದು ಪ್ರೇಕ್ಷಕರನ್ನು ಸಹಾಯಕ್ಕಾಗಿ ಕೇಳಬಹುದು.. ಪ್ರೇಕ್ಷಕರ ಸಲಹೆ, ಸೂಚನೆ, ಶಿಫಾರಸ್ಸುಗಳನ್ನು ರಂಗದ ಮೇಲೆ ಪ್ರದರ್ಶಿಸಬಹುದು) ಹಾಡು ಮುಗಿದ ವೇಳೆಗೆ ಎಲ್ಲಾ ಮಕ್ಕಳು ಪೂರ್ಣವಾದ ಗಲಿಬಿಲಿಯಿಂದ ಕೂಡಿದ ತಮ್ಮ ಸೃಷ್ಟಿಗಳನ್ನು ಎತ್ತಿಕೊಂಡು ರಂಗದ ಮಧ್ಯಕ್ಕೆ ಬರುತ್ತಾರೆ. ರಂಗದ ಮಧ್ಯದಲ್ಲಿ ಪುಟ್ಟಿ ನಿರ್ಮಿಸಿರುವ ಶ್ವೇತವರ್ಣದ ಗ್ಲೋಬ್ ಸಿದ್ಧವಾಗಿದೆ.
ಗ್ಲೋಬ್ ಮಧ್ಯದಲ್ಲಿದೆ. ಮಕ್ಕಳು ಅರ್ಧಚಂದ್ರಾಕಾರವಾಗಿ ನಿಂತ್ತಿದ್ದಾರೆ. ಪುಟ್ಟಿಯ ಮುಖದಲ್ಲಿ ಮಾತ್ರ ನಗುವಿದೆ,.,

| | | |
|---|---|---|
| **ಪುಟ್ಟಿ** | : | ನನ್ನ ಕೆಲಸ ಮುಗೀತು.. ನೀವೆಲ್ಲಾ ರೆಡಿನಾ.. |
| **ಮಂಜ** | : | ಏನು ರೆಡಿ? ಪುಟ್ಟಿ ಸಾವಿರ ಸಮಸ್ಯೆ ಇದೆ, ಯಾವುದನ್ನ ಬರಿಬೇಕು.. ಬರೀಬಾರದು ಅಂತ ತಿಳಿತಿಲ್ಲ.. |
| **ಬೀನಾ** | : | ಬಡತನದ ಬಗ್ಗೆ ಬರಿಯೋಣ ಅಂದ್ರೆ... ಅರಣ್ಯ ಸಂಪತ್ತು ಮುಖ್ಯ ಅಲ್ವಾ ಅನ್ನಿಸುತ್ತೆ. |
| **ದೇವಾ** | : | ನನಗೂ ಹಾಗೇಯಾಯ್ತು.. ಶಿಕ್ಷಣದ ಬಗ್ಗೆ ಬರೆಯೋಣ ಅಂದ್ರೆ ಅಂಗವಿಕಲ ಮಕ್ಕಳ ಸಮಸ್ಯೆಗಳನ್ನು ಬರೀಬೇಕು ಅಂತ ಅನ್ನಿಸುತ್ತೆ... |
| **ಮೇರಿ** | : | ಒಗ್ಗಟಿನಿಂದ ಶಾಂತಿ ಬರುತ್ತೆ ಶಾಂತಿಗಾಗಿ ಒಗ್ಗಟು ಅಂತ ಬರೆದ್ವಿ ಅಂದ್ರೆ ಬಡತನ, ಹಸಿವು ಇದ್ರೆ ಒಗ್ಗಟ್ಟು ಸಾಧ್ಯಾನಾ ಅಂತ ಪ್ರಶ್ನೆಯಾಯ್ತು ಕಣೆ.. |
| **ಗೀತಾ:** | : | ಹಕ್ಕುಗಳ ಬಗ್ಗೆ ಬರಿಬೇಕೋ.. ಸೇವೆಗಳ ಬಗ್ಗೆ ಬರಿಬೇಕೋ.. ಅಂತ ಗೊಂದಲ ಆಯ್ತು.. ಏನೂ ಬರಿಲಿಲ್ಲಾ. |

| | | |
|---|---|---|
| **ಸಲೀಂ** | : | ಮನುಷ್ಯರ ಬಗ್ಗೆ ಬರಿಯೋದಾ.. ಪ್ರಾಣಿಗಳ ಬಗ್ಗೆ ಬರಿಯೋದಾ.. ದೊಡ್ಡವರ ಬಗ್ಗೆನಾ.. ಗೊತ್ತಾಗುತ್ತಿಲ್ಲಾ. |
| **ಪುಟ್ಟಿ** | : | ಅರೆ... ನಾವೆಲ್ಲಾ ಆಗಲೇ ನಿರ್ಧಾರ ಮಾಡಿದ್ವಲ್ಲಾ ನೀವು ಕೇಳಿದ್ದರ ಬಗ್ಗೆ ಬರೀರಿ ಅಂತ.. ಸರಿಯಾದ ಗುರಿನೇ ಇಲ್ಲಾ ನಿಮಗೆ.. |
| **ಗೀತಾ** | : | ಹೌದು ಕಣೆ ನಮಗೆ ಗುರಿ ಇಲ್ಲಾ.. ಗೊತ್ತಿಲ್ಲಾ.. ಭೂಮಿಗೆ ಏನಾಗಬೇಕು... ಪ್ರಪಂಚ ಹೇಗಿರಬೇಕು ಅನ್ನೊ ಗುರಿ ಯಾರಿಗಾದ್ರು ಇದ್ಯಾ. |
| **ಮಂಜ** | : | ಎಲ್ಲಾ ದೇಶಗಳಿಗೂ ಏನೇನೋ ಗುರಿ ಇರುತ್ತೆ. ಅವು ನಮಗೆ ಹೇಗೆ ಗೊತ್ತು. ಈಗ ನಮ್ಮ ಗುರಿ ಗ್ಲೋಬ್ ಮಾಡೋದು . |
| **ಮೇರಿ** | : | ನೋಡ್ರೋ.. ಈಗ ಪುಟ್ಟಿ ಬಿಳಿ ಗ್ಲೋಬ್ ಮಾಡಿದ್ದಾಳೆ, ಶಾಂತಿ ಸಂಕೇತ ಅದು.. ಅದರ ಮೇಲೆ ಎರಡು ಪಾರಿವಾಳ ಹಸಿರು ಎಲೆ ಕಚ್ಚಿಕೊಂಡಿರೋದು ಮಾಡೋಣ ಅದು ಸಾಕು. |
| **ಬೀನಾ** | : | ಒಳ್ಳೆ ಐಡಿಯಾ ನಮಗೆ ಟೈಮ ಇಲ್ಲಾ. |
| **ದೇವಾ** | : | ಸರಿ ಗುರಿ ಏನು? ಸಮಸ್ಯೆ ಏನು? ಅಂತ ಯೋಚನೆ ಮಾಡೋದು ಬೇಡ..<br>ಈಗ ಹೇಗೂ ಗ್ಲೋಬ್ ಚನ್ನಾಗಿದೆ. |
| **ಪುಟ್ಟಿ** | : | ಸರಿ ಸರಿ... ಎರಡು ಪಾರಿವಾಳದ ಬೊಂಬೆ ತನ್ನಿ ಹಸಿರು ಕಾಗದದಲ್ಲಿ ಎಲೆ ಕಟ್ ಮಾಡಿ ಕೊಕ್ಕಿಗೆ ಅಂಟಿಸೋಣ. |
| **(ಟೀಚರ್ ಪ್ರವೇಶ, ಪುಟ್ಟಿಯ ಗ್ಲೋಬ್ ನೋಡಿ)** | | |
| **ಟೀಚರ್:** | : | good..good ಬಿಳಿ ಗ್ಲೋಬ್ ರೆಡಿ.. ಆದ್ರೆ ಏನೋ ಕೊರತೆ ಇದೆ |
| **ಪುಟ್ಟಿ** | : | ನಾವು ಏನೇನೋ ಯೋಚನೆ ಮಾಡಿದ್ವಿ ಮೇಡಂ.. ಕಲ್ಪನೆಗಳ ಸಾಗರವೇ ಹರೀತು..ಆದ್ರೆ ಅದಕ್ಕೆ ಒಂದು ಸರಿಯಾದ ರೂಪ ಆಕೃತಿ ಕೊಡೋದಕ್ಕೆ ಆಗಲಿಲ್ಲ.. ಕೊನೆಗೆ ಬಿಳಿ ಉಂಡೆ ಸಿದ್ಧ ಆಗಿದೆ. |
| **ಸಲೀಂ** | : | ಇದರ ಮೇಲೆ ಹಸಿರು ಎಲೆ ಕಚ್ಚಿಕೊಂಡಿರೋ ಎರಡು ಪಾರಿವಾಳ ಅಂಟುಸ್ತಿವಿ... |
| **ಮಂಜ** | : | ವಿಶ್ವ ಶಾಂತಿ ಭೂಮಿ ಉಳಿಸಿ ಅನ್ನೋ ಸಂದೇಶ.. |
| **ಟೀಚರ್** | : | ಓಕೆ..ಓಕೆ... ಸಿದ್ಧ ಮಾಡಿ ಬೇಗ.. ರಾತ್ರಿನೇ ಬೆಂಗಳೂರಿಗೆ ಹೊರಡಬೇಕು.. ನಾಳೆ ಬೆಳಿಗ್ಗೆನೆ Exhibition ಇರೋದು.. H M ಈಗಾಗಲೇ ಬೆಂಗಳೂರಿಗೆ ಹೋಗಿದ್ದಾರೆ.. ನಾವೆಲ್ಲಾ ಹೊರಡೋಣಾ ನಿಮ್ಮ ಹತ್ರ ನಾನಾಗಲೇ ಕೊಟ್ಟಿರೋ ಪೋಷಕರ ಅನುಮತಿ ಪತ್ರಕ್ಕೆ ಸೈನ್ ಮಾಡಿಸಿ ತನ್ನಿ ಮರೀಬೇಡಿ.. ಈ ಮಕ್ಕಳ ಹಕ್ಕುಗಳ ನಿಗಾ ಕೇಂದ್ರದವರು ಭಾಳ ಸ್ಟ್ರಿಕ್ಟ್, ಅದೇ ಚೈಲ್ಡ್ ಪ್ರೊಟೆಕ್ಷನ್ ಪಾಲಿಸಿಗೆ ಒಪ್ಪದಿರುವವರು ಮತ್ತು ಪೋಷಕರ ಅನುಮತಿ ಪತ್ರ ಇಲ್ಲದಿದ್ರೆ ನಮ್ಮನ್ನ ಸೇರಿಸೋದಿಲ್ಲಂತೆ. |
| **ಎಲ್ಲರೂ** | : | ಓಕೆ ಟೀಚರ್.. |
| **ಟೀಚರ್** | : | ಈ ಗ್ಲೋಬ್‌ನ ಸರಿಯಾಗಿ ಪ್ಯಾಕ್ ಮಾಡಿ ಬಸ್ಸಿನಲ್ಲಿ ಇದಕ್ಕೆ ಡ್ಯಾಮೇಜ್ ಆಗಬಾರದು, ಎಲ್ಲಾರು ಸ್ಕೂಲ್ ಯುನಿಫಾರಂ ಹಾಕ್ಕೊಂಡು ಬರೋದು ಮರೀಬೇಡಿ.. ನೀರಿನ ಬಾಟಲಿ ಜೊತೆಗೆ ತನ್ನಿ.. ಬೆಲೆಬಾಳೊ ವಸ್ತುಗಳನ್ನ ತರಬೇಡಿ.., ನನ್ನ ಮೊಬೈಲ್ ನಂಬರನ್ನು ನಿಮ್ಮ ಅಪ್ಪ ಅಮ್ಮನಿಗೆ ಕೊಡಿ. ಅವಶ್ಯಕತೆ ಬಿದ್ರೆ ಫೋನ್ ಮಾಡಲಿ.. ನಿಮಗೇನಾದ್ರು ತೊಂದರೆ ಆದರೆ ಎಲ್ಲಿಗೆ ಫೋನ್ ಮಾಡ್ತಿರಿ? |
| **ಎಲ್ಲರು** | : | 1098 ಚೈಲ್ಡ್ ಲೈನ್.. .. |
| **ಟೀಚರ್** | : | good.. good ಎಲ್ಲಾ ಹೊರಡಿ ರಾತ್ರಿ ಎಲ್ಲಾ ಬಸ್‌ಸ್ಟ್ಯಾಂಡ್ ಹತ್ರ ಸಿಗೋಣ.. |
| **(ಎಲ್ಲಾ ಮಕ್ಕಳು ಗ್ಲೋಬ್ ತೆಗೆದುಕೊಂಡು ಹೊರಡುತ್ತಾರೆ... ಹಿನ್ನೆಲೆಯಲ್ಲಿ ಹಾಡು)** | | |

ಪುಟ್ಟ ಕಣ್ಣುಗಳ ದೊಡ್ಡ ಕನಸು
ಮಿತಿ ಮೀರಿದ ಆಸೆ ಶಾಂತಿಯ ಬಯಕೆ
ಗುರಿಸಿರಿಯ ನಡುವಿನ ಪುಟ್ಟ ಮನಸು
ಶ್ವೇತ ಶಾಂತಿಯ ಸಂದೇಶ
ಪ್ರೀತಿ ಮಮತೆಯ ಆದೇಶ
ಜನನ ಮರಣಗಳ ಅಂಕಿಅಂಶ
ಸಂವೃದ್ಧಿಯಾಗಲಿ ಪ್ರಾಣಿ ಸಂಕುಲ ಸಸ್ಯ ವಂಶ
ನೀಗಲಿ ಬಡತನ ಮರೆಯಾಗಲಿ ಕಾಯಿಲೆ
ಕಾಣದಿರಲಿ ಹಸಿವು ಚಿಗುರಲಿ ಹಬ್ಬಲಿ ಹಸಿರೆಲೆ
ತಾರತಮ್ಯವ ತುಳಿಯಲಿ ಸಮಾನತೆ
ತುಂಬಲಿ ಹರಡಲಿ ಶಾಂತಿ ಸಹಿಷ್ಣತೆ...

| | | |
|---|---|---|
| ("ರಾಜ್ಯ ಮಟ್ಟದ ಮಕ್ಕಳ ವಸ್ತು ಪ್ರದರ್ಶನ – ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ" ಎಂಬ ಬ್ಯಾನರ್ ರಂಗದ ಮೇಲೆ ಇದೆ. ಹಲವು ಸ್ವಯಂ ಸೇವಾ ಸೇವಕರು ವಸ್ತುಪ್ರದರ್ಶನಕ್ಕೆ ಸಿದ್ಧಪಡಿಸುತ್ತಿದ್ದಾರೆ. ಮಕ್ಕಳ ಕುರಿತಾದ ಬ್ಯಾನರ್ Standy, ಬೋರ್ಡ್, ChildLine 1098 ಮಾಹಿತಿ ಕಿಯೋಸ್ಕೊ, ಬಲೂನುಗಳು, backdrop ಎಲ್ಲವೂ ಇದೆ. ಮಧ್ಯದಲ್ಲೊಂದು Table.. KCRO ರಾಜ್ಯ ಸಂಚಾಲಕರ ಆಗಮನ) | | |
| **ರಾಜ್ಯಸಂಚಾಲಕರು** | : | ಎಲ್ಲಾ ಸಿದ್ಧರೇನ್ರಪಾ UNICEFನೋರು ಸರಿಯಾಗಿ 10:30ಕ್ಕೆ ಬಂದುಬಿಡ್ತಾರೆ ಹೊರಗಡೆ gateಗೆ ಬ್ಯಾನರ್ ಕಟ್ಟಾಗಿದ್ಯಾ? ಎಲ್ಲಿ ಈ ಮಕ್ಕಳು ರೂರಲ್ ಸ್ಕೂಲ್ ಮಕ್ಕಳಿಗಾಗಿ ಈ ಮಧ್ಯದ Table ಕೊಟ್ಟಿದ್ದೆವಲ್ಲ ಅವರು ಬಂದಿದ್ದಾರಾ? |
| **ಸ್ವಯಂಸೇವಕರು** | : | ಮಕ್ಕಳು ಬಂದಿದ್ದಾರೆ ಸರ್.. ಸ್ನಾನಾ ಮಾಡಿ ಈಗ ತಿಂಡಿ ತಿಂತಾ ಇದಾರೆ. |
| **ರಾಜ್ಯಸಂಚಾಲಕರು** | : | ಸರಿ. Good. ಅವರ ಗ್ಲೋಬ್‌ನಾ ಈ Table ಮೇಲೆ ಇಡಿ. ಮಕ್ಕಳು ಬಿಟ್ಟು ಬೇರೆಯವರು ಯಾರು ಮಾತಾಡದ ಹಾಗೇ ನೋಡ್ಕೊಳ್ಳಿ. ಈಗ ಬರ್‍ತಿರೋರು UNICEF ಪ್ರತಿನಿಧಿಗಳು.. ಬಹಳಾ ದೊಡ್ಡ Officers.. ನ್ಯೂಯಾರ್ಕ್‌ನಲ್ಲಿ ಕೆಲಸಾ ಮಾಡ್ತಾ ಇರೋ South Asia ಪ್ರತಿನಿಧಿ.. ಏನೂ ಗೊಂದಲ ಆಗಬಾರದು. |
| **ಸ್ವಯಂ ಸೇವಕರು** | : | ಆಯ್ತು ಸಾರ್.. |
| **ರಾಜ್ಯಸಂಚಾಲಕರು** | : | ಮಕ್ಕಳಿಗೆಲ್ಲಾ ಟೋಪಿ, ಟಿ ಶರ್ಟ್ ಕೊಡಿ ಅವರುಗಳು ತಂದಿರೋ ಮಾಡಿರೋ ವಸ್ತುಗಳಿಗೆ ಕಲರ್, ಗಮ್ KG Card board ಏನಾದ್ರು ಬೇಕಾದ್ರೆ ಕೊಡಿ.. ಮಧ್ಯ ಇಡೋ ಗ್ಲೋಬ್ ಮೇಲೆ ಈಗಾಗಲೇ plan ಮಾಡಿರೋ ಪ್ರಕಾರ ಬಿಳಿ ಬಟ್ಟೆ ಹಾಕಿ ಅದನ್ನ ತೆಗೆದು ಕಾರ್ಯಕ್ರಮ ಉದ್ಘಾಟನೆ ಮಾಡ್ತಾರೆ.. ಮಾಧ್ಯಮದವರು ಎಲ್ಲಾ ಬಂದು ಬಿಡ್ತಾರೆ.. ಮಕ್ಕಳಿಗೆ ಬೇಗ ರೆಡಿ ಆಗೋಕೆ ಹೇಳಿ.., ನಾನು PPT ರೆಡಿ ಮಾಡಿ ತರ್‍ತೀನಿ.. |
| **ಸ್ವಯಂ ಸೇವಕರು** | : | ಆಯ್ತು ಸಾರ್.. |
| **(ರಂಗದ ಮತ್ತೊಂದು ಭಾಗ.. .. ಪುಟ್ಟಿ, ಬೀನಾ, ದೇವಾ, ಬಾನು, ಗೀತಾ, ಸಲೀಂ, ಮೇರಿ, ಪುಟ್ಟಿ ತಲೆ ಮೇಲೆ ಕೈಹೊತ್ತು ಕುಳಿತಿದ್ದಾರೆ...)** | | |
| **ಪುಟ್ಟಿ** | : | ನಾವು.. ನಾವು, ಗ್ಲೋಬ್‌ನಾ ನಮ್ಮತ್ರಾನೇ ಇಟ್ಕೊಬೇಕಿತ್ತು.. ಕ್ಲೀನರ್ ಅಂಕಲ್‌ಗೆ ಕೊಡಬಾರದಿತ್ತು, |
| **ಬೀನಾ** | : | ಎಲ್ಲಾದನ್ನು ಹರಿದು ಪಾರಿವಾಳಾನಾ ಕಿತ್ತು ಪ್ಲಾಸ್ಟಿಕ್ ಬ್ಯಾಗಿನಲ್ಲಿ ಹಾಕಿಕೊಟ್ಟಿದ್ದಾರೆ. |
| **ಮಂಜ** | : | ಸ್ಕೂಲ್ ಮಾನ, ನಮ್ಮ ಮರ್ಯಾದೆ.. ನಮ್ಮ ಹಳ್ಳಿ ಹೆಸರು ಎಲ್ಲಾ ಹಾಳಾಗುತ್ತೆ.. ಪೇಪರ್‌ನಲ್ಲಿ ಬರುತ್ತಂತೆ. |
| **ದೇವ** | : | ಬಸ್‌ನಲ್ಲಿ ತರಬೋದು ಏನು ಆಗಲ್ಲ... ನಿಮ್ಮ ಪ್ರಪಂಚಕ್ಕೆ ನಾವು ರಕ್ಷಣೆ ಕೊಡ್ತೀವಿ ಅಂತ ಸುಳ್ಳು ಹೇಳಿದಾ.. |
| **ಗೀತಾ** | : | Teacher.. HM ಈಗ ಬರ್‍ತಾರೆ.. ನಾವು ಗ್ಲೋಬ್ ತಂದಿಲ್ಲಾ ಅಂದ್ರೆ ರಾಜ್ಯಮಟ್ಟದ ಈ ಕಾರ್ಯಕ್ರಮಕ್ಕೂ ತೊಂದರೆ ಅಂತೆ.. ನಮ್ಮ ಗ್ಲೋಬ್ ಮೂಲಕಾನೇ ಕಾರ್ಯಕ್ರಮ ಉದ್ಘಾಟನೆ ಅಂತೆ.. |

| | | |
|---|---|---|
| **ಮೇರಿ** | : | ನಂಗಂತೂ ಅಳೂನೇ ಬರ್ತಾ ಇದೆ. |
| **ಸಲೀಂ** | : | ಮುಂದೇನು ಮಾಡೋಣಾ.. ಇನ್ನು 1/2 ಗಂಟೇಲಿ ಕಾರ್ಯಕ್ರಮವಂತೆ |
| **(ಎಲ್ಲಾ ಯೋಚಿಸಲು ಮುಂದಾಗುತ್ತಾರೆ.....)** | | |
| **ಪುಟ್ಟಿ** | : | ಮಂಜು.. ಸಲೀಂ.. ಬನ್ನಿ ಇಲ್ಲಿ ನಿಗಾ ಕೇಂದ್ರದವರು ಕಲರ್ ಪೇಪರ್, ಕತ್ತರಿ.. ಗಮ್ ಕೊಡ್ತಾರೆ ತನ್ನಿ.. |
| **ಮಂಜು–ಸಲೀಂ** | : | ಯಾಕೇ...? |
| **ಪುಟ್ಟಿ** | : | ತನ್ರೋ Time ಇಲ್ಲಾ.. ಈ ತುಂಡುಗಳನ್ನೆಲ್ಲಾ ಬೇಗ ಜೋಡಿಸಿ ಗ್ಲೋಬ್ ಮಾಡೋಣ... ಎಲ್ಲಾ ಪೀಸ್‌ಗಳಿಗೂ ಬೇರೆ ಬೇರೆ ಬಣ್ಣ ಅಂಟಿಸೋಣಾ.. ಯಾರಾದ್ರು ಕೇಳಿದ್ರೇ ವಿವಿಧತೆಯಲ್ಲಿ ಏಕತೆ ಅಂತ ಹೇಳೊನಾ.. ಅನುಮಾನ ಬಂದು ಜಾಸ್ತಿ ಪ್ರಶ್ನೆ ಕೇಳಿದ್ರೆ ನಿಜ ಹೇಳೋಣಾ... |
| **ಎಲ್ಲಾ** | : | ಸರಿ.. ಸರಿ.. ಬೇಗ ಮಾಡೋಣ... ಸಲೀಂ–ಮಂಜು ಕಲರ್ ಪೇಪರ್, ಕತ್ತರಿ, ಗಮ್ ತನ್ನಿ... |
| (ಮಂಜು ಸಲೀಂ ಹೊರಹೋಗುತ್ತಾರೆ.... ಕತ್ತಲೆ...)<br>(ರಂಗದ ಮೇಲೆ ವಸ್ತು ಪ್ರದರ್ಶನ ಸಿದ್ಧವಾಗಿದೆ. ರಂಗದ ಮಧ್ಯದಲ್ಲಿ Table ಮೇಲೆ ಬಿಳಿ ಬಟ್ಟೆ ಹೊದೆಸಿದ ಗ್ಲೋಬ್ ಇದೆ ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ Anthen. ಅದು "ಮಕ್ಕಳು ನಮ್ಮಯ ಭಾಗ್ಯ" ಹಾಡು... ಪುಟ್ಟಿ ಮತ್ತು ಗೆಳೆಯರು ಭಯಭೀತರಾಗಿ ಮೂಲೆಯಲ್ಲಿ ನಿಂತಿದ್ದಾರೆ. ಹಾಡು ಮುಗಿಯುತ್ತಿದ್ದಂತೆ ರಾಜ್ಯ ಸಂಚಾಲಕರು ಪ್ರಾಸ್ತಾವಿಕ ಭಾಷಣ ) | | |
| **ರಾಜ್ಯಸಂಚಾಲಕರು** | : | ಇಂದಿನ ಮಕ್ಕಳೇ ಇಂದಿನ ಪ್ರಜೆಗಳು.. ಈ ವಾಕ್ಯ ಘೋಷಣೆಯ ಆಶಯದ ಹಿನ್ನೆಲೆಯಲ್ಲಿ ಮಕ್ಕಳ ಹಕ್ಕುಗಳ ನಿಗಾ ಕೇಂದ್ರವು ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳನ್ನು ಹೊರ ಹಾಕಲು ಈ ಮಕ್ಕಳ ಹಕ್ಕುಗಳ ವಸ್ತು ಪ್ರದರ್ಶನವನ್ನು ಏರ್ಪಡಿಸಿದೆ. ಮಕ್ಕಳೇ ತಯಾರು ಮಾಡಿರುವ ಮಕ್ಕಳ ಸಮಸ್ಯೆ, ಮಕ್ಕಳ ರಕ್ಷಣೆ, ಅಭಿವೃದ್ಧಿ, ಭಾಗವಹಿಸುವ ಹಕ್ಕುಗಳ ಬಗ್ಗೆ ಸಂದೇಶ ಸಾರುವ ವಸ್ತುಗಳನ್ನು ಮಕ್ಕಳೇ ನಿರ್ಮಿಸಿ ಈ ವಸ್ತುಗಳನ್ನು ರಾಜ್ಯಮಟ್ಟದ ಈ ವಸ್ತುಪ್ರದರ್ಶನಕ್ಕೆ ತಂದಿದ್ದಾರೆ. ಗ್ರಾಮೀಣ ಮಕ್ಕಳ ಸೃಷ್ಟಿಯಿಂದ ಈ ಕಾರ್ಯಕ್ರಮ ಪ್ರಾರಂಭವಾಗಲಿದೆ. ಈ ಕಾರ್ಯಕ್ರಮಕ್ಕೆ UNICEFನ ದಕ್ಷಿಣ ಏಷಿಯಾ ಪ್ರತಿನಿಧಿ ಆಗಮಿಸಿದ್ದಾರೆ. ಅವರು ವಸ್ತು ಪ್ರದರ್ಶನದ ಮುಖ್ಯ ಆಕರ್ಷಣೆಯಾದ ಗ್ಲೋಬ್ ಅನ್ನು ಅನ್ವೇಲ್ ಮಾಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಬೇಕೆಂದು ವಿನಂತಿಸುತ್ತೇನೆ. |
| (UNICEF ಪ್ರತಿನಿಧಿ ಗ್ಲೋಬ್ ಬಳಿ ಬರುತ್ತಿದ್ದಂತೆ ಪುಟ್ಟಿ ಮತ್ತು ಗೆಳೆಯರು ಕಣ್ಣು ಮುಚ್ಚಿಕೊಳ್ಳುತ್ತಾರೆ, ದೇವರನ್ನು ಪ್ರಾರ್ಥಿಸಲು ತೊಡಗುತ್ತಾರೆ.. ಅವರ ಟೀಚರ್ ಉತ್ಸಾಹದಿಂದ ನಿಂತಿದ್ದಾರೆ.. ಅವರಿಗೆ ಈಗ ಆಗಿರುವ ಬದಲಾವಣೆ ತಿಳಿದಿಲ್ಲಾ... ಎಲ್ಲರ ಚಪ್ಪಾಳೆ.. ಮಾಧ್ಯಮಗಳ photo sound ನೊಂದಿಗೆ UNICEF ಪ್ರತಿನಿಧಿ ಗ್ಲೋಬ್ ಮೇಲಿದ್ದ ಬಿಳಿಯ ಬಟ್ಟೆಯನ್ನು ಸರಿಸುತ್ತಾರೆ. ಹಲವು ಬಣ್ಣಗಳ ಕಾಗದದಿಂದ patch work ಮಾಡಿರುವ ಗ್ಲೋಬ್ ಕಂಡು ಎಲ್ಲರೂ ನಿಶಬ್ದ... UNICEF ಪ್ರತಿನಿಧಿಗಳ ಮುಖ ಗಂಭೀರವಾಗುತ್ತದೆ. ಮಾತನಾಡಲು ಪ್ರಯತ್ನಪಡುವ ಸಂಚಾಲಕರನ್ನು Shsss... ಎಂದು ಸುಮ್ಮನಾಗಿಸುತ್ತಾರೆ. ಹಲವು ತುಂಡುಗಳಿರುವ ವಿವಿಧ ಬಣ್ಣಗಳ ಗ್ಲೋಬ್ ಬಳಿ ಬಂದು ಗ್ಲೋಬ್‌ನ್ನು ಜೋಡಿಸಿರುವ ತುಂಡುಗಳನ್ನು ಎಣಿಸುತ್ತಾರೆ 1 To 17 KG Card board ನಲ್ಲಿ '8' ಮುಂದೆ ಗ್ಲೋಬ್... 17 ಸಂಖ್ಯೆ .. 8 ಸಂಖ್ಯೆಯನ್ನು ಕಂಡ UNICEF ಪ್ರತಿನಿಧಿ ಮುಖದಲ್ಲಿ ಮಂದಹಾಸ ಮೂಡುತ್ತದೆ.... ಎಲ್ಲರಿಗೂ ಆನಂದ... UNICEF ಪ್ರತಿನಿಧಿ wow!!! (ಚಪ್ಪಾಳೆ ತಟ್ಟಲು ಪ್ರಾರಂಭಿಸುತ್ತಾರೆ) where are the children who made this ..? (ರಾಜ್ಯಸಂಚಾಲಕರು ಪುಟ್ಟಿ ಮತ್ತು ಗೆಳೆಯರನ್ನು ತೋರಿಸುತ್ತಾರೆ.. ಮಕ್ಕಳೆ ಮುಂದೆ ಬನ್ನಿ... These children made this… | | |
| **ಟೀಚರ್** | : | ಅಯ್ಯೋ.. ಇಲ್ಲ.. ನಮ್ಮ ಮಕ್ಕಳು ಮಾಡಿದ್ದು ಇದಲ್ಲಾ .,.,., |
| **ಯುನಿಸೆಫ್ ಪ್ರತಿನಿಧಿ** | : | please …don't talk, ok children… congratulations.. you have done a fantastic job…what an imagination…8 MDGs….17 SDGs…from 17 SDG goals you have made the globe – earth. what a concept….. what a thought…. Give them a big applause. After this program please send this globe to unicef head office in Hydrabad. We will keep this in our show case.. great work kids.. am so happy. ಮಕ್ಕಳ ಜೊತೆ ಫೋಟೋ ತೆಗೆಸಿಕೊಂಡು.... ಮಕ್ಕಳ ಬೆನ್ನು ತಟ್ಟಿ ಬೇರೆ ವಸ್ತುಗಳನ್ನು ಗಮನಿಸುತ್ತಾ ರಂಗದ ಹೊರಗೆ ಹೋಗುತ್ತಾರೆ.....(ಪುಟ್ಟಿ ಮತ್ತು ಗೆಳೆಯರು ಗ್ಲೋಬನ್ನು ನಿಧಾನವಾಗಿ ಆಶ್ಚರ್ಯದಿಂದ ನೋಡುತ್ತಾ ಬರುತ್ತಾರೆ.... ಬಣ್ಣ ಬಣ್ಣದ ಗ್ಲೋಬ್ ಮೇಲೆ ಬೆಳಕು ಹೆಚ್ಚಾದಂತೆ.. ಹಾಡು.... Teacher ಕೂಡ ಮಕ್ಕಳನ್ನು ಸೇರಿಕೊಳ್ಳುತ್ತಾರೆ...... |

ಏನು ಮಾಡಿದೆವು ನಾವು

ಏನು ಕಟ್ಟಿದೆವು ನಾವು

ಏನು ಕಂಡರು ಅವರು

ಏನು ಅರ್ಥೈಸಿದರು ಇವರು

ರವಿ ಕಾಣದನ್ನು ಕವಿ ಕಂಡ

ಕವಿ ಕಾಣದನ್ನು ವಿಮರ್ಶಕ ಕಂಡ

ತಪ್ಪು ಮುಚ್ಚುವ ನಮ್ಮ ಕೆಲಸದಲ್ಲವ ಏನು ಕಂಡ?

ಸರಿ ಇತ್ತೇ? ನಮ್ಮ ಪುಟ್ಟ ಬ್ರಹ್ಮಾಂಡ?

| | | |
|---|---|---|
| (ಹಾಡು ಮುಗಿಯುವ ವೇಳೆಗೆ KCRO ಸ್ವಯಂಸೇವಕರು, ರಾಜ್ಯ ಸಂಚಾಲಕರು ರಂಗವನ್ನು ಪ್ರವೇಶಿಸುತ್ತಾರೆ ಎಲ್ಲರೂ ಮಕ್ಕಳನ್ನು ಕಂಡು ಮಕ್ಕಳಿಗೆ ಚಪ್ಪಾಳೆ ತಟ್ಟುತ್ತಾರೆ ..... | | |
| **KCRO ಸ್ವಯಂಸೇವಕ 1** | : | great ಮಕ್ಕಳೇ well done…… |
| **KCRO ಸ್ವಯಂಸೇವಕ 2** | : | ಅದ್ಭುತ ಏನು ಯೋಚನೆ .... ನಮಗೆ ಹೊಳದೇ ಇರಲಿಲ್ಲ! |
| **KCRO ಸ್ವಯಂಸೇವಕ 3** | : | ಮಕ್ಕಳೇ ನಿಮಗೆ SDG ಗುರಿಗಳನ್ನು ಇಟ್ಟುಕೊಂಡು ಭೂಮಿ ಗ್ಲೋಬ್ ಮಾಡಬೇಕು ಅಂತ ಹೇಗೆ ಹೊಳೀತು? ಅದನ್ನ ಅರ್ಥ ಮಾಡಿಕೊಂಡಿದ್ದೀರ? |
| **ಶಿಕ್ಷಕಿ** | : | ಅಯ್ಯೋ ..... ಇವರೇನೂ ಮಾಡಿಲ್ಲ..... ಹಳ್ಳಿ ಮಕ್ಕಳು.. |
| **ಪುಟ್ಟಿ** | : | (ಮುಂದೆ ಬಂದು) ಸಾರ್.... ನಿಮಗೆಲ್ಲಾ ನಾವು ನಿಜ ಹೇಳ್ತೀವಿ .... |
| **ಮಂಜ** | : | ನಾವು ವಿಶ್ವ ಶಾಂತಿ ಸಂದೇಶ ಅಂತ ಬಿಳಿ ಬಣ್ಣದ ಗ್ಲೋಬ್ ಮಾಡಿದ್ವಿ ..... |
| **ಸಲೀಂ** | : | ಗ್ಲೋಬ್ ಮೇಲೆ ಎರಡು ಪಾರಿವಾಳನ ಅಂಟಿಸಿ ಅದರ ಮೇಲೆಲ್ಲ ಹಸಿರು ಎಲೆ ಸಿಕ್ಕಿಸಿದ್ವಿ.... |
| **ದಿವ್ಯ** | : | ಆದ್ರೆ.. Busನಲ್ಲಿ ಬರೋವಾಗ ಒಡೆದು ಹರಿದು ಹೋಯಿತು .... |
| **ಗೀತಾ** | : | ಹರಿದು ತುಂಡಾಗಿದ್ದಂತಹ ಗ್ಲೋಬನ್ನು ವಸ್ತು ಪ್ರದರ್ಶನಕ್ಕೆ ಇಡೋದು ಬೇಡ ಅಂತ ನಿರ್ಧಾರ ಮಾಡಿದ್ವಿ. |
| **ಮೇರಿ** | : | ಆದ್ರೆ Time ಆಗಿ ಹೋಗಿತ್ತು ನಾವು ಇಲ್ಲಿ ಇಡಲೇಬೇಕಾಗಿತ್ತು. |
| **ಬೀನಾ** | : | ನಮ್ಮ ಹಳ್ಳಿ..... ನಮ್ಮ ಶಾಲೆ..... ನಮ್ಮ Teacher ..HM.. ಗಳಿಗೆ ಅವಮಾನ ಆಗಬಾರದು ಅಂತ... ಅಂತ ಇದನ್ನ ಮಾಡಿದ್ವಿ. |
| **ಪುಟ್ಟಿ** | : | ಹೌದು ಏನೂ ಮಾಡೋಕೆ ತಿಳಿದೇ ಬಣ್ಣ ಬಣ್ಣದ ಕಾಗದ ಕತ್ತರಿಸಿ ವೈವಿಧ್ಯತೆಯಲ್ಲಿ ಏಕತೆ ಅನ್ನೂದನ್ನ ಹೇಳಬಹುದು ಅಂತ ಗಮ್ ಕಾಗದ ಅಂಟಿಸಿದ್ವಿ ಮೊದಲೇ 17 ತುಂಡಾಗಿತ್ತು ಎಲ್ಲಾ ತುಂಡಿಗೂ ಬಣ್ಣದ ಕಾಗದ ಅಂಟಿಸಿ .... ರೌಂಡು ಮಾಡಿ ಬಟ್ಟೆ ಮುಚ್ಚಿ.. ಇಲ್ಲಿ ಇನ್ನು ನಾವು 8 ಜನ ಇದ್ದಿದ್ದರಿಂದ 8 ಅಂತಾನೂ ಬರೆದ್ವಿ...UNICEF ಪ್ರತಿನಿಧಿಗಳು ಹೇಳಿದ ಹಾಗೆ MDG…SDG…. ಅಂದ್ರೆ ಗೊತ್ತಿಲ್ಲ. |
| **ರಾಜ್ಯ ಸಂಚಾಲಕರು:** | : | ಅಂದ್ರೆ ನೀವು ಏನೂ ಯೋಚನೆ ಮಾಡದೆ ಅಂಟಿಸಿದ್ದಾ? |
| **ಎಲ್ಲಾ ಮಕ್ಕಳು** | : | ಇಲ್ಲಾ ಸರ್.......!!! ನಮಗೇನೂ ತಿಳಿದಿಲ್ಲ..... |
| **ರಾಜ್ಯಸಂಚಾಲಕರು** | : | (ತಮ್ಮ ಎಂದಿನ ಅಟ್ಟಹಾಸದ ನಗು ) ಹ್ಹಾ.....ಹ್ಹಾ.... ಹಾ.... ಹ್ಹಾ........ಹ್ಹಾ .....ಆದ್ರೆ ಆದದ್ದೆಲ್ಲಾ ಒಳ್ಳೇದೇ ಆಯ್ತು.... ನಿಮ್ಮ ಈ ಪ್ಲಾನಿಂಗ್.. ಅಲ್ಲ ಅರ್ಜೆಂಟ್ ಕೆಲಸಾನ ಯುನಿಸೆಫ್‌ನ officeನಲ್ಲಿ ಇಡ್ತಾರಂತೆ .... great…. ಹ್ಹಾ ....ಹ್ಹಾ ....ಹ್ಹಾ.. |
| **ಪುಟ್ಟಿ** | : | ಸಾರ್.....ಅವರು 8 MDG…Wow ………17 SDG ಅಂದ್ರು...... ಹಾಂಗಂದ್ರೇನು ಸಾರ್..... 8 ನಾವು...... 17 ಅದರ ತುಂಡುಗಳು ...... ಇದರ ಅರ್ಥ ಏನು ಸಾರ್.... |
| **ಸಲೀಂ** | : | ನಾವು ಅದ್ಭುತ ಕೆಲಸ ಮಾಡಿದ್ದಾದ್ರೂ ಏನು? |

| | | |
|---|---|---|
| **ರಾಜ್ಯ ಸಂಚಾಲಕರು** | : | ಓಹೋ.... ok…ok…ವಿಶ್ವಸಂಸ್ಥೆ ನಿಮಗೆಲ್ಲಾ ತಿಳಿದೇ ಇದೆ. ಈ UN ವಿಶ್ವದ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ತಾ ಇರುತ್ತೆ ...... ಹಾಗೇನೆ 2000ನೇ ಇಸವಿಯಲ್ಲಿ ಸುಮಾರು 8 ವಿಚಾರಗಳನ್ನು ಆಯ್ಕೆ ಮಾಡಿ 2015 ರೊಳಗೆ ಈ ಗುರಿ ಮುಟ್ಟಬೇಕು ಅಂತ ನಿರ್ಧಾರ ಮಾಡಿತು. ಆಗ ತಾನೆ 1000 ಮಗಿದು 2000 ಸಹಸ್ರಮಾನ ಪ್ರಾರಂಭವಾಗಿತ್ತು . ಹಾಗಾಗಿ ಆ ಗುರಿಗಳಿಗೆ ಮಿಲೇನಿಯಂ ಡೆವಲಪ್‌ಮೆಂಟ್ ಗೋಲ್ಸ್ ಅಥವಾ MDG ಕನ್ನಡದಲ್ಲಿ ಸಹಸ್ರಮಾನದ ಅಭಿವೃದ್ಧಿ ಗುರಿಗಳು ಅಂತ ಹೆಸರಿಟ್ಟು ........ |
| **ಮಂಜ** | : | ಅಂದ್ರೆ ನಾವು 8 ಅಂತ ಬರೆದಿದ್ದೆವಲ್ಲ ......... |
| **ರಾ.ಸಂ** | : | ಹೌದೌದು...... ಅದೇ ಈ MDG ಗಳು, ಬಡತನ ನಿರ್ಮೂಲನೆ, ಪ್ರಾಥಮಿಕ ಶಿಕ್ಷಣ, ಲಿಂಗಸಮಾನತೆ, ಶಿಶುಮರಣ, ತಾಯಿ ಆರೋಗ್ಯ, HIV/AIDS, ಮಲೇರಿಯಾ ಕಾಯಿಲೆ ನಿರ್ಮೂಲನೆ, ಪರಿಸರ ರಕ್ಷಣೆ, ವಿಶ್ವದಲ್ಲಿ ಸಹಸ್ರಮಾನದ ಅಭಿವೃದ್ಧಿ ಗುರಿಗಳು 2015ಕ್ಕೆ ಸಾಧಿಸಬೇಕಿತ್ತು. ಹಲವು ದೇಶಗಳು ಹಲವು ರೀತಿಯಲ್ಲಿ ಈ ಗುರಿಗಳನ್ನು ತಲುಪಲು ಪಯತ್ನಪಟ್ಟಿವೆ. ಈಗ 2015 ಮುಗೀತು. ಹಾಗಾಗಿ 2015ರ ಸೆಪ್ಟಂಬರ್‌ನಲ್ಲಿ ನಡೆದ 193 ಸದಸ್ಯ ರಾಷ್ಟ್ರಗಳು ಶೃಂಗಸಭೆಯಲ್ಲಿ ವಿಶ್ವವನ್ನು ಅಭಿವೃದ್ಧಿಯ ಪಥದಲ್ಲಿ ಮುಂದುವರಿಸಲು 17 ಗುರಿಗಳನ್ನು ಅಳವಡಿಸಿಕೊಳ್ಳಲಾಯಿತು. ಇವುಗಳನ್ನು Sustainable Development Goals ಸುಸ್ಥಿರ ಅಭಿವೃದ್ಧಿ ಗುರಿಗಳು ಅಥವಾ SDG ಅಂತಾರೆ. ಇವು 1 ಜನವರಿ 2016 ರಿಂದ ಜಾರಿಯಾಗಿವೆ. 2030 ರೊಳಗೆ ಈ ಗುರಿಗಳನ್ನು ಮುಟ್ಟಬೇಕು ಅನ್ನೋದು ಎಲ್ಲಾ ರಾಷ್ಟ್ರಗಳ ಕನಸು...... |
| **ಮಕ್ಕಳು** | : | ಅವು ಯಾವ್ಯಾವು ಸಾರ್ .............. |
| **ರಾ.ಸಂ** | : | ವಿವರಿಸ್ತೇನೆ...... ಅದನ್ನ ನಿಮ್ಮ ಬಾಯಿಯಲ್ಲೇ ಹೇಳಿಸಬಹುದು. ಹೇಗೂ ಅಲ್ಲಿ ಬಿಳಿ ಹಾಳೆ ಅಂಟಿಸಿದೆ.... ಈಗ ನಾನು ನಿಮಗೆ ಒಂದು ಕಥೆ ಹೇಳ್ತಿನಿ.... ಅದರಲ್ಲಿ ಪ್ರಮುಖ ಶಬ್ಧಗಳನ್ನು ಗುರುತಿಸಿಕೊಂಡು ಆ ಹಾಳೇಲೆ ಬರೆಯಿರಿ.... ಆಯ್ತಾ? |
| **ಮಕ್ಕಳು** | : | ಆಯ್ತು ಸಾರ್.... |
| **ರಾ.ಸಂ** | : | ok..... ಒಂದೂರಲ್ಲಿ ಒಬ್ಬಳು ಸಾಕಮ್ಮ ಅಂತ ಇದ್ಲು...... ತುಂಬಾ ಬಡತನ ಯಾವಾಗಲೂ ಹಸಿವಿನಲ್ಲಿ ಬೇಯುತ್ತಿದ್ದಳು, ಆರೋಗ್ಯ ಅನ್ನೋದು ಅವಳಿಗೆ ಇರಲೇ ಇಲ್ಲ...... ಅವಳು ಹೆಣ್ಣು ಅವಳಿಗೇಕೆ ಶಿಕ್ಷಣ ಅಂತ ಅವಳನ್ನ ಶಾಲೆಗೆ ಕಳಿಸಿರಲಿಲ್ಲ. ತುಂಬಾ ತಾರತಮ್ಯಕ್ಕೆ ಒಳಗಾಗಿದ್ದ ಮಹಿಳೆ ಸಾಕಮ್ಮ. ಪ್ರತಿ ದಿನ ಕುಡಿಯೋ ಶುದ್ಧ ನೀರು ತರೋದಕ್ಕೆ ಬಹಳ ದೂರ ಹೋಗಬೇಕಿತ್ತು. ಅಡುಗೆ ಮಾಡೋದಕ್ಕೆ ಅವಳ ಬಳಿ ಯಾವುದೇ ರೀತಿ gas, ವಿದ್ಯುತ್, ಸೌದೆ ಇರಲಿಲ್ಲ ಅಂದ್ರೆ ಇಂಧನ ಅಂತೀವಲ್ಲ ಅದು. ಸಾಕಮ್ಮ ಬಹಳ ಸಾರಿ ಯೋಚನೆ ಮಾಡಿದ್ಲು ತನಗ್ಯಾಕೆ, ಒಂದು ಗೌರವಯುತವಾದ ಕೆಲಸ ಸಿಗಬಾರದು? ಮೂಲ ಸೌಕರ್ಯಗಳು ಸಿಗಬಾರದು ಅನ್ನೋ ಚಿಂತೆ ಅವಳಿಗೆ. ಎಲ್ಲಾ ಕಡೆ ಅಸಮಾನತೆ ನೋಡಿನೋಡಿ ಮನಸ್ಸು ರೋಸಿ ಹೋಗಿತ್ತು ಅವಳಿಗೆ. ಸಮಾನತೆ ಇರುವ ಸುರಕ್ಷಿತವಾಗಿರುವ ಯಾವುದಾದರೂ ಸುಸ್ಥಿರ ನಗರ ಇದ್ದರೆ ಅಲ್ಲಿಗೆ ಹೋಗಿ ನೆಲಸಬೇಕು ಅಂತ ಕನಸು ಕಾಣ್ತಾ ಇದ್ಲು ಸಾಕಮ್ಮ. ಯಾವುದೇ ವಸ್ತು ನಿಯಮಿತವಾಗಿ ಸುಸ್ಥಿರವಾಗಿ ಇರಬೇಕು ಸುಲಭ ಉತ್ಪಾದನೆ ಇರಬೇಕು ಅಂತ ದೇವರನ್ನ ಬೇಡಿಕೋಳ್ಳುವುದೇ ಅವಳ ಕಾರ್ಯವಾಗಿತ್ತು. ಮಳೆಗಾಲ–ಬಿಸಿಲು–ಚಳಿ ಹವಾಮಾನಕ್ಕೆ ಅವಳ ದೇಹ ಜರ್ಜರಿತವಾಗಿತ್ತು. ತಿನ್ನೋದಕ್ಕೆ ಏನೂ ಇರಲಿಲ್ಲ. ವಿಶಾಲವಾಗಿರೋ ಸಾಗರದೊಳಗಿರೊ ಜೀವಗಳು ಅಂದ್ರೆ ಮೀನು ಹೇರಳವಾಗಿ ಸಮುದ್ರದ ಒಳಗೆ ಸಿಕ್ಕಬಹುದು ಅಲ್ಲಿಗೆ ಹೋಗಿ ಬದುಕು ಬದಲಾಗಬಹುದು. ಇಲ್ಲೇ ಇದ್ರೆ ಭೂಮಿ ಪರಿಸರ ನಾಶ ಆಗ್ತಾ ಇರೋದ್ರಿಂದ ಏನು ಪ್ರಯೋಜನವಿಲ್ಲಾ ಎಲ್ಲಾ ಕಡೆ ಶಾಂತಿ ಬೇಕು ಎಲ್ಲಾ ಮಾನವರು ಇದಕ್ಕೆ ಒಟ್ಟಾಗಿ ಕೆಲಸ ಮಾಡಬೇಕು. ಅನ್ನೋದು ಸಾಕಮ್ಮನ ಕನಸು. ಬಂದ ಎಲ್ಲಾ ಮಕ್ಕಳಿಗೂ ಇದನ್ನೇ ಹೇಳ್ತಾಳೆ ಸಾಕಮ್ಮ ನಮಗೆ ಎಲ್ಲಾ ಊರಿನಲ್ಲೂ ಸಿಗ್ತಾಳೆ ಇದು ಅವಳ ಕಥೆ ಓಕೆ ನಾ.. ಅರ್ಥ ಆಯ್ತಾ.. ? |
| **(ಮುಂದಿನ ಚಟುವಟಿಕೆ ನಡೆಯುವಾಗ ಎಸ್.ಡಿ.ಜಿ.ಯ ಎಲ್ಲಾ ಗುರಿಗಳನ್ನು ಬರೆದ ಪ್ಲೆಕಾರ್ಡ್‌ಗಳು ಪ್ರದರ್ಶನವಾಗಬೇಕು.)** | | |
| **ಎಲ್ಲಾ ಮಕ್ಕಳು** | : | ಅರ್ಥ ಆಯ್ತು.. |
| **ಪ್ರತಿನಿಧಿ** | : | ಹಾಗಾದ್ರೆ ನಿಮಗೆ ಹೊಳೆದ ಪದಗಳನ್ನು ಅಲ್ಲಿ ಬಿಳಿ ಹಾಳೆ ಮೇಲೆ ಬರೆಯಿರಿ ..,., |

**ಮಕ್ಕಳು ಓಡಿಹೋಗಿ ಬರೆಯತೊಡಗುತ್ತಾರೆ.**
1) ಬಡತನ 2) ಹಸಿವು 3) ಆರೋಗ್ಯ 4) ಶಿಕ್ಷಣ 5) ತಾರತಮ್ಯದಿಂದ ರಕ್ಷಣೆ 6) ಶುದ್ಧ ನೀರು 7) ಇಂಧನ 8) ಗೌರವತನ 9) ಸಮೃದ್ಧ ಮೂಲಸೌಕರ್ಯ 10) ಅಸಮಾನತೆ 11) ಸುಸ್ಥಿರ ನಗರ 12) ಸುಸ್ಥಿರ ಬಳಕೆ 13) ಹವಾಮಾನ 14) ಸಾಗರ ಜೀವಿಗಳು 15) ಪರಿಸರ 16) ಶಾಂತಿ 17) ಸಹಭಾಗಿತ್ವ Network
(ಮಕ್ಕಳ ಗುರಿಗಳನ್ನು ಹಿಂದುಮುಂದಾಗಿ ಬರೆದರೆ ಸರಿಪಡಿಸಿ)

| | | |
|---|---|---|
| **ಪ್ರತಿನಿಧಿ** | : | Very good .... ಮಕ್ಕಳೆ ಈಗ ನೀವು ಮಾಡಿರುವುದನ್ನು ಅದ್ಭುತ ಕೆಲಸ ಈ 17 ಪದಗಳನ್ನು ಬರೆದಿರುವಿರಲ್ಲಾ ಅವುಗಳನ್ನು 2030 ರೊಳಗೆ ಸಾಧಿಸಬೇಕು ಅಂತ ನಮ್ಮ ಭಾರತ ಸರ್ಕಾರನೂ ಸಿದ್ಧವಾಗಿದೆ. ಈ ಗುರಿಗಳ ಬಗ್ಗೆ ಪ್ರಚಾರ ಮಾಡೋದು ನಮ್ಮ ನಿಮ್ಮೆಲ್ಲರ ಕೆಲಸ. ಇನ್ನೊಂದು ವಿಚಾರ ಈ ಗುರಿಗಳಲ್ಲಿ ಯಾವುದಾದರು ಒಂದು ಗುರಿಯನ್ನು ನೀವು ಆರಿಸಿಕೊಂಡು ಅದರ ಬಗ್ಗೆ ಪ್ರಚಾರ ಮಾಹಿತಿ ಸಂಗ್ರಹ ಮಾಡೋದನ್ನು ಕೂಡಾ ಮಾಡಬಹುದು ಇಡೀ ಜಗತ್ತು ಈಗ ಈ 17 ಗುರಿಗಳ ಬಗ್ಗೆ ಯೋಚಿಸುತ್ತಾ ಇದೆ ನಿಮ್ಮ ಗ್ಲೋಬ್ ಕೂಡಾ ಅದನ್ನೆ ಹೇಳೊದು. |
| **ಪುಟ್ಟಿ** | : | ವಾವ್.. ನಮ್ಮ ತಪ್ಪಿನಲ್ಲಿ ಎಷ್ಟೊಂದು ಧನಾತ್ಮಕ ವಿಚಾರವಿದೆ |
| **ಮಂಜ** | : | ಕಥೆ ಹೇಳೊ ಮೂಲಕ ವಿಶ್ವದ ಗುರಿಗಳನ್ನು ಸುಲಭವಾಗಿ ಹೇಳಬಹುದು |
| **ದೇವಾ** | : | ನಾವು ಎಲ್ಲರೂ ಒಂದೊಂದು ಗುರಿನ ಆರಿಸಿಕೊಂಡು ಮಾಹಿತಿ ಕೊಡಬಹುದು. ಬಡತನ, ಹಸಿವು, ತಾರತಮ್ಯ, ನಮಗೆ ಗೊತ್ತೆ ಇದೆ. |
| **ಮೇರಿ** | : | ವಿಶ್ವಸಂಸ್ಥೆ.. ಸರ್ಕಾರದ ಗುರಿಯಂತೆ ನಾವೂ ಹೆಜ್ಜೆ ಹಾಕಬಹುದು. |
| **ಗೀತಾ** | : | ನಮ್ಮ ಊರಿನವರಿಗೆ... ಪಂಚಾಯತಿಯವರಿಗೆ.. ಪ್ರಚಾರ ಮಾಡೋಕೆ ನಾವೇ ಮಾಹಿತಿ ಕೊಡಬಹುದು |
| **ರಾಜ್ಯ ಸಂಚಾಲಕ** | : | ಹಾಗಾದ್ರೆ ನೀವು ಎಸ್.ಡಿ.ಜಿ. ಪ್ರಚಾರಕರು ಕಾರ್ಯಕರ್ತರು ಆಗ್ತಿರಾ.. |

**(ಮಕ್ಕಳು ದೇಶದ ಸೈನಿಕರಂತೆ ಶಿಸ್ತಿನಲ್ಲಿ ಹೆಜ್ಜೆ ಹಾಕುತ್ತಾರೆ)**

**ಗುರಿಗಳಿಂದ ಗುರಿಗಳಿಗಾಗಿ ಗುರಿಗಾಗಿ ಬದುಕುವಂತವರು**
**ಬಡತನ, ಹಸಿವು, ಅನಾರೋಗ್ಯ, ತಾರತಮ್ಯ ತೊಲಗುವುದು**
**ಕಾಣುವೆವು... ಶುದ್ಧ ನೀರು, ಗೌರವ ನೌಕರಿ, ಇಂಧನ,**
**ಪರಿಸರ, ಕಡಲು, ರಕ್ಷಣೆ ನಮ್ಮ ಗುರಿ....**
**ಸುಸ್ಥಿರ ನಗರ, ಶಾಂತಿಗಾಗಿ ಕೈ ಜೋಡಿಸುವೆವು..**
**ಗುರಿಗಾಗಿ ಬದುಕುವೆವು.. ಗುರಿ ಸಾಧಿಸಿ ಸ್ಥಿರವಾಗುವೆವು..**
**ಸುಸ್ಥಿರ ಅಭಿವೃದ್ಧಿ ಗುರಿಗಳು**
**ಸುಸ್ಥಿರ ಅಭಿವೃದ್ಧಿ ಗುರಿಗಳು**
**ಸುಸ್ಥಿರ ಅಭಿವೃದ್ಧಿ ಗುರಿಗಳು**



ಟಿಪ್ಪಣಿ